ಯು_ೃಕೈಃ ಮೋದಕೈಃ ಪರಿತೋಷಯೇತ್ ॥ ಮಧುರಾನ್ನಂ ಹವಿಷ್ಯಂ ಚ ಸ್ವಯಂ ಭುಂಜೀತ ವಾಗ್ಯತಃ ॥೧೦೦॥ ಸ್ವರ್ಣರೂಪಂ ಗಣೇಶಸ್ಯ ದಾತವ್ಯಂ ಬ್ರಾಹ್ಮಣಾಯ ಚ।ಶಕ್ತ್ಯಾ ಚ ದಕ್ಷಿಣಾ ದದ್ಯಾದ್ವಿತ್ತಶಾಠ್ಯಂ ನ ಕಾರಯೇತ್।ಏವಂ ಶ್ರುತ್ವೈವ ತೇ ಸರ್ವೇ ಪ್ರೇಷರ್ಯ ಗೀಷ್ಪತಿಂ ಸುರಾಃ ॥ ಸಂಗತ್ವಾ ಕಥಯಾಮಾಸ ಚಂದ್ರಾಯ ಬ್ರಹ್ಮಣೋದಿತಂ ॥ ವ್ರತಂ ಚಕ್ರೇ ತತಶ್ಚಂದ್ರೋ ಯಥೋಕ್ತಂ ಬ್ರಹ್ಮಣಾ ಪುರಾ ॥ ಆವಿರ್ಬಭೂವ ಭಗವಾನ್ ಗಣೇಶೋ ವ್ರತತೋಷಿತಃ ॥೧೦೩॥ ತಂ ಕ್ರೀಡಮಾನಂ ಗಣನಾಯಕಂ ಚ ದೃಷ್ಟ್ವಾ ತು ತುಷ್ಟಾವ ಕಲಾನಿಧಾನಃ ॥ ತ್ವಂ ಕಾರಣಂ ಕಾರಣಕಾರಣಾನಾಂ ವೇತ್ತಾಸಿ ವೇದ್ಯಂ ಚ ವಿಭೋ ಪ್ರಸೀದ ॥ ಪ್ರಸೀದ ದೇವೇಶ ಜಗನ್ನಿವಾಸ ಗಣೇಶ ಲಂಬೋದರ ವಕ್ರತುಂಡ ॥ ವಿರಿಂಚಿ ನಾರಾಯಣ ಪೂಜ್ಯಮಾನ ಕ್ಷಮಸ್ವ ಮೇ ಗರ್ವಕೃತಂ ಚ ಹಾಸ್ಯಂ ॥೧೦೫॥ ಯೇತ್ವಾಮಸಂಪೂಜ್ಯ ಗಣೇಶ ನೂನಂ ವಾಂಛಂತಿ ಮೂಢಾಸ್ಸುಕೃತಂ ಪ್ರಸಿದ್ಧಿಂ । ತೇ ದೇವ ನಷ್ಟಾ ಹಿ ಭವಂತಿ ತಸ್ಯ ಜ್ಞಾತೋ ಮಯಾ ತೇ ಸಕಲಃ ಪ್ರಭಾವಃ ॥ ಯೇ ಚಾಪ್ಯುದಾಸೀನಗತಾಸ್ತು ಪಾಪಾಸ್ತೇ ಯಾಂತಿ ವಾಸಂ ನರಕೇ ಸದೈವ। ಹೇರಂಬ ಲಂಬೋದರ ಮೇ ಕ್ಷಮಸ್ವ ದುಶ್ಚೇಷ್ಟಿತಂ ತತ್ಕರುಣಾಸಮುದ್ರ॥ ಏವಂ ಸಂಸ್ತೂಯಮಾನೋಽಸೌ ಚಂದ್ರೇಣಾಥ ಗಜಾನನಃ ॥ ಗಣೇಶಃ॥ ತುಷ್ಟೋಽಹಂ ತವ ದಾಸ್ಯಾಮಿ ಯಥೇಚ್ಛಸಿ ಪರಂತಪ ॥ ತತೋ ಬ್ರಹ್ಮಾದಯಸ್ಸರ್ವೇ ಸಮಾಜಗ್ಮುರ್ಭಯಾರ್ದಿತಾಃ ॥೧೦೮॥ ವಿಶಾಪಂ ಕುರು ದೇವೇಂದುಂ ಪ್ರಾರ್ಥಯಾಮೋ ಮಯಂ ತವ। ವಿಶಾಪಮಕರೋಚ್ಚಂದ್ರಂ ಕಮಲಾಸನಗೌರವಾತ್ ॥೧೦೯॥ ಶುಕ್ಲಪಕ್ಷೇ ಚತುರ್ಥ್ಯಾಂ ತು ಯೇ ಪಶ್ಯಂತಿ ಸದೈವ ಹಿ । ಮಿಥ್ಯಾಪವಾದಮಾವರ್ಷಂ ಪ್ರಾಪ್ಸ್ಯಂತೀಹ ನ ಸಂಶಯಃ । ಮಾಸಾದೌ ಪೂರ್ವಮೇವ ತ್ವಾಂ ಯೇ ಪಶ್ಯಂತಿ ಸದಾ ಜನಾಃ । ಚತುರ್ಥ್ಯಾಂ ಶುಕ್ಲಪಕ್ಷಸ್ಯ ತೇಷಾಂ ದೋಷೋ ನ ಜಾಯತೇ ॥ ತದಾಪ್ರಭೃತಿ ಲೋಕೋಽಯಂ ದ್ವಿತೀಯಾಯಾಂ ಕೃತಾದರಃ। ಪುನರೇವ ತು ಪಪ್ರಚ್ಛ ಕಲಾವಾನ್ ಗಣನಾಯಕಂ॥ ಕೇನೋಪಾಯೇನ ದೇವೇಶ ಪೂಜ್ಯೋ ಭವಸಿ ತದ್ವದ॥ ಗಣೇಶ ಉವಾಚ॥ ಸದಾ ಕೃಷ್ಣಚತುರ್ಥ್ಯಾಂ ತು ಮೋದಕಾದ್ಯೈಃ ಪ್ರಪೂಜ್ಯ ಮಾಃ ॥ ರೋಹಿಣ್ಯಾ ಸಹಿತಂ ಮಾಂ ಚ ಸಮಭ್ಯರ್ಚ್ಯ ವಿಧಾನತಃ ॥೧೧೩॥ ಯಥಾ ಶಕ್ತ್ಯಾ ಚ ಮದ್ರೂಪಂ ಸ್ವರ್ಣೇನ ಪರಿಕಲ್ಪಿತಂ ॥ ದತ್ವಾ ದ್ವಿಜಾಯ ಭಕ್ತ್ಯಾರ್ಥಂ ಕಥಾಂ ಶ್ರುತ್ವಾ ವಿಧಾನತಃ॥೧೧೪॥ ತದಾ ತಸ್ಯ ಕರಿಷ್ಯಾಮಿ ಸಂಕಷ್ಟವಿ ನಿವಾರಣಂ।ಭಾದ್ರಶುಕ್ಲಚತುರ್ಥ್ಯಾಂ ತು ಮೃಣ್ಮಯಾ ಪ್ರತಿಮಾ ಶುಭಾ ॥ ಹೇಮಾಭಾವೇ ತು ಕರ್ತವ್ಯಾ ನಾನಾಪುಷ್ಪೈಃ ಪ್ರಪೂಜಯೇತ್ ॥ ಬ್ರಾಹ್ಮಣಾನ್ಭೋಜಯೇತ್ಪಶ್ಚಾತ್ ಜಾಗರಂ ಚ ವಿಶೇಷತಃ ॥೧೧೬॥ ಸ್ಥಾಪಯೇ ದ್ರವಣ ಕುಂಭಂ ಧಾನ್ಯಸ್ಯೋಪರಿ ಶೋಭಿತಂ । ಯಥಾಶಕ್ತ್ಯಾ ಚ ಮದ್ರೂಪಂ ಶಾತಕುಂಭೇನ ನಿರ್ಮಿತಂ । ವಸ್ತ್ರದ್ವಯಸಮಾಚ್ಛನ್ನಂ ಮೋದಕಾದ್ಯೈಃ ಪ್ರಪೂಜ್ಯ ಮಾಂ ॥ ರಕ್ತಾಂ

ಬರಧರೋ ಮರ್ತ್ಯೋ ಬ್ರಹ್ಮಚರ್ಯವ್ರತೇ ಶುಚಿಃ ॥ ರಾಜತಸ್ಯ ತು ರೂಪಂ ಮೇ ಯಥಾಶಕ್ತ್ಯಾ ವಿನಿರ್ಮಿತಂ ॥ ವಸ್ತ್ರಂ ಶಿವಪ್ರಿಯಾಯೇತಿ ಗಣೇಶಾಯೋಪವಸ್ತ್ರಕಂ ॥೧೧॥ ಗಂಧಂ ಲಂಬೋದರಾಯೇತಿ ಪುಷ್ಪಂ ಸಿದ್ಧಿಪ್ರದಾಯಿನೇ । ಧೂಪಂ ಗಜಮುಖಾಯೇತಿ ದೀಪಂ ಮೂಷಕಗಾಮಿನೇ । ವಿಘ್ನನಾಥಾಯ ನೈವೇದ್ಯಂ ಫಲಂ ಸರ್ವಾರ್ಥದಾಯಿನೇ । ತಾಂಬೂಲಂ ಕಾಮರೂಪಾಯ ದಕ್ಷಿಣಾಂ ಧನದಾಯ ಚ ॥ ಇಕ್ಷುದಂಡೈರ್ಮೋದಕೈಶ್ಚ ಹೋಮಂ ಕುರ್ಯಾಚ್ಚ ನಾಮಭಿಃ ॥ ವಿಸರ್ಜನಂ ತತಃ ಕುರ್ಯಾತ್ ಸರ್ವಸಿದ್ಧಿಪ್ರದಾಯಕಂ॥ ಏವಂ ಮಾಂ ಪೂಜ್ಯವಿಘ್ನೇಶಂ ಕಥಾಂ ಶ್ರುತ್ವಾ ವಿಧಾನತಃ । ಮಂತ್ರೇಣಾನೇನ ತತ್ಸರ್ವಂ ಬ್ರಾಹ್ಮಣಾಯ ಪ್ರದಾಪಯೇತ್ ॥೧೬॥ ದಾನೇನಾನೇನ ದೇವೇಶ ಪ್ರೀತೋ ಭವ ಗಣೇಶ್ವರ ॥ ಸರ್ವತ್ರ ಸರ್ವದಾ ದೇವ ನಿರ್ವಿಘ್ನಂ ಕುರು ಸರ್ವದಾ । ಮನೋನ್ನತಿಂ ಚ ರಾಜ್ಯಂ ಚ ಪುತ್ರಪೌತ್ರಾನ್ ಪ್ರದೇಹಿ ಮೇ। ಗಾಶ್ಚ ಧಾನ್ಯಂ ಚ ವಾಸಾಂಸಿ ದದ್ಯಾತ್ಸರ್ವಂ ಸ್ವಶಕ್ತಿತಃ। ದತ್ವಾ ತು ಬ್ರಾಹ್ಮಣೇಭ್ಯಶ್ಚ ಸ್ವಯಂ-ಭುಂಜೀತ ವಾಗ್ಯತಃ॥ ಮೋದಾಕಾಪೂಪಮಧುರಂ ಲವಣಕ್ಷಾರವರ್ಜಿತಂ॥ಏವಂ ಕರೋತಿ ಯಶ್ಚಂದ್ರಃ ತಸ್ಯಾಹಂ ಸರ್ವದಾ ಜಯಂ॥ಸಿದ್ಧಿಂ ಚ ಧನಧಾನ್ಯಂ ಚ ದದಾಮಿ ವಿಪುಲಾಂ ಪ್ರಜಾಂ॥ ಇತ್ಯುಕ್ತ್ವಾಂತರ್ದಧೇ ದೇವೋವಿಘ್ನರಾಜೋ ವಿನಾಯಕಃ॥೧೭॥ತದ್ವ್ರತಂ ಕುರು ಕೃಷ್ಣ ತ್ವಂ ತತಸ್ಸಿದ್ಧಿಮವಾಪ್ಸ್ಯಸಿ । ದ್ವಿರದೇ ನೈವ ಮುಕ್ತಶ್ಚ ವ್ರತಂ ಚಕ್ರೇ ಹರಿಸ್ಸ್ವಯಂ । ಮಿಥ್ಯಾಪವಾದ ಸಂಶುದ್ಧಿರ್ದ್ವಿತೀಯಂ ಕೃಷ್ಣ ಯಾಚಿತಂ ॥ ಯೇ ಶೃಣ್ವಂತಿ ತವಾಖ್ಯಾನಂ ಸ್ಯಮಂತಕಮಣೇಯುತಂ । ಚಂದ್ರಸ್ಯ ಚರಿತಂ ಸರ್ವಂ ತೇಷಾಂ ದೋಷೋ ನ ಜಾಯತೇ ॥ ಭಾದ್ರಶುಕ್ಲಚತುರ್ಥ್ಯಾಂ ತು ಕ್ವಚಿಚ್ಚಂದ್ರಸ್ಯ ದರ್ಶನಂ। ಜಾತಂ ತತ್ಪರಿಹಾರಾರ್ಥಂ ಶ್ರೋತವ್ಯಂ ಸರ್ವಮೇವ ಹಿ । ಯದಾ ಯದಾ ಮನಃಕಷ್ಟಂ ಸಂದೇಹ ಉಪಜಾಯತೇ । ತದಾ ತದಾ ಚ ಶ್ರೋತವ್ಯಮಾಖ್ಯಾನಂ ಕಷ್ಟನಾಶನಂ । ಏವ ಮುಕ್ತ್ವಾ ತತೋ ದೇವೋ ಗಣೇಶಃ ಕೃಷ್ಣತೋಷಿತಃ ॥ ೧೮ ॥ ಯದಾ ಯದಾ ಶ್ರೇಯಸಿ ಕಾರ್ಯ ಉತ್ಥಿತೋ ನಾರೀನರಾಶ್ಚಾಥ ಕರೋತಿ ತದ್ವ್ರತಂ ।ಸಿದ್ಧ್ಯಂತಿ ಕಾರ್ಯಾಣಿ ತಥೇಪ್ಸಿತಾನಿ ಕಿಂ ದುರ್ಲಭಂ ವಿಘ್ನಹರೇಪ್ರಸನ್ನೇ॥೧೯॥ಇತಿ ಸ್ಕಾಂದಪುರಾಣೇ ನಂದಿಕೇಶ್ವರ ಸನತ್ಕುಮಾರ ಸಂವಾದೇ ಸ್ಯಮಂತಕೋಪಾಖ್ಯಾನಂ ಸಂಪೂರ್ಣಂ.

ಅಥ ವರಸಿದ್ಧಿ ವಿನಾಯಕವ್ರತ ಕಥಾಸಂಗ್ರಹ

ನೈಮಿಶಾರಣ್ಯವಾಸಿಗಳಾದ ಋಷಿಗಳು ಒಟ್ಟಾಗಿ ಒಂದುಕಡೆ ಸಭೆಸೇರಿ ಪುರಾಣಿಕನಾದ ಸೂತಮಹಾಮುನಿಯನ್ನು ಕುರಿತು ಹೀಗೆ ಕೇಳಿದರು. ಎಲೈ ಸೂತಮಹರ್ಷಿಯೇ ! ಲೋಕದಲ್ಲಿ ಸಂಸಾರಿಗಳಾದ ಜನಗಳಿಗೆ ವ್ಯವಹಾರಕ್ರಮದಲ್ಲಿ ಬರತಕ್ಕ ಕಷ್ಟಗಳನ್ನೂ ಕೆಲಸಕಾರ್ಯಗಳನ್ನು ಸಾಧಿಸುವಾಗ ಉಂಟಾಗುವ ತೊಂದರೆಗಳನ್ನೂ ಹೇಗೆ ಪರಿಹರಿಸಿಕೊಳ್ಳಬಹುದು ? ಅಲ್ಲದೆ ಗೃಹಸ್ಥಧರ್ಮನಿರತರಾದವರು ಧನಸಂಪನ್ನರಾಗಿ ಪುತ್ರಪೌತ್ರಾದಿಗಳಿಂದ ಕೂಡಿ ಸುಖದಿಂದ ನಿರ್ವಿಘ್ನವಾಗಿ ತಮ್ಮ ಶತ್ರುಗಳನ್ನು ಜಯಿಸಿ ಅಜೇಯರಾಗಿ ಬಾಳಲು ಏನುಮಾಡಬೇಕು ? ಇದೂ ಅಲ್ಲದೆ ವಿದ್ಯಾರಂಭದಲ್ಲಿಯೂ ವಿವಾಹೋಪನಯನಗಳಲ್ಲಿಯೂ ಪ್ರಯಾಣದಲ್ಲಿಯೂ, ಗೃಹಪ್ರವೇಶಾದಿಗಳಲ್ಲಿಯೂ, ವ್ಯಾಪಾರ ವ್ಯವಹಾರಾದಿಗಳಲ್ಲಿಯೂ ಬರುವ ವಿಘ್ನಪರಂಪರೆಗಳನ್ನು ದಾಟುವ ನಿಮಿತ್ತವಾಗಿ ಯಾವ ದೇವರನ್ನು ಪೂಜಿಸಬೇಕು ಇದೆಲ್ಲವನ್ನೂ ಸರ್ವಜ್ಞನಾದ ನೀನು ನಮಗೆ ವಿಸ್ತಾರವಾಗಿ ಹೇಳಬೇಕೆಂದು ಪ್ರಶ್ನೆಮಾಡಲು ಸೂತಮಹಾಮುನಿಯು ಆ ಋಷಿಗಳನ್ನು ಕುರಿತು ಎಲೈ ಋಷಿಗಳಿರಾ ! ಸಾವಧಾನದಿಂದ ಕೇಳುವವರಾಗಿ ನೀವು ಕೇಳಿದ ವಿಚಾರದಲ್ಲಿ ಪೂರ್ವದಲ್ಲಿ ಪ್ರತ್ಯಕ್ಷವಾಗಿ ನಡೆದ ಒಂದು ವಿಷಯವನ್ನು ನಿನಗೋಸ್ಕರವಾಗಿ ಹೇಳುತ್ತಿದ್ದೇನೆ. ರಾಜ್ಯಕ್ಕಾಗಿ ಕೌರವರಿಗೂ ಪಾಂಡವರಿಗೂ ವಿವಾದ ಹುಟ್ಟಿದಾಗ ಧರ್ಮಾತ್ಮರಾದ ಪಾಂಡವರು ಕೌರವರ ಕೋಟಲೆಯನ್ನು ತಡೆಯಲಾರದೆ ಕೃಷ್ಣಪರಮಾತ್ಮನನ್ನು ಶರಣುಹೊಂದಿ ಎಲೈ ಶ್ರೀ ಹರಿಯೇ ! ನ್ಯಾಯವಾಗಿ ನಮಗೆ ಬರಬೇಕಾದ ರಾಜ್ಯವು ಬಾರದೆ ತೊಂದರೆಯುಂಟಾಗಿದೆ ಈ ತೊಂದರೆಯನ್ನು ಪರಿಹರಿಸಿಕೊಂಡು ನಾವು ಸುಖವಾಗಿ ರಾಜ್ಯಭಾರ ಮಾಡಬೇಕಾದರೆ ಯಾವ ವ್ರತವನ್ನು ಮಾಡಬೇಕು ? ಯಾವ ದೇವರನ್ನು ಪೂಜಿಸಬೇಕು ಅದರ ಕ್ರಮ ಹೇಗೆ ? ಇದೆಲ್ಲವನ್ನೂ ಕೃಪೆಮಾಡಿ ತಿಳಿಸಬೇಕೆಂದು ಪ್ರಾರ್ಥಿಸಲು ದಯಾಳುವಾದ ಶ್ರೀಹರಿಯು ಧರ್ಮರಾಯನನ್ನು ಕುರಿತು ಎಲೈ ರಾಜೇಂದ್ರನೇ ! ಕೇಳು. ಪ್ರತಿವರ್ಷವೂ ಭಾದ್ರಪದ ಮಾಸದಲ್ಲಿ ಶುಕ್ಲಪಕ್ಷದ ಚೌತಿಯದಿನ ನಿಯಮಪುರಸ್ಸರವಾಗಿ ವರಸಿದ್ಧಿ ವಿನಾಯಕನನ್ನು ಪೂಜಿಸಬೇಕು ಅಥವಾ ತನಗೆ ಭಕ್ತಿಯುಂಟಾದ ಯಾವ ಚೌತಿಯ ದಿನವಾದರೂ ವಿನಾಯಕ ವ್ರತವನ್ನು ಮಾಡಬಹುದು. ವ್ರತಮಾಡುವ ದಿನ ಸಾಧಕನು ಬೆಳಿಗ್ಗೆ ಎಳ್ಳೆಣ್ಣೆಯಿಂದ ಮಂಗಳಸ್ನಾನವನ್ನು ಮಾಡಿ ನಿತ್ಯಕರ್ಮವನ್ನು ತೀರಿಸಿದನಂತರ ಮಧ್ಯಾಹ್ನದಲ್ಲಿ ಶುಭವಸ್ತ್ರಾಲಂಕೃತರಾಗಿ ಶುದ್ಧಾತ್ಮನಾಗಿ ಮಹಾಗಣಪತಿಯನ್ನು ಪೂಜಿಸಬೇಕು. ಹಾಗೆ ಪೂಜಿಸಬೇಕಾದರೆ ತನ್ನ ಶಕ್ತಿಗೆ ತಕ್ಕಂತೆ ಚಿನ್ನದಿಂದಾಗಲಿ, ಬೆಳ್ಳಿಯಿಂದಲಾಗಲಿ ಗಣಪತಿಯ ಪ್ರತಿಮೆಯನ್ನು ಮಾಡಿಸಿ ಕಲ್ಪದಲ್ಲಿ ಹೇಳಿರುವಂತೆ ಪೂಜೆಮಾಡಿದನಂತರ ಹಾಗೆ ಪೂಜಿಸಿದ ಪ್ರತಿಮೆಯನ್ನು ಬ್ರಾಹ್ಮಣನಿಗೆ ದಾನಮಾಡಬೇಕು. ಶಕ್ತಿಯಿಲ್ಲದವರು ಮಣ್ಣಿನಿಂದಲಾದರೂ ಗಣಪತಿಯನ್ನು ಮಾಡಿ ಪೂಜಿಸಬಹುದು. ಶಕ್ತಿಯಿದ್ದರೂ ಧನಲೋಭದಿಂದ ಕಾರ್ಪಣ್ಯಪಡಬಾರದು. ಗಣಪತಿಯ ವಿಗ್ರಹವನ್ನು ಮಾಡಬೇಕಾದರೆ ಏಕದಂತನೂ, ಶೂರ್ಪಕರ್ಣನೂ, ಚತುರ್ಭುಜನೂ ಆಗ ಒಂದು ಕೈಯಲ್ಲಿ ಪಾಶವನ್ನು ಇನ್ನೊಂದು ಕೈಯಲ್ಲಿ ಅಂಕುಶವನ್ನು ಒಂದು ಹಸ್ತದಲ್ಲಿ ಕಡುಬನ್ನೂ ಮತ್ತೊಂದು ಕೈಯಲ್ಲಿ ಅಭಯಮುದ್ರೆಯನ್ನು ವಹಿಸಿರುವಂತೆ ಕಾಣಬೇಕು. ಈ ವಿಧವಾದ ಗಣಪತಿಯೆಂಬ ನಾಮಧೇಯವುಳ್ಳ ವಿನಾಯಕನನ್ನು ಭಕ್ತಿಯಿಂದ ಪೂಜಿಸಬೇಕು.

ಮೊದಲು ಆವಾಹನೆಮಾಡಿ ಆಸನವುಂಡಿತನಾದ ವಿನಾಯಕನಿಗೆ ಅರ್ಘ್ಯಪಾದ್ಯಾದಿಗಳನ್ನು ಕೊಟ್ಟು ಪಂಚಾಮೃತ ಸ್ನಾನವನ್ನು ಮಾಡಿಸಿ ಗಣಾಧಿಪನೆಂದು ಹೇಳಿ ಗಂಧವನ್ನು ವಿನಾಯಕನೆಂದು ಹೊಗಳಿ ಹೂಗಳನ್ನೂ ಉಮಾಸುತನೆಂದು ಹೇಳಿ ಧೂಪವನ್ನೂ, ರುದ್ರಪ್ರಿಯನೆಂದು ಸ್ತುತಿಸಿ ದೀಪವನ್ನೂ ವಿಘ್ನನಾಶಕನೆಂದು ಹೇಳಿ ನೈವೇದ್ಯವನ್ನೂಸಮರ್ಪಿಸಿ ಪೂಜಿಸಿದ ಮೇಲೆ ಇಪ್ಪತ್ತೊಂದು ಗರಿಕೆಯ ದಳಗಳನ್ನು ತೆಗೆದುಕೊಂಡು ಗಂಧಸಹಿತವಾಗಿ ಆ ಗರಿಕೆಗಳಿಂದ ೨೧ ಸಾರಿ ಗಣಾಧಿಪ, ಉಮಾಪುತ್ರ, ಅಘನಾಶನ, ವಿನಾಯಕ, ಈಶಪುತ್ರ, ಸರ್ವಸಿದ್ಧಿಪ್ರದಾಯಕ, ಏಕದಂತ, ಇಭವಕ್ತ್ರ, ಮೂಷಕವಾಹನ, ಕುಮಾರಗುರು ಎಂಬ ನಾಮಗಳನ್ನು ಹೇಳುತ್ತ ಪ್ರತಿಯೊಂದು ಹೆಸರಿಗೂ ಎರಡೆಂಡು ಗರಿಕೆಗಳು ಬರುವಂತೆ ದೂರ್ವಾಯುಗ್ಮದಿಂದ ಪೂಜಿಸಿ ಇಪ್ಪತ್ತೊಂದು ಮೋದಕಗಳನ್ನು ನೈವೇದ್ಯಮಾಡಿ, ಹತ್ತು ಮೋದಕಗಳನ್ನು ದಕ್ಷಿಣೆ ಸಹಿತವಾಗಿ ಬ್ರಾಹ್ಮಣನಿಗೆ ದಾನಮಾಡಿ ತನಗೂ ತನ್ನ ಪರಿವಾರಕ್ಕೂ ಹತ್ತು ಕಡುಬುಗಳನ್ನು ಉಳಿಸಿಕೊಂಡು ಉಳಿದ ಒಂದನ್ನು ಮಾತ್ರ ಗಣಪತಿಗೆ ಸಮರ್ಪಣೆಮಾಡಬೇಕು. ಹೀಗೆ ಮಾಡಿದನಂತರ ಯಥಾಶಕ್ತಿಯಾಗಿ ಬ್ರಾಹ್ಮಣ ಸುವಾಸಿನಿಯರನ್ನು ಮೃಷ್ಟಾನ್ನ ಪಾನಗಳಿಂದ ತೃಪ್ತಿಪಡಿಸಿ ದಕ್ಷಿಣೆ ತಾಂಬೂಲಗಳನ್ನು ಕೊಟ್ಟು ಅನಂತರದಲ್ಲಿ ತಾನು ತನ್ನ ಇಷ್ಟದೇವತಾರಾಧನೆಯನ್ನು ನಿತ್ಯಕರ್ಮಗಳನ್ನು ತೀರಿಸಿಕೊಂಡು ತೈಲವರ್ಜಿತವಾದ ಆಹಾರವನ್ನು ಭುಂಜಿಸಬೇಕು. ಈರೀತಿಯಾಗಿ ಪ್ರಸಿದ್ಧವಾಗಿರುವ ವರಸಿದ್ಧಿ ವಿನಾಯಕವ್ರತವನ್ನು ನೀನು ಮಾಡಿದರೆ ನಿನ್ನ ಶತ್ರುಗಳು ನಾಶವಾಗಿ ನಿನಗೆ ರಾಜ್ಯಸಂಪತ್ತಿಯುಂಟಾಗಿ ನೀನು ಸುಖವಾಗಿ ನಿಷ್ಕಂಟಕದಿಂದ ಬಾಳುವೆ ? ಎಂದು ಹೇಳಿ ಶ್ರೀಕೃಷ್ಣನು ಧರ್ಮರಾಯನನ್ನು ಕುರಿತು ಇಂತೆಂದನು. ಎಲೈ ಧರ್ಮರಾಯನೇ ? ಕೇಳು ಆದಿಯಲ್ಲಿ ಈ ವ್ರತವು ಕೈಲಾಸವಾಸಿಯಾದ ಪರಮೇಶ್ವರನಿಂದ ಷಣ್ಮುಖನಿಗೆ ಉಪದೇಶಿಸಲ್ಪಟ್ಟಿತು. ಸರ್ವಸಂಕಷ್ಟಗಳನ್ನು ಪರಿಹರಿಸಿ ಸಕಲಸಿದ್ಧಿಗಳನ್ನು ಕೊಡುವಕಾರಣ ಈ ವ್ರತಕ್ಕೆ ವರಸಿದ್ಧಿ ವಿನಾಯಕವ್ರತವೆಂದು ಹೆಸರಾಯಿತು. ಆದಕಾರಣ ಪೂರ್ವದಲ್ಲಿ ತಾರಕಾಸುರನನ್ನು ಸಂಹರಿಸುವಕಾಲದಲ್ಲಿ ಕುಮಾರಸ್ವಾಮಿಯು ಈ ವ್ರತವನ್ನು ಮಾಡಿ ಜಯಶಾಲಿಯಾದನು. ಪರಮೇಶ್ವರನು ಗಣನಾಥನನ್ನು ಪೂಜಿಸಿ ಆತನ ವರದಿಂದ ತ್ರಿಪುರಾಸುರನನ್ನು ಗೆದ್ದನು. ಶ್ರೀರಾಮನೂ ಕೂಡ ಸೀತೆಯನ್ನು ಕಳೆದುಕೊಂಡಮೇಲೆ ಅವಳನ್ನು ಹುಡುಕುವ ಕೆಲಸವು ನಿರ್ವಿಘ್ನವಾಗಿ ನೆರವೇರುವಂತೆ ಗಣಪತಿಯನ್ನು ಪೂಜಿಸಿ ಸೀತೆಯೊಡನೆ ಕೂಡಿ ರಾಜ್ಯಭಾರ ಮಾಡಿದನು. ಅಲ್ಲದೆ ಲೋಕ ಪ್ರಸಿದ್ಧನಾದ ಭಗೀರಥ ಮಹಾರಾಜನು ದೇವಗಂಗೆಯನ್ನು ತರುವುದಕ್ಕಾಗಿ ಪ್ರಯತ್ನಪಟ್ಟು ಮೊದಲು ಗಣಪತಿಯನ್ನು ಪೂಜಿಸಿ ಸಂಕಲ್ಪಸಿದ್ಧಿಯನ್ನು ಪಡೆದನು. ವೃತ್ರಾಸುರನನ್ನು ಸಂಹರಿಸುವುದಕ್ಕಾಗಿ ದೇವೇಂದ್ರನು ಈ ವ್ರತವನ್ನು ಮಾಡಿ ಶತ್ರುವನ್ನು ಜಯಿಸಿದನು. ಅಮೃತಕ್ಕಾಗಿ ದೇವತೆಗಳೂ ರಾಕ್ಷಸರೂ ಒಟ್ಟಾಗಿ ಸಮುದ್ರ ಮಥನಮಾಡುವಾಗ ಈ ವ್ರತವನ್ನು ಮಾಡಿದನು. ಪಕ್ಷಿರಾಜನಾಗಿ ಅಮೃತವನ್ನು ದೇವಲೋಕದಿಂದ ತರುವುದಕ್ಕಾಗಿ ಹೊರಟ ಗರುಡದೇವನು ಈ ವ್ರತವನ್ನು ಮಾಡಿ ಧನ್ಯನಾಗಿ ಅಮೃತಕಲಶವನ್ನು ತಂದನು. ನಾನೂ ರುಕ್ಮಿಣಿಯೂ ಸಹ ಈ ವ್ರತವನ್ನು ಮಾಡಿ ಅದರ ಮಹಿಮೆಯಿಂದ ಲೋಕಗಳನ್ನು ಪಾಲಿಸುತ್ತಿಸುವೆವು. ಕುಷ್ಟರೋಗಪೀಡಿತನಾದ ಸಾಂಬನೆಂಬವನು ಭಕ್ತಿಯಿಂದ ಈ ವ್ರತವನ್ನು ಮಾಡಿ ಆರೋಗ್ಯಭಾಗ್ಯವನ್ನು ಪಡೆದನು. ಆದಕಾರಣ ಈಗ ಭಯಗ್ರಸ್ತನಾಗಿರುವ ನೀನು ಈ ವ್ರತವನ್ನು ಆಚರಿಸಿದರೆ ಗಣಪತಿಪ್ರಸಾದ

ದಿಂದ ನಿನಗೆ ಕ್ಷೇಮವುಂಟಾಗಿ ಶತ್ರುಗಳನ್ನು ಗೆದ್ದು ನೀನು ರಾಜ್ಯಕೋಶಗಳನ್ನು ಪಡೆಯುವೆ, ಗಣನಾಥನ ಪ್ರಸಾದದಿಂದಲ್ಲದೆ ಮತ್ತೆ ಯಾವ ವ್ರತದಿಂದಲೂ ನಿನ್ನ ಕೋರಿಕೆಯು ಕೈಗೂಡಲಾರದು. ಈ ವಿಚಾರದಲ್ಲಿ ಅನುಮಾನಪಡಬೇಡ. ಕುಟುಂಬಸಮೇತನಾಗಿ ಭಕ್ತಿಯಿಂದ ವರಸಿದ್ಧಿ ವಿನಾಯಕವ್ರತವನ್ನು ಮಾಡು ಎಂದು ಹೇಳಿದನು. ಆಗ ಧರ್ಮರಾಯನು ತೃಪ್ತನಾಗಿ ಭಕ್ತಿಭಾವದಿಂದ ತಮ್ಮಂದಿರೊಡಗೂಡಿ ದ್ರೌಪದೀಸಹಿತನಾಗಿ ವರಸಿದ್ಧಿ ವಿನಾಯಕನನ್ನು ಕಲ್ಪೋಕ್ತಪ್ರಕಾರದಿಂದ ಪೂಜಿಸಿದನು. ಆಗ ಗಣಪತಿಯು ಧರ್ಮರಾಯನ ಭಕ್ತಿಗೆ ಮೆಚ್ಚಿ ಪ್ರಸನ್ನನಾದನು. ಧರ್ಮಪುತ್ರನ ಇಷ್ಟಾರ್ಥವು ಕೈಗೂಡಿತು ಶತ್ರುಗಳು ನಾಶವಾದರು. ಬಳಿಕ ಧರ್ಮರಾಯನು ಸಿದ್ಧಿವಿನಾಯಕನ ವರ ಬಲದಿಂದ ಸಕಲ ಭೋಗಭಾಗ್ಯಗಳನ್ನು ಅನುಭವಿಸಿದನು. ಆದಕಾರಣ ಲೋಕದಲ್ಲಿ ಯಾರು ಭಕ್ತಿಯಿಂದ ಗಣಪತಿಯನ್ನು ಪೂಜಿಸುತ್ತಾರೋ ಅವರಿಗೆ ಸರ್ವಸಿದ್ಧಿಗಳೂ ಲಭಿಸುವುವು. ಇದು ನಿಶ್ಚಯ. ಈ ವಿಚಾರದಲ್ಲಿ ಸ್ವಲ್ಪವೂ ಅನುಮಾನವಿಲ್ಲ. ಈ ವ್ರತವನ್ನು ಮಾಡಿದರೆ ವಿದ್ಯಾರ್ಥಿಯಾದವನಿಗೆ ವಿದ್ಯೆಯೂ, ಧನಾರ್ಥಿಯಾದವನಿಗೆ ಧನವೂ, ಕನ್ಯಾರ್ಥಿಯಾದವನಿಗೆ ಮದುವೆಯೂ, ಪುತ್ರಾರ್ಥಿಯಾದವರಿಗೆ ಮಕ್ಕಳೂ, ಮೋಕ್ಷಾಕಾಂಕ್ಷಿಗಳಿಗೆ ಮುಕ್ತಿಯೂ, ಇನ್ನೂ ಬಗೆಬಗೆಯಾದ ಅನೇಕವಿಧ ಕೋರಿಕೆಗಳೂ, ಅವರವರ ಭಕ್ತಿಗನುಸಾರವಾಗಿ ಸಿದ್ಧಿಸುವುವು. ಅಲ್ಲದೆ ಈ ವ್ರತವನ್ನು ಮಾಡುವುದಕ್ಕೆ ಪ್ರಾರಂಭಿಸಿದಾಗಲೂ ಮೊದಲು ಮಹಾ ಗಣಪತಿಯನ್ನು ಪೂಜಿಸಬೇಕು. ಎಂದಮೇಲೆ ಸರ್ವವ್ರತಗಳಿಗೂ ಮೊದಲು ಗಣಪತಿಯನ್ನು ಪೂಜಿಸಿ ಆ ಬಳಿಕ ಆಯಾ ವ್ರತಗಳನ್ನು ಮಾಡಬೇಕು. ಹಾಗಿಲ್ಲವಾದರೆ ಯಾವ ವ್ರತವೂ ಸಿದ್ಧಿಸಬಾರದು. ಆದಕಾರಣ ವಿದ್ಯಾರಂಭ, ವಿವಾಹ, ಪ್ರಯಾಣ, ಗೃಹಪ್ರವೇಶ, ಬಂಧುದರ್ಶನ, ವ್ಯಾಪಾರ, ವ್ಯವಸಾಯ ಮೊದಲಾದ ಸಕಲಕಾರ್ಯಗಳಲ್ಲಿಯೂ ಗಣಪತಿಯನ್ನು ಪೂಜಿಸಬೇಕು. ಹಾಗೆ ಪೂಜಿಸುವುದರಿಂದ ಅಣಿಮಾದಿಸಿದ್ಧಿಗಳೂ ಅಷ್ಟಮಾತೃಕೆಯರೂ, ತ್ರಿಮೂರ್ತಿಗಳೂ, ಅಷ್ಟದಿಕ್ಪಾಲಕರೂ, ಸಮಸ್ತ ದೇವತೆಗಳೂ ತೃಪ್ತರಾಗುವರು. ಕನ್ಯೆಯು ಈ ವ್ರತವನ್ನು ಮಾಡಿದರೆ ಉತ್ತಮನಾದ ಪತಿಯು ದೊರೆಯುವನು, ಸುಮಂಗಲಿಯರು ಆಚರಿಸಿದರೆ ಬಹುಕಾಲ ಸೌಮಂಗಲ್ಯವನ್ನು ಅನುಭವಿಸುವರು. ವಿಧವೆಯರು ಮಾಡಿದರೆ ಮುಂದೆ ಯಾವಾಗಲೂ ಅವರಿಗೆ ಪತಿವಿಯೋಗವಾಗಲಾರದು ಬಡವನು ಈ ವ್ರತವನ್ನು ಮಾಡಿದರೆ ಭಾಗ್ಯವಂತನಾಗುವನು. ಈ ಅರ್ಥದಲ್ಲಿ ಸಂಶಯವೇ ಇಲ್ಲವೆಂದು ಹೇಳಿ ಸೂತಮಹಾಮುನಿಯು ಋಷಿಗಳನ್ನು ಕುರಿತು ಮತ್ತೆ ಇಂತೆಂದು ಹೇಳತೊಡಗಿದನು, ಎಂಬಲ್ಲಿಗೆ ವರಸಿದ್ಧಿವಿನಾಯಕವ್ರತದ ಕಥೆಯು ಮುಗಿಯಿತು.

ಅಥ ಸ್ಯಮಂತಕೋಪಾಖ್ಯಾನ ಕಥಾಸಂಗ್ರಹ

ಕೇಳೈ ಧರ್ಮರಾಯನೇ ! ಭಾದ್ರಪದ ಶುದ್ಧ ಚೌತಿಯದಿನ ಶಿವಲೋಕದಲ್ಲಿ ಪೂಜಾ ದಿನವಾಗಿ ಮಹೋತ್ಸವ ನಡೆಯುವದರಿಂದ ಆದಿನ ಬಹು ಮುಖ್ಯವಾದದ್ದು. ಆ ದಿನ ಭಕ್ತಿವಂತನಾಗಿ ನಿಯಮದಿಂದ ನಿತ್ಯಕರ್ಮಗಳನ್ನು ತೀರಿಸಿಕೊಂಡು ಉಪವಾಸದಿಂದ ಗಣನಾಥನನ್ನು ಪೂಜಿಸಿದವರಿಗೆ ಶತಾಧಿಕವಾಗಿ ಫಲವುಂಟಾಗುವುದು. ಅಲ್ಲದೆ ಆದಿನ ಯಾರು ಚಂದ್ರ ದರ್ಶನವನ್ನು ಮಾಡುತ್ತಾರೋ ಅವರಿಗೆ ಎಂದಿಗೂ ಇಲ್ಲದ ಮಿಥ್ಯಾಪವಾದವು,

ಸಂಭವಿಸುವುದು. ಹಾಗ ಉಂಟಾದ ಅಪವಾದವನ್ನು ಹೋಗಲಾಡಿಸಿಕೊಳ್ಳಬೇಕಾದರೆ ಮುಂದೆ ಹೇಳುವ ಈ ಸ್ಯಮಂತಕೋಪಾಖ್ಯಾನವನ್ನು ಕೇಳಿ ಆ ಕಥೆಯನ್ನು ಶ್ರವಣಮಾಡಿ ದನಂತರ "ಸಿಂಹಃ ಪ್ರಸೇನಮವಧೀ । ತ್ಸಿಂಹೋ ಜಾಂಬವತಾ ಹತಃ । ಸಕುಮಾರಕ ಮಾ ರೋದೀ ತವ ಹ್ಯೇಷಃ ಸ್ಯಮಂತಕಃ॥ ಎಂಬ ಶ್ಲೋಕವನ್ನು ಜಪಿಸಬೇಕು. ಹೇಗೆಂದರೆ ಸೂರ್ಯನು ಕನ್ಯಾರಾಶಿಯಲ್ಲಿರುವಾಗ ಶುಕ್ಲಪಕ್ಷದ ಚತುರ್ಥಿಯಲ್ಲಿ ಯಾರು ಚಂದ್ರನನ್ನು ನೋಡುವರೋ ಅವರಿಗೆ ಇಲ್ಲದ ಅಪವಾದ ಉಂಟಾಗುವುದು. ಆ ಅಪವಾದವನ್ನು ಪರಿ ಹರಿಸಿಕೊಳ್ಳಬೇಕಾದರೆ ಸ್ಯಮಂತಕೋಪಾಖ್ಯಾನದ ಕಥೆಯನ್ನು ಸಾಗ್ರವಾಗಿ ಕೇಳಿ ಮೇಲೆ ಹೇಳಿದ ಶ್ಲೋಕವನ್ನು ಪಠಿಸಬೇಕು ಎಂದು ಸನತ್ಕುಮಾರನಿಗೆ ಶಿವಯೋಗಿಯಾದ ನಂದಿ ಕೇಶ್ವರನು ಹೇಳಿದನು. ಸರ್ವ ವ್ರತಗಳಲ್ಲಿಯೂ ಶ್ರೇಷ್ಠವಾದ ಗಣಪತಿಯ ವ್ರತದ ಮಹಿಮೆಯನ್ನು ನಿಮಗೋಸ್ಕರವಾಗಿ ಹೇಳುವೆನು ಕೇಳಿ, ಪ್ರತಿವರ್ಷವೂ ಭಾದ್ರಪದ ಮಾಸ ದಲ್ಲಿ ಶುಕ್ಲಪಕ್ಷದ ಚೌತಿಯ ದಿನ ವಿಧಿವತ್ತಾಗಿ ಭಕ್ತಿಯಿಂದ ಭಗವಂತನಾದ ಗಣಪತಿಯನ್ನು ಅರ್ಚಿಸಬೇಕು. ಗಂಡಸರಾಗಲಿ, ಹೆಂಗಸರಾಗಲಿ, ಶುಭಾಕಾಂಕ್ಷಿಗಳಾದ ಯಾರೇ ಆಗಲಿ, ಈ ವ್ರತವನ್ನು ಭಕ್ತಿಯಿಂದ ಮಾಡಿದರೆ ಅದರಿಂದ ಗಣನಾಥನು ಸಂತುಷ್ಟನಾಗಿ ಅಂಥವರ ಕಷ್ಟಪರಂಪರೆಗಳನ್ನು ದೂರಮಾಡುವನು. ಈ ವ್ರತದ ಮಹಿಮೆಯಿಂದ ವಿಘ್ನಪರಂಪರೆಗಳು ದೂರವಾಗಿ ಅಪವಾದವು ನಿವಾರಣೆಯಾಗುವುದು, ಆದಕಾರಣ ಅರಣ್ಯವಾಸದಲ್ಲಿರುವಾಗಲೂ, ಶತ್ರು ಮಧ್ಯದಲ್ಲಿ ನಿಂತು ಯುದ್ಧಮಾಡುವಾಗಲೂ, ರಾಜ್ಯಕಾರ್ಯವನ್ನು ಸಾಧಿಸುವುದ ರಲ್ಲಿಯೂ ಉಂಟಾಗುವ ಕಷ್ಟಗಳನ್ನು ಪರಿಹರಿಸಲು ಈ ವ್ರತವೇ ಬಹು ಮುಖ್ಯ ವಾದದ್ದು ಇದಕ್ಕಿಂತ ಅನ್ಯವಾದ ವ್ರತವಾವುದೂ ಇಲ್ಲ, ಎಂದು ನಂದಿಕೇಶ್ವರನು ಹೇಳಲು ಸನತ್ಕುಮಾರನು ಭಕ್ತಿವಂತನಾಗಿ ನಂದಿಕೇಶ್ವರನನ್ನು ಕುರಿತು, ಎಲೈ ಶಿವಭಕ್ತಿ ಧುರಂಧ ರನೇ! ಈ ವ್ರತವನ್ನು ಪೂರ್ವಕಾಲದಲ್ಲಿ ಯಾರು ಮಾಡಿದರು? ಇದರ ಮಹಿಮೆಯು ಭೂಲೋಕದಲ್ಲಿ ಹೇಗೆ ಹರಡಿಕೊಂಡಿತು ಇದೆಲ್ಲವನ್ನೂ ನನಗೆ ವಿಸ್ತಾರವಾಗಿ ಹೇಳಬೇಕೆಂದು ಕೇಳಲು, ನಂದೀಶ್ವರನು ಹೀಗೆ ಹೇಳಲಾರಂಭಿಸಿದನು.

ಪೂರ್ವದಲ್ಲಿ ಸರ್ವತಂತ್ರ ಸ್ವತಂತ್ರನಾದ ಶ್ರೀಕೃಷ್ಣನು ತ್ರಿಲೋಕ ಸಂಚಾರಿಯಾದ ನಾರದಮಹರ್ಷಿಯ ಅನುಜ್ಞೆಯಂತೆ ಈ ವ್ರತವನ್ನು ಮಾಡಿ ತನಗೆ ಬಂದಿದ್ದ ಅಪವಾದವನ್ನು ಕಳೆದುಕೊಂಡನು ಎನ್ನುವಲ್ಲಿ ಈ ವ್ರತದ ಮಹಾತ್ಮ್ಯೆಯನ್ನು ಏನು ಹೇಳಲಿ! ಎನಲು, ಸನತ್ಕುಮಾರನು ಆಶ್ಚರ್ಯಭರಿತನಾಗಿ ಎಲೈ ನಂದಿಕೇಶ್ವರನೇ! ಷಡ್ಗುಣೈಶ್ವರ್ಯ ಸಂಪನ್ನ ನಾಗಿ, ಸೃಷ್ಟಿ ಸ್ಥಿತಿ ಲಯಗಳಿಗೆ ಕಾರಣನಾದ ಶ್ರೀಹರಿಗೆ ಅಪವಾದವುಂಟಾದುದು ಹೇಗೆ? ಇದು ಪರಮಾಶ್ಚರ್ಯಕರವಾಗಿದೆ ಈ ವಿವರವನ್ನು ನನಗೆ ವಿಸ್ತರಿಸಿ ಹೇಳಬೇಕು ಎಂದು ಬೇಡಿ ಕೊಂಡನು. ಆಗ ನಂದಿಕೇಶ್ವರನು, ಎಲೈ ಋಷಿವರ್ಯನೇ! ಹಾಗಾದರೆ ಆ ಕಥೆಯನ್ನು ಹೇಳುವೆನು ಕೇಳು–ಪರಬ್ರಹ್ಮ ಸ್ವರೂಪಿಯಾದ ಭಗವಂತನು ಭೂಭಾರ ನಿವಾರಣಾರ್ಥವಾಗಿ ವಸುದೇವನ ಹೊಟ್ಟೆಯಲ್ಲಿ ಶ್ರೀಕೃಷ್ಣನಾಗಿ ಹುಟ್ಟಿದನು ಇದಕ್ಕೆ ಮೊದಲೇ ಶೇಷಾಂಶದಿಂದ ಹುಟ್ಟಿದ್ದ ಬಲರಾಮನು ಶ್ರೀಕೃಷ್ಣನಿಗೆ ಅಣ್ಣನಾದನು. ಇವರಿಬ್ಬರೂ ಅತ್ಯುತ್ಸಾಹದಿಂದ ಮಧುರೆಯಲ್ಲಿ ಬಾಳುತ್ತಿದ್ದಾಗ ದುಷ್ಟನಾದ ಜರಾಸಂಧನ ಬಾಧೆಯನ್ನು ತಾಳಲಾರದೆ ವಿಶ್ವಕರ್ಮನ ಮೂಲಕವಾಗಿ ದಿವ್ಯಸುಂದರ ಭವನಗಳುಳ್ಳ ದ್ವಾರಕಾ ನಗರವನ್ನು ನಿರ್ಮಿಸಿ ಅದರ ಮಧ್ಯದಲ್ಲಿ ಸುಂದರವಾದ ಅರಮನೆಯನ್ನು ಕಟ್ಟಿಸಿಕೊಂಡು, ಹದಿನಾರುಸಾವಿರ

ಗೋಪಿಕಾಸ್ತ್ರೀಯರ ಸಮೇತನಾಗಿ ಅಷ್ಟಮಹಿಷಿಯರಿಂದೊಡಗೂಡಿ ಆ ಪಟ್ಟಣದಲ್ಲಿ ತನ್ನವರಾದ ಯಾದವರು ಹನ್ನೊಂದುಸಹಸ್ರಕೋಟಿ ವಾಸವಾಗಿರುವದಕ್ಕೆ ಅನುಕೂಲವಾದ ಮನೆಗಳನ್ನು ಕಟ್ಟಿಸಿ, ಆ ಪಟ್ಟಣದ ದೊರೆತನವನ್ನು ಯಾದವರರಸನಾದ ಉಗ್ರಸೇನರಾಯನಿಗೆ ಕೊಟ್ಟು ತಾನು ಸುಖದಿಂದ ವಾಸಮಾಡುತ್ತಿದ್ದನು. ಆ ಉಗ್ರಸೇನರಾಯನಿಗೆ ಸತ್ರಾಜಿತ ಪ್ರಸೇನರೆಂಬ ಇಬ್ಬರು ಮಕ್ಕಳಾದರು. ಆ ಮಕ್ಕಳಲ್ಲಿ ಸತ್ರಾಜಿತನು ನಿರಶನವ್ರತವನ್ನು ಹಿಡಿದ. ಸೂರ್ಯಭಗವಂತನನ್ನು ಪ್ರಾರ್ಥಿಸಿ, ಬಹುಕಾಲ ತಪಸ್ಸುಮಾಡಿ, ಸೂರ್ಯನನ್ನು ಹೊಗಳಿ ಸ್ತೋತ್ರಮಾಡತೊಡಗಿದನು. ಅವನ ಭಕ್ತಿಭಾವಕ್ಕೆ ಮೆಚ್ಚಿ ಸೂರ್ಯದೇವನು ಪ್ರತ್ಯಕ್ಷನಾಗಿ, ಎಲೈ ಭಕ್ತಾಗ್ರಣಿಯೇ ! ನಿನ್ನ ತಪಸ್ಸಿಗೆ ನಾನು ಮೆಚ್ಚಿದೆನು. ನಿನಗೆ ಬೇಕಾದ ಇಷ್ಟಾರ್ಥವನ್ನು ಕೇಳು ಕೊಡುವೆನೆಂದು ಹೇಳಿದನು. ಆಗ ಸತ್ರಾಜಿತನು ನನಗೆ ನಿನ್ನ ಕೊರಳಿನಲ್ಲಿರುವ ಸ್ಯಮಂತಕಮಣಿಯನ್ನು ಅನುಗ್ರಹಿಸಬೇಕೆಂದು ಪ್ರಾರ್ಥಿಸಲು ಸೂರ್ಯನು ಹಸನ್ಮುಖಿಯಾಗಿ ತನ್ನ ಕೊರಳಿನಲ್ಲಿದ್ದ ರತ್ನಮಾಲಿಕೆಯಲ್ಲಿ ಒಂದು ಮಣಿಯನ್ನು ತೆಗೆದುಕೊಂಡು, ಸತ್ರಾಜಿತನ ಕೈಗೆ ಕೊಟ್ಟು ಎಲೈ ಭಕ್ತವರ್ಯನೇ ! ಈ ಮಣಿಯು ಸರ್ವಶ್ರೇಷ್ಠವಾದುದು. ಇದನ್ನು ಸದಾ ಶುಚಿರ್ಭೂತನಾಗಿದ್ದವನೆ ಧರಿಸಬೇಕು ಅಶುಚಿಯೂ,ಅನಾಚಾರವೂ ಉಂಟಾದರೆ ಇದು ಧರಿಸತಕ್ಕವನನ್ನು ನಾಶಮಾಡುವುದು ಇದೂ ಅಲ್ಲದೆ ಈ ಸ್ಯಮಂತಕರತ್ನವು ದಿನವೊಂದಕ್ಕೆ ಎಂಟುಭಾರದ ತೂಕ ಚಿನ್ನವನ್ನು ಕೊಡುವುದರಿಂದ ಇದು ಇದ್ದ ಕಡೆ ದಾರಿದ್ರ್ಯದ ಸುಳಿವೇ ಇಲ್ಲದಂತಾಗುವುದು. ಆದಕಾರಣ ಅಮೃತರೂಪವಾದ ಈ ದಿವ್ಯರತ್ನವನ್ನು ನೀನು ಜಾಗರೂಕನಾಗಿ ಧರಿಸಿಕೊಂಡಿರು ಎಂದು ಹೇಳಿ ಅಂತರ್ಧಾನನಾದನು. ಆ ಬಳಿಕ ಸತ್ರಾಜಿತನು ಹರ್ಷಯುಕ್ತನಾಗಿ ಆ ಮಣಿಯನ್ನು ಕಂಠದಲ್ಲಿ ಹಾಕಿಕೊಂಡು ದ್ವಾರಕಾನಗರಕ್ಕೆ ಬರುತ್ತಿದ್ದನು. ಅದರ ಪ್ರಕಾಶದಿಂದ ಅವನನ್ನು ನೋಡಿದವರೆಲ್ಲರೂ, ಇದೇನು ? ಎಂದು ಭ್ರಾಂತರಾಗಿ ನೋಡತೊಡಗಿದರು. ಸ್ವಲ್ಪಹೊತ್ತಿನಮೇಲೆ ಸತ್ರಾಜಿತನು ಪಟ್ಟಣಕ್ಕೆ ಬಂದುದನ್ನು ಕಂಡು ಓಹೋ! ಇವನು ಸೂರ್ಯನಲ್ಲ, ಸೂರ್ಯದೇವನ ವರಬಲದಿಂದ ಸಂಪಾದಿಸಿದ ರತ್ನವನ್ನು ಧರಿಸಿಕೊಂಡಿರುವ ಸತ್ರಾಜಿತನೆಂದು ನಿರ್ಧರಿಸಿ ಸುಮ್ಮನಾದರು. ಆ ಬಳಿಕ ಸತ್ರಾಜಿತನು ಈ ರತ್ನವು ತನ್ನಲ್ಲಿದ್ದರೆ ಕೃಷ್ಣನು ತನಗೆ ಬೇಕೆಂದು ನನ್ನನ್ನು ಕೇಳುವನು ಕೇಳಿದಮೇಲೆ ಕೊಂಡಿದ್ದರೆ ಹೇಗಾದರೂ ಅದನ್ನು ಅಪಹರಿಸಿಕೊಳ್ಳುವನು ಎಂದು ಅನ್ಯಮಾನಸಪಟ್ಟು ತನ್ನ ತಮ್ಮನಾದ ಪ್ರಸೇನನಿಗೆ ಆ ಮಣಿಯಪ್ರಭಾವವನ್ನು ಹೇಳಿ ಅದನ್ನು ಧರಿಸಿಕೊಂಡಿರುವಂತೆ ಪ್ರಸೇನನಿಗೆ ಕೊಟ್ಟನು, ಪ್ರಸೇನನು ಸ್ಯಮಂತಕ ರತ್ನವನ್ನು ಧರಿಸಿಕೊಂಡು ಉತ್ಸಾಹಭರಿತನಾಗಿರುತ್ತ ಒಂದಾನೊಂದು ದಿನ ಮಣಿ ಸಹಿತನಾಗಿ ಕುದುರೆಯನ್ನೇರಿ ಬೇಟೆಗಾಗಿ ಹೊರಟು ಅರಣ್ಯಕ್ಕೆ ಹೋಗಿ ಬೇಟೆಮಾಡುತ್ತಿದ್ದನು. ಆಗ ಒಂದು ಸಿಂಹವು ಪ್ರಸೇನಮೇಲೆಬಿದ್ದು ಅವನನ್ನು ಕೊಂದು ಸ್ಯಮಂತಕರತ್ನವನ್ನು ತೆಗೆದುಕೊಂಡಿತು, ಕೂಡಲೆ ಅಲ್ಲಿದ್ದ ಜಾಂಬವಂತನೆಂಬುವನು (ಮುದಿಕರಡಿಯು) ಆ ಸಿಂಹವನ್ನು ಸಂಹರಿಸಿ ರತ್ನವನ್ನು ತೆಗೆದುಕೊಂಡು ತನ್ನ ಗುಹೆಯನ್ನು ಹೊಕ್ಕು ಮಗಳು ತೂಗುತ್ತಿದ್ದ ತೊಟ್ಟಿಲಿಗೆ ಕಟ್ಟಿ ಅಲಂಕಾರಮಾಡಿದ್ದನು. ಇತ್ತ ಪ್ರಸೇನನ ಜೊತೆಯಲ್ಲಿ ಬೇಟೆಗಾಗಿ ಶ್ರೀಕೃಷ್ಣನೂ ಅರಣ್ಯಕ್ಕೆ ಹೋಗಿದ್ದು ವ್ಯಾಜಾಂತರದಿಂದ ಒಬ್ಬೊಬ್ಬರು ಒಂದೊಂದು ಕಡೆಯಾಗಿ ಹೋಗಲು ಪ್ರಸೇನನನ್ನು ಹುಡುಕಲಾಗದೆ ಶ್ರೀಕೃಷ್ಣನು ಊರಿಗೆ ಬಂದು ಸೇರಿದನು. ಎರಡು ಮೂರು

ದಿನಗಳಾದರೂ ಪ್ರಸೇನನು ಬರಲೇಇಲ್ಲ ಎಲ್ಲೆಲ್ಲಿ ಹುಡುಕಿದರೂ ಸಿಕ್ಕದಿದ್ದ ಕಾರಣ ಸತ್ರಾಜಿತಾದಿಗಳು ಪ್ರಸೇನನ ಜೊತೆಯಲ್ಲಿ ಬೇಟೆಗೆ ಹೋಗಿದ್ದ ತಂತ್ರಿಯಾದ ಶ್ರೀಕೃಷ್ಣನು ಆಶಾಬದ್ಧನಾಗಿ ಪ್ರಸೇನನನ್ನು ಕೊಂದು ಮಣಿಯನ್ನು ಅಪಹರಿಸಿದನೆಂದು ದೂರಲಾರಂಭಿಸಿದನು. ಇದನ್ನು ಕೇಳಿ ಕೃಷ್ಣಮೂರ್ತಿಯು ಚಿಂತಾಕ್ರಾಂತನಾಗಿ ನಿಷ್ಕಾರಣವಾಗಿ ತನಗೆ ಬಂದಿರುವ ಅಪವಾದವನ್ನು ಕಳೆದುಕೊಳ್ಳಬೇಕೆಂದು ಸತ್ರಾಜಿತನನ್ನು ಕೆಲವು ಪರಿವಾರದವರನ್ನು ಸಂಗಡ ಕರೆದುಕೊಂಡು ಅರಣ್ಯಕ್ಕೆ ಹೋಗಿ ಪ್ರಸೇನನನ್ನು ಹುಡುಕುತ್ತಿದ್ದರು.

ಹಾಗೆ ಹುಡುಕುತ್ತಿದ್ದಾಗ ಸಿಂಹದಿಂದ ಕೊಲ್ಲಲ್ಪಟ್ಟ ಪ್ರಸೇನನೂ ಅವನ ಕುದುರೆಯೂ ಬಿದ್ದಿರುವ ಸ್ಥಳಕ್ಕೆ ಬಂದು ಹತ್ತಿರದಲ್ಲೇ ಸತ್ತುಬಿದ್ದಿರುವ ಸಿಂಹವನ್ನು ನೋಡಿ ಆಶ್ಚರ್ಯಭರಿತರಾಗಿ ಆ ಸಿಂಹವನ್ನು ಕರಡಿಯು ಕೊಂದಿರುವುದೆಂದು ತಿಳಿದು ಆ ಕರಡಿಯ ಹೆಜ್ಜೆಯನ್ನೇ ಅನುಸರಿಸಿಕೊಂಡು ಹೋಗಿ ಬಹುದೂರದಲ್ಲಿ ಒಂದು ಗುಹೆಯನ್ನು ಕಂಡರು. ಆ ಗುಹೆಯು ಬಹು ಅಂಧಕಾರಮಯವಾಗಿ ಪ್ರವೇಶಿಸುವುದಕ್ಕೆ ಅಸಾಧ್ಯವಾಗಿದ್ದ ಕಾರಣ ಕೃಷ್ಣನು ಪರಿವಾರದವರೊಡನೆ ಸತ್ರಾಜಿತನನ್ನು ಗುಹೆಯ ಬಾಗಿಲಲ್ಲಿ ಕಾದಿರುವಂತೆ ಹೇಳಿ ತಾನು ಏಕಾಂಗಿಯಾಗಿ ಒಳಹೊಕ್ಕು ಅದರಲ್ಲಿದ್ದ ಅರಮನೆಯನ್ನು ಪ್ರವೇಶಿಸಿದನು. ಆ ಅರಮನೆಯ ಒಂದು ಕೊಠಡಿಯಲ್ಲಿ ಜಾಂಬವಂತನ ಮಗಳಾದ ಜಾಂಬವತಿಯೆಂಬ ಕನ್ಯಾಮಣಿಯು ತನ್ನ ಮಗುವಿನ ತೊಟ್ಟಿಲಿಗೆ ಸ್ಯಮಂತಕರತ್ನವನ್ನು ಕಟ್ಟಿ ಆ ರತ್ನವನ್ನು ಮಗುವಿಗೆ ತೋರಿಸುತ್ತಾ ಅಪ್ಪಾ ಮಗು ಅಳಬೇಡ ಇಗೋ ಈ ಸ್ಯಮಂತಕರತ್ನವು ಪ್ರಸೇನನ ಕೊರಳಿನಲ್ಲಿತ್ತು ಅವನನ್ನು ಒಂದು ಸಿಂಹವು ಕೊಂದು ಈ ಮಣಿಯ ನ್ನು ಅಪಹರಿಸಿಕೊಂಡಿತು. ನಿಮ್ಮ ತಾತನಾದ ಜಾಂಬವಂತನು ಆ ಸಿಂಹವನ್ನು ಸಂಹರಿಸಿ ನಿನಗೋಸ್ಕರವಾಗಿ ಈ ರತ್ನವನ್ನು ತಂದಿರುವನು ನೋಡು ! ಎಂದು ತೊಟ್ಟಿಲು ತೂಗುತ್ತಿರುವುದನ್ನು ಕಂಡು ಶ್ರೀ ಕೃಷ್ಣನು ಆಶ್ಚರ್ಯನಾಗಿ ಅಲ್ಲೆ ನಿಂತುಕೊಂಡನು. ಶ್ರೀಕೃಷ್ಣನನ್ನು ಕಂಡಕೂಡಲೆ ಜಾಂಬವತಿಗೆ ವಿರಹವೇದನೆಯುಂಟಾಗಿ ನೀನು ಇಲ್ಲಿ ಇರಬೇಡ ಇದ್ದರೆ ಕೆಡಕಾದೀತು, ಈ ರತ್ನದಮೇಲೆ ನಿನಗೆ ಆಸೆಯಿದ್ದರೆ ಜಾಂಬವಂತನು ಏಳುವುದರೊಳಗಾಗಿ ತೆಗೆದುಕೊಂಡು ಹೊರಟುಹೋಗು ಎಂದು ಗುಟ್ಟಾಗಿ ಹೇಳಿದಳು. ಅದನ್ನು ಕೇಳಿದ ಕೂಡಲೆ ಕೃಷ್ಣನು ತನ್ನ ಶಂಖವನ್ನು ಗಟ್ಟಿಯಾಗಿ ಊದಿ ನಾದಮಾಡಿದನು. ಆ ಶಂಖಧ್ವನಿಯನ್ನು ಕೇಳಿದ ಕೂಡಲೆ ಜಾಂಬವಂತನು ಎಚ್ಚರಗೊಂಡು ಕೃಷ್ಣನೊಡನೆ ಯುದ್ಧಕ್ಕೆ ನಿಂತನು. ಹೀಗೆ ಯುದ್ಧ ಮಾಡುತ್ತಿರುವಾಗ ಏಳು ದಿನಗಳವರೆಗೂ ಕೃಷ್ಣನು ಹೊರಕ್ಕೆ ಬಾರದಿದ್ದ ಕಾರಣ ಗವಿಯ ಬಾಗಿಲಲ್ಲಿ ಕಾದಿದ್ದ ಸತ್ರಾಜಿತಾದಿಗಳು ಖಿನ್ನರಾಗಿ ಪಟ್ಟಣಕ್ಕೆ ಹೊರಟುಬಂದು ನಡೆದ ಸಂಗತಿಯನ್ನು ಹೇಳಲು ಸರ್ವರೂ ಖಿನ್ನರಾಗಿ ಕೃಷ್ಣನು ಸತ್ತುಹೋದನೆಂದು ತಿಳಿದು ಅವನಿಗೆ ಉತ್ತರಕ್ರಿಯಾದಿಗಳನ್ನು ಮಾಡಿಟ್ಟರು. ಇತ್ತ ಗುಹೆಯಲ್ಲಿ ಶ್ರೀಕೃಷ್ಣನು ಸಾಹಸದಿಂದ ಇಪ್ಪತ್ತೆಂಟು ದಿನಗಳವರೆಗೆ ಯುದ್ಧಮಾಡಿದರೂ ಅವನನ್ನು ಜಯಿಸುವುದಕ್ಕಾಗದೆ ಇವನು ದೈವಭಕ್ತನು ಅಲ್ಲದೆ ಕೇವಲ ವೃದ್ಧನು. ಆದಕಾರಣ ಇವನನ್ನು ಉಪಾಯಾಂತರದಿಂದ ಗೆಲ್ಲಬೇಕೆಂದು ಯೋಚಿಸಿ ಯುದ್ಧಕ್ಕೆ ಮಧ್ಯದಲ್ಲಿ ವಿಶ್ವರೂಪವನ್ನು ಜಾಂಬವಂತನಿಗೆ ತೋರ್ಪಡಿಸುತ್ತ ಬರಲು ಅದರಿಂದ ಜ್ಞಾನೋದಯವುಂಟಾಗಿ ಜಾಂಬವಂತನು ನನ್ನೆದುರಿಗೆ ನಿಂತು ಯುದ್ಧಮಾಡತಕ್ಕ ಧೀರರೇ ಇಲ್ಲ ಹೀಗಿರುವಲ್ಲಿ ಇವನು ಇಪ್ಪತ್ತೆಂಟು ದಿನಗಳವರೆಗೆ ಅನ್ನಾಹಾರಗಳಿಲ್ಲದೆ ಯುದ್ಧಮಾಡಿದರೂ ಸಾಯದೆ ಇರುವನು. ಇವನು ಶ್ರೀಹರಿಯಲ್ಲದೆ

ಮಾತ್ರಾರೂ ಅಲ್ಲ. ಹಿಂದೆ ತ್ರೇತಾಯುಗದಲ್ಲಿ ನನಗೆ ಸ್ವಾಮಿಯಾಗಿದ್ದ ಶ್ರೀರಾಮಚಂದ್ರನೇ ಈತನೆಂದು ತಿಳಿದು ಭಕ್ತಿಯುಕ್ತನಾಗಿ ಕೃಷ್ಣನನ್ನು ಹೊಗಳಿ ಸ್ತುತಿಸಿ ತನ್ನ ಮಗಳಾದ ಜಾಂಬವತಿಯನ್ನು ಕೊಟ್ಟು ಮದುವೆಮಾಡಿ ಸ್ಯಮಂತಕಮಣಿಯನ್ನು ಕೊಟ್ಟು ನಮಸ್ಕರಿಸಿ ಇದನ್ನು ಸ್ವೀಕರಿಸಿ ಅನುಗ್ರಹಿಸಬೇಕೆಂದು ಬೇಡಿಕೊಂಡನು. ಆಗ ಸಂತೋಷಭರಿತನಾದ ಶ್ರೀಕೃಷ್ಣನು ಸ್ಯಮಂತಕಮಣಿಯನ್ನು ತೆಗೆದುಕೊಂಡು ಜಾಂಬವತಿಯೊಂದಿಗೆ ಬಂದು ದ್ವಾರಕಾಪಟ್ಟಣವನ್ನು ಹೊಕ್ಕು ರಾಜನ ಸಭೆಯಲ್ಲಿ ಸರ್ವರಿಗೂ ತಿಳಿಯುವಂತೆ ನಡೆದ ಸಂಗತಿಯನ್ನು ಜಾಂಬವತಿಯಿಂದ ಹೇಳಿಸಿ ಆ ರತ್ನವನ್ನು ಸತ್ರಾಜಿತನಿಗೆ ಕೊಟ್ಟನು. ಆಗ ಸತ್ರಾಜಿತನು ನಿಷ್ಕಾರಣವಾಗಿ ಕೃಷ್ಣನನ್ನು ದೂರಿದ ಅಪರಾಧವನ್ನು ಕಳೆದುಕೊಳ್ಳುವುದಕ್ಕಾಗಿ ತನ್ನ ಮಗಳಾದ ಸತ್ಯಭಾಮಾದೇವಿಯನ್ನು ಕೃಷ್ಣನಿಗೆ ಮದುವೆಮಾಡಿಕೊಟ್ಟು ಅವಳಿಗೆ ಆ ಸ್ಯಮಂತಕಮಣಿಯನ್ನು ಬಳುವಳಿಯಾಗಿ ಕೊಟ್ಟನು. ಅಂದಿನಿಂದ ಸ್ಯಮಂತಕರತ್ನವು ಸತ್ಯಭಾಮೆಯ ಬಳಿಯಲ್ಲಿರುತಿತ್ತು. ಹೀಗಿರುವಲ್ಲಿ ಒಂದುದಿನ ಪಾಂಡವರ ದರ್ಶನಕ್ಕಾಗಿ ಕೃಷ್ಣನು ಹಸ್ತಿನಾವತಿಗೆ ಹೋಗಿರುವ ಸಮಯವನ್ನು ಕಾದುಕೊಂಡಿದ್ದು ಆಶಾಬದ್ಧನಾದ ಶತಧನ್ವನು ಮೋಸದಿಂದ ಆ ಮಣಿಯನ್ನು ಸತ್ಯಭಾಮೆಯಿಂದ ಕಿತ್ತುಕೊಂಡು ಸತ್ರಾಜಿತನನ್ನು ಕೊಂದು ಹಾಕಿದನು. ಶ್ರೀಕೃಷ್ಣನು ಬಂದಮೇಲೆ ಸತ್ಯಭಾಮೆಯು ಈ ಸಂಗತಿಯನ್ನು ಹೇಳಲು ಕಪಟನಾಟಕ ಸೂತ್ರಧಾರಿಯಾದ ಶ್ರೀಕೃಷ್ಣನು ಅಂತರ್ಯದಲ್ಲಿ ಸಂತೋಷಭರಿತನಾಗಿ ಹೊರಗೆ ವಿಷಾದವನ್ನು ತೋರಿಸುತ್ತಾ ಅಣ್ಣನಾದ ಬಲರಾಮನ ಬಳಿಗೆ ಬಂದು ನಡೆದ ಸಂಗತಿಯನ್ನು ವಿವರಿಸಿ ಹೇಳಿ, ಶತಧನ್ವನನ್ನು ಕೊಂದು ಸ್ಯಮಂತಕ ರತ್ನವನ್ನು ತರುವುದಕ್ಕಾಗಿ ತನಗೆ ಸಹಾಯವಾಗಿ ಬರಬೇಕೆಂದು ಕೇಳಿದನು. ಅದರಂತೆ ರಾಮಕೃಷ್ಣರಿಬ್ಬರೂ ಯುದ್ಧಸನ್ನದ್ಧರಾಗಿ ಬರುತ್ತಿರುವರೆಂಬ ವಾರ್ತೆಯನ್ನು ಕೇಳಿ ಶತಧನ್ವನು ತನ್ನ ಹತ್ತಿರಿದ್ದ ಸ್ಯಮಂತಕಮಣಿಯನ್ನು ಅಕ್ರೂರನಿಗೆ ಕೊಟ್ಟು ತಾನು ಕುದುರೆಯನ್ನು ಹತ್ತಿ ದಕ್ಷಿಣದಿಕ್ಕಿಗೆ ಓಡಿಹೋದನು. ಆದರೂ ರಾಮಕೃಷ್ಣರು ಅವನನ್ನು ಹಿಂಬಾಲಿಸಿ ಹೋಗುತ್ತಿದ್ದರು. ಕಡೆಗೆ ಕೃಷ್ಣನು ಶತಧನ್ವನನ್ನು ಕೊಂದು ಶೋಧನೆಮಾಡುವಲ್ಲಿ ಅವನಲ್ಲಿ ರತ್ನವಿಲ್ಲದಿರುವುದನ್ನು ಕಂಡು ಖಿನ್ನನಾಗಿ ಆ ವಿಚಾರವನ್ನು ಬಲರಾಮನಿಗೆ ಹೇಳಲು ಬಲರಾಮನು ಕೋಪಾವಿಷ್ಟನಾಗಿ ಕೃಷ್ಣ ! ನೀನು ಮಾಯಾವಿ ಧನಲೋಭದಿಂದ ಇಲ್ಲದ ಕಾರಣವನ್ನು ಹುಟ್ಟಿಸಿ ಬಂಧುಗಳನ್ನೆ ಕೊಲ್ಲುತ್ತಿರವೆ ಇದು ನಿನಗೆ ಸರಿಯಲ್ಲ! ಎಂದು ಹೇಳಿ ಕೋಪಮಾಡಿಕೊಂಡು ತಾನು ಪಟ್ಟಣಕ್ಕೆ ಬರುವುದಿಲ್ಲವೆಂದು ಹಟ ಹಿಡಿದು ವಿದರ್ಭದೇಶಕ್ಕೆ ಹೊರಟುಹೋದನು.

ಎಷ್ಟು ವಿಧವಾಗಿ ಸಮಾಧಾನ ಮಾಡಿದರೂ ಬಲರಾಮನು ಒಪ್ಪದಿದ್ದ ಕಾರಣ ಕೃಷ್ಣನು ರಥಾರೂಢನಾಗಿ ದ್ವಾರಕೆಗೆ ಬಂದು ಬಿಟ್ಟನು. ಆಗ ಪಟ್ಟಣವಾಸಿಗಳೆಲ್ಲರೂ ಬಲರಾಮನಿಲ್ಲದೆ ಕೃಷ್ಣನು ಒಬ್ಬನೇ ಬಂದುದನ್ನು ಕಂಡು ಈ ಕೃಷ್ಣನಿಗೆ ಹೆಣ್ಣು ಹೊನ್ನುಗಳಮೇಲೆ ಬಹಳ ಆಸೆ ಆದಕಾರಣ ಎಲ್ಲಿಗೊ ಕರೆದುಕೊಂಡು ಹೋಗಿ ಅಣ್ಣನಾದ ಬಲರಾಮನನ್ನು ಕೊಂದು ಬಂದಿರುವನೆಂದು ದೂರುತ್ತಿದ್ದರು. ಅದನ್ನು ಕೇಳಿ ಕೃಷ್ಣನು ಖಿನ್ನನಾಗಿ, ಮನಸ್ಸಿನಲ್ಲಿ ಕೊರಗುತ್ತ ತನಗೆ ಪ್ರಾಪ್ತವಾದ ಈ ಅಪವಾದವನ್ನು ಹೇಗೆ ಹೋಗಲಾಡಿಸಿಕೊಳ್ಳಬೇಕೆಂದು ಚಿಂತಿಸುತ್ತಿದ್ದನು. ಇತ್ತ ಅಕ್ರೂರನು ಆ ಸ್ಯಮಂತರತ್ನ ಸಹಿತನಾಗಿ ಕಾಶೀಕ್ಷೇತ್ರಕ್ಕೆ ಹೋಗಿ ಅಲ್ಲಿ ವಾಸಿಸುತ್ತ ಬಹಳವಾದ ಚಿನ್ನವನ್ನು ಸಂಪಾದಿಸಿ ಅನೇಕ ಗುಡಿಗೋಪುರಗಳನ್ನು

ಕಟ್ಟಿಸಿ ಯಜ್ಞಯಾಗಾದಿಗಳನ್ನು ಮಾಡಿ ಲೋಕಗಳನ್ನು ತೃಪ್ತಿಪಡಿಸಿದನು. ಈ ಮಣಿಯ ಮಹಿಮೆಯಿಂದ ರೋಗಾದ್ಯುಪದ್ರವಗಳಿಲ್ಲದೆ ಅಕ್ರೂರನು ಶುಚಿರ್ಭೂತನಾಗಿ ಅಟ್ಟಹಾಸದಿಂದ ತನ್ನ ಪಟ್ಟಣಕ್ಕೆ ಬಂದನು. ಇದೆಲ್ಲವೂ ತನಗೆ ತಿಳಿದಿದ್ದರೂ ಕಪಟನಾಟಕಸೂತ್ರಧಾರಿಯಾದ ಶ್ರೀಕೃಷ್ಣನು ಏನೂ ತಿಳಿಯದವನಂತೆ ಮೌನದಿಂದಿರುತ್ತಿದ್ದನು. ಒಂದು ದಿನ ದೇವರ್ಷಿಯಾದ ನಾರದನು ಲೋಕಸಂಚಾರ ಮಾಡುತ್ತ ವೈಕುಂಠಕ್ಕೆ ಬಂದು ಶ್ರೀಕೃಷ್ಣನನ್ನು ಕಂಡು ಭಕ್ತಿಯಿಂದ ಹೊಗಳಿ ಆತನ ಮುಖಭಾವವನ್ನರಿತು, ಈರೀತಿ ನೀನು ಖಿನ್ನನಾಗಿ ನಿನ್ನ ಮುಖಕಾಂತಿಯು ಕೆಡುವುದಕ್ಕೆ ಕಾರಣವೇನು ? ಎಂದು ಕೃಷ್ಣನನ್ನು ಪ್ರಶ್ನೆಮಾಡಿದನು. ಆಗ ಕೃಷ್ಣಮೂರ್ತಿಯು ನಡೆದ ಸಂಗತಿಯನ್ನೆಲ್ಲ ನಾರದರಿಗೆ ಸವಿಸ್ತಾರವಾಗಿ ಹೇಳಲು, ನಾರದರು ಅಯ್ಯಾ! ನೀನು ತಿಳಿದೂ ತಿಳಿಯದವನಂತೆ ನಟಿಸಬೇಡ ಭಾದ್ರಪದ ಶುದ್ಧ ಚೌತಿಯ ದಿನ ನೀನು ಚಂದ್ರದರ್ಶನವನ್ನು ಮಾಡಿದಕಾರಣ ನಿನಗೆ ಈ ವಿಧವಾದ ಅಪವಾದವುಂಟಾಯಿತು ಇದನ್ನು ತಕ್ಕರೀತಿಯಲ್ಲಿ ಪರಿಹರಿಸಿಕೊ ಎಂದು ಹೇಳಲು, ಕೃಷ್ಣನು ಎಲೈ ನಾರದರೆ! ಚೌತಿಯದಿನ ಚಂದ್ರನನ್ನು ಏಕೆ ನೋಡಕೂಡದು, ಭಾದ್ರಪದ ಶುದ್ಧ ಬಿದಿಗೆಯ ದಿನ ಚಂದ್ರದರ್ಶನದಿಂದ ಶುಭವಾಗುವುದು ಹೇಗೆ? ಏತರಿಂದ ಹೀಗಾಯಿತು ಇದನ್ನು ನನಗೆ ತಿಳಿಸಬೇಕೆಂದು ಪ್ರಾರ್ಥಿಸಲು, ನಾರದರು ಎಲೈ ಕೃಷ್ಣಮೂರ್ತಿಯೇ ಕೇಳು! ಪೂರ್ವಕಾಲದಲ್ಲಿ ಚಂದ್ರನು ತಾನು ರೂಪವಂತನೆಂಬ ಗರ್ವದಿಂದ ಗಣಪತಿಯನ್ನು ನೋಡಿ ಹಾಸ್ಯಮಾಡಿದನು ಅಂದಿನಿಂದ ಚಂದ್ರನನ್ನು ಭಾದ್ರಪದಮಾಸದ ಶುದ್ಧ ಚೌತಿಯದಿನ ನೋಡಿದವರಿಗೆ ಹೀಗೆ ಅಪವಾದ ಉಂಟಾಗುತ್ತಿದೆ ಎನಲು ಶ್ರೀಕೃಷ್ಣನು ಚಂದ್ರನಿಗೆ ಗಣಪತಿಯಿಂದ ಶಾಪಬಂದ ವಿಚಾರವನ್ನು ವಿಸ್ತಾರವಾಗಿ ನನಗೆ ತಿಳಿಯ ಹೇಳಬೇಕೆಂದು ಕೇಳಲು ನಾರದನು ಶ್ರೀಕೃಷ್ಣನನ್ನು ಕುರಿತು ಹೀಗೆ ಹೇಳಿದನು—

ಪೂರ್ವಕಾಲದಲ್ಲಿ ದೇವದೇವೋತ್ತಮನಾದ ಪರಮೇಶ್ವರನು ತನ್ನ ಮಗನಾದ ಗಣಪತಿಯನ್ನು ಪ್ರಮಥಾದಿ ಗಣಗಳಿಗೆ ನಾಯಕನನ್ನಾಗಿ ಮಾಡಲು ಪ್ರಯತ್ನಪಟ್ಟು ದೇವಸಭೆಯನ್ನು ನಿರ್ಮಿಸಿದನು. ಆಗ ನೆರೆದಿದ್ದ ಬ್ರಹ್ಮಾದಿ ಸಕಲ ದೇವತೆಗಳ ಮುಂದೆ ವಿನಾಯಕನಿಗೆ ಅಣಿಮಾದಿ ಅಷ್ಟ ಸಿದ್ಧಿಗಳನ್ನು ಕೊಟ್ಟು ಲಗ್ನಮಾಡಿದನು. ಆ ವಿವಾಹ ಕಾಲದಲ್ಲಿ ಸಿದ್ಧಿ ಬುದ್ಧಿ ಸಮೇತನಾದ ಗಣನಾಥನನ್ನು ಕುರಿತು ಸೃಷ್ಟಿಕರ್ತನಾದ ಬ್ರಹ್ಮನು ಹೀಗೆ ಸ್ತೋತ್ರಮಾಡಿದನು. ಎಲೈ ವಿಘ್ನೇಶ್ವರನೆ ! ಗಜಮುಖನಾಗಿ, ಲಂಬೋದರನಾಗಿ, ಏಕದಂತನೆನಿಸಿಕೊಂಡು ಶೂರ್ಪಕರ್ಣಗಳಿಂದ ಹೊಳೆಯುತ್ತ ಪ್ರಮಥಗಣಗಳಿಗೆ ಒಡೆಯನಾಗಿ ಸಿದ್ಧಿ ಬುದ್ಧಿ ಸಮೇತನಾದ ಗಣಪತಿಯೆಂಬ ಹೆಸರುಳ್ಳ ನಿನಗೆ ಯಾರು ನಿಯಮ ಯುಕ್ತರಾಗಿ ಭಕ್ತಿಭಾವದಿಂದ ಕಡುಬುಗಳನ್ನಾಗಲಿ ಮೋದಕಗಳನ್ನಾಗಲಿ ಸಮರ್ಪಿಸಿ ಪೂಜಿಸುವರೊ, ಅವರಿಗೆ ಉತ್ತರೋತ್ತರ ಶ್ರೇಯಸ್ಸುಂಟಾಗುವುದು. ನೀನು ಅವರ ಕೋರಿಕೆಗಳನ್ನು ನಿರ್ವಿಘ್ನವಾಗಿ ನೆರವೇರಿಸಿಕೊಡುವೆ. ನಿನ್ನನ್ನು ಪೂಜೆಮಾಡದಿದ್ದರೆ ತ್ರಿಲೋಕಾಧಿಪತಿಗಳಾಗಲಿ, ದೇವತೆಗಳಾಗಲಿ, ಮತ್ತೆ ಯಾರಾಗಲಿ ! ಕಲ್ಪಕೋಟಿ ವರ್ಷಗಳು ಪ್ರಯತ್ನಮಾಡಿದರೂ, ಅಂಥವರು ಸಿದ್ಧಿಯನ್ನು ಪಡೆಯಲಾರರು. ಆದಕಾರಣವೇ ಇದರ ರಹಸ್ಯವನ್ನರಿತು ತ್ರಿಮೂರ್ತಿಗಳೂ ಕೂಡ ನಿನ್ನನ್ನು ಪೂಜಿಸಿ ನಿನ್ನ ಪ್ರಸಾದಬಲದಿಂದ ಅವರ ಕೆಲಸವಾದ ಸೃಷ್ಟಿ, ಸ್ಥಿತಿ, ಲಯಗಳನ್ನು ಮಾಡುತ್ತಿರುವರು ಈ ಅರ್ಥದಲ್ಲಿ ಸ್ವಲ್ಪವೂ ಸಂಶಯವಿಲ್ಲ. ಆದಕಾರಣ ಆದಿದೇವರೂ ಆದಿಪೂಜ್ಯನೂ ಅಖಿಲಾಂಡಕೋಟಿ ಬ್ರಹ್ಮಾಂಡಗಳಿಗೆನಾಯಕನೂ ವಿನಾಯಕಸ್ವರೂಪಿಯೂ

ಆದ ನೀನು ಪ್ರಸನ್ನನಾಗಿ ನಮ್ಮನ್ನು ರಕ್ಷಿಸು ಎಂದು ಹೊಗಳಿದನು. ಆತನ ಸ್ತೋತ್ರಕ್ಕೆ ಮೆಚ್ಚಿ ಗಣಪತಿಯು ಎಲೈ ಬ್ರಹ್ಮನೆ! ನಿನ್ನ ಭಕ್ತಿಗೆ ಮೆಚ್ಚಿದೆನು. ನಿನಗೆ ಬೇಕಾದ ವರವನ್ನು ಕೇಳು ಅನುಗ್ರಹಿಸುವೆನೆನಲು, ಬ್ರಹ್ಮನು ಅಂಜಲಿಬದ್ಧನಾಗಿ ಎಲೈ ಗಣನಾಥನೆ ನನ್ನ ಸೃಷ್ಟಿಕಾರ್ಯವು ನಿರ್ವಿಘ್ನವಾಗಿ ನೆರವೇರುವಂತೆ ಅನುಗ್ರಹಿಸಿ ಕಾಪಾಡಬೇಕು ಎಂದು ಪ್ರಾರ್ಥಿಸಲು, ಗಣಪತಿಯು ಹಾಗೆಯೆ ಆಗಲಿ "ತಥಾಸ್ತು" ಎಂದು ಅವನು ಕೊಟ್ಟ ಮೋದಕವನ್ನು ಸ್ವೀಕರಿಸಿ ಬ್ರಹ್ಮನನ್ನು ಹರಿಸಿ ಸಂತುಷ್ಟನಾಗಿ ತನ್ನ ಪತ್ನಿಯರಾದ ಸಿದ್ಧಿಬುದ್ಧಿಗಳ ಸಮೇತನಾಗಿ ಮೂಷಕವಾಹನವನ್ನೇರಿ ಲೋಕಸಂಚಾರಮಾಡುತ್ತ ಚಂದ್ರಲೋಕಕ್ಕೆ ಬಂದು ಉತ್ಸಾಹದಿಂದ ಸ್ವೇಚ್ಛೆಯಾಗಿ ಸಂಚರಿಸುತ್ತಿದ್ದನು.

ಆಗ ಸೌಂದರ್ಯಸಂಪನ್ನನಾಗಿದ್ದ ಚಂದ್ರನು ಗಣಪತಿಯನ್ನು ನೋಡಿ ಹಾಸ್ಯಮಾಡಿ ನಕ್ಕನು. ಅದನ್ನು ಕಂಡು ಗಣಪತಿಗೆ ಮಹಾಕೋಪವುಂಟಾಗಿ ಕಣ್ಣುಗಳನ್ನು ಕೆಂಪಗೆ ಮಾಡಿಕೊಂಡು ದುರದುರನೆ ಚಂದ್ರನನ್ನು ನೋಡಿ ಎಲೈ ಮಧಾಂಧನಾದ ಚಂದ್ರನೆ! ನಿನ್ನ ಗರ್ವವನ್ನು ನಾನು ಬಲ್ಲೆ ನನ್ನನ್ನು ಹಾಸ್ಯಮಾಡಿದುದಕ್ಕೆ ತಕ್ಕ ಫಲವನ್ನು ನೀನು ಅನುಭವಿಸದೆ ಇರಲಾರೆ. ಇಂದಿನಿಂದ ನಿನ್ನ ಸೌಂದರ್ಯವು ಕುಂದಿಹೋಗಲಿ! ನೀನು ಮೃಗಲಾಂಛನನಾಗಿ ಬಾಳು, ಅಲ್ಲದೆ ಭಾದ್ರಪದ ಶುದ್ಧ ಚೌತಿಯ ದಿನ ಯಾರು ನಿನ್ನನ್ನು ನೋಡುವರೊ, ಅವರಿಗೆ ಇಲ್ಲದ-ಮಿಥ್ಯಾಪವಾದವು ಉಂಟಾಗಲಿ, ಇದು ನನ್ನ ಶಾಪವೆಂದು ಹೇಳಿದನು. ಆದಕಾರಣ ಚಂದ್ರನಿಗೆ ಶಾಪವುಂಟಾಯಿತು. ಹೀಗೆ ತನಗೆ ಬಂದ ಶಾಪಕ್ಕೆ ಹೆದರಿ ಚಂದ್ರನು ಕಂಗೆಟ್ಟು ಕಮಲ ಮಧ್ಯದಲ್ಲಿ ಅಡಗಿಕೊಂಡನು. ಅಲ್ಲಿಂದ ಮುಂದೆ ಚಂದ್ರನ ಪ್ರಕಾಶವೇ ಇಲ್ಲವಾದಂತಾಗಲು, ಅಮೃತಪಾನ ಜೀವಿಗಳಾದ ದೇವತೆಗಳಿಗೆ ಚಂದ್ರನಿಲ್ಲದ ಕಾರಣ ಆಹಾರವೇ ಇಲ್ಲದಂತಾಯಿತು ಇದರಿಂದ ಅವರು ಬಹಳವಾಗಿ ನೊಂದು ಎಲ್ಲರೂ ಒಟ್ಟಾಗಿ ಸೇರಿ ಸತ್ಯಲೋಕಕ್ಕೆ ಹೋಗಿ ಬ್ರಹ್ಮನನ್ನು ಕಂಡು ಚಂದ್ರನ ಪ್ರಕಾಶವೇ ಇಲ್ಲದಕಾರಣ ತಮಗೆ ಉಂಟಾಗಿರುವ ಕಷ್ಟವನ್ನು ವಿವರಿಸಿ ಹೇಳಿಕೊಂಡು ಗಣಪತಿಯಿಂದ ಚಂದ್ರನಿಗೆ ಶಾಪಬಂದ ವಿಧವನ್ನು ವಿವರಿಸಿ ಹೇಳಿದರು. ಅದನ್ನು ಕೇಳಿ ಬ್ರಹ್ಮನು ಎಲೈ ದೇವತೆಗಳಿರಾ! ಗಣಪತಿಯು ಕೊಟ್ಟ ಶಾಪವು ಅವನಿಂದಲೆ ಪರಿಹಾರವಾಗಬೇಕಲ್ಲದೆ ಮತ್ತಾರಿಂದಲೂ ಸಾಧ್ಯವಾಗಲಾರದು. ತ್ರಿಮೂರ್ತಿಗಳು ಕೂಡ ಅವನನ್ನು ಪೂಜಿಸುತ್ತಿರುವರು. ಆದಕಾರಣ ನೀವುಗಳು ಚಂದ್ರನಿಗೆ ಉಪದೇಶಮಾಡಿ ಸಂಕಷ್ಟಹರ ಗಣಪತಿ ವ್ರತವನ್ನು ಮಾಡಿಸಿದರೆ ಅದರಿಂದ ವಿನಾಯಕನು ತೃಪ್ತನಾಗಿ ಚಂದ್ರನಿಗೆ ವಿಶಾಪವನ್ನು ಕೊಡುವನು. ಆ ಬಳಿಕ ನಿಮ್ಮ ಇಷ್ಟಾರ್ಥವು ಕೈಗೂಡುವದು. ಭಾದ್ರಪದ ಶುದ್ಧ ಚೌತಿಯಲ್ಲಿ ಗಣಪತಿಯನ್ನು ಆರಾಧಿಸಬೇಕು. ಕೃಷ್ಣಪಕ್ಷದ ಚೌತಿಯಲ್ಲಿ ಪ್ರದೋಷಕಾಲಕ್ಕೆ ಸರಿಯಾಗಿ ಪೂಜೆಯನ್ನು ಪ್ರಾರಂಭಿಸಿ ಚಂದ್ರೋದಯವಾದ ಕೂಡಲೇ ಚಂದ್ರನಿಗೆ ಅರ್ಘ್ಯವನ್ನು ಕೊಟ್ಟು ವ್ರತವನ್ನು ಮುಗಿಸಬೇಕು. ಚಿನ್ನದಿಂದ ಗಣಪತಿಯನ್ನು ಮಾಡಿ ಪೂಜಿಸಿ, ಕಡುಬು, ಅತಿರಸ, ಪಕ್ವಾನ್ನ ಪಾಯಸಗಳಿನ್ನು ನೈವೇದ್ಯಮಾಡಿ ಬ್ರಾಹ್ಮಣ ಭೋಜನವನ್ನು ಮಾಡಿಸಿ ಅನಂತರ ಆ ಪ್ರತಿಮೆಯನ್ನು ದಾನಮಾಡಬೇಕು. ಹೀಗೆ ದಾನಮಾಡಿದರೆ ಗಣಪತಿಯು ಪ್ರಸನ್ನನಾಗಿ ನಿಮ್ಮ ಕೋರಿಕೆಗಳನ್ನು ನೆನವೇರಿಸುವನು, ಎಂದು ಹೇಳಲು ದೇವತೆಗಳೆಲ್ಲರೂ ಸಂತುಷ್ಟರಾಗಿ ಚಂದ್ರನಬಳಿಗೆ ಬಂದು ಬ್ರಹ್ಮದೇವನ ವಾಕ್ಯವನ್ನು ಅವನಿಗೆ ತಿಳಿಸಿ, ಚಂದ್ರನ ಕೈಯಿಂದ ಸಿದ್ಧಿ ಬುದ್ಧಿ ಸಮೇತನಾದ ಗಣಪತಿಯನ್ನು ಪೂಜಿಸಿ,

ಆವಾಹನಾದಿ ಷೋಡಶೋಪಚಾರ ಪೂಜೆಗಳನ್ನು ಮಾಡಿಸಿದರು. ಹಾಗೆ ಪೂಜೆಮಾಡಿದ ಮೇಲೆ ಚಂದ್ರನಿಗೆ ಜ್ಞಾನೋದಯವಾಗಿ ಆತನು ಬಗೆಬಗೆಯ ವಿಧದಿಂದ ಗಣಪತಿಯನ್ನು ಸ್ತೋತ್ರಮಾಡಿ ಹೊಗಳುತ್ತ ಅಜ್ಞಾನವಶದಿಂದ ನಾನು ನಿನ್ನನ್ನು ಹಾಸ್ಯಮಾಡಿದೆನು. ನನ್ನಿಂದ ಮಹಾಪರಾಧವಾಯಿತು ಅದನ್ನು ಮನ್ನಿಸಿ ನನ್ನನ್ನು ಉದ್ಧಾರಮಾಡಬೇಕೆಂದು ನಮಸ್ಕರಿಸಿದನು. ಆಗ ಚಂದ್ರನ ಭಕ್ತಿಗೆ ಮೆಚ್ಚಿದವನಾದ ಗಣಪತಿಯು ಸಂತುಷ್ಟನಾಗಿ ನಿನಗೆ ಬೇಕಾದ ವರವನ್ನು ಕೇಳಿಕೊ, ಕೊಡುತ್ತೇನೆ ಎಂದು ಹೇಳಿದನು. ಆಗ ದೇವತೆಗಳೆಲ್ಲರೂ ಚಂದ್ರನಿಗೆ ನೀನು ಕೊಟ್ಟ ಶಾಪವನ್ನು ಪರಿಹರಿಸಬೇಕು. ಇದಕ್ಕಾಗಿ ನೀನು ಪ್ರಸನ್ನನಾಗಿ ಅನುಗ್ರಹಮಾಡಬೇಕು ಎಂದು ಬೇಡಿಕೊಂಡರು. ಆಗ ಗಣಪತಿಯು ಮಂದಹಾಸಯುಕ್ತನಾಗಿ ಇಗೊ! ನಿಮ್ಮ ಭಕ್ತಿಭಾವಕ್ಕೆ ಮೆಚ್ಚಿ ನಾನು ವಿಶಾಪವನ್ನು ಕೊಡುತ್ತೇನೆ ಸರ್ವರೂ ಕೇಳಿ, ಭಾದ್ರಪದ ಶುದ್ಧಚೌತಿಯಲ್ಲಿ ಚಂದ್ರನನ್ನು ನೋಡಿದವರು ಅಪವಾದಕ್ಕೆ ಗುರಿಯಾಗುವುದು ನಿಜ, ಆದರೆ ಶುದ್ಧ ಬದಿಗೆಯಲ್ಲಿ ಚಂದ್ರದರ್ಶನ ಮಾಡಿದವರಿಗೆ ಈ ದೋಷವಿಲ್ಲ ಎಂದು ಹೇಳಲು ಚಂದ್ರನು ಸಂತೋಷದಿಂದ ಗಣಪತಿಯನ್ನು ನೋಡಿ ಎಲೈ ದೇವದೇವನೆ! ನಿನ್ನ ಪೂಜೆಗೆ ಯಾವದಿನ ಯೋಗ್ಯವಾದದ್ದು ಅದನ್ನು ಹೇಗೆ ಮಾಡಬೇಕು ಎಂದು ಕೇಳಲು ಗಣಪತಿಯು ಕೃಷ್ಣಪಕ್ಷ ಚೌತಿಯದಿನ ಪ್ರದೋಷಕಾಲಕ್ಕೆ ನನ್ನ ಪೂಜೆಯನ್ನು ಮಾಡಿ ಕಡುಬುಗಳನ್ನು ಮೋದಕಗಳನ್ನು ಪಾಯಸ ಸಮೇತವಾಗಿ ನೈವೇದ್ಯಕ್ಕಿಟ್ಟು ರೋಹಿಣೀ ಚಂದ್ರನನ್ನು ಪೂಜೆಮಾಡಬೇಕು, ಚಿನ್ನದಿಂದಲೂ, ಶಕ್ತಿಯಿಲ್ಲದವರು ಮಣ್ಣಿನಿಂದಲೂ ಗಣಪತಿಯನ್ನು ಮಾಡಿಸಿ ಪೂಜೆಮಾಡಿ ದಕ್ಷಿಣೆ ಸಹಿತವಾಗಿ ಬ್ರಾಹ್ಮಣನಿಗೆ ದಾನಮಾಡಬೇಕು. ಹೀಗೆ ಮಾಡಿದರೆ ಭಕ್ತರ ಕಷ್ಟ ಕಾರ್ಯಗಳೆಲ್ಲ ನಾಶವಾಗುವುವು. ಇದೂ ಅಲ್ಲದೆ ಭತ್ತ ಗೋಧಿ ಮೊದಲಾದ ಧಾನ್ಯದ ಮೇಲೆ ಅಲಂಕರಿಸಿದ ಕಲಶವನ್ನಿಟ್ಟು ಅದರಲ್ಲಿ ಚಿನ್ನದ ಪ್ರತಿಮೆಯನ್ನು ಹಾಕಿ ವಸ್ತ್ರಯುಗ್ಮಗಳನ್ನು ಹೊದ್ದಿಸಿ ರಾತ್ರಿ ನಾಲ್ಕು ಯಾಮವೂ ಪೂಜಿಸುತ್ತ ಪ್ರತಿ ಯಾಮದಲ್ಲಿಯೂ ಹೊಸ ಹೊಸದಾದ ಕಡುಬುಗಳನ್ನು ನಿವೇದಿಸುತ್ತ ರಾತ್ರಿಯಲ್ಲಿ ಜಾಗರಣೆಮಾಡಿ ರಕ್ತವಸ್ತ್ರವನ್ನು ಧರಿಸಿ ಧರ್ಮಪತ್ನಿಯೊಂದಿಗೆ ಬ್ರಹ್ಮಚರ್ಯವ್ರತಿಯಾಗಿರುತ್ತ ಧೂಪ ದೀಪ ನೈವೇದ್ಯಾದಿಗಳಿಂದ ಅರ್ಚಿಸಿ ಕಬ್ಬನ್ನು ಕಡುಬನ್ನು ಹೋಮಮಾಡಿ ಮಂತ್ರಪುರಸ್ಸರವಾಗಿ ಆ ಪ್ರತಿಮೆಯನ್ನು ಬ್ರಾಹ್ಮಣನಿಗೆ ದಾನಮಾಡಿ ಯಥೇಚ್ಛವಾಗಿ ದಕ್ಷಿಣೆಯನ್ನು ಕೊಟ್ಟು ಅನಂತರ ಮೌನದಿಂದ ಭೋಜನಕ್ಕೆ ಕುಳಿತು ಹುಳಿ, ಉಪ್ಪು, ಖಾರಗಳನ್ನು ವರ್ಜಿಸಿ ಮಧುರಾಹಾರವನ್ನು ಸೇವಿಸಬೇಕು. ಹೀಗೆಮಾಡಿದರೆ ನಾನು ಪ್ರಸನ್ನನಾಗಿ ಅವರ ಕಷ್ಟನಷ್ಟಗಳನ್ನೆಲ್ಲ ಕ್ಷಣಮಾತ್ರದಲ್ಲಿ ಪರಿಹರಿಸುವೆನೆಂದು ಗಣಪತಿಯು ಚಂದ್ರನಿಗೆ ಹೇಳಿದನು ಆದ್ದರಿಂದ ಎಲೈ ಕೃಷ್ಣಸ್ವಾಮಿಯೆ! ಭಾದ್ರಪದ ಶುದ್ಧ ಚತುರ್ಥಿಯ ದಿನ ಯಾರೂ ಚಂದ್ರದರ್ಶನವನ್ನು ಮಾಡಬಾರದು. ಒಂದುವೇಳೆ ಮಾಡಿದರೆ ಅವರಿಗೆ ಅಪವಾದವೆಂದಿಗೂ ತಪ್ಪಲಾರದು. ಅದನ್ನು ತಪ್ಪಿಸಿಕೊಳ್ಳುವುದಕ್ಕಾಗಿ ಸ್ಯಮಂತಕೋಪಾಖ್ಯಾನವನ್ನು ಕೇಳಬೇಕು. ಆದಕಾರಣ ಸ್ಯಮಂತಕಮಣಿಯ ಕಥೆಯನ್ನು ಕೇಳಿದವರ ಕಷ್ಟಪರಂಪರೆಗಳು ನಾಶವಾಗುವುವು ಎಂದು ಗಣಪತಿಯು ಚಂದ್ರನಿಗೆ ಹೇಳಿದ ವ್ರತವನ್ನು ನಾರದರು ಹೇಳಲು ಶ್ರೀ ಕೃಷ್ಣಸ್ವಾಮಿಯು ಭಕ್ತಿಯಿಂದ ಕೇಳಿ ಗಣಪತಿಯನ್ನು ಪೂಜಿಸಿ ಅವನ ವರಪ್ರಸಾದದಿಂದ ತನಗೆ ಬಂದಿದ್ದ ಅಪವಾದವನ್ನು ನೀಗಿಕೊಂಡು ಸುಖಿಯಾದನು. ಆದಕಾರಣ

ಎಲೈ ಧರ್ಮರಾಯನೆ! ನೀನೂ ಕೂಡ ಶ್ರೇಷ್ಠವಾದ ಈ ವ್ರತವನ್ನು ಮಾಡಿ ಸುಖಿಯಾಗು ಎಂದು ಹೇಳಿದ ಸ್ಕಾಂದಪುರಾಣ ಮೂಲವಾದ ವರಸಿದ್ಧಿ ವಿನಾಯಕ ವ್ರತಕಥಾ ವೃತ್ತಾಂತದಲ್ಲಿ ಸ್ಯಮಂತಕೋಪಾಖ್ಯಾನಂ ಸಂಪೂರ್ಣಂ. ಶ್ರೀಃ ಶ್ರೀಃ ಶ್ರೀಃ ಶ್ರೀಃ

ಶ್ರೀ ಮಹಾಗಣಪತಿಪ್ರಸಾದಸಿದ್ಧಿರಸ್ತು. ॥ ಶ್ರೀರಸ್ತು ॥



೨. ಅಥ ಶ್ರೀ ಸ್ವರ್ಣಗೌರೀ ವ್ರತಕಲ್ಪಃ

ಅತ್ರ ವ್ರತವಿವೇಕಃ

ಭಾದ್ರಪದ ಶುಕ್ಲ ತೃತೀಯಾಯಾಂ ಕರ್ತವ್ಯಮೇತದ್ವ್ರತಂ ॥

ಅಥ ಧರ್ಮಸಿಂಧೌ॥ಮುಹೂರ್ತಮಾತ್ರಾ ತತೋ ನ್ಯೂನಾಪಿ ಪರಾ ಗ್ರಾಹ್ಯಾ॥ ಪೂರ್ವದಿನೇ ಷಷ್ಠಿಘಟೀಮಿತಾಮಪಿ ತ್ಯಕ್ತ್ವಾ ಪರದಿನೇಽಲ್ಪಾಪಿ ಚತುರ್ಥೀಯುತೈವ ಗ್ರಾಹ್ಯಾ, ಗಣಯೋಗಪ್ರಶಸ್ತ್ಯಾತ್ ॥ ಇತಿ ವಚನೇನ ಭಾದ್ರಪದ ಶುದ್ಧ ತದಿಗೆಯ ದಿನ ಈ ವ್ರತವನ್ನು ಮಾಡಬೇಕು. ಆ ದಿನ ಸಂಪೂರ್ಣವಾಗಿ ಅರವತ್ತುಗಳಿಗೆ ತದಿಗೆ ಇದ್ದು ಚತುರ್ಥಿಯದಿನ ಸ್ವಲ್ಪಮಟ್ಟಿಗೆ ತದಿಗೆ ಸಂಬಂಧವಿದ್ದರೆ ಸಂಪೂರ್ಣ ತದಿಗೆಯನ್ನು ಬಿಟ್ಟು ಚೌತಿ ವ್ಯಾಪನೆಯುಳ್ಳ ತದಿಗೆಯಲ್ಲೀ ಈ ವ್ರತವನ್ನು ಮಾಡಬೇಕೆಂದು ಗಣಯೋಗಪ್ರಾಶಸ್ತ್ಯದಲ್ಲಿ ಹೇಳಿದೆ. ಈ ವ್ರತದಲ್ಲಿ ಕೆಲವರು ಬಣ್ಣದ ಗೌರಿಯನ್ನೂ ಕೆಲವರು ಸ್ವರ್ಣಗೌರಿಯನ್ನೂ ಇನ್ನೂ ಕೆಲವರು ಕಲಶವನ್ನಿಟ್ಟು ಆವಾಹಿಸಿದ ಗೌರಿಯನ್ನೂ ಪೂಜಿಸುವ ವಾಡಿಕೆಯಿದೆ.

ಇದು ಆಯಾಯ ಜನರ ಆಚಾರಪ್ರಸಿದ್ಧಿ ಮತ್ತು ಸಂಪ್ರದಾಯನಿಷ್ಠೆ-

(ಈ ವ್ರತಕ್ಕೆ ಹದಿನಾಲ್ಕು ಗಂಟಿನ ದಾರ.)!

ಆಗಮಾರ್ಥಂ ತು ದೇವಾನಾಮಿತಿ ಘಂಟಾನಾದಂ ಕೃತ್ವಾ ಆಚಮ್ಯ ಸಂಕಲ್ಪಂ ಕುರ್ಯಾತ್ (೭, ೮ನೇ ಪುಟಗಳನ್ನು ನೋಡಿ) ಏವಂ ಗುಣ ವಿಶೇಷಣ ವಿಶಿಷ್ಟಾಯಾಂ ಶುಭತಿಥೌ ಮಮ ಯಾವಜ್ಜೀವ ದೀರ್ಘ ಸೌಮಂಗಲ್ಯಾಭಿವೃದ್ಧ್ಯರ್ಥಂ ಪುತ್ರಪೌತ್ರಾಭಿವೃದ್ಧ್ಯರ್ಥಂ ಮಮ ವಾಂಛಾಫಲಸಿದ್ಧಿದ್ವಾರಾ ವರ್ಷೇ ವರ್ಷೇ ಕರ್ತವ್ಯ ಏತದ್ವರ್ಷಪ್ರಯುಕ್ತ ಶ್ರೀಸ್ವರ್ಣಗೌರೀ ದೇವತಾಮುದ್ದಿಶ್ಯ ಶ್ರೀಸ್ವರ್ಣಗೌರೀ ದೇವತಾ ಪ್ರೀತ್ಯರ್ಥಂ ಕಲ್ಪೋಕ್ತಪ್ರಕಾರೇಣ ಯಾವಚ್ಛಕ್ತ್ಯಾ ಧ್ಯಾನಾವಾಹನಾದಿ ಷೋಡಶೋಪಚಾರ ಪೂಜಾಂ ಚ ಕರಿಷ್ಯೇ || ತದಂಗತ್ವೇನ ಕಲಶಪೂಜಾಂ ಚ ಕರಿಷ್ಯೇ (೯ನೇ ಪುಟವನ್ನು ನೋಡಿ) ಕಲಶಪೂಜಾನಂತರಂ ಮಹಾಗಣಪತಿಪೂಜಾಂ ಕರಿಷ್ಯೇ (೯ನೇ ಪುಟವನ್ನು ನೋಡಿ) ಗಣಪತಿ ಪೂಜಾನಂತರ ಸ್ವರ್ಣಗೌರೀ ದೇವತಾ ಪ್ರಾಣಪ್ರತಿಷ್ಠಾಪನಂ ಕುರ್ಯಾತ್(೧೦ನೇ ಪುಟ ನೋಡಿ)ತದನಂತರಂ ಕುಸುಮಾಕ್ಷತಾನ್ ಗೃಹೀತ್ವಾ ಶ್ರೀ ಸ್ವರ್ಣಗೌರೀಂ ಧ್ಯಾಯೇತ್ || ಹರಾನ್ವಿತಾಮಿಂದುಮುಖೀಂ ಸರ್ವಾಭರಣ ಭೂಷಿತಾಂ | ವಿಮಲಾಂಗೀಂ ವಿಶಾಲಾಕ್ಷೀಂ ಚಿಂತಯಾಮಿ ಸತೀಂ ಶಿವಾಂ || ಶ್ರೀ ಸ್ವರ್ಣಗೌರೀಂ ಧ್ಯಾಯೇತ್ || ಹರಾನ್ವಿತಾಮಿಂದುಮುಖೀಂ ಸರ್ವಾಭರಣ ಭೂಷಿತಾಂ | ವಿಮಲಾಂಗೀಂ ವಿಶಾಲಾಕ್ಷೀಂ ಚಿಂತಯಾಮಿ ಸತೀಂ ಶಿವಾಂ || ಶ್ರೀ ಸ್ವರ್ಣಗೌರ್ಯೈ ನಮಃ| ಧ್ಯಾನಂ ಸಮರ್ಪಯಾಮಿ||ದೇವದೇವಿ ಸಮಾಗಚ್ಛ ಪ್ರಾರ್ಥಯೇಹಂ ಜಗನ್ಮಯೇ|ಇಮಾಂ ಮಯಾ ಕೃತಾಂ ಪೂಜಾಂ ಗೃಹಾಣ ಸುರಸೇವಿತೇ || ಸುಮಧ್ಯಮಾಂ ಸುವಸನಾಂ ಚಂದ್ರಬಿಂಬಾಧರಾನ್ವಿತಾಂ || ಆವಾಹಯಾಮಿ ತ್ವಾಂ ದೇವೀಂ ಸರ್ವಮಂಗಳಕಾರಿಣೀಂ | ಶ್ರೀ ಸ್ವರ್ಣಗೌರ್ಯೈ ನಮಃ || ಆವಾಹನಂ ಸಮರ್ಪಯಾಮಿ || ಭವಾನಿ ತ್ವಾಂ ಮಹಾದೇವಿ ಸರ್ವಸೌಖ್ಯಪ್ರದಾಯಿನಿ | ಅನೇಕ ರತ್ನಶೋಭಾಢ್ಯಂ ಸ್ವೀಕುರುಷ್ವಾಸನಂ ಶುಭಂ | ಹಿರಣ್ಮಯೀಮಾಂ ದೇವೀಂ ಹಿಮಾಲಯಸುತಾಂ ಶಿವಾಂ | ದಿವ್ಯಸಿಂಹಾಸನಂ ತುಭ್ಯಂ ದಾಸ್ಯಾಮಿ ಹರವಲ್ಲಭೇ || ಶ್ರೀಸ್ವರ್ಣಗೌರ್ಯೈ ನಮಃ | ರತ್ನಸಿಂಹಾಸನಂ ಸಮರ್ಪಯಾಮಿ ||

ಅಥ ನೂತನ ದೋರಸ್ಥಾಪನಂ | (ಹೊಸ ದಾರವನ್ನಿಡುವುದು) ಸುಚಾರು ಶೀತಲಂ ದಿವ್ಯಂ ನಾನಾಗಂಧಸುವಾಸಿತಂ || ಪಾದ್ಯಂ ಗೃಹಾಣ ದೇವಿ ತ್ವಂ ಸ್ವರ್ಣಗೌರಿ ನಮೋಽಸ್ತು ತೇ || ಶ್ರೀಸ್ವರ್ಣಗೌರ್ಯೈ ನಮಃ| ಪಾದಯೋಃ ಪಾದ್ಯಂ ಸಮರ್ಪಯಾಮಿ || ಶ್ರೀ ಪಾರ್ವತಿ ಮಹಾದೇವಿ ಶಂಕರಪ್ರಿಯಭಾಮಿನಿ | ಅರ್ಘ್ಯಂ ಗೃಹಾಣ ದೇವೇಶಿ ಭರ್ತ್ರಾ ಸಹ ಪತಿವ್ರತೇ || ಶ್ರೀಸ್ವರ್ಣಗೌರ್ಯೈ ನಮಃ ಅರ್ಘ್ಯಂ ಸಮರ್ಪಯಾಮಿ | ಗಂಗಾತೋಯಂ ಸಮಾನೀತಂ ಸುವರ್ಣಕಲಶೇ ಸ್ಥಿತಂ | ಆಚವ್ಯತಾಂ ಮಹಾದೇವಿ ರುದ್ರೇಣ ಸಹಿತೇಽನಘೇ||ಆಚಮನಂ ಸಮರ್ಪಯಾಮಿ || ದಧಿಮಧ್ವಾಜ್ಯಸಂಯುಕ್ತಂ ಶರ್ಕರಾಕ್ಷೀರಮಿಶ್ರಿತಂ | ಮಧುಪರ್ಕಂ ಗೃಹಾಣೇದಂ ಭಕ್ತಸೌಭಾಗ್ಯದಾಯಿನಿ || ಮಧುಪರ್ಕಂ ಸಮರ್ಪಯಾಮಿ || ಪಂಚಾಮೃತಸ್ನಾನಮಿದಂ ಶರ್ಕರಾಮಧುಸಂಯುತಂ ದಧ್ಯಾಜ್ಯಕ್ಷೀರಯುಕ್ತಂ ತು ಗೃಹಾಣ ಜಗದೀಶ್ವರಿ ||

ಅಪ್ಯಾಯಸ್ವ ಸಮೇತು ತೇ ಇತಿ ಪಂಚಾಮೃತಸ್ನಾನಂ। ೨೧ ನೇ ಪುಟ ನೋಡಿ) ಶ್ರೀ ಸ್ವರ್ಣಗೌರ್ಯೈ ನಮಃ ಪಂಚಾಮೃತಸ್ನಾನಂ ಸಮರ್ಪಯಾಮಿ ॥ ಗಂಗಾ ಸರಸ್ವತೀ ಭೀಮಾ ಕಾವೇರೀ ನರ್ಮದಾಜಲೈಃ। ಸ್ನಾಪಿತಾಸಿ ಮಯಾ ತುಭ್ಯಂ ಅತಃ ಶಾಂತಿಂ ಪ್ರಯಚ್ಛ ಮೇ॥ ಶ್ರೀಸ್ವರ್ಣಗೌರ್ಯೈ ನಮಃ ಶುದ್ಧೋದಕಸ್ನಾನಂ ಸಮರ್ಪಯಾಮಿ। ಪೀತವಸ್ತ್ರದ್ವಯಂ ದೇವಿ ಸರ್ವಭೂಷಾಧಿಕೇ ಶುಭೇ। ತುಭ್ಯಂ ದಾಸ್ಯಾಮಿ ದೇವೇಶಿ ಪ್ರಸೀದ ಪರಮೇಶ್ವರೀ॥ ಅಭಿಚಂದ್ರಾ ಭರ್ತವೇನೋ ಹಿರಣ್ಯಾಭ್ಯಶ್ವಾಃ ರಥಿನೋ ದೇವ ಸೋಮ॥ ಇತಿ ವಸ್ತ್ರಯುಗ್ಮಂ ಸಮರ್ಪಯಾಮಿ ॥ ನೀಲೋತ್ಪಲದಳಶ್ಯಾಮೇ ಸರ್ವ ಭೂಷಣಭೂಷಿತೇ। ಪೂರ್ಣೇಂದುಬಿಂಬವದನೇ ತ್ರಾಹಿ ಮಾಂ ಪರಮೇಶ್ವರೀ॥ ಓಂ ಹಿರಣ್ಯರೂಪಸ್ಸ ಹಿರಣ್ಯ ಸಂದೃಗಪಾನ್ನಪಾತ್ಸೇದುಹಿರಣ್ಯವರ್ಣಃ ॥ ಹಿರಣ್ಯಯಾ ತ್ಪರಿಯೋನೇರ್ನಿಷದ್ಯಾ। ಹಿರಣ್ಯದಾ ದದತ್ಯಂ ನಮಸ್ಮೈ ॥ ಓಂ ಶ್ರೀ ಸ್ವರ್ಣಗೌರ್ಯೈ ನಮಃ ಆಭರಣಾನಿ ಸಮರ್ಪಯಾಮಿ ॥ ರಾಜಿತಂ ಬ್ರಹ್ಮಸೂತ್ರಂ ಚ ಕಾಂಚನಂ ಸುಮನೋಹರಂ। ಯಜ್ಞೋಪವೀತಂ ವರದೇ ಗೃಹಾಣ ಪರಮೇಶ್ವರಿ॥ ಯಜ್ಞೋಪ ವೀತಂ ಪರಮಂ ಪವಿತ್ರಂ ಪ್ರಜಾಪತೇರ್ಯತ್ಸಹಜಂ ಪುರಸ್ತಾತ್। ಆಯುಷ್ಯಮ ಗ್ರ್ಯಂ ಪ್ರತಿಮುಂಚ ಶುಭ್ರಂ ಯಜ್ಞೋಪವೀತಂ ಬಲಮಸ್ತು ತೇಜಃ ॥ ಶ್ರೀಸ್ವರ್ಣ ಗೌರ್ಯೈ ನಮಃ। ಯಜ್ಞೋಪವೀತಂ ಸಮರ್ಪಯಾಮಿ॥ ಗಂಧಂ ಗೃಹಾಣ ದೇವೇಶಿ ಕಸ್ತೂರೀ ಕುಂಕುಮಾನ್ವಿತಂ। ಕರ್ಪೂರಚಂದನೈರ್ಯುಕ್ತಂ ಸೋತ್ತಮಂ ಸುವಿಲೇ ಪನಂ ॥ ಗಂಧದ್ವಾರಾಂ ದುರಾಧರ್ಷಾಂ ನಿತ್ಯಪುಷ್ಟಾಂ ಕರೀಷಿಣೀಂ। ಈಶ್ವರೀಂ ಸರ್ವ ಭೂತಾನಾಂ ತಾಮಿಹೋಪಹ್ವಯೇ ಶ್ರೀಯಂ ॥ ದಿವ್ಯಪರಿಮಳಗಂಧಾನ್ ಸಮರ್ಪ ಯಾಮಿ ॥ ಶಾಲೀಯಾನ್ ಚಂದ್ರಸಂಕಾಶಾನ್ ಹರಿದ್ರಾಮಿಶ್ರಿತಾನ್ ಶುಭಾನ್॥ ಅಕ್ಷತಾಂ ಶ್ಚಾರ್ಪಯೇತ್ತುಭ್ಯಂ ಗೃಹಾಣ ಪರಮೇಶ್ವರೀ ॥ ಆಯನೇತೇ ಪರಾಯಣೇ ದೂರ್ವಾ ರೋಹಂತು ಪುಷ್ಪಿಣೀಃ। ಹ್ರದಾಶ್ಚ ಪುಂಡರೀಕಾಣಿ ಸಮುದ್ರಸ್ಯ ಗ್ರಹಾ ಇಮೇ॥ ಶ್ರೀ ಸ್ವರ್ಣಗೌರ್ಯೈ ನಮಃ। ಅಕ್ಷತಾನ್ ಸಮರ್ಪಯಾಮಿ॥ ಹರಿದ್ರಾ ಕುಂಕುಮಂ ಚೈವ ಸಿಂಧೂರಂ ಕಜ್ಜಲಂ ತಥಾ। ಸೌಭಾಗ್ಯದ್ರವ್ಯಮೇತಾನಿ ಗೃಹಾಣ ಪರಮೇಶ್ವರೀ ॥ ಶ್ರೀ ಸ್ವರ್ಣಗೌರ್ಯೈ ನಮಃ ಹರಿದ್ರಾ ಕುಂಕುಮ ಸಿಂಧೂರ ಚೂರ್ಣ ಕಜ್ಜಲಾನಿ ಸಮರ್ಪ ಯಾಮಿ ॥ ಜಾಜೀಪುನ್ನಾಗ ಮಂದಾರೈಃ ಕೇತಕೀ ಚಂಪಕಾನಿ ಚ। ಮಯಾಹೃತಾನಿ ಪುಷ್ಪಾಣಿ ಗೃಹಾಣ ಪರಮೇಶ್ವರೀ। ಶ್ರೀ ಸ್ವರ್ಣಗೌರ್ಯೈ ನಮಃ। ಪುಷ್ಪಾಣಿ ಸಮರ್ಪಯಾಮಿ ॥

ಅಥ ಅಂಗಪೂಜಾ.

ಓಂ ಶ್ರೀ ಸ್ವರ್ಣಗೌರ್ಯೈ ನಮಃ ಪಾದೌ ಪೂಜಯಾಮಿ। ಓಂ ಕಾತ್ಯಾ ಯಿನ್ಯೈ ನಮಃ ಜಂಘೇ ಪೂಜಯಾಮಿ। ಓಂ ಭದ್ರಾಯೈ ನಮಃ ಜಾನುನೀಂ ಪೂಜ ಯಾಮಿ। ಓಂ ಹೈಮವತ್ಯೈ ನಮಃ ಊರೂ ಪೂಜಯಾಮಿ। ಓಂ ಮಹೇಶ್ವರ್ಯೈ

ನಮಃ ಕಟಿಂ ಪೂಜಯಾಮಿ । ಓಂ ಶಿವಪ್ರಿಯಾಯೈ ನಮಃ ನಾಭಿಂ ಪೂಜಯಾಮಿ । ಓಂ ಭವನಾಶಿನ್ಯೈ ನಮಃ ಗುಹ್ಯಂ ಪೂಜಯಾಮಿ । ಓಂ ಅಪರ್ಣಾಯೈ ನಮಃ ಹೃದಯಂ ಪೂಜಯಾಮಿ । ಓಂ ಪಾರ್ವತ್ಯೈ ನಮಃ ಕಂಠಂ ಪೂಜಯಾಮಿ । ಓಂ ದುರ್ಗಾಯೈ ನಮಃ ಸ್ಕಂಧೌ ಪೂಜಯಾಮಿ । ಓಂ ಗೌರ್ಯೈ ನಮಃ ಹಸ್ತೌ ಪೂಜಯಾಮಿ । ಓಂ ಮೃಡಾನ್ಯೈ ನಮಃ ನಾಸಿಕಾಂಪೂಜಯಾಮಿ । ಓಂ ಚಂಡಿಕಾಯೈ ನಮಃ ನೇತ್ರಾಣಿ ಪೂಜಯಾಮಿ । ಓಂ ಗಿರಿಜಾಯೈ ನಮಃ ಲಲಾಟಂ ಪೂಜಯಾಮಿ ಓಂ ಮೇನಕಾತ್ಮಜಾಯೈ ನಮಃ ಶಿರಃ ಪೂಜಯಾಮಿ । ಓಂ ಶ್ರೀಸ್ವರ್ಣಗೌರ್ಯೈ ನಮಃ ಸರ್ವಾಣ್ಯಂಗಾನಿ ಪೂಜಯಾಮಿ ॥

ಅಥ ಪುಷ್ಪಪೂಜಾ.

ಓಂ ಜಗನ್ಮಾತ್ರೇ ನಮಃ ಜಾಜೀಪುಷ್ಪಂ ಸಮರ್ಪಯಾಮಿ (ಇದನ್ನು ಪ್ರತಿ ಪುಷ್ಪಕ್ಕೂ ಹೇಳಿಕೊಂಡು ಪೂಜೆಮಾಡಬೇಕು) ಓಂ ಮಾನ್ಯಾಯೈ ನಮಃ ಮಲ್ಲಿಕಾ ಪುಷ್ಪಂ । ಓಂ ಗಿರಿಸುತಾಯೈ ನಮಃ ಗಿರಿಕರ್ಣಿಕಾಪುಷ್ಪಂ ಸಮರ್ಪಯಾಮಿ । ಓಂ ಕಾತ್ಯಾಯಿನ್ಯೈ ನಮಃ ಕೇತಕೀಪುಷ್ಪಂ ಸಮರ್ಪಯಾಮಿ । ಓಂ ಕಮಲಾಕ್ಷ್ಯೈ ನಮಃ ಕಮಲಪುಷ್ಪಂ ಸಮರ್ಪಯಾಮಿ । ಓಂ ಚಾಮುಂಡಾಯೈ ನಮಃ ಚಂಪಕಪುಷ್ಪಂ ಸಮರ್ಪಯಾಮಿ । ಓಂ ಗಂಧರ್ವಸೇವಿತಾಯೈ ನಮಃ ಸೇವಂತಿಕಾಪುಷ್ಪಂ ಸಮರ್ಪಯಾಮಿ । ಓಂ ಪಾರ್ವತ್ಯೈ ನಮಃ ಪಾರಿಜಾತಪುಷ್ಪಂ ಸಮರ್ಪಯಾಮಿ । ಓಂ ಶ್ರೀ ಸ್ವರ್ಣಗೌರ್ಯೈ ನಮಃ ಪುಷ್ಪಪೂಜಾಂ ಸಮರ್ಪಯಾಮಿ ॥

ಅಥ ಪತ್ರಪೂಜಾ.

ಓಂ ಮಾಯಾಯೈ ನಮಃ ಮಾಚೀಪತ್ರಂ ಸಮರ್ಪಯಾಮಿ । ಓಂ ಸರ್ವಜಗದ್ರಕ್ಷಿಣ್ಯೈ ನಮಃ ಸೇವಂತಿಕಾಪತ್ರಂ ಸಮರ್ಪಯಾಮಿ।ಓಂ ಶಿವಪ್ರಿಯಾಯೈ ನಮಃ । ಬಿಲ್ವಪತ್ರಂ ಸಮರ್ಪಯಾಮಿ । ಓಂ ಹೈಮವತ್ಯೈ ನಮಃ ತುಲಸೀಪತ್ರಂ ಸಮರ್ಪಯಾಮಿ। ಓಂ ಕಾತ್ಯಾಯಿನ್ಯೈ ನಮಃ ಕಸ್ತೂರಿಕಾ ಪತ್ರಂ ಸಮರ್ಪಯಾಮಿ । ಓಂ ಮಲಯಾಚಲವಾಸಿನ್ಯೈ ನಮಃ ಮರುವಕ ಪತ್ರಂ ಸಮರ್ಪಯಾಮಿ।ಓಂ ಶ್ರೀ ಸ್ವರ್ಣ ಗೌರ್ಯೈ ನಮಃ । ನಾನಾವಿಧ ಪರಿಮಳ ಪತ್ರ ಪೂಜಾಂ ಸಮರ್ಪಯಾಮಿ ॥

ಅಥ ನಾಮಪೂಜಾ.

ಓಂ ಶ್ರೀ ಸ್ವರ್ಣಗೌರ್ಯೈ ನಮಃ (ಎಲ್ಲಾ ನಾಮಗಳಿಗೂ ನಮಃ ಎಂದು ಹೇಳಿಕೊಳ್ಳಬೇಕು.) ಓಂ ಕಾತ್ಯಾಯಿನ್ಯೈ । ಓಂ ಉಮಾಯೈ । ಓಂ ಭದ್ರಾಯೈ । ಓಂ ಹೈಮವತ್ಯೈ । ಈಶ್ವರ್ಯೈ । ಓಂ ಭವಾನ್ಯೈ । ಓಂ ಸರ್ವಪಾಪಹರಾಯೈ । ಓಂ

ಅಥ ನಾಮಪೂಜಾ

ಮೃಡಾಣ್ಯೈ । ಓಂ ಚಂಡಿಕಾಯೈ । ಓಂ ಗಿರಿಜಾಯೈ । ಓಂ ಮೇನಕಾತ್ಮಜಾಯೈ । ಓಂ ಬ್ರಾಹ್ಮ್ಯೈ । ಓಂ ಮಾಹೇಶ್ವರ್ಯೈ । ಓಂ ಕೌಮಾರ್ಯೈ । ಓಂ ವೈಷ್ಣವ್ಯೈ । ಓಂ ವಾರಾಹ್ಯೈ । ಓಂ ಇಂದ್ರಾಣ್ಯೈ । ಓಂ ಚಂಡಿಕಾಯೈ । ಓಂ ಚಾಮುಂಡಾಯೈ ಓಂ ದಾಕ್ಷಾಯಿಣ್ಯೈ । ಓಂ ಪರ್ವತನಾಥಪುತ್ರ್ಯೈ । ಓಂ ಚಂದ್ರಶೇಖರಪತ್ನ್ಯೈ । ಓಂ ಸರ್ವೋಪದ್ರವನಾಶಿನ್ಯೈ । ಓಂ ಶ್ರೀ ಸ್ವರ್ಣಗೌರ್ಯೈ । ನಾಮಪೂಜಾಂ ಸಮರ್ಪಯಾಮಿ ॥

ಅಥ ದೋರಗ್ರಂಥಿಪೂಜಾ

ಓಂ ಶ್ರೀ ಸ್ವರ್ಣಗೌರ್ಯೈ ನಮಃ	ಪ್ರಥಮಗ್ರಂಥಿಂ	ಪೂಜಯಾಮಿ
ಓಂ ಮಹಾಗೌರ್ಯೈ ನಮಃ	ದ್ವಿತೀಯಗ್ರಂಥಿಂ	ಪೂಜಯಾಮಿ
ಓಂ ಕಾತ್ಯಾಯಿನ್ಯೈ ನಮಃ	ತೃತೀಯಗ್ರಂಥಿಂ	ಪೂಜಯಾಮಿ
ಓಂ ಕೌಮಾರ್ಯೈ ನಮಃ	ಚತುರ್ಥಗ್ರಂಥಿಂ	ಪೂಜಯಾಮಿ
ಓಂ ಭದ್ರಾಯೈ ನಮಃ	ಪಂಚಮಗ್ರಂಥಿಂ	ಪೂಜಯಾಮಿ
ಓಂ ವಿಷ್ಣುಸೋದರ್ಯೈ ನಮಃ	ಷಷ್ಠಗ್ರಂಥಿಂ	ಪೂಜಯಾಮಿ
ಓಂ ಮಂಗಳದೇವತಾಯೈ ನಮಃ	ಸಪ್ತಮಗ್ರಂಥಿಂ	ಪೂಜಯಾಮಿ
ಓಂ ರಾಕೇಂದುವದನಾಯೈ ನಮಃ	ಅಷ್ಟಮಗ್ರಂಥಿಂ	ಪೂಜಯಾಮಿ
ಓಂ ಚಂದ್ರಶೇಖರಪ್ರಿಯಾಯೈ ನಮಃ	ನವಮಗ್ರಂಥಿಂ	ಪೂಜಯಾಮಿ
ಓಂ ವಿಶ್ವೇಶ್ವರಪತ್ನ್ಯೈ ನಮಃ	ದಶಮಗ್ರಂಥಿಂ	ಪೂಜಯಾಮಿ
ಓಂ ದಾಕ್ಷಾಯಿಣ್ಯೈ ನಮಃ	ಏಕಾದಶಗ್ರಂಥಿಂ	ಪೂಜಯಾಮಿ
ಓಂ ಕೃಷ್ಣವೇಣ್ಯೈ ನಮಃ	ದ್ವಾದಶಗ್ರಂಥಿಂ	ಪೂಜಯಾಮಿ
ಓಂ ಭವಾನ್ಯೈ ನಮಃ	ತ್ರಯೋದಶಗ್ರಂಥಿಂ	ಪೂಜಯಾಮಿ
ಓಂ ಲೋಲೇಕ್ಷಣಾಯೈ ನಮಃ	ಚತುರ್ದಶಗ್ರಂಥಿಂ	ಪೂಜಯಾಮಿ
ಓಂ ಮೇನಕಾತ್ಮಜಾಯೈ ನಮಃ	ಪಂಚದಶಗ್ರಂಥಿಂ	ಪೂಜಯಾಮಿ
ಓಂ ಶ್ರೀಸ್ವರ್ಣಗೌರ್ಯೈ ನಮಃ	ಷೋಡಶಗ್ರಂಥಿಂ	ಪೂಜಯಾಮಿ

ಅಥ ಅಷ್ಟೋತ್ತರ ಶತನಾಮಪೂಜಾ

ಅಥ ಅಷ್ಟೋತ್ತರ ಶತನಾಮ ಪೂಜಾಂ ಕರಿಷ್ಯೇ । ಓಂ ಹ್ರೀಂ ಶಿವಾಯೈ ನಮಃ ಓಂ ಶ್ರೀಮಹಾವಿದ್ಯಾಯೈ ನಮಃ । ಓಂ ಶ್ರೀಮನ್ಮಕುಟ ಮಂಡಿತಾಯೈ ನಮಃ । ಓಂ ಕಲ್ಯಾಣ್ಯೈ ನಮಃ । ಓಂ ಕಮಲಾರಾಧ್ಯಾಯೈ ನಮಃ । ಓಂ ಕರುಣಾರಸಸಾಗರಾಯೈ ನಮಃ । ಓಂ ಕಲಿಪ್ರಭೃತಿಸಂಸೇವ್ಯಾಯೈ ನಮಃ । ಓಂ ಕಮಲಾಸನಸಂಸ್ತುತಾಯೈ ನಮಃ । ಓಂ ಅಂಬಿಕಾಯೈ ನಮಃ । ಓಂ ಅನೇಕ ಸೌಭಾಗ್ಯದಾತ್ರ್ಯೈ ನಮಃ । ಓಂ ಆನಂದವಿಗ್ರಹಾಯೈ ನಮಃ । ಓಂ ಈಷಣತ್ರಯನಿರ್ಮುಕ್ತಾಯೈ ನಮಃ । ಓಂ

ಹೃತ್ಸರೋರುಹಾವಾಸಿನ್ಯೈ ನಮಃ । ಓಂ ಆದ್ಯಂತರಹಿತಾಯೈ ನಮಃ । ಓಂ ಅನೇಕ ಕೋಟಿಭಾಸ್ಕರವಲ್ಲಭಾಯೈ ನಮಃ । ಓಂ ಈಶ್ವರೋತ್ಸಂಗನಿಲಯಾಯೈ ನಮಃ । ಓಂ ಈತಿಬಾಧಾಪನಾಶಿನ್ಯೈ ನಮಃ । ಓಂ ಇಂದಿರಾರತಿಸಂಸೇವ್ಯಾಯೈ ನಮಃ । ಓಂ ಈಶ್ವರಾರ್ಧಶರೀರಿಣ್ಯೈ ನಮಃ । ಓಂ ಲಕ್ಷ್ಮಾರ್ಧರೂಪಾಯೈ ನಮಃ । ಓಂ ಲಕ್ಷ್ಮೀಶಬ್ರಹ್ಮೇಶಾಮರಪೂಜಿತಾಯೈ ನಮಃ । ಓಂ ಉತ್ಪತ್ತ್ಯಾದಿವಿನಿರ್ಮುಕ್ತಾಯೈ ನಮಃ । ಓಂ ಹಾನಿವೃದ್ಧಿವಿವರ್ಜಿತಾಯೈ ನಮಃ । ಓಂ ಸರ್ವೇಶ್ವರ್ಯೈ ನಮಃ । ಓಂ ಸರ್ವಲಭ್ಯಾಯೈ ನಮಃ । ಓಂ ಗುರುಮೂರ್ತಿಸ್ವರೂಪಿಣ್ಯೈ ನಮಃ । ಓಂ ಸಮಸ್ತ ಪ್ರಾಣಿನಿಲಯಾಯೈ ನಮಃ । ಓಂ ಸರ್ವಲೋಕೇಶಸುಂದರ್ಯೈ ನಮಃ । ಓಂ ಕಾಮಾಕ್ಷ್ಯೈ ನಮಃ । ಓಂ ಕಾಮದಾತ್ರ್ಯೈ ನಮಃ । ಓಂ ಕಾಮೇಶಾಂಕನಿವಾಸಿನ್ಯೈ ನಮಃ । ಓಂ ಹರಾರ್ಧದೇಹಾಯೈ ನಮಃ । ಓಂ ಕಲ್ಹಾರಭೂಷಿತಾಯೈ ನಮಃ । ಓಂ ಹರಿಲೋಚನಾಯೈ ನಮಃ । ಓಂ ಲಲಿತಾಯೈ ನಮಃ । ಓಂ ಲಾಕಿನೀ ಸೇವ್ಯಾಯೈ ನಮಃ । ಲಬ್ಧೈಶ್ವರ್ಯಪ್ರವರ್ತಿನ್ಯೈ ನಮಃ । ಓಂ ಹ್ರೀಂಕಾರಪದ್ಮನಿಲಯಾಯೈ ನಮಃ । ಓಂ ಹ್ರೀಂಕಾರಾರ್ಣವ ಕೌಸ್ತುಭಾಯೈ ನಮಃ । ಓಂ ಸಮಸ್ತಲೋಕಜನನ್ಯೈ ನಮಃ । ಓಂ ಸರ್ವಭೂತೇಶ್ವರೇಶ್ವರ್ಯೈ ನಮಃ । ಓಂ ಕರೀಂದ್ರಾರೂಢಸಂಸೇವ್ಯಾಯೈ ನಮಃ । ಓಂ ಕಮಲೇಶಸಹೋದರ್ಯೈ ನಮಃ । ಓಂ ಲಕ್ಷ್ಮಗಾಘೋಷೇಶಾಂಬಾಯೈ ನಮಃ । ಓಂ ಸರ್ವೇಶಾನನಪಂಕಜಾಯೈ ನಮಃ । ಓಂ ಹ್ರೀಂಕಾರಪದಸಂನಾಹ್ಯಾಯೈ ನಮಃ । ಓಂ ಹ್ರೀಂಕಾರಬಿಂದುಲಕ್ಷಿತಾಯೈ ನಮಃ । ಓಂ ಏಕಾಕ್ಷರ್ಯೈ ನಮಃ । ಓಂ ಏಕಾರರೂಪಾಯೈ ನಮಃ । ಓಂ ಐಶ್ವರ್ಯಫಲದಾಯಿನ್ಯೈ ನಮಃ । ಓಂಕಾರವರ್ಣನಿಲಯಾಯೈ ನಮಃ । ಓಂ ಔದಾರ್ಯಾದಿಪ್ರದಾಯೈ ನಮಃ । ಓಂ ಗಾಯತ್ರ್ಯೈ ನಮಃ । ಓಂ ಗಿರಿಜಾಕನ್ಯಾಯೈ ನಮಃ । ಓಂ ಗೂಢಾರ್ಥಬೋಧಿನ್ಯೈ ನಮಃ । ಓಂ ಚಂದ್ರಶೇಖರಾರ್ಧಾಂಗ್ಯೈ ನಮಃ । ಓಂ ಚೂಡಾಮಣಿ ವಿಭೂಷಿತಾಯೈ ನಮಃ । ಓಂ ಜಾಜೀಚಂಪಕಪುನ್ನಾಗಕೇತಕೀಕುಸುಮಾರ್ಚಿತಾಯೈ ನಮಃ । ಓಂ ತನುಮಧ್ಯಾಯೈ ನಮಃ । ಓಂ ದಾನವೇಂದ್ರಸಂಹರ್ತ್ರ್ಯೈ ನಮಃ । ಓಂ ದೀನರಕ್ಷಿಣ್ಯೈ ನಮಃ । ಓಂ ಸ್ವಧರ್ಮಪರಸುಸೇವ್ಯಾಯೈ ನಮಃ । ಓಂ ಧನಧಾನ್ಯಾಭಿವೃದ್ಧಿದಾಯೈ ನಮಃ । ಓಂ ನಾರಾಯಣ್ಯೈ ನಮಃ । ಓಂ ನಾಮರೂಪವಿವರ್ಜಿತಾಯೈ ನಮಃ । ಓಂ ಅಪರಾಜಿತಾಯೈ ನಮಃ । ಓಂ ಪರಮಾನಂದರೂಪಾಯೈ ನಮಃ । ಓಂ ಪರಮಾನಂದದಾಯಿನ್ಯೈ ನಮಃ । ಓಂ ಪಾಶಾಂಕುಶಾಭಯವರವಿಲಸತ್ಕರಪಲ್ಲವಾಯೈ ನಮಃ । ಓಂ ಪುರಾಣಪುರುಷಸೇವ್ಯಾಯೈ ನಮಃ । ಓಂ ಪುಷ್ಪಮಾಲಾವಿರಾಜಿತಾಯೈ ನಮಃ । ಓಂ ಫಣೀಂದ್ರರತ್ನಶೋಭಾಢ್ಯಾಯೈ ನಮಃ । ಓಂ ಬದರೀವನವಾಸಿನ್ಯೈ ನಮಃ । ಓಂ ಬಾಲಾಯೈ ನಮಃ । ಓಂ । ಓಂ ವಿಕ್ರಮಸಂಹೃಷ್ಟಾಯೈ ನಮಃ । ಓಂ

ಬಿಂಬೋಷ್ಠ್ಯೈ ನಮಃ । ಓಂ ಬಿಲ್ವಪೂಜಿತಾಯೈ ನಮಃ । ಓಂ ಬಿಂದುಚಕ್ರೈಕನಿಲಯಾಯೈ ನಮಃ । ಓಂ ಭವಾರಣ್ಯದಾವಾನಲಾಯೈ ನಮಃ।ಓಂ ಭವಾನ್ಯೈ ನಮಃ । ಓಂ ಭವರೋಗಘ್ನ್ಯೈ ನಮಃ । ಓಂ ಭವದೇಹಾರ್ಧಧಾರಿಣ್ಯೈ ನಮಃ । ಓಂ ಭಕ್ತಸೇವ್ಯಾಯೈ ನಮಃ ॥ ಓಂ ಭಕ್ತಿಗಮ್ಯಾಯೈ ನಮಃ । ಓಂ ಭಾಗ್ಯವೃದ್ಧಿಪ್ರದಾಯೈ ನಮಃ । ಓಂ ಭೂತಿದಾತ್ರ್ಯೈ ನಮಃ। ಓಂ ಭೈರವಾದಿಸಂವೃತಾಯೈ ನಮಃ । ಓಂ ಶ್ರೀ ಮಹೇಶ್ವರ್ಯೈ ನಮಃ। ಓಂ ಸರ್ವೇಷ್ಟಾಯೈ ನಮಃ । ಓಂ ಶ್ರೀ ಮಹಾದೇವ್ಯೈ ನಮಃ । ಓಂ ತ್ರಿಪುರಸುಂದರ್ಯೈ ನಮಃ । ಓಂ ಮುಕ್ತಿದಾತ್ರ್ಯೈ ನಮಃ । ಓಂ ರಾಜರಾಜೇಶ್ವರ್ಯೈ ನಮಃ । ಓಂ ಭಾವರೂಪಾಯೈ ನಮಃ । ಓಂ ವಿಶ್ವಮೋಹಿನ್ಯೈ ನಮಃ । ಓಂ ಶಾಂಕರ್ಯೈ ನಮಃ।ಓಂ ಶತ್ರುಸಂಹರ್ತ್ರ್ಯೈ ನಮಃ। ಓಂ ತ್ರಿಪುರಾಯೈ ನಮಃ ॥ ಓಂ ತ್ರಿಪುರೇಶ್ವರ್ಯೈ ನಮಃ । ಓಂ ಶ್ರೀ ಶಾರದಾದಿಸಂಸೇವ್ಯಾಯೈ ನಮಃ। ಓಂ ಶ್ರೀಮತ್ಸಿಂಹಾಸನೇಶ್ವರ್ಯೈ ನಮಃ । ಓಂ ಶ್ರೀಮನ್ಮುನೀಂದ್ರಸಂಸೇವ್ಯಾಯೈ ನಮಃ॥ಓಂ ಶ್ರೀಮನ್ನಗರನಾಯಿಕಾಯೈ ನಮಃ। ಓಂ ಶ್ರೀರಾಜರಾಜೇಶ್ವರ್ಯೈ ನಮಃ। ಓಂ ಇತಿ ಅಷ್ಟೋತ್ತರ ಶತ ದಿವ್ಯನಾಮ ಪೂಜಾಂ ಸಮರ್ಪಯಾಮಿ ॥

ದೇವದ್ರುಮರಸೋದ್ಭೂತಃ ಕಾಲಾಗರುಸಮನ್ವಿತಃ ॥ ಆಘ್ರೇಯಃ ತಾಮಯಂ ಧೂಪೋ ಭವಾನೀ ಘ್ರಾಣತರ್ಪಣಃ ॥ ದಶಾಂಗಂ ಗುಗ್ಗುಲೋಪೇತಂ ಸುಗಂಧಂ ಚ ಮನೋಹರಂ । ಕಪಿಲಾಘೃತಸಂಯುಕ್ತಂ ಧೂಪೋಽಯಂ ಪ್ರತಿಗೃಹ್ಯತಾಂ ॥ ಧೂಪಮಾಘ್ರಾಪಯಾಮಿ ॥ ಸಾಜ್ಯಂ ತ್ರಿವರ್ತಿಸಂಯುಕ್ತಂ ವಹ್ನಿನಾ ಯೋಜಿತಂ ಮಯಾ॥ ಗೃಹಾಣ ಮಂಗಳಂ ದೀಪಂ ತ್ರೈಲೋಕ್ಯಂ ತಿಮಿರಾಪಹ ॥ ಭಕ್ತ್ಯಾ ದೀಪಂ ಪ್ರಯಚ್ಛಾಮಿ ದೇವ್ಯೈ ಚ ಪರಮಾತ್ಮನೇ ತ್ರಾಹಿ ಮಾಂ ನರಕಾದ್ಘೋರಾದ್ದಿವ್ಯಜ್ಯೋತಿ ನಮೋಽಸ್ತು ತೇ ॥ ದೀಪಂ ದರ್ಶಯಾಮಿ॥ಅನ್ನಂ ಚತುರ್ವಿಧಂ ಸ್ವಾದು ರಸೈಃ ಷಡ್ಭಿಃ ಸಮನ್ವಿತಂ । ಭಕ್ಷ್ಯಭೋಜ್ಯಸಮಾಯುಕ್ತಂ ನೈವೇದ್ಯಂ ಪ್ರತಿಗೃಹ್ಯತಾಂ॥ ನೈವೇದ್ಯಂ ಸಫಲಂ ಚೈವ ಭಕ್ಷ್ಯಭೋಜ್ಯೈಶ್ಚ ಸಂಯುತಂ ॥ ಸದ್ಯೋಘೃತೇನ ಸಂಯುಕ್ತಂ ಗೃಹಾಣ ಪರಮೇಶ್ವರಿ ॥ ವಿಶ್ವಾಮಿತ್ರ ಋಷಿಃ ಸವಿತಾ ದೇವತಾ ಇತಿ । ನೈವೇದ್ಯಂ ॥ ಕ್ರಮುಕೈರ್ನಾಗಪತ್ರೈಶ್ಚ ಕರ್ಪೂರೇಣ ಮಿಶ್ರಚೂರ್ಣಕೈಃ । ಸಂಯುಕ್ತಂ ದೇವಿ ತಾಂಬೂಲಂ ಗೃಹಾಣ ಹರವಲ್ಲಭೇ ॥ ಪೂಗೀಫಲಸಮಾಯುಕ್ತಂ ನಾಗವಲ್ಲೀ ದಳೈರ್ಯುತಂ।ಕರ್ಪೂರಚೂರ್ಣಸಂಯುಕ್ತಂ ತಾಂಬೂಲಂ ಪ್ರತಿಗೃಹ್ಯತಾಂ॥ತಾಂಬೂಲಂ ಸಮರ್ಪಯಾಮಿ ॥ ಇದಂ ಫಲಂ ಮಯಾ ದೇವಿ ಸ್ಥಾಪಿತಂ ಪುರತಸ್ತವ। ತೇನ ಮೇ ಸಫಲಾವಾಪ್ತಿರ್ಭವೇಜ್ಜನ್ಮನಿ ಜನ್ಮನಿ ॥ ಫಲಸಮರ್ಪಣಂ ॥ ಹಿರಣ್ಯಗರ್ಭಗರ್ಭಸ್ಥಂ ಹೇಮಬೀಜಂ ವಿಭಾವಸೋಃ । ಅನಂತಪುಣ್ಯಫಲದಂ ಅತಶ್ಶಾಂತಿಂ ಪ್ರಯಚ್ಛ ಮೇ॥

ಹಿರಣ್ಯಗರ್ಭದಕ್ಷಿಣಾಂ ಸಮರ್ಪಯಾಮಿ ॥ ಗಂಗಾದಿಪುಣ್ಯಸಲಿಲೈಃ ಗಂಧಮಾಲ್ಯಾದಿ ವಾಸಿತೈಃ । ಅರ್ಘ್ಯಂ ದಾಸ್ಯಾಮಿ ವರದೇ ಗೃಹಾಣೇಶಾಂಗಧಾರಿಣಿ ॥ ಪುನರರ್ಘ್ಯಂ ಸಮರ್ಪಯಾಮಿ ॥ ಘೃತವರ್ತಿಸಮಾಯುಕ್ತಂ ಘನಸಾರಸುದೀಪಿತಂ ॥ ನೀರಾಜನ ಮಿದಂ ದೇವಿ ಗೃಹಾಣ ಶಿವವಲ್ಲಭೇ ॥ ಹಿರಣ್ಯಪಾತ್ರಂ ಮಧೋಃ ಪೂರ್ಣಂ ದದಾತಿ ಮಧವ್ಯೋಸಾನೀತಿ ॥ ಏಕದಾ ಬ್ರಹ್ಮಣಮುಪಹರತಿ। ಏಕದೈವ ಯಜಮಾನ ಆಯು ಸ್ತೇಜೋ ದದಾತಿ ॥ ಉತ್ತರನೀರಾಜನಂ ದರ್ಶಯಾಮಿ ॥ ಚಂಪಕೈಃ ಶತಪತ್ರೈಶ್ಚ ಕಲ್ಹಾರೈಃ ಕರವೀರಕೈಃ ॥ ಪಾಟಲ್ಯೈರ್ಬಕುಳೈರ್ಯುಕ್ತಂ ಗೃಹಾಣ ಕುಸುಮಾಂಜಲಿಂ ತದ್ವಿಷ್ಣೋರಿತಿ ॥ ಮಂತ್ರಪುಷ್ಪಂ ॥ ಪ್ರದಕ್ಷಿಣೈಃ ಷೋಡಶಭಿಃ ಪ್ರಯತ್ನೇನ ಮಯಾ ಕೃತೈಃ ॥ ಮಮ ಪಾಪಾನಿ ಸರ್ವಾಣಿ ಪರಿಹೃತ್ಯ ಪ್ರಸೀದ ಮೇ ॥ ಪ್ರದಕ್ಷಿಣನಮಸ್ಕಾ ರಾ॥ ನಮಸ್ತೇಗಿರಿ ಜಾದೇವಿ ನಮಸ್ತ್ರೈಲೋಕ್ಯನಾಯಕಿ॥ನಮಸ್ತೇ ಸರ್ವಪಾಪಘ್ನೀ ಸ್ವರ್ಣಗೌರಿ ನಮೋಽಸ್ತು ತೇ ॥ ನಮಸ್ಕಾರಂ ॥ ಭಕ್ತಪ್ರಿಯೇ ಮಹಾದೇವಿ ಸರ್ವೈ ಶ್ವರ್ಯಪ್ರದಾಯಿನಿ ॥ ಸೂತ್ರಂ ತು ಧಾರಯಿಷ್ಯಾಮಿ ಮಮಾಭೀಷ್ಟಂ ಸದಾ ಕುರು ॥ ದೋರಬಂಧನಂ॥ಪುತ್ರಾನ್ ದೇಹಿ ಧನಂ ದೇಹಿ ಸೌಭಾಗ್ಯಂ ದೇಹಿ ಸುವ್ರತೇ॥ಅನ್ಯಾಂಶ್ಚ ಸರ್ವಕಾಮಾಂಶ್ಚ ಮೇ ದೇಹಿ ಮಹಾದೇವಿ ನಮೋಽಸ್ತು ತೇ॥ ಪ್ರಾರ್ಥನಾಂ॥ಭವಾನ್ಯಾಶ್ಚ ಮಹಾದೇವ್ಯಾಃ ವ್ರತಸಂಪೂರ್ಣಹೇತವೇ॥ ಪ್ರೀತಯೇ ದ್ವಿಜವರ್ಯಾಯ ವಾಯನಂ ಪ್ರದದಾಮ್ಯಹಂ ॥ ಸಹಷೋಡಶಪಕ್ವಾನ್ನೈರ್ವೇಣುಪಾತ್ರಾದಿಷೋಡಶೇ॥ ಶರ್ಕರಾ ಘೃತಸಂಯುಕ್ತಾನ್ಯಾಹೂಯ ದ್ವಿಜದಂಪತೀ ॥ ವ್ರತೋದ್ಯಾಪನಸಿದ್ಧ್ಯರ್ಥಂ ಬ್ರಾಹ್ಮ ಣೇಭ್ಯೋ ದದಾಮ್ಯಹಂ ॥ ಸುಲಂಕೃತಾಃ ಸುವಾಸಿನ್ಯಃ ಪಾತಿವ್ರತ್ಯೇನ ಭೂಷಿತಾಃ ॥ ಮಮ ಕಾಮಸಮೃದ್ಧ್ಯರ್ಥಂ ಪ್ರತಿಗೃಹ್ಣಂತು ಸುವ್ರತಾಃ ॥ ಉಪಾಯನದಾನಂ ॥ ಛತ್ರಂ ಸಮರ್ಪಯಾಮಿ । ಚಾಮರಂ ಸಮರ್ಪಯಾಮಿ । ನೃತ್ಯಂ ಸಮರ್ಪಯಾಮಿ। ವಾದ್ಯಂ ಸಮರ್ಪಯಾಮಿ । ಆಂದೋಳಿಕಾಂ ಸಮರ್ಪಯಾಮಿ । ಮಮ ಇಷ್ಟೋಪ ಚಾರ ಶಿಷ್ಟೋಪಚಾರಪೂಜಾಂ ಸಮರ್ಪಯಾಮಿ ॥ ಇತಿ ಪುನಃ ಪೂಜಾ ॥ ಅನಯಾ ಮಯಾಕೃತ ಶ್ರೀಸ್ವರ್ಣಗೌರೀಪೂಜಯಾ ಶ್ರೀಸ್ವರ್ಣಗೌರೀ ದೇವತಾ ಸುಪ್ರೀತಾ ಸುಪ್ರಸನ್ನಾ ವರದಾ ಭವತು ॥ ಇತಿ ಪೂಜಾವಿಧಾನಂ ಸಂಪೂರ್ಣಂ.

ಅಥಸ್ವರ್ಣಗೌರೀ ವ್ರತಕಥಾ

ಸೂತ ಉವಾಚ ॥ ಕೈಲಾಸಶಿಖರೇ ರಮ್ಯೇ ಸಿದ್ಧಗಂಧರ್ವಸೇವಿತೇ । ಉಮ ಯಾ ಸಹಿತಂ ಸ್ಕಂದಃ ಪಪ್ರಚ್ಛ ಶಿವಮಯಂ ॥ ೧ ॥ ಸ್ಕಂದ ಉವಾಚ ॥ ಕರುಣಾ ಸಾಗರೇಶಾನ ಲೋಕಾನಾಂ ಹಿತಕಾಂಕ್ಷಯಾ । ವ್ರತಂ ಕಥಯ ದೇವೇಶ ಪುತ್ರ ಪೌತ್ರಪ್ರವರ್ಧನಂ ॥೨॥ ಶಂಕರಃ ॥ ಸಾಧು ಪೃಷ್ಟಂ ಮಹಾಭಾಗ ಕಥಯಾಮಿ

ಷಡಾನನ ॥ ಸ್ವರ್ಣಗೌರೀ ವ್ರತಂ ನಾಮ ಸರ್ವಸಂಪತ್ಕರಂ ನೃಣಾಂ ॥೩॥ ಪುರಾ ಸರಸತೀ ತೀರೇ ವಿಮಲಾಖ್ಯಾ ಮಹಾಪುರೀ । ತತ್ರ ಚಂದ್ರಪ್ರಭೋ ನಾಮ ರಾಜಾಭೂದ್ಧನದೋಪಮಃ॥೪॥ತಸ್ಯ ದೇವ್ಯಾ ವಿಶಾಲಾಕ್ಷ್ಯಾ ಭಾರ್ಯೇ ಬಾಲಮೃಗೇಕ್ಷಣೇ। ತಯೋಃ ಪ್ರಿಯತರಾ ಜ್ಯೇಷ್ಠಾ ತಸ್ಯಾಃ ಸೀನ್ನೃಪತೇರ್ಮತಾ ॥ಸಕದಾಚಿದ್ವನಂ ಭೇಜೇ ಮೃಗಯಾಸಕ್ತಮಾನಸಃ ॥ ತತ್ರ ಶಾರ್ದೂಲ ವಾರಾಹ ವನಮಾಹಿಷ ಕುಂಜರಾನ್ ॥ ಹತ್ವಾಭ್ರಮತ್ತೃಷ್ಣಾರ್ತೋಽಪಿ ವಿಚಿನ್ವನ್ಸರಸೋಮಹತ್ । ಚಕೋರ ಚಕ್ರ ಕಾರಂಡ ಖಂಜರೀಟ ಶತಾಕುಲಂ ॥ ಉತ್ಫುಲ್ಲಹಲ್ಲಕೋದ್ದಾಮ ಕುಮುದೋತ್ಪಲಮಂಡಿತಂ ॥ ಅಪೂರ್ವಮವನೀಶಶ್ಚ ದದತ್ಯಾಶ್ಸರಸಾಂ ಗಣಾನ್। ದೀಕ್ಷಿತಾನ್ ಸುವ್ರತೇನಾಥ ತೇನಾರ್ಚನಖರಾಯಣಾನ್ । ಕಿಮೇತದಿತಿ ಪಪ್ರಚ್ಛ ರಾಜಾ ರಾಜೀವಲೋಚನಃ ॥ ಅಪ್ಸರಸಃ ॥ ಸ್ವರ್ಣಗೌರೀ ವ್ರತಮಿದಂ ಪ್ರಯತೇಽಸ್ಮಾಭಿರುತ್ತಮಂ । ಸರ್ವಸಂಪತ್ಕರಂ ನೃಣಾಂ ತತ್ಕುರುಷ್ವ ನೃಪೋತ್ತಮ॥ವಿಧಾನಂ ಕೀದೃಶಂ ಬ್ರೂಥ ಕಿಂ ಫಲಂ ವ್ರತಚಾರಣಾತ್ ॥ ತಾ ಊಚುರ್ಯೋಷಿತಾಃ ಸರ್ವಾ ನಭೋಮಾಸಿ ತೃತೀಯಕೇ।ಅರಬ್ಧವ್ಯಂ ವ್ರತಮಿದಂ ಗೌರ್ಯಾಃ ಷೋಡಶ ವತ್ಸರಾನ್ ॥ ತುಚ್ಛ್ರುತ್ವಾ ಸೋಽಜಗ್ರಾಹ ವ್ರತಂ ನಿಯತಮಾನಸಃ॥ ಗುಣ್ಯೈಃ ಷೋಡಶಭಿರ್ಯುಕ್ತಂ ದೋರಕಂ ದಕ್ಷಿಣೇ ಕರೇ । ಬಬಂಧಾನೇನ ಮಂತ್ರೇಣ ಕರಿಷ್ಯೇಽಹಂ ವ್ರತೋತ್ತಮಂ ॥೧೩॥ ತತಃಕೃತ್ವಾ ವ್ರತಂ ದೇವ್ಯಾ ಆಗಮ್ಯ ನಿಜಮಂದಿರಂ । ಸತ್ನೀಭ್ಯಾಂ ತತ್ಸಮಾಚಷ್ಟೇ ರಾಜಾ ಗೌರ್ಯಾಃ ಪ್ರಪೂಜನಂ । ಬದ್ಧಂ ತದ್ದೋರಕಂ ಹಸ್ತೇ ದೃಷ್ಟ್ವಾ ಭಾರ್ಯ್ಯಾಚ ಗೋಪನಾ ॥ ಜ್ಯೇಷ್ಠಾ ತ್ರುಟಿತ್ವಾ ಚಿಕ್ಷೇಪ ಬಾಹ್ಯಶುಷ್ಕತರೂಪರಿ ॥ ನ ಕರ್ತವ್ಯಂ ನ ಕರ್ತವ್ಯಮಿತಿ ರಾಜ್ಞಾಪಿ ಬೋಧಿತಾ ॥ ದೋರಸಂಸ್ಪರ್ಶಮಾತ್ರೇಣ ತರುಃ ಪಲ್ಲವಿತೋಽಭವತ್ ॥ ತದ್ದ್ವಿತೀಯಾ ತತೋ ದೃಷ್ಟ್ವಾ ವಿಸ್ಮಯಾಲ್ಲಜ್ಜಿತಾಭವತ್ ॥ ತನ್ಮ್ಲಾನೇ ದೋರಕಂ ಛಿನ್ನಂ ಗೃಹೀತ್ವಾ ಸಾ ಬಬಂಧ ಹ ॥ ತತಸ್ತದ್ವ್ರತಮಹಾತ್ಮ್ಯಾತ್ ಪ್ರತಿಪ್ರಿಯತರಾಭವತ್ ॥ ಜೇಷ್ಠಾ ಕೃತಾಪಚಾರೇಣ ಪತಿತ್ಯಕ್ತಾತಿದುಃಖಿತಾ ॥ ಪ್ರಯಯೌ ಸಾ ವನಂ ದೇವೀಂ ಧ್ಯಾಯಂತೀ ನಿತ್ಯಮಂಗಳಾಂ ॥ ಮುನೀನಾಮಾಶ್ರಮೇ ಪುಣ್ಯೇ ನಿವಸಂತೀ ಕ್ವಚಿತ್ ಕ್ವಚಿತ್॥ನಿಷ್ಕಾಸಿತಾ ಚ ನಿರ್ವೈರಂ ತಚ್ಚ ಪಾಪೇ ಯಥಾ ಸುಖಂ॥ಧಾವಂತೀ ವಿಪಿನೇ ಘೋರೇ ಗಣಾಧ್ಯಕ್ಷಂ ದದರ್ಶ ಹ ॥ ತೇನ ದೃಷ್ಟ್ವಾ ಚ ಸಾ ಗೌರೀ ದ್ರಕ್ಷ್ಯಾಮ್ಯಹಮುಪೋಷಿತಾ॥ ಇತಿ ಗತ್ವಾ ದದರ್ಶಾಗ್ರೇ ತರುಂ ಚಾಥ ಸರೋವರಂ॥ ತತೋ ವನಶ್ರಿಯಂ ಚಾಗ್ರೇ ಸರ್ವಾಭರಣಭೂಷಿತಾಂ ಪಶ್ಯಂತೀ ಶನೈಸ್ತತ್ರ । ವ್ರಜಂತೀ ಚೈವ ಮಾನುಷೀ ॥ ತೈಸ್ತೈರ್ನಿರಾಕೃತಾದೃಷ್ಟ್ವಾ ನಿಮಿಷಣ್ಣಾ ನಿಷಾದ ಹ ॥ ತತಸ್ತು ಕೃಪಯಾ ದೇವೀ ಪ್ರಾದುರಾಸೀತ್ಸುಮಂಗಳಾ ॥ ತಾಂ ದೃಷ್ಟ್ವಾ ದಂಡವದ್ಭೂಮೌ ನತ್ವಾ ತುಷ್ಟಾವ ತಾಂ ಶಿವಾಂ ॥ ಜಯ ದೇವಿ ನಮಸ್ತುಭ್ಯಂ ಜಯ ಭಕ್ತವರ

ಪ್ರದೇ||೨೪|| ಜಯ ಶಂಕರ ವಾಮಾಂಗಿ ಮಂಗಳೇ ಸರ್ವಮಂಗಳೇ||ತತೋ ಲಬ್ಧ್ವಾ ವರಂ ಭಕ್ತ್ಯಾ ಗೌರೀಮಭ್ಯರ್ಚ್ಯ ತದ್ವ್ರತಂ || ಚಕ್ರೇ ದೇವೀ ವರಂ ತಸ್ಯೈ ದದೌ ಸೌಭಾಗ್ಯಸಂಪದಃ || ಇತಿ ಗೌರೀಪ್ರಸಾದೇನ ಸರ್ವಾನ್ ಭೋಗಾನವಾಪ ಹ ||೨೫|| ಭರ್ತ್ರಾ ಸಪತ್ನ್ಯಾ ಚಾನ್ಯೈಶ್ಚ ನದುಃಖಂ ಬಹುವತ್ಸರಾನ್ ಅಂತೇ ಶಿವಪುರಂ ಪ್ರಾಪ ಕಾಂತಾಭಿಃ ಸಹಿತೋ ನೃಪಃ || ಯಚ್ಛೋಭನಂ ವ್ರತಮಿದಂ ಕಥಿತಂ ಶಿವಾಯಾಃ | ಕುರ್ಯಾನ್ನರಃ ಪ್ರಿಯತರೋ ಭವತಿ ಹ ಗೌರ್ಯಾಃ |ಪ್ರಾಪ್ಯ ಶ್ರಿಯಂ ಸುಖಮವಾಪ್ಯ ಚ ಶತ್ರುಸಂಘಾನ್ನಿರ್ಜಿತ್ಯ ನಿರ್ಮಲಪದಂ ಸಹಸಾ ಪ್ರಯಾತಿ ||

ಇತಿ ಶ್ರೀ ಸ್ಕಾಂದಪುರಾಣೇ ಸ್ವರ್ಣಗೌರೀ ವ್ರತಕಥಾ ಸಂಪೂರ್ಣಾ.

ಅಥೋದ್ಯಾಪನವಿಧಿಃ || ಯುಧಿಷ್ಠಿರ ಉವಾಚ || ಉದ್ಯಾಪನವಿಧಿಂ ಬ್ರೂಹಿ ತೃತೀಯಾಯಾಃ ಸುರೇಶ್ವರ | ಭಕ್ತಿತಃ ಶ್ರೋತುಮಿಚ್ಛಾಮಿ ವ್ರತಸಂಪೂರ್ಣಹೇತವೇ ||೧|| ಶ್ರೀಕೃಷ್ಣ ಉವಾಚ || ಉದ್ಯಾಪನವಿಧಿಂ ವಕ್ಷ್ಯೇ ಸಾವಧಾನೇನ ವೈ ಶ್ರುಣು || ತ್ರಿಂಶದ್ದಂಡಪ್ರಮಾಣೇನ ಪ್ರಮಿತಂ ದಕ್ಷಿಣೋತ್ತರೇ || ಪ್ರತ್ಯಕ್ಪ್ರಾಗಪಿ ರಾಜೇಂದ್ರ ಮಂಟಪಾಂಗಣಮಿಷ್ಯತೇ|| ಗೋಚರ್ಮಮಾತ್ರಂ ಸಂಲಿಪ್ಯ ಗೋಮಯೇನ ವಿಚಕ್ಷಣಃ| ಮಂಟಪಂ ಕಾರಯೇತ್ತತ್ರ ನಾನಾವರ್ಣಂ ಸುಶೋಭನಂ || ಗೃಹಸ್ಯೋತ್ತರಪಾರ್ಶ್ವೇ ತು ಪದ್ಮಮಷ್ಟದಳಂ ಲಿಖೇತ್||ತನ್ಮಧ್ಯೇ ಸ್ಥಾಪಯೇತ್ಕುಂಭಮವ್ರಣಂ ಮೃಣ್ಮಯಂ ಶುಭಂ || ತಾಮ್ರಪಾತ್ರಂ ಪ್ರಕುರ್ವೀತ ದಲೈಃ ಷೋಡಶಭಿಸ್ತಥಾ || ತದರ್ಧಾರ್ಧೇನ ವಾ ಕುರ್ಯಾದ್ವಿತ್ತಶಾಠ್ಯಂ ನ ಕಾರಯೇತ್|| ಕರ್ಷಮಾತ್ರಸುವರ್ಣೇನ ಪ್ರತಿಮಾಂ ಕಾರಯೇದ್ಬುಧಃ || ತದರ್ಧಂ ಮಧ್ಯಮಂ ಪ್ರೋಕ್ತಂ ತದರ್ಧಂ ತು ಕನಿಷ್ಠಕಂ || ಕೃತ್ವಾ ರೂಪಂ ಪ್ರಯತ್ನೇನ ಪಾರ್ವತ್ಯಾ ಹರಸ್ಯ ಚ || ಅಥ ತಾಮ್ರಮಯೇ ಪಾತ್ರೇ ಪ್ರತಿಮಾಂ ತತ್ರ ವಿನ್ಯಸೇತ್ || ಶ್ವೇತವಸ್ತ್ರಯುಗಚ್ಛನ್ನಂ ಶ್ವೇತಯಜ್ಞೋಪವೀತಕಂ| ಭಾಜನಂ ಚ ತಿಲೈಃ ಪೂರ್ಣಂ ಕಲಶೋಪರಿ ವಿನ್ಯಸೇತ್ || ಪಾರ್ವತ್ಯಾಸ್ತು ಯುಗಂ ದದ್ಯಾತ್ ಸ್ಥಾಪಯಿತ್ವಾ ವಿಧಾನತಃ || ವೇದೋಕ್ತೇನ ಪ್ರತಿಷ್ಠಾ ಚ ಕರ್ತವ್ಯಾ ತು ಯಥಾವಿಧಿ || ಪಂಚಾಮೃತೇನ ಸ್ನಪನಂ ಕೃತ್ವಾ ದೇವಸ್ಯ ಚೋತ್ತಮಂ||ಸ್ನಾನಂ ಚ ಕಾರಯೇತ್ಪಶ್ಚಾತ್ತತಃ ಪೂಜಾಂ ಚ ಕಾರಯೇತ್ | ಚಂದನೇನ ಸುಗಂಧೇನ ಸುಪುಷ್ಪೈಶ್ಚ ಪ್ರಪೂಜಯೇತ್ | ಧೂಪಂ ಚ ಕಲ್ಪಯೇದ್ಗಂಧಂ ಚಂದನಾಗರುಸಂಯುತಂ|| ನಾನಾಪ್ರಕಾರೈರ್ನೈವೇದ್ಯಂ ತದಾ ದೀಪಂ ಚ ಕಾರಯೇತ್ | ಅರ್ಚಯೇತ್ಪೂಜಯೇ

ದ್ಭಕ್ತ್ಯಾ ಗಂಧಪುಷ್ಪಫಲಾಕ್ಷತೈಃ । ಆವಾಹನಾದಿ ಕರ್ತವ್ಯಂ ಪುರಾಣಾಂಗಸಮು
ದ್ಭವೈಃ ॥ ಕುರ್ಯಾದ್ವಿಧಾನತಃ ಪೂಜಾಂ ಶ್ರದ್ಧಾಭಕ್ತಿಸಮನ್ವಿತಃ ॥ ದೇವದೇವಿ ಸಮಾ
ಗಚ್ಛ ಪ್ರಾರ್ಥಯೇಽಹಂ ಜಗತ್ಪತೇ ॥ ಇಮಾಂ ಮಯಾ ಕೃತಾಂ ಪೂಜಾಂ ಗೃಹಾಣ
ಸುರಸತ್ತಮ ॥ ಏವಂ ಪೂಜಾ ಪ್ರಕರ್ತವ್ಯಾ ರಾತ್ರೌ ಜಾಗರಣಂ ತತಃ ॥ ಗೀತ
ನೃತ್ಯಾದಿ ಸಂಯುಕ್ತಂ ಕಥಾಶ್ರವಣಪೂರ್ವಕಂ ॥ ಅರ್ಚಯೇತ್ಪೂರ್ವವದ್ದೇವೀಂ
ಪಶ್ಚಾದ್ಧೋಮಂ ಸಮಾಚರೇತ್ ॥ ೧೬ ॥ ಸ್ವಗೃಹ್ಯೋಕ್ತವಿಧಾನೇನ ಕೃತ್ವಾಗ್ನಿ
ಸ್ಥಾಪನಂ ತತಃ ॥ ಪ್ರಾರಭೇಚ್ಚ ತತೋ ಹೋಮಂ ನವಗ್ರಹಪುರಸ್ಸರಂ ॥ ತಿಲಾಂಶ್ಚ
ಯವಸಂಮಿಶ್ರಾನಾಜ್ಯೇನ ಚ ಪರಿಪ್ಲುತಾನ್ ॥ ಸಂಕರ್ಷಣೇತಿ ಮಂತ್ರೇಣ ಗೌರೀ
ಮಂತ್ರೇಣ ವಾ ಶಿವಾಂ ॥ ಏವಂ ಸಮಾಪ್ಯ ಜುಹುಯಾತ್ತತ್ರಾಚಾರ್ಯಂ ಪ್ರಪೂಜ
ಯೇತ್। ಅರ್ಘ್ಯಪುಷ್ಪಪ್ರದಾನೈಶ್ಚ ವಸ್ತ್ರಾಲಂಕಾರಭೂಷಣೈಃ । ಭಕ್ತ್ಯಾ ಚ ದಕ್ಷಿಣಾಂ
ದದ್ಯಾತ್ಸಹ ಗೋಧೂಮಲಡ್ಡುಕೈಃ ಧೇನುಂ ಸದಕ್ಷಿಣಾಂ ದದ್ಯಾತ್ಸುಶೀಲಾಯ ತಪಯ
ಸ್ವಿನೇಂ ॥ ಸ್ವರ್ಣಶೃಂಗೀಂ ರೌಪ್ಯಖುರೀಂ ಕಾಂಸ್ಯದೋಹದಭಾಜನಾಂ ॥ ರತ್ನಪುಚ್ಛಾಂ
ತಾಮ್ರಪೃಷ್ಠಾಮಲಂಕೃತಾಂ ॥ ಸವತ್ಸಾಮವ್ರಣಾಂ ಭದ್ರಾಂ ಗಾಸ್ತಥಾನ್ಯಾಃ ಪ್ರಯ
ತ್ನತಃ ॥ ಸುವರ್ಣೇನ ಸಮೋಪೇತಾಃ ಸಾಚಾರ್ಯಾಯ ಚ ಸಾಧವೇ ॥ ಋತ್ವಿಜಃ
ಷೋಡಶಾಪ್ಯೇವಂ ಪಕ್ವಾನ್ನೈಃ ಪ್ರೀಣಯೇತ್ಸದಾ ॥ ಷೋಡಶಪ್ರಮಿತಂ ದದ್ಯಾ
ದ್ಬ್ರಾಹ್ಮಣೇಭ್ಯಶ್ಚ ವಾಯನಂ ॥ ವಂಶಪಾತ್ರಸ್ಥಿತೈಃ ಪಶ್ಚಾತ್ಪಕ್ವಾನ್ನಂ ಪಾಯಸೈಃ
ಶುಭೈಃ । ಅನ್ಯೇಭ್ಯೋ ಬ್ರಾಹ್ಮಣೇಭ್ಯಶ್ಚ ದಕ್ಷಿಣಾಂ ಚ ಪ್ರಯತ್ನತಃ ॥೨೪॥ ಷೋಡ
ಶಾನ್ವತ್ಸರಾನ್ಕೃತ್ವಾ ಪೂಜಯೇದ್ಭಕ್ತಿಪೂರ್ವಕಂ ॥ ಬಂಧುಭಿಃಸಹ ಭುಂಜೀತ ನಿಯ
ತಶ್ಚ ಪರೇಹನಿ ॥೧೫॥ ಏವಂ ಕೃತ್ವಾ ಭವೇತ್ಪಾರ್ಥ ಪರಿಪೂರ್ಣ ಪ್ರತಿರ್ಭವೇತ್ ॥

ಇತಿ ಶ್ರೀಸ್ಕಾಂದಪುರಾಣೇ ಕೃಷ್ಣಯುಧಿಷ್ಠಿರ ಸಂವಾದೇ
ಸ್ವರ್ಣಗೌರೀ ವ್ರತೋದ್ಯಾಪನಕಥಾ ಸಂಪೂರ್ಣಾ.

ಶ್ರೀ ಸ್ವರ್ಣಗೌರೀ ವ್ರತ ಕಥಾಸಂಗ್ರಹ

ಪುಣ್ಯಪುರುಷನಾದ ಸೂತಮಹಾಮುನಿಯು ಶೌನಕಾದಿ ಋಷಿಗಳನ್ನು ಕುರಿತು ಎಲೈ
ಋಷಿಗಳಿರಾ! ಕೇಳಿ ಪೂರ್ವದಲ್ಲಿ ಕೈಲಾಸ ಪರ್ವತದಲ್ಲಿ ಸಿಂಹಾಸನಸ್ಥನಾಗಿ ಸ್ವಸ್ಥವಾಗಿ ಕುಳಿ
ತಿದ್ದ ಪರಮೇಶ್ವರನನ್ನು ಕಂಡು ಕುಮಾರಸ್ವಾಮಿಯು ಭಕ್ತಿಯಿಂದ ನಮಸ್ಕರಿಸಿ, ಎಲೈ ಮಹಾ
ದೇವನೇ! ವ್ರತಗಳಲ್ಲಿ ಸರ್ವೋತ್ತಮವಾಗಿ ಪುತ್ರಪೌತ್ರ ಸೌಭಾಗ್ಯಸುಖಗಳನ್ನು ಕೊಡುವ
ಒಂದಾನೊಂದು ವ್ರತವನ್ನು ನನಗೆ ಹೇಳಬೇಕೆಂದು ಬೇಡಿಕೊಂಡನು. ಆಗ ಪರಮೇಶ್ವರನು

ಸಂತುಷ್ಟನಾಗಿ ಎಲೈ ಷಣ್ಮುಖನೇ! ಬಹಳ ಚೆನ್ನಾಗಿ ಕೇಳಿದೆ. ಬುದ್ಧಿವಂತನಾದ ನಿನಗೋಸ್ಕರ ಸರ್ವಸೌಖ್ಯಪ್ರದವಾದ ಸ್ವರ್ಣಗೌರೀವ್ರತದ ಮಹಿಮೆಯನ್ನು ವಿಸ್ತರಿಸಿ ಹೇಳುವೆನು ಕೇಳು, ಈ ವ್ರತವು ಸರ್ವರಿಗೂ ಪುತ್ರಪೌತ್ರಾದಿ ಸಂಪತ್ತನ್ನು ಕೊಟ್ಟು ಸಕಲ ದುಃಖಗಳನ್ನು ನಿವಾರಿಸಿ, ಭಕ್ತರನ್ನು ಸುಖಸಂತೋಷಗಳಿಂದ ಕಾಪಾಡತಕ್ಕದ್ದು. ಇದರ ಮಹಿಮೆಯಿಂದ ಸಂಪೂರ್ಣ ಫಲವನ್ನು ಅಭಿನಯಿಸಿದ ಒಬ್ಬ ರಾಜನ ಕಥೆಯುಂಟು. ಅದನ್ನು ಸಾವಧಾನಚಿತ್ತನಾಗಿ ಲಾಲಿಸು. ಪೂರ್ವಕಾಲದಲ್ಲಿ ಸರಸ್ವತೀ ನದೀತೀರದಲ್ಲಿ ಪ್ರಸಿದ್ಧವಾದ ವಿಮಲಾಪುರವೆಂಬ ಪಟ್ಟಣವನ್ನು ಚಂದ್ರಪ್ರಭನೆಂದು ಪ್ರಸಿದ್ಧನಾದ ರಾಜನು, ಧರ್ಮದಿಂದ ಆಳುತ್ತಿದ್ದನು. ಆತನಿಗೆ ಇಬ್ಬರು ಹೆಂಡತಿಯರಿದ್ದರು. ಅವರಲ್ಲಿ ಹಿರಿಯವಳನ್ನು ಕಂಡರೆ ರಾಜನಿಗೆ ಪ್ರೇಮವು ಅಧಿಕವಾಗಿತ್ತು. ಆ ರಾಜನು ಒಂದಾನೊಂದುದಿನ ಬೇಟೆಯಾಡುವುದಕ್ಕಾಗಿ ಅರಣ್ಯಕ್ಕೆ ಹೋಗಿ ಬಗೆಬಗೆಯ ಕ್ರೂರಮೃಗಗಳನ್ನು ಕೊಂದು ಆಯಾಸಪಟ್ಟವನಾಗಿ ಬಾಯಾರಿಕೆ ಹೆಚ್ಚಿದಕಾರಣ ನೀರನ್ನು ಕುಡಿಯುವುದಕ್ಕಾಗಿ ಜಲಾಶಯವನ್ನು ಹುಡುಕುತ್ತ ಬರಲು, ಕಮಲಕಲ್ಹಾರಾದಿ ಪುಷ್ಪಭರಿತವಾಗಿ ತಿಳಿನೀರಿನಿಂದ ಸ್ವಚ್ಛವಾಗಿ ಅಪ್ಸರಸ್ತ್ರೀಯರಿಂದ ನಿಬಿಡವಾಗಿದ್ದ ಒಂದು ಸರೋವರವು ಅವನ ದೃಷ್ಟಿಗೆ ಗೋಚರವಾಯಿತು. ರಾಜನು ಸಂತೋಷಭರಿತನಾಗಿ ಕುದುರೆಯಿಂದಿಳಿದು ಸರೋವರದ ಬಳಿಗೆ ಬಂದು ಅಲ್ಲಿ ತಂಡೋಪತಂಡವಾಗಿ ಸ್ತ್ರೀಯರು ಗುಂಪು ಕೂಡಿ ಪೂಜೆಮಾಡುತ್ತಿರುವುದನ್ನು ಕಂಡು ಆನಂದಭರಿತನಾಗಿ ಭಕ್ತಿಯಿಂದ ಆ ಸ್ತ್ರೀಯರನ್ನು ಕುರಿತು, ಅಮ್ಮಾ! ನೀವು ಅಲ್ಲಿ ಮಾಡುತ್ತಿರುವ ಪೂಜೆ ಯಾವುದು, ಏತಕ್ಕಾಗಿ ಇದನ್ನು ಮಾಡುವಿರಿ? ಎಂದು ಪ್ರಶ್ನೆಮಾಡಿದನು. ಆಗ ಆ ಸ್ತ್ರೀಯರು, ಅಯ್ಯಾ! ಇದು ಸರ್ವಸಿದ್ಧಿಪ್ರದವಾದ ಸ್ವರ್ಣಗೌರೀವ್ರತವೆಂಬುದು. ವ್ರತಗಳಲ್ಲಿ ಇದಕ್ಕಿಂತಲೂ ಅಧಿಕವಾದ ವ್ರತವೇ ಇಲ್ಲ. ನಮ್ಮ ಕಷ್ಟನಿವಾರಣೆಯಾಗಿ ಇಷ್ಟಾರ್ಥ ಪ್ರಾಪ್ತಿಯಾಗುವುದಕ್ಕಾಗಿ ನಾವು ಈ ವ್ರತವನ್ನು ಮಾಡುತ್ತಿದ್ದೇವೆ ಎನಲು, ಹಾಗಾದರೆ ಈ ವ್ರತವನ್ನು ಹೇಗೆ ಮಾಡಬೇಕೋ, ಈ ವಿಧಾನವನ್ನು ನನಗೆ ಹೇಳಬೇಕೆಂದು ರಾಜನು ಪುನಃ ಅವರನ್ನು ಕೇಳಲಾಗಿ ಸಂತೋಷಭರಿತರಾದ ಆ ಸ್ತ್ರೀಯರು ರಾಜನನ್ನು ಕುರಿತು ಹೀಗೆ ಹೇಳಿದರು. ಅಯ್ಯಾ! ಭಕ್ತಾಗ್ರಣಿಯೇ ಕೇಳು, ಭಾದ್ರಪದ ಶುದ್ಧ ತದಿಗೆಯದಿನ ನದೀತೀರದಲ್ಲಿ ಮಿಂದು ಶುಚಿರ್ಭೂತರಾಗಿ ಭಕ್ತಿಯಿಂದ ಈ ಸ್ವರ್ಣಗೌರೀವ್ರತವನ್ನು ಮಾಡಬೇಕು. ಈ ವ್ರತವನ್ನು ಆಚರಿಸುವುದಕ್ಕೆ ಹದಿನಾರುಗಂಟಿನ ದಾರವೂ, ಷೋಡಶಸಂಖ್ಯೆಯ ಫಲ ಪುಷ್ಪ ತಾಂಬೂಲಗಳೂ ಇರಬೇಕು. ಹದಿನಾರುವರ್ಷ ಈ ರೀತಿಯಾಗಿ ವ್ರತವನ್ನು ಮಾಡಿ, ವ್ರತದ ಮಧ್ಯಕಾಲದಲ್ಲಾಗಲಿ, ಕೊನೆಯಲ್ಲಿ ಹದಿನೇಳನೆಯ ವರ್ಷದಲ್ಲಾಗಲಿ ಉದ್ಯಾಪನೆಯನ್ನು ಮಾಡಬೇಕು, ಇದು ಸರ್ವೋತ್ತಮವಾದ ವ್ರತಗಳಲ್ಲಿ ಪರಮ ಶ್ರೇಷ್ಠವಾದದ್ದು. ನೀನೂ ಈ ವ್ರತವನ್ನು ಮಾಡು ಎಂದು ಹೇಳಲು, ರಾಜನು ಭಕ್ತಿವಂತನಾಗಿ ತಾನೂ ಆ ವ್ರತವನ್ನು ಮಾಡಿ ಶ್ರದ್ಧೆಯಿಂದ ಬಲಕೈಗೆ ದಾರವನ್ನು ಕಟ್ಟಿಕೊಂಡು ಸಂತೋಷಭರಿತನಾಗಿ ತನ್ನ ಪಟ್ಟಣಕ್ಕೆ ಹೋಗಿ ಹೆಂಡತಿಯರಿಬ್ಬರಿಗೂ ಆ ವ್ರತದ ಮಹಿಮೆಯನ್ನು ವಿಸ್ತರಿಸಿ ಹೇಳಿ ನೀವು ಆ ವ್ರತವನ್ನು ಮಾಡಿ ಎಂದು ಪ್ರೇರಿಸಿದನು. ಗಂಡನ ಮಾತುಗಳು ಹಿರಿಯ ಹೆಂಡತಿಗೆ ಸರಿಬೀಳದೆ ಅವಳು ಆ ವ್ರತವನ್ನು ಧಿಕ್ಕರಿಸಿ ರಾಜನನ್ನು ಬಹಳವಾಗಿ ನಿಂದಿಸುತ್ತ ಅವನ ಕೈಯಲ್ಲಿದ್ದ ದಾರವನ್ನು ಕಿತ್ತು ಉದ್ಯಾನವನದಲ್ಲಿ ಒಣಗಿಹೋಗಿದ್ದ ಒಂದು ಮರದ ಮೇಲಕ್ಕೆ ಸೆದುಬಿಟ್ಟಳು. ರಾಜನು ಹೀಗೆ ಮಾಡುವುದು ಸರಿಯಲ್ಲ ಎಂದು ಬಹುವಿಧವಾಗಿ ತಿಳಿಯ

ಹೇಳಿದರೂ ಅವಳಿಗೆ ಮನಸ್ಸು ಕರಗದೆ ಶಠಳಾಗಿಯೇ ಇದ್ದಳು. ಬಳಿಕ ಆ ದಾರದ ಮಹಿಮೆ ಯಿಂದ ಒಣಮರವು ಚಿಗುರಿ ಹೂವಾಗಿ ಫಲಭರಿತವಾದುದನ್ನು ಕಂಡು ಕಿರಿಯ ಹೆಂಡತಿಯು ಆನಂದಭರಿತಳಾಗಿ ತಾನು ಆ ದಾರವನ್ನು ತೆಗೆದು ಕೈಗೆ ಕಟ್ಟಿಕೊಂಡು ಭಕ್ತಿವಂತಳಾಗಿ ಸ್ವರ್ಣಗೌರೀವ್ರತವನ್ನು ಮಾಡಿ ಆ ವ್ರತದ ಮಹಿಮೆಯಿಂದ ಪತಿಪ್ರೀತಳಾಗಿ ಸುಖಸಾಮ್ರಾಜ್ಯ ವನ್ನು ಅನುಭವಿಸುತ್ತ ಪುತ್ರಪೌತ್ರಾದಿಗಳೊಂದಿಗೆ ಸಂತೋಷದಿಂದಿರುತ್ತಿದ್ದಳು. ಹಿರಿಯ ಹೆಂಡತಿಯಾದರೋ ಸ್ವರ್ಣಗೌರಿಯನ್ನು ತಿರಸ್ಕರಿಸಿದಕಾರಣ ಅಜ್ಞಾನವಂತಳಾಗಿ ಐಶ್ವರ್ಯ ವನ್ನು ತೊರೆದು ಅನಾಥಳಂತೆ ಅರಣ್ಯಕ್ಕೆ ಹೊರಟುಹೋಗಿ ದಿಗ್ಭ್ರಾಂತಳಂತೆ ಸಿಕ್ಕಿದಕಡೆ ಅಲೆಯುತ್ತಾ ಇದ್ದಳು. ಅವಳು ಎಲ್ಲಿಗೆ ಹೋದರೂ ಯಾರೂ ಅವಳನ್ನು ಪುರಸ್ಕರಿಸು ತ್ತಿರಲಿಲ್ಲ. ಎಲ್ಲರೂ ತಿರಸ್ಕರಿಸುತ್ತಿದ್ದಕಾರಣ ಪುಣ್ಯಮೂರ್ತಿಗಳಾದ ಋಷಿಗಳ ಆಶ್ರಮಕ್ಕೆ ಹೋದಳು ಅಲ್ಲಿ ಅವಳನ್ನು ನೋಡಿ, ಆ ಋಷಿಗಳುನೀನು ಪಾಪಾತ್ಮಳು, ಪತಿಯನ್ನು ನಿಂದಿಸಿ ಅವನನ್ನು ತಿರಸ್ಕರಿಸಿ ಬಂದಿದ್ದೀಯೆ ನಿನ್ನ ಮುಖವನ್ನು ನೋಡಬಾರದು ಹೊರಟುಹೋಗು ಎಂದು ಹೇಳಿಬಿಟ್ಟರು. ಹೀಗೆ ತನಗೆಲ್ಲಿಯೂ ನೆರವಾಗದೆ ಹೋದುದಕ್ಕಾಗಿ ಅವಳು ಚಿಂತೆ ಗೊಂಡು ಖಿನ್ನಮನಸ್ಕಳಾಗಿ ಎಲ್ಲಿಗೂ ಹೋಗದೆ ಒಂದು ಕಡೆಯಲ್ಲಿ ಸ್ವಸ್ಥವಾಗಿ ಕುಳಿತು ಕೊಂಡು ಗಟ್ಟಿಯಾಗಿ ಬಿಕ್ಕಿಬಿಕ್ಕಿ ಅಳುತ್ತಿದ್ದಳು. ಅವಳ ಸ್ಥಿತಿಯನ್ನು ಕಂಡು ಸ್ವರ್ಣ ಗೌರಿಗೆ ಕರುಣವುಂಟಾಗಿ ಅವಳೆದುರಿಗೆ ಪ್ರತ್ಯಕ್ಷಳಾಗಿ ಬಂದು ದರ್ಶನಕೊಟ್ಟಳು. ಆಗ ಅವಳಿಗೆ ಜ್ಞಾನೋದಯವಾಗಲು, ಭಕ್ತಿಯುಕ್ತಳಾಗಿ ಸ್ವರ್ಣಗೌರಿಗೆ ನಮಸ್ಕರಿಸಿ ಬಗೆಬಗ ಯಾಗಿ ಸ್ತುತಿಸುತ್ತ, ಎಲೌ ಜಗಜ್ಜನನಿಯೇ! ನಿನಗೆ ಮಂಗಳವಾಗಲಿ, ಪರಶಿವನ ಪತ್ನಿ ಯಾದ ನಿನಗೆ ನಮಸ್ಕಾರ, ಸರ್ವಲೋಕ ಶರಣ್ಯೆಯಾದ ಗೌರಿದೇವಿಯೇ ನನ್ನನ್ನು ಪಾಲಿಸು. ಆದಿಶಕ್ತಿ ಸ್ವರೂಪಳಾದ ಮಹಾದೇವಿಯೇ! ನಿನಗೆ ಜಯವಾಗಲಿ! ನಿನಗೆ ನಮಸ್ಕಾರ. ನನ್ನ ಅಪರಾಧಗಳನ್ನು ಮನ್ನಿಸಿ ಕಾಪಾಡು ಎಂದು ಬೇಡಿಕೊಂಡಳು. ಕೂಡಲೇ ಕರುಣಾಮಯ ಳಾದ ಸ್ವರ್ಣಗೌರಿಯು ಆಕೆಯ ಭಕ್ತಿಗೆ ಮೆಚ್ಚಿ ಅವಳಿಗೆ ತಕ್ಕ ಸೌಭಾಗ್ಯಸಂಪನ್ನತೆಯೊಡನೆ ಪುತ್ರಪೌತ್ರ ಸುಖವುಂಟಾಗುವಂತೆ ಆಶೀರ್ವದಿಸಿ ತಾನು ಅದೃಶ್ಯಳಾದಳು. ಆ ಬಳಿಗೆ ರಾಜ ಪತ್ನಿಯು ತನ್ನ ರಾಜ್ಯಕ್ಕೆ ಬಂದು ಪತಿಯ ಇಷ್ಟಾನುಸಾರ ಸ್ವರ್ಣಗೌರೀ ವ್ರತವನ್ನು ಮಾಡಿ ಆ ವ್ರತದ ಮಹಿಮೆಯಿಂದ ಪುತ್ರಪೌತ್ರರನ್ನು ಪಡೆದು ಬಹುಕಾಲ ಸುಮಂಗಲಿಯಾಗಿ ಬಾಳುತ್ತ ಸಕಲ ಸುಖಗಳನ್ನು ಅನುಭವಿಸಿ ಪತಿಸಾಯುಜ್ಯವೆಂಬ ಮೋಕ್ಷವನ್ನು ಪಡೆದಳು. ಇಂತು ಪರಮಭಾಗ್ಯದಾಯಕವಾದಈಸ್ವರ್ಣಗೌರೀವ್ರತದ ಕಥೆಯನ್ನುಯಾರು ಕೇಳುವರೋ, ಯಾರು ಹೇಳುವರೋ, ಯಾರು ಭಕ್ತಿಯಿಂದ ಪಠಿಸುವರೊ, ಅವರೆಲ್ಲರೂ ಸರ್ವಮಂಗಳೆಯ ಕರುಣದಿಂದ ಸಮಸ್ತ ಸುಖಸಂತೋಷಗಳನ್ನು ಪಡೆದು ಇಹಲೋಕದಲ್ಲಿ ಬಾಳಿ ಕಡೆಗೆ ಸ್ವರ್ಗ ಸಾಮ್ರಾಜ್ಯವನ್ನು ಸೂರೆಗೊಳ್ಳುವರೆಂದು ಪರಶಿವನು ತನ್ನ ಮಗನಾದ ಕುಮಾರಸ್ವಾಮಿಗೆ ಹೇಳಿದ ಕಥೆಯನ್ನು ಸೂತಮಹರ್ಷಿಯು ಶೌನಕಾದಿ ಮಹಾಮುನಿಗಳಿಗೆ ಹೇಳಿದನೆಂಬಲ್ಲಿಗೆ ಸ್ಕಾಂದಪುರಾಂತರ್ಗತವಾದ ಶ್ರೀಸ್ವರ್ಣಗೌರೀವ್ರತಕಥೆಸಂಪೂರ್ಣಂ. ಶ್ರೀಃ ಶ್ರೀಃ ಶ್ರೀಃ

ಅಥ ಸ್ವರ್ಣಗೌರೀ ಉದ್ಯಾಪನ ವಿಧಿಃ.

ಸರ್ವಜ್ಞನಾದ ಶ್ರೀಕೃಷ್ಣ ಪರಮಾತ್ಮನಿಂದ ವ್ರತಮಹಿಮೆಯನ್ನು ಕೇಳಿ ತಿಳಿದುಕೊಂಡ ಮೇಲೆ ಧರ್ಮಾತ್ಮನಾದ ಧರ್ಮರಾಯನು ಶ್ರೀಕೃಷ್ಣನನ್ನು ಕುರಿತು ಎಲೈ ದೇವದೇವನೇ!

ಸ್ವರ್ಣಗೌರೀ ವ್ರತದ ಉದ್ಯಾಪನ ವಿಧಿಯನ್ನು ನನಗೆ ಹೇಳಬೇಕೆಂದು ಕೇಳಿಕೊಂಡನು. ಆಗ ಶ್ರೀಕೃಷ್ಣನು ಕೇಳೈ ಧರ್ಮರಾಯನೇ! ಈ ಸ್ವರ್ಣಗೌರೀ ವ್ರತವನ್ನೂ ಭಕ್ತಿವಂತರಾದ ಸ್ತ್ರೀಯರೂ ಪುರುಷರೂ ಮಾಡಬಹುದು. ಉದ್ಯಾಪನೆಯನ್ನು ಮಾಡತಕ್ಕವರು ತಮ್ಮ ಮನೆಯಲ್ಲಿ ಪೂರ್ವ ದಿಕ್ಕಿನಲ್ಲಿ ಗೋಚರ್ಮದಷ್ಟು ಅಗಲವಾದ ಸ್ಥಳವನ್ನು ಸಾರಣೆಕಾರಣೆ ಗಳಿಂದ ಶುದ್ಧಮಾಡಿ ಗೋಮಯದಿಂದ ಸಾರಿಸಿ ರಂಗವಲ್ಲಿಗಳಿಂದ ಅಲಂಕರಿಸಿ, ಆ ಸ್ಥಳದಲ್ಲಿ ದಿವ್ಯಮಂಟಪವನ್ನು ಕಟ್ಟಿ ಅದರಲ್ಲಿ ಪೀಠವನ್ನು ಇಟ್ಟು ಅದರ ಮೇಲೆ ಧಾನ್ಯಾದಿಗಳನ್ನು ಹರಡಿ ಅದರಮೇಲೆ ಕಲಶವನ್ನು ಸ್ಥಾಪಿಸಿ ಅದರ ಮೇಲುಗಡೆ ಷೋಡಶ ದಳವುಳ್ಳ ಕಮಲ ವನ್ನು ಕೆತ್ತಿದ ತಾಮ್ರದ ಪಾತ್ರೆಯನ್ನು ಇರಿಸಿ, ಚಿನ್ನದಿಂದ ಮಾಡಿದ ಪಾರ್ವತಿಪರಮೇಶ್ವರ ಪ್ರತಿಮೆಗೆ ಕ್ರಮವಾಗಿ ಆವಾಹನಾದಿಗಳನ್ನು ಮಾಡಿ ಅಗ್ನಿಸೂಕ್ತಕ್ರಮದಿಂದ ಪಂಚಗವ ಪಂಚಾಮೃತಾದಿ ಅಭಿಷೇಕಗಳನ್ನು ಮಾಡಿದನಂತರ ಆ ಪ್ರತಿಮೆಗಳನ್ನು ಕಲಶದಮೇಲಿಟು ಪ್ರಾಣಪ್ರತಿಷ್ಠಾಪನೆಯನ್ನು ಮಾಡಿ, ವಿಧಿಪೂರ್ವಕವಾಗಿ ಕಲ್ಪದಲ್ಲಿ ಹೇಳಿರುವಂತೆ ಷೋಡ್ಶ ಶೋಪಚಾರಗಳಿಂದ ನೈವೇದ್ಯ ಸಮರ್ಪಣೆಮಾಡಿ ನೃತ್ತಗೀತವಾದ್ಯಗಳಿಂದ ಪೂಜಿಸುತ್ತ ರಾತ್ರಿಯನ್ನು ಜಾಗರಣೆಯನ್ನು ಕಳೆದು ಮರುದಿನ ಬೆಳಗಾಗುತ್ತಲೆ ಸ್ನಾನಮಾಡಿ ನಿತ್ಯಕರ್ಮ ಗಳನ್ನು ಮುಗಿಸಿಕೊಂಡು ಭಕ್ತಿಯುಕ್ತರಾಗಿ ಪುನಃ ಪೂಜೆಯನ್ನು ಮಾಡಿ ಮುಗಿಸಿದಮೇಲೆ ನವಗ್ರಹ ಪುರಸ್ಸರವಾಗಿ ತಿಲದಿಂದಲೂ ಯವದಿಂದಲೂ ಆಜ್ಯದಿಂದಲೂ ಸಂಕರ್ಷಣ ಮಂತ್ರ ದಿಂದಲೂ ಗೌರಿಮಿಮಾಂ ಎಂಬ ಮಂತ್ರದಿಂದಲೂ ಸಾವಿರದ ಇಪ್ಪತ್ತೆಂಟುಸಾರಿ ಹೋಮಮಾ ಡಬೇಕು ಮರಳಿ ಅರ್ಘ್ಯಪಾದ್ಯ ವಸ್ತ್ರಾಭರಣಗಳಿಂದ ಗೌರಿಯನ್ನು ಪೂಜಿಸಿ, ಆಚಾರ್ಯನಿಗೆ ರತ್ನಪುಚ್ಛವಾಗಿ ತಾಮ್ರಪೃಷ್ಟವಾಗಿರುವ ಗೋವನ್ನು ಕಂಚಿನ ಪಾತ್ರೆಯೊಂದಿಗೆ ದಕ್ಷಿಣೆಸಹಿತ ವಾಗಿ, ಧಾರೆಯೆರೆದುಕೊಟ್ಟು ಆಚಾರ್ಯ ಪೂಜೆಯನ್ನು ಮಾಡತಕ್ಕದ್ದು ಉಳಿದ ದಾನಗಳನ್ನು ಪ್ರತ್ಯೇಕವಾದ ಹದಿನಾರುಜನ ಬ್ರಾಹ್ಮಣರಿಗೆ ಕೊಟ್ಟು ಅವರನ್ನು ಭೋಜನಾದಿಗಳಿಂದ ಸಂತೃಪಿಸಬೇಕು, ಅಲ್ಲದೆ ಹದಿನಾರುಜನ ಮುತ್ತೈದೆಯರಿಗೆ ಅರಿಸಿನ ಕುಂಕುಮ, ಫಲಪುಷ್ಪ ಮೊರದ ಬಾಗಿನಗಳನ್ನು ದಕ್ಷಿಣೆ ಸಹಿತವಾಗಿ ಸೀರೆಕುಪ್ಪಸಗಳೊಂದಿಗೆ ಕೊಟ್ಟು ಅವರನ್ನೂ ಅನ್ನ ಪಾನಾದಿಗಳಿಂದ ಸತ್ಕರಿಸಬೇಕು, ಹೀಗೆ ಸತ್ಕಾರಹೊಂದಿದ ಬ್ರಾಹ್ಮಣರಿಂದಲೂ ಸುವಾ ಸಿನಿಯರಿಂದಲೂ ಆಶೀರ್ವಾದವನ್ನು ಪಡೆದು ಸಂತೋಷಚಿತ್ತನಾಗಿ ಬಂಧು ಮಿತ್ರಾದಿಗಳಿಂದ ಕೂಡಿ ತಾನೂ ಭೋಜನಮಾಡಿ ಆನಂದದಿಂದ ಆದಿಶಕ್ತಿಯನ್ನೂ ಅನಂತಮೂರ್ತಿಯಾದ ಪರಮಾತ್ಮನನ್ನು ಧ್ಯಾನಿಸುತ್ತಿರಬೇಕು. ಇಂಥ ಸ್ವರ್ಣಗೌರಿ ವ್ರತದ ಉದ್ಯಾಪನವಿಧಿಯನ್ನು ತಿಳಿದು ಯಾರು ಆಚರಣೆಮಾಡುವರೊ ಅಂಥವರು ಸಕಲೇಷ್ಟಾರ್ಥಗಳನ್ನು ಪಡೆಯುವರೆಂದು ಶ್ರೀಕೃಷ್ಣನು ಧರ್ಮರಾಯನಿಗೆ ಹೇಳಿದ ಸ್ವರ್ಣಗೌರೀ ವ್ರತದ ಉದ್ಯಾಪನವಿಧಿ ಸಂಪೂರ್ಣಂ.

ಶ್ರೀರಸ್ತು

೩. ಅಥಋಷಿಪಂಚಮೀ ವ್ರತಕಲ್ಪಃ

ಅತ್ರ ವ್ರತವಿವೇಕಃ ॥ ಸಾ ಚ ಮಧ್ಯಾಹ್ನವ್ಯಾಪಿನೀ ಪಂಚಮ್ಯಾಂ ಕಾರ್ಯಾ । ದಿನದ್ವಯೇ ಮಧ್ಯಾಹ್ನ ವ್ಯಾಪ್ತೌ ವಾ ಅವ್ಯಾಪ್ತೌ ವಾ ಪೂರ್ವದಿನೇ ಏವ ಕರ್ತವ್ಯಂ ॥

ಎಂಬ ವಚನಾನುಸಾರ ಋಷಿಪಂಚಮಿಯ ವ್ರತವನ್ನು ಭಾದ್ರಪದ ಶುದ್ಧ ಪಂಚಮಿಯು ಮಧ್ಯಾಹ್ನ ವ್ಯಾಪಿನಿಯಾಗಿರುವಾಗ ಆಚರಿಸಬೇಕು. ಎರಡು ದಿನಗಳ ಮಧ್ಯಾಹ್ನ ವ್ಯಾಪಿನಿಯಾಗಿದ್ದರೂ ಇಲ್ಲದಿದ್ದರೂ ಮೊದಲು ದಿನವೇ ಮಾಡಬೇಕು, ಈ ವಿಷಯದಲ್ಲಿ ಧರ್ಮಶಾಸ್ತ್ರಕಾರರ ಆಧಾರವಚನವನ್ನು ಇಲ್ಲಿ ಉದಾಹರಿಸಿದೆ.

ಅಥ ಭಾದ್ರಪದ ಶುದ್ಧ ಪಂಚಮ್ಯಾಂ ಋಷಿಪಂಚಮೀವ್ರತಂ ಕಾರ್ಯಂ । ತಚ್ಚ ಮಧ್ಯಾಹ್ನ ವ್ಯಾಪಿನ್ಯಾಂ ವ್ರತಂ ಕರ್ತವ್ಯಂ । ಉಕ್ತಂ ಚ ಮಾಧವೀಯೇ ಹಾರೀತಃ ॥ ಪೂಜಾವ್ರತೇಷು ಸರ್ವೇಷು ಮಧ್ಯಾಹ್ನವ್ಯಾಪಿನೀ ತಿಥಿಃ । ದಿನದ್ವಯೇನ ವ್ಯಾಪ್ತೌ ವಾ । ಪೂರ್ವವಿದ್ಧಾಯಾಂ ಕರ್ತವ್ಯಂ । ಅಥ ಮದನರತ್ನೇ ॥ ಪ್ರಾಪ್ಯ ಭಾದ್ರಪದೇ ಮಾಸಿ ಶುಕ್ಲಪಕ್ಷಸ್ಯ ಪಂಚಮೀ । ತಸ್ಯಾಂ ಮಧ್ಯಾಹ್ನ ಸಮಯೇ । ನದ್ಯಾದೌ ವಿಮಲೇ ಜಲೇ । ಕೃತ್ವಾಪಾಮಾರ್ಗಸಮಿಧೋ ಅಷ್ಟೋತ್ತರಶತಾಧಿಕಾಃ । ಅಥವಾ ಕಾರಯೇ ತ್ಸಪ್ತದಂತಧಾವನಮಾದಿತಃ ॥ ಇತಿ—

ಮಧ್ಯಾಹ್ನಕಾಲೇ ನದೀತೀರಂ ತಟಾಕಂ ವಾ ಕೂಪಂ ಗತ್ವಾ । ಆಯುರ್ಬಲಂ ಯಶೋ ವರ್ಚಃ ಪ್ರಜಾಃ ಪಶು ವಸೂನಿ ಚ । ಬ್ರಹ್ಮ ಪ್ರಜ್ಞಾಂ ಚ ಮೇಧಾಂ ಚ ತ್ವನ್ನೋ ದೇಹಿ ವನಸ್ಪತೇ । ಇತಿ ವನಸ್ಪತಿಂ ಸಂಪ್ರಾರ್ಥ್ಯ ಅಪಾಮಾರ್ಗಕಾಷ್ಠಂ ವಾ ಅನಿಷಿದ್ಧಂ ಆಮ್ರಕಾಷ್ಠಮಾದಾಯ । ಮುಖದುರ್ಗಂಧನಾಶಾಯ ದಂತಾನಾಂ ಚ ವಿಶುದ್ಧಯೇ । ಷ್ಠೀವನಾಯ ಚ ಗಾತ್ರಾಣಾಂ ಕುರ್ವೇಽಹಂ ದಂತಧಾವನಂ ॥ ಇತಿ ಮಂತ್ರೇಣ ೧೦೮ ವಾರಂ ದಂತಧಾವನಂ ತಿಲಾಮಲಕೇನ ಕೇಶಾನ್ ಸಂಶೋಧ್ಯ ಮೃಚ್ಛೌಚ

ಪೂರ್ವಕಂ ಸ್ನಾತ್ವಾ ದಂತಧಾವನಂ ಕುರ್ಯಾತ್ । ಅತ್ರ ವ್ಯಾವಹಾರಿಕ ಸಂಪ್ರದಾಯೋ
ಚ್ಯತೇ । ತ್ರಿರಾಚಮ್ಯ ದೇಶಕಾಲೌ ಸಂಕೀರ್ತ್ಯ ಮಮ ಕಾಯಿಕ ವಾಚಿಕ ಮಾನಸಿಕ
ಸಾಂಸರ್ಗಿಕ ಜ್ಞಾತಾಜ್ಞಾತಾಸ್ಪೃಷ್ಟಾಸ್ಪೃಷ್ಟ ಭುಕ್ತಾಭುಕ್ತ ಪೀತಾಪೀತ ಸಮಸ್ತ
ಪಾಪಕ್ಷಯದ್ವಾರಾ, ಮಮ ಶರೀರಶುದ್ಧ್ಯರ್ಥಂ ಋಷಿಪಂಚಮೀ ವ್ರತಾಂಗ ಅಪಾ
ವ್ರತವನ್ನು ಪ್ರತ್ಯಕ್ಷವಾಗಿ ನೋಡಿ ಅದನ್ನು ತಿರಸ್ಕರಿಸಿದಕಾರಣ ಇವಳು ಕ್ರಿಮಿರಾಶಿಯಾಗಿರವಳು ಆದರೆ ಆ ವ್ರತಪ್ರದರ್ಶನದ ಮಹಾತ್ಮ್ಯೆಯಿಂದ ಈ ಜನ್ಮದಲ್ಲಿ ಬ್ರಾಹ್ಮಣಪುತ್ರಿಯಾಗಿ ಹುಟ್ಟಿರುವಳು. ಇಷ್ಟೇ ನಿನ್ನ ಮಗಳ ವೃತ್ತಾಂತ ಎಂದು ಹೇಳಲು ಸುಶೀಲೆಯು ಪತಿಯನ್ನು ಕುರಿತು ಸ್ವಾಮಿ ! ತಾವು ಹೇಳಿದ ಋಷಿಪಂಚಮಿ ವ್ರತವಿಧಾನವನ್ನು ನಾನು ಕೇಳಬೇಕೆಂದಿರುವೆನು. ಅದನ್ನು ನನಗೆ ಹೇಳಬೇಕೆಂದು ಕೇಳಿದಳು. ಆಗ ಉದಂಕನು, ಹಾಗಾದರೆ ಕೇಳು ಈ ಋಷಿಪಂಚಮಿವ್ರತವು ಎಲ್ಲ ವ್ರತಗಳಿಗಿಂತ ಬಹಳ ಶ್ರೇಷ್ಠವಾದುದು. ಇದರ ಆಚರಣೆಯಿಂದ ರಜಸ್ವಲಾದೋಷವು ಸಂಪೂರ್ಣವಾಗಿ ಹರಿದುಹೋಗಿ, ಸಕಲ ಸೌಭಾಗ್ಯಗಳೂ ಲಭಿಸುವುವು ಅಲ್ಲದೆ ದುಃಖಗಳು ನಾಶವಾಗಿ ಸುಖಪರಂಪರೆಯು ಕೈಗೂಡುವುದೂ ಇದೆ ವಿಚಾರದಲ್ಲಿ ಧರ್ಮರಾಯನು ಶ್ರೀಕೃಷ್ಣನನ್ನು ಕೇಳಲು, ಶ್ರೀಹರಿಯು ಧರ್ಮರಾಯನಿಗೆ ಹೇಳಿದ ವಿವರವನ್ನು ಕೇಳು, ಎಲೈ ಧರ್ಮರಾಯನೇ ಈ ಋಷಿಪಂಚಮಿವ್ರತವು ಸರ್ವಪಾಪ ಪರಿಹಾರಕವಾದುದು, ಇದರ ಆಚರಣೆಯಿಂದ ಸ್ತ್ರೀಯರು ತಮ್ಮ ಪಾಪಗಳನ್ನು ಪರಿಹರಿಸಿಕೊಂಡು ಶುದ್ಧರಾಗುವರು. ಪುಣ್ಯದಾಯಕವಾದ ವ್ರತಗಳಲ್ಲಿ ಇದಕ್ಕಿಂತ ಅತಿಶಯವಾದುದಿಲ್ಲ, ಎನಲು ಧರ್ಮರಾಯನು, ಎಲೈ ದೇವದೇವನೇ ! ಋಷಿಪಂಚಮಿ ವ್ರತವೆಂದರೇನು ? ಈ ಪೂಜೆಯ ವಿಧಾನ ಹೇಗೆ ? ಈ ವ್ರತಾಚರಣೆಯಿಂದ ಹೇಗೆ ಸ್ತ್ರೀಯರು ಪಾಪವಿಮುಕ್ತರಾಗುತ್ತಾರೆ. ಇದೆಲ್ಲವನ್ನು ನನಗೆ ಹೇಳಬೇಕೆಂದು ಪ್ರಶ್ನೆಮಾಡಿದನು. ಆಗ ಶ್ರೀಕೃಷ್ಣನು ಎಲೈ ಧರ್ಮರಾಯನೇ ಕೇಳು ? ಸ್ತ್ರೀಯರು ರಜಸ್ವಲೆಯರಾಗಿ ಬಹಿಷ್ಠೆಯರಾದಾಗ ಕಂಡು ಆಗಲಿ, ಕಾಣದೆ ಆಗಲಿ, ಸರ್ವಪ್ರಯತ್ನದಿಂದ ಮನೆಯೊಳಗಿದ್ದು ಭಾಂಡಭಾಜನಾದಿಗಳನ್ನು ಮುಟ್ಟದೆ ಹೊರಚ್ಚಾಗಿ ಕುಳಿತಿರಬೇಕು. ಆ ಕಾಲದಲ್ಲಿ ಅವರು ಯಾವ ಕೆಲಸವನ್ನೂ ಮಾಡುವುದಕ್ಕೆ ಯೋಗ್ಯರಲ್ಲವಾದಕಾರಣ ಮನೆಯನ್ನು ಹೊಕ್ಕು ಭಾಂಡಾದಿಗಳನ್ನು ಮುಟ್ಟಬಾರದು ! ಏಕೆಂದರೆ ಪೂರ್ವದಲ್ಲಿ ಲೋಕಕಂಟಕನಾಗಿದ್ದ ವೃತ್ರಾಸುರನನ್ನು ಸಂಹರಿಸಿದಕಾರಣ ದೇವೇಂದ್ರನಿಗೆ ಬ್ರಹ್ಮಹತ್ಯದೋಷ ಪ್ರಾಪ್ತವಾಯಿತು. ಅದನ್ನು ನಿವಾರಿಸಿಕೊಳ್ಳುವುದಕ್ಕಾಗಿ ಇಂದ್ರನು ಬ್ರಹ್ಮನನ್ನು ಮರೆಹೊಕ್ಕು ಬೇಡಿಕೊಂಡನು. ಆಗ ದಯಾಳುವಾದ ಬ್ರಹ್ಮನು ಇಂದ್ರನಿಗೆ ಬಂದಿದ್ದ ಬ್ರಹ್ಮಹತ್ಯದೋಷವನ್ನು ತೆಗೆದು ಅಗ್ನಿಯ ಪ್ರಥಮಜ್ವಾಲೆಯಲ್ಲಿಯೂ, ನದಿಗಳ ಪೂರ್ಣಪ್ರವಾಹದಲ್ಲಿಯೂ, ಮರ ಗಿಡ ಬೆಟ್ಟಗಳಲ್ಲಿಯೂ ಒಂದೊಂದು ಭಾಗವನ್ನು ಇರಿಸಿ ಸ್ತ್ರೀಯರಲ್ಲಿ ನಾಲ್ಕನೆಯ ಭಾಗವನ್ನಿಟ್ಟನು. ಆದಕಾರಣ ದೇವೇಂದ್ರನ ಬ್ರಹ್ಮಹತ್ಯಾದೋಷವು ಪರಿಹಾರವಾಯಿತು. ಆ ದೋಷದಿಂದ ರಜಸ್ವಲೆಯರಾದಾಗ ಸ್ತ್ರೀಯರು ದೂಷಿತರಾಗುವರು. ಈ ವಿಚಾರವನ್ನು ಮೊದಲೆ ಹೇಳಿರುವೆನು. ಮೊದಲನೆದಿನ ಚಂಡಾಲಿಯೂ, ಎರಡನೆದಿವಸ ಬ್ರಹ್ಮಘಾತಕಿಯೂ, ಮೂರನೆದಿನದಲ್ಲಿ ರಜಕಿಯೂ ಆಗುವ ಕಾರಣ ರಜಸ್ವಲೆಯಾದ ಸ್ತ್ರೀಯರು ಮುಟ್ಟಾದ ಮೂರುದಿನಗಳು ಪ್ರತ್ಯೇಕವಾಗಿದ್ದು ನಾಲ್ಕನೆಯ ದಿನ ಶುದ್ಧಸ್ನಾನವಾದಮೇಲೆ ಮನೆಗೆ ಬರಬೇಕು. ಹಾಗಿಲ್ಲದೆ ಜ್ಞಾನದಿಂದಾಗಲಿ ಅಜ್ಞಾನದಿಂದಾಗಲಿ ಯಾವ ಸ್ತ್ರೀಯು ರಜಸ್ವಲಾದೋಷವನ್ನು ಪಡೆಯುತ್ತಾಳೆಯೋ ಅಂಥವಳು ಆ ದೋಷಪರಿಹಾರಕ್ಕಾಗಿ ಋಷಿಪಂಚಮಿವ್ರತವನ್ನು ಮಾಡಬೇಕು, ಇದರಿಂದ ಸರ್ವಪಾಪಗಳೂ ನಾಶವಾಗಿ ರೋಗಾದ್ಯುಪದ್ರವಗಳು ಹರಿದುಹೋಗಿ ವ್ರತಿಗಳು ಪರಿಶುದ್ಧರಾಗುವರು. ಚತುರ್ವರ್ಣದವರಾದ ಬ್ರಹ್ಮಕ್ಷತ್ರಿಯ ವೈಶ್ಯ ಶೂದ್ರರೂ ಸಹ ಈ ವ್ರತವನ್ನು ಮಾಡಬಹುದು ! ಇಂಥ ಪುಣ್ಯಕರವಾದ ಋಷಿಪಂಚಮಿವ್ರತದ

ವಿಚಾರದಲ್ಲಿ ಪ್ರಸಿದ್ಧವಾದ ಒಂದು ಇತಿಹಾಸವುಂಟು. ಅದನ್ನು ಲಾಲಿಸು ಎಂದು ಶ್ರೀಕೃಷ್ಣನು ಧರ್ಮರಾಯನಿಗೆ ಋಷಿಪಂಚಮೀ ವ್ರತೇತಿಹಾಸವನ್ನು ವಿವರಿಸಿ ಹೇಳಲು ಆರಂಭಿಸಿದನು.

ಕೃತಯುಗದಲ್ಲಿ ಧರ್ಮಾತ್ಮನಾಗಿಯೂ ಸತ್ಯಸಂಧನಾಗಿಯೂ, ಪ್ರಜೆಗಳನ್ನು ತನ್ನ ಮಕ್ಕಳಂತೆ ಧರ್ಮದಿಂದ ಪರಿಪಾಲಿಸುತ್ತಿದ್ದ ಸೇನಜಿತನೆಂಬ ರಾಜನಿದ್ದನು. ಅವನ ರಾಜ್ಯದಲ್ಲಿ ಭೂತದಯಾಪರನಾಗಿ ವೇದವೇದಾಂಗಪಾರಂಗತನಾಗಿಯೂ ಇದ್ದ ಸುಮಿತ್ರನೆಂಬ ಬ್ರಾಹ್ಮಣನು ಕೃಷಿವರ್ತನದಿಂದ ಜೀವನಮಾಡುತ್ತಿದ್ದನು. ಅವನಿಗೆ ಮಹಾಪತಿವ್ರತೆಯಾಗಿ ಅನುಕೂಲೆಯಾಗಿದ್ದ ಜಯಶ್ರೀ ಎಂಬ ಹೆಸರುಳ್ಳ ಹೆಂಡತಿಯಿದ್ದಳು. ಅವಳು ತನ್ನ ಗಂಡನ ಕೃಷಿಕಾರ್ಯಗಳಿಗೆ ಅನುಕೂಲವಾಗಿ ಸಕಲ ಪ್ರಾಣಿಗಳನ್ನು ಪ್ರೀತಿಯಿಂದ ಸಲಹುತ್ತ ಹೆಚ್ಚು ವೆಚ್ಚಕ್ಕೆ ಅವಕಾಶಕೊಡದೆ ಮಳೆಗಾಲದಲ್ಲಿ ಹೊಲ ಮನೆ ಗದ್ದೆಗಳಿಗೂ ತಾನೇ ಹೋಗುತ್ತ ಯಾರನ್ನೂ ನಂಬದೆ ತಾನೇ ಎಲ್ಲಾ ಕೆಲಸಗಳನ್ನು ನಿರ್ವಹಿಸುತ್ತಿದ್ದಳು. ಆದ ಕಾರಣ ಅವಳು ರಜಸ್ವಲೆಯಾದರೂ, ಮನೆಯ ಒಳಗೆ ಇದ್ದುಕೊಂಡು ಭಾಂಡಭಾಜನಗಳನ್ನು ಮುಟ್ಟಿ ಏಕವಾಗಿ , ಬೆರೆದ ಮುಟ್ಟಿನಿಂದಕೂಡಿ ಅಶುಚಿಯಾದಳು. ಕಾಲಾನಂತರದಲ್ಲಿ ಇವರಿಬ್ಬರೂ ಈ ಲೋಕವನ್ನು ಬಿಟ್ಟು ಪರಲೋಕವನ್ನು ಸೇರಿದಮೇಲೆ ಜಯಶ್ರೀಯು ತನ್ನ ರಜಸ್ಸಂಪರ್ಕದೋಷದಿಂದ ಹೆಣ್ಣು ನಾಯಿಯಾಗಿ ಜನಿಸಿದಳು. ಅವಳ ಗಂಡನು ಅದೇ ದೋಷದಿಂದ ಎತ್ತಾಗಿ ಹುಟ್ಟಿದನು. ಆದರೂ ಅವರಿಬ್ಬರೂ ಬೇರೆಬೇರೆ ಜಾತಿಯಲ್ಲಿ ಹುಟ್ಟಿದರೂ ತಮ್ಮ ಪೂರ್ವಪುಣ್ಯಫಲದಿಂದ ತನ್ನಮಗನಾದ ಸುಮತಿಯೆಂಬುವನ ಬಳಿಯಲ್ಲೇ ಇದ್ದುಕೊಂಡು ಕಾಲವನ್ನು ಕಳೆಯುತ್ತಿದ್ದರು. ಸುಮತಿಯು ಮಾತಾಪಿತೃಗಳಲ್ಲಿ ಭಕ್ತಿಯುಕ್ತನಾಗಿ ಅವರ ಮಾತಿನಂತೆ ನಡೆಯುತ್ತಿದ್ದಕಾರಣ ಒಂದಾನೊಂದುದಿನ ತಮ್ಮ ತಂದೆಯ ಶ್ರಾದ್ಧವು ಬಂದ ಕಾಲದಲ್ಲಿ ತನ್ನ ಹೆಂಡತಿಯನ್ನು ಕುರಿತು, ಎಲೈ ಪತಿವ್ರತಾಗ್ರಣಿಯೇ ಈದಿನ ನಮ್ಮ ತಂದೆಯ ಶ್ರಾದ್ಧವಾಗಬೇಕು, ನೀನು ಭಕ್ತಿವಂತಳಾಗಿ ಸಕಲ ಭಕ್ಷ್ಯಭೋಜ್ಯ ಸಹಿತವಾದ ಪಾಕವನ್ನು ಮಾಡು. ಬ್ರಾಹ್ಮಣರಿಗೆ ಭೋಜನಮಾಡಿಸಿ ಪಿತೃಗಳನ್ನು ತೃಪ್ತಿಪಡಿಸಬೇಕು ಎಂದು ಹೇಳಲು ಅವನ ಹೆಂಡತಿಯಾದ ಚಂದ್ರಮತಿಯು ಭಕ್ತಿಯುಕ್ತಳಾಗಿ ಗಂಡನ ಅಪ್ಪಣೆಯಂತೆ ಷಡ್ರಸೋಪೇತವಾದ ಅಡಿಗೆಗಳನ್ನು ಮಾಡಿದಳು. ಆದರೆ ಅಡಿಗೆಯಲ್ಲಿ ಪಾಯಸದ ಪಾತ್ರೆಯಮೇಲೆ ಮುಚ್ಚದೆ ತೆರೆದಿದ್ದಕಾರಣ ಆಕಾಶ ಮಾರ್ಗದಲ್ಲಿ ಸತ್ತ ಹಾವನ್ನು ಎತ್ತಿಕೊಂಡು ಹೋಗುತ್ತಿದ್ದ ಹದ್ದಿನ ಬಾಯಿಯಿಂದ ಆ ಹಾವಿನ ವಿಷವು ಪಾತ್ರೆಗೆ ಬಿದ್ದು ಅದು ವಿಷಮಯವಾಗಿ ಹೋಯಿತು. ಅದು ಯಾರಿಗೂ ತಿಳಿಯದಿದ್ದಕಾರಣ ಮನೆಗೆ ಕಾವಲಾಗಿ ಕುಳಿತಿದ್ದ ನಾಯಿ ಇದನ್ನು ಕಂಡು ಅಯ್ಯೋ? ನಿರಪರಾಧಿಗಳಾದ ಬ್ರಾಹ್ಮಣರು ಈ ವಿಷಮಿಶ್ರವಾದ ಪಾಯಸವನ್ನು ತಿಂದು ಸಾಯುವರಲ್ಲಾ. ಕನಿಕರಪಟ್ಟು ತಾನು ಆ ಪಾತ್ರೆಯನ್ನು ಮುಟ್ಟಿಬಿಟ್ಟಿತು. ಇದನ್ನು ಕಂಡು ಕುಪಿತಳಾದ ಚಂದ್ರಮತಿಯು ಬೇರೆ ಅಡಿಗೆಮಾಡಿ ಶ್ರಾದ್ಧವನ್ನು ಮುಗಿಸಿ ಎಲ್ಲವೂ ಆದಬಳಿಕ ಎಂಜಲೆಲೆಯನ್ನು ಕೂಡ ಹೊರಗೆ ಹಾಕದೆ ಪಾಯಸವನ್ನು ಮುಟ್ಟಿದ ತಪ್ಪಿಗಾಗಿ ಅದನ್ನು ಉರಿಯುವ ಕೊಳ್ಳಿಯಿಂದ ಹೊಡೆದು ಓಡಿಸಿದಳು. ಆದಕಾರಣ ನಾಯಿಗೆ ಆದಿನ ಆಹಾರವೇ ಇಲ್ಲವಾಗಿ ತಪಿಸುತ್ತ ಸಾಯಂಕಾಲವಾದಮೇಲೆ ತನ್ನ ಗಂಡನಾದ ಎತ್ತಿನ ಬಳಿಗೆ ಬಂದು ನಡೆದ ಸಂಗತಿಯನ್ನೆಲ್ಲ ನಿಜವಾಗಿ ಹೇಳಿ ಈದಿನ ನನಗೆ ಆದ ಶಿಕ್ಷೆಗೂ ಆಹಾರವಿಲ್ಲದೆ ಇರುವದಕ್ಕೂ ಬಹಳ ಸಂಕಟವಾಗುತ್ತಿದೆ.

ಏನುಮಾಡಲಿ ಎಂದು ಮೊರೆಯಿಟ್ಟಳು. ಆಗ ಆ ಎತ್ತು ಅಯ್ಯೋ! ನನ್ನ ಸ್ಥಿತಿಯು ನಿನಗಿಂತಲೂ ಅಧಿಕವಾಗಿದೆ ಬೆಳಗಿನಿಂದ ಸಾಯಂಕಾಲದವರೆಗೂ ಉತ್ತು ಬೇಜಾರಾಗಿ ಮನೆಗೆ ಬಂದರೂ ನನಗೆ ಹುಲ್ಲುನೀರಿಗೆ ಗತಿಯಿಲ್ಲ. ನಾವಿಬ್ಬರೂ ಪೂರ್ವಜನ್ಮದಲ್ಲಿ ಮಹಾ ಪಾಪಮಾಡಿ ಹೀಗೆ ಹುಟ್ಟಿದೇವೆ. ಇದನ್ನು ಅನುಭವಿಸದೆ ತೀರದು. ಆ ಪಾಪಶೇಷದಿಂದ ಈದಿನ ಶ್ರಾದ್ಧದಲ್ಲಿ ಕೊಟ್ಟ ಆಹಾರವೂ ಸಿಕ್ಕಲಿಲ್ಲ—ಎಂದು ಅನ್ಯೋನ್ಯವಾಗಿ ಕಷ್ಟಸುಖಗಳನ್ನು ಹೇಳಿಕೊಳ್ಳುತ್ತ ಕೊರಗುತ್ತಿದ್ದವು. ಆಗ ಮಲಗಿ ನಿದ್ರೆಮಾಡುತ್ತಿದ್ದ ಸುಮತಿಯು ನಿಶಿರಾತ್ರಿಯಲ್ಲಿ ಎಚ್ಚರಗೊಂಡು ಎತ್ತು ನಾಯಿಗಳೆರಡೂ ಮನುಷ್ಯಭಾಷೆಯಿಂದ ಮಾತಾಡಿಕೊಳ್ಳುತ್ತಿರುವುದನ್ನು ಕೇಳಿ ಆ ಸಂಭಾಷಣೆಯಿಂದ ಇವರಿಬ್ಬರೂ ತನ್ನ ಜನನೀಜನಕರೆಂದು ತಿಳಿದು ರಾತ್ರಿ ಜಾಗರಣೆಮಾಡಿ ಬಹಳವಾಗಿ ವಿಚಾರಪಟ್ಟು ಬೆಳಗಾಗುತ್ತಲೆ ಎತ್ತಿಗೂ ನಾಯಿಗೂ ಚೆನ್ನಾಗಿ ಆಹಾರವನ್ನು ಕೊಟ್ಟು ಅವರ ದುರವಸ್ಥೆಯನ್ನು ಹೋಗಲಾಡಿಸಬೇಕೆಂದು ಯೋಚಿಸಿ ಮನೆಯನ್ನು ಬಿಟ್ಟು ಅರಣ್ಯಕ್ಕೆ ಹೊರಟು ಮಹರ್ಷಿಗಳನ್ನು ಕಂಡು ನಮಸ್ಕರಿಸಿ ಅವರಿಗೆ ತಾನು ಬಂದಿರುವ ವೃತ್ತಾಂತವನ್ನು ಹೇಳಿ ತನ್ನ ತಂದೆತಾಯಿಗಳ ಕಷ್ಟವನ್ನು ನಿವಾರಣೆಮಾಡಿಕೊಡಬೇಕೆಂದು ಅವರನ್ನು ಬೇಡಿಕೊಂಡನು. ಅವನ ಭಕ್ತಿಗೆ ಮೆಚ್ಚಿ ಸಪ್ತಮಹರ್ಷಿಗಳು ಕನಿಕರಪಟ್ಟು ಎಲೈ ಪುತ್ರಶ್ರೇಷ್ಠನೇ! ನಿನ್ನ ಅಭಿಪ್ರಾಯವೆಲ್ಲ ತಿಳಿಯಿತು. ನಿನ್ನ ತಂದೆತಾಯಿಗಳು ಪೂರ್ವಜನ್ಮದಲ್ಲಿ ಮಾಡಿದ ರಜಸ್ಸಂಪರ್ಕದೋಷದಿಂದ ಎತ್ತು ನಾಯಿಗಳಾಗಿ ಹುಟ್ಟಿ ಈ ಜನ್ಮದಲ್ಲಿ ನಿನ್ನ ಮನೆಯನ್ನು ಸೇರಿರುವರು. ಒಂದು ಪುಣ್ಯಪ್ರಭಾವದಿಂದ ಅವರು ನಿನ್ನಲ್ಲೇ ಸೇರಿರುವುದು ಒಳ್ಳೆಯದು, ನಿಮ್ಮತಾಯಿ ಪೂರ್ವಜನ್ಮದಲ್ಲಿ ರಜಸ್ವಲೆಯಾದರೂ ಹೊರಗಿರದೆ ಮನೆಯಲ್ಲೇ ಇದ್ದುಕೊಂಡು ಭಾಂಡಭಾಜನಗಳನ್ನು ಮುಟ್ಟಿದಳು, ಆ ಮುಟ್ಟಿನ ಸಂಪರ್ಕದೋಷವುಂಟಾದಕಾರಣ ಅವರಬ್ಬರಿಗೂ ಈ ಸ್ಥಿತಿಯುಂಟಾಯಿತು. ಆದರೆ ಸತ್ಯಸಂಧರಾಗಿ ಕೃಷಿವರ್ತನೆಯಲ್ಲಿದ್ದ ಪುಣ್ಯದಿಂದ ಅವರು ಜನ್ಮದಲ್ಲಿ ನಿನ್ನ ಮನೆಯನ್ನೇ ಸೇರಿದರು. ನೀನು ಅವರ ಈ ದುಃಸ್ಥಿತಿಯನ್ನು ಹೋಗಲಾಡಿಸಬೇಕಾದರೆ ಶಾಸ್ತ್ರೋಕ್ತವಾಗಿ ಹೇಳಿರುವಂತೆ ಏಳುವರ್ಷಕಾಲ ಋಷಿಪಂಚಮೀವ್ರತವನ್ನು ಆಚರಿಸಿ ಉದ್ಯಾಪನೆಯನ್ನು ಮಾಡಿ ಅದರ ಫಲವನ್ನು ಅವರಿಗೆ ಧಾರೆಯೆರೆದುಕೊಟ್ಟರೆ ಆ ಪುಣ್ಯದಿಂದ ಅವರು ಮುಕ್ತರಾಗುವರು, ಇನ್ನು ಆ ವ್ರತವಿಧಾನವನ್ನು ಹೇಳುವೆವು ಕೇಳು, ಭಾದ್ರಪದ ಶುದ್ಧ ಪಂಚಮಿಯ ದಿನ ಈ ವ್ರತವನ್ನು ಮಾಡಬೇಕಾದವರು ವಿಧಿವತ್ತಾಗಿ ಗಂಗಾದಿಪುಣ್ಯನದಿಗಳಲ್ಲಾಗಲಿ ಜಲಾಶಯಗಳಲ್ಲಾಗಲಿ ಮಹಾನದೀ ಸ್ತೋತ್ರಪುರಸ್ಸರವಾಗಿ ಸಂಕಲ್ಪಮಾಡಿ ಉತ್ತರಾಣಿಯ ಕಡ್ಡಿಗಳನ್ನು ತಂದು ವನಸ್ಪತಿಯನ್ನು ಪ್ರಾರ್ಥಿಸಿ, ಮಂತ್ರವನ್ನು ಜಪಿಸುತ್ತ ಮುನ್ನೂರರವತ್ತು ಸಾರಿ ದಂತಧಾವನ ಮಾಡಿಕೊಂಡು ನೂರೆಂಟು ಅಘಮರ್ಷಣ ಸ್ನಾನವನ್ನು ತೀರಿಸಿಕೊಂಡು ಸ್ಥಂಡಿಲಪರಿಸ್ತರಣ ಸಮೇತವಾಗಿ ಅಗ್ನಿಯನ್ನು ಪ್ರತಿಷ್ಠಿಸಿ ಪಂಚಗವ್ಯವನ್ನು ಪೂಜಿಸಿ ಪ್ರಾಶನೆ ಮಾಡಬೇಕು. ಅನಂತರದಲ್ಲಿ ಮಡಿಯುಟ್ಟು ನಿರ್ಮಲವಾದ ಮನಸ್ಸಿನಿಂದ ಭಗವಂತನನ್ನು ಧ್ಯಾನಿಸುತ್ತ ಗೋಮಯದಿಂದ ಸಾರಿಸಿ ರಂಗವಲ್ಲಿಗಳನ್ನಿಟ್ಟು ಅಲಂಕರಿಸಿದ ಪರಿಶುದ್ಧವಾದ ಸ್ಥಳದಲ್ಲಿ ಪೀಠವನ್ನು ಹಾಕಿ ಅದರಮೇಲೆ ಗೋಧಿ ಅಕ್ಕಿ ಎಳ್ಳುಗಳನ್ನು ಹರಡಿ ಕಲಶವನ್ನಿಟ್ಟು ವಸ್ತ್ರಗಳನ್ನು ಫಲಗಳನ್ನು ಆ ಕಲಶಕ್ಕೆ ಇಟ್ಟು ಅಲಂಕರಿಸಿ, ನದಿಯ ಕಲ್ಲುಗಳನ್ನು ಕಲಶೋದಕದಲ್ಲಿ ಹಾಕಿ ಪ್ರತ್ಯೇಕಪ್ರತ್ಯೇಕವಾಗಿ ಸಪ್ತಋಷಿಗಳನ್ನೂ ಅಗಸ್ತ್ಯರನ್ನೂ ಅರುಂಧತಿಯನ್ನೂ ಆವಾಹಿಸಿ ವಿಧಿಯಲ್ಲಿ ಹೇಳಿರುವಂತೆ ಧ್ಯಾನ ಆವಾಹನೆ ಮೊದಲ್ಗೊಂಡು ಷೋಡಶೋಪಚಾರ

ಗಳಿಂದ ಪೂಜಿಸಿ, ಧೂಪದೀಪ ನೈವೇದ್ಯಗಳನ್ನು ಸಮರ್ಪಿಸಿ ಬಗೆಬಗೆಯಾದ ವೇದಮಂತ್ರ ಗಳಿಂದ ಋಷಿಗಳನ್ನು ಸ್ತೋತ್ರಮಾಡಬೇಕು. ಎಂದು ಹೇಳಲು ಸಂತುಷ್ಟನಾದ ಸುಮತಿಯು ಋಷಿಗಳಿಗೆ ವಂದಿಸಿ ಅವರ ಅಪ್ಪಣೆಯನ್ನು ಪಡೆದು ತನ್ನ ಊರಿಗೆ ಬಂದು ಪತ್ನೀಸಹಿತನಾಗಿ ಭಕ್ತಿಯಿಂದ ಋಷಿಪಂಚಮೀ ವ್ರತವನ್ನು ಮಾಡಿ ಉದ್ಯಾಪನೆಯನ್ನು ಮುಗಿಸಿ ತಾನು ಮಾಡಿದ ಋಷಿಪಂಚಮೀ ವ್ರತದ ಫಲವನ್ನು ತನ್ನ ತಂದೆತಾಯಿಯರಿಗೆ ಧಾರೆಯೆರೆದನು. ಅನಂತರದಲ್ಲಿ ಸುಮತಿಯು ಮಾಡಿದ ಋಷಿಪಂಚಮೀ ವ್ರತಪ್ರಭಾವದಿಂದ ಅವನ ತಂದೆ ತಾಯಿಗಳಿಗೆ ಪಾಪವಿಮುಕ್ತಿಯುಂಟಾಗಿ ದಿವ್ಯಪದವಿಯುಂಟಾಯಿತು. ಕೂಡಲೇ ನಾಯಿ ಜನ್ಮದಲ್ಲಿದ್ದ ಅವನ ತಾಯಿಗೆ ದಿವ್ಯದೇಹವುಂಟಾಗಿ ವಿಮಾನವನ್ನು ಹತ್ತಿ ಸ್ವರ್ಗಲೋಕ ವನ್ನು ಸೇರಿದಳು. ಎತ್ತಿನ ರೂಪದಿಂದಿದ್ದ ತಂದೆಯೂ ಸಹ ತನ್ನ ಪಾಪರಾಶಿಗಳನ್ನು ಸುಟ್ಟು ದಿವ್ಯದೇಹವನ್ನ ಧರಿಸಿ ಶಿವಲೋಕವನ್ನು ಸೇರಿಸಿದನು. ಆದಕಾರಣ ಈ ಋಷಿಪಂಚಮೀ ವ್ರತದಿಂದ ಸಕಲ ಪಾಪಗಳೂ ಪರಿಹಾರವಾಗಿ ಶ್ರೇಯಃ ಪರಂಪರೆಯು ಪ್ರಾಪ್ತವಾಗುವುದು. ಈ ವ್ರತವನ್ನಾಚರಿಸುವ ಕಾಲದಲ್ಲಿ ಸಾಧಕನು ಧಾನ್ಯಾಹಾರಾದಿಗಳನ್ನು ಮುಟ್ಟದೆ ಕಂದ ಮೂಲಫಲಗಳನ್ನಾಗಲಿ ಅಥವಾ ಶಮ್ಯಾಕಾದಿ ತೃಣಧಾನ್ಯದ ಆಹಾರವನ್ನಾಗಲಿ ಮಾಡುತ್ತ ನಿಯಮದಿಂದಿರಬೇಕು. ಹೀಗಿದ್ದು ಈ ವ್ರತವನ್ನು ಮಾಡಿದರೆ ಇದರಿಂದ ಮನೋವಾಕ್ಕಾಯ ಗಳಿಗೆ ಸಂಬಂಧಪಟ್ಟ ಪಾಪಗಳೆಲ್ಲವೂ ಪರಿಹಾರವಾಗಿ ಕೇವಲವಾದ ಪುಣ್ಯವೇ ಲಭಿಸು ವುದು. ಸಕಲ ದೇವತೆಗಳ ಪ್ರಸನ್ನತೆಯಿಂದ ಸರ್ವತೀರ್ಥಗಳ ಸಾನ್ನಿಧ್ಯದಿಂದ ಪಡೆಯುವ ಫಲವನ್ನು ಈ ವ್ರತಾಚರಣೆಯಿಂದಲೇ ಪಡೆಯಬಹುದು. ಲೋಕದಲ್ಲಿ ಭಕ್ತಿಯಿಂದ ಈ ವ್ರತವನ್ನು ಮಾಡತಕ್ಕ ಸ್ತ್ರೀಯರು ಸೌಭಾಗ್ಯಶಾಲಿನಿಯರಾಗಿ ಪುತ್ರಪೌತ್ರಾದಿ ಸಂಪತ್ತಿ ಗಳನ್ನು ಪಡೆದು ಇಹಲೋಕದಲ್ಲಿ ಸುಖವಾಗಿ ಬಾಳಿ ಪರಲೋಕದಲ್ಲಿ ಸದ್ಗತಿಯನ್ನು ಪಡೆ ಯುವರೆಂಬುದರಲ್ಲಿ ಸ್ವಲ್ಪವೂ ಸಂಶಯವಿಲ್ಲ. ವ್ರತಗಳಲ್ಲಿ ಸರ್ವೋತ್ತಮವೆನಿಸಿದ ಈ ಋಷಿ ಪಂಚಮೀವ್ರತವನ್ನು ನೀನು ಕೇಳಿದ ಕಾರಣ ವಿವರಿಸಿ ಹೇಳಿದೆನೆಂದು ಶ್ರೀಕೃಷ್ಣಮೂರ್ತಿಯು ಧರ್ಮರಾಯನಿಗೆ ನಿರೂಪಿಸಿದ ಕಥೆಯನ್ನು ಬ್ರಹ್ಮನು ಶ್ವೇತಾಶ್ವನೆಂಬ ರಾಜನಿಗೆ ಹೇಳಿದ ನೆಂಬಲ್ಲಿಗೆ ಋಷಿಪಂಚಮೀ ವ್ರತಕಥಾಸಂಗ್ರಹಂ ಸಂಪೂರ್ಣಂ. ಶ್ರೀಃ. ಶ್ರೀಃ. ಶ್ರೀಃ.

೪. ಅಥ ಶ್ರೀಮದನಂತಪದ್ಮನಾಭ ವ್ರತಂ

ಅತ್ರ ವ್ರತನಿರ್ಣಯಃ

ತತ್ರೋದಯೇ ತ್ರಿಮುಹೂರ್ತವ್ಯಾಪಿನೀ ಚತುರ್ದಶೀಗ್ರಾಹ್ಯಾ ಇತಿ ಮುಖ್ಯ ಪಕ್ಷಃ । ದ್ವಿಮುಹೂರ್ತವ್ಯಾಪಿನ್ಯಪಿ ಅನುಕಲ್ಪಃ । ದ್ವಿಮುಹೂರ್ತ ನ್ಯೂನತ್ವಾತ್ ಪೂರ್ವೈವ । ದಿನದ್ವಯೇ ಸೂರ್ಯೋದಯವ್ಯಾಪಿತ್ವೇ ಪೂರ್ಣತ್ವಾತ್ ಪೂರ್ವೈವ । ಅತ್ರ ಪೂರ್ವಾಹ್ನಮೇವ ಮುಖ್ಯ ಕರ್ಮಕಾಲಃ । ತದಭಾವೇ ಮಧ್ಯಾಹ್ನೇಽಪಿ ಕರ್ತವ್ಯಂ ॥ ಈ ವ್ರತವನ್ನು ಭಾದ್ರಪದ ಶುದ್ಧ ಚತುರ್ದಶಿಯ ದಿನ ಆಚರಿಸಬೇಕು. ಆ ದಿನ ಮೂರು ಮುಹೂರ್ತದವರೆಗೆ ಚತುರ್ದಶಿ ಇದ್ದರೆ ಉತ್ತಮ ಎರಡು ಮುಹೂರ್ತ ವ್ಯಾಪಿನಿಯಾಗಿದ್ದರೆ ಮಧ್ಯಮ ಎರಡು ಮುಹೂರ್ತಕ್ಕಿಂತಲೂ ಕಡಿಮೆ ಯಿದ್ದರೆ ಹಿಂದಿನ ದಿನ ಸೂರ್ಯೋದಯಕ್ಕೆ ಸರಿಯಾಗಿ ಸಂಪೂರ್ಣ ಚತುರ್ದಶಿ ಇರುವಕಾರಣ ಪೂರ್ವದಿನವೇ ಮಾಡಬೇಕು. ಈ ವ್ರತಕ್ಕೆ ಪೂರ್ವಾಹ್ನವೇ ಮುಖ್ಯ. ಕಾಲ ಆಗ ಅನುಕೂಲವಿಲ್ಲವಿದ್ದರೆ ಅಪರಾಹ್ಣದಲ್ಲಿ ಮಾಡುವುದು ಗೌಣ. ಇದನ್ನು ಭಕ್ತಿವಂತರಾದ ಗಂಡಸರೂ ಹೆಂಗಸರೂ ಮಾಡಬಹುದು ಎಂದು ಧರ್ಮಸಿಂಧುವಿನಲ್ಲಿ ಹೇಳಿದೆ.

ಅಥ ಸಾಧಕಃ ಮಂಗಳಸ್ನಾನಂ ಕೃತ್ವಾ । ನಿರ್ವರ್ತಿತ ನಿತ್ಯಕರ್ಮಾನುಷ್ಠಾನಸ್ಸನ್, ಮಂಟಪಾಲಂಕಾರಂ ಕೃತ್ವಾ ಸಂಪಾದಿತ ಸರ್ವೋಪಕರಣಸ್ಸನ್ ವ್ರತನಿಯಮಾರ್ಥ ಮಾಸನೇ ಉಪವಿಶ್ಯ ತ್ರಿರಾಚಮ್ಯ ದೇಶಕಾಲೌ ಸಂಕೀರ್ತ್ಯ ತದನಂತರಂ ಸಂಕಲ್ಪಂ ಕುರ್ಯಾತ್–ಏವಂಗುಣ ವಿಶೇಷಣ ವಿಶಿಷ್ಟಾಯಾಂ ಶುಭತಿಥೌ ಮಮೋಪಾತ್ತ ದುರಿತಕ್ಷಯದ್ವಾರಾ ಶ್ರೀ ಪರಮೇಶ್ವರ ಪ್ರೀತ್ಯರ್ಥಂ ವರ್ಷೇ ವರ್ಷೇ

ಏತದ್ವರ್ಷಪ್ರಯುಕ್ತ ಶ್ರೀಮದನಂತಪದ್ಮನಾಭ ದೇವತಾಮುದ್ದಿಶ್ಯ ಶ್ರೀಮದನಂತಪದ್ಮನಾಭ ದೇವತಾಪ್ರೀತ್ಯರ್ಥಂ ಶ್ರೀಮದನಂತಪದ್ಮನಾಭ ವ್ರತಾಂಗ ಯಮುನಾಪೂಜಾಂ ಕರಿಷ್ಯೇ । ಇತಿ ಸಂಕಲ್ಪ್ಯ । ನದೀಂ, ತಟಾಕಂ. ವಾಪೀಂ ವಾ ಗತ್ವಾ ಯಮುನಾ ಪೂಜಾಂ ಕೃತ್ವಾ । ಅಥ ಯಮುನಾಪೂಜಾ ವಿಧಿಃ । ಯಮುನಾ ಕಲಶಂ ಗೃಹಮಾನೀಯ ಮಂಗಳವಾದ್ಯೈಸ್ಸಹ । ತದುದಕಂ ಅನಂತಪೂಜಾ ಕಲಶೇಷು ನಿಕ್ಷಿಪ್ಯ ತದಗ್ರೇ ಸಪ್ತಫಣವತ್ಕೃತ ದರ್ಭಗ್ರಂಥೀಂಶ್ಚ ನಿಧಾಯ । ಆಮ್ರಪಲ್ಲವ ವಸ್ತ್ರಾದಿಭಿರಲಂಕೃತ್ಯ ನಾರಿಕೇಳಫಲಂ ನಿಧಾಯ । ಶ್ರೀ ಯಮುನಾದೇವೀಂ ಪೂಜಯೇತ್ ॥ ಯಮುನಾ ಪೂಜಾವಿಧಾನಂ ॥

ಅಥ ಯಮುನಾಪೂಜಾ

ಲೋಕಪಾಲಸ್ತುತಾಂ ದೇವೀಂ ಇಂದ್ರನೀಲಸಮಪ್ರಭಾಂ ॥ ಯಮುನೇ ತ್ವಾಮಹಂಧ್ಯಾಯೇತ್ಸರ್ವಕಾಮ್ಯಾರ್ಥಸಿದ್ಧಯೇ ॥ ಶ್ರೀಯಮುನಾದೇವ್ಯೈ ನಮಃ ॥ ಧ್ಯಾನಂ ಸಮರ್ಪಯಾಮಿ ॥ ಸರಸ್ವತಿ ನಮಸ್ತುಭ್ಯಂ ಸರ್ವಕಾಮಪ್ರದಾಯಿನಿ ॥ ಆಗಚ್ಛ ದೇವಿ ಯಮುನೇ ವ್ರತಸಂಪೂರ್ತಿಹೇತವೇ ॥ ಆವಾಹನಂ ಸಮರ್ಪಯಾಮಿ ॥ ಸಿಂಹಾಸನಸಮಾರೂಢೇ ಜೀವಶಕ್ತಿಸಮನ್ವಿತೇ । ಸರ್ವಲಕ್ಷಣ ಸಂಪೂರ್ಣೇ ಯಮುನಾಯೈ ನಮೋಽಸ್ತು ತೇ ॥ ಆಸನಂ ಸಮರ್ಪಯಾಮಿ ॥ ರುದ್ರಪಾದೇ ನಮಸ್ತುಭ್ಯಂ ಸರ್ವಲೋಕಹಿತೇ ಶುಭೇ । ಸರ್ವಪಾಪಪ್ರಶಮನೀ ತರಂಗಿಣ್ಯೈ ನಮೋಽಸ್ತು ತೇ ॥ ಪಾದಯೋಃ ಪಾದ್ಯಂ ಸಮರ್ಪಯಾಮಿ ॥ ಗರುಡಾಗ್ರಜ ಸಂಜಾತೇ ಶಂಕರಪ್ರಿಯಭಾಮಿನಿ। ಸರ್ವಕಾಮಪ್ರದೇ ದೇವಿ ಯಮುನೇ ತೇ ನಮೋ ನಮಃ ॥ ಅರ್ಘ್ಯಮರ್ಘ್ಯಂ ಸಮರ್ಪಯಾಮಿ ॥ ವಿಷ್ಣುಪಾದೋದ್ಭವೇ ದೇವಿ ಸರ್ವಾಭರಣಭೂಷಿತೇ ॥ ಕೃಷ್ಣಮೂರ್ತೇ ಮಹಾದೇವಿ ಕೃಷ್ಣವೇಣ್ಯೈ ನಮೋ ನಮಃ ॥ ಆಚಮನೀಯಂ ॥ ಸರ್ವಪಾಪಹರೇ ದೇವಿ ವಿಶ್ವೇಶ ಪ್ರಿಯದರ್ಶಿನಿ ॥ ಸೌಭಾಗ್ಯಂ ದೇಹಿ ಮೇ ದೇವಿ ಯಮುನಾಯೈ ನಮೋಽಸ್ತು ತೇ ॥ ಮಧುಪರ್ಕಂ ಸಮರ್ಪಯಾಮಿ ॥ ನಂದಪಾದೇ ನಮಸ್ತುಭ್ಯಂ ಶಂಕರಾರ್ಧಶರೀರಿಣಿ । ಸರ್ವಲೋಕಹಿತೇ ದೇವಿ ಭೀಮರಥ್ಯೈ ನಮೋಽಸ್ತು ತೇ ॥ ಆಪ್ಯಾಯಸ್ವೇತಿ ಪಂಚಾಮೃತಸ್ನಾನಂ ॥ (ಗಣಪತಿವ್ರತ ನೋಡಿ) ಸಿಂಹಪಾದೋತ್ತಮೇ ದೇವಿ ನಾರಸಿಂಹ ಸಮಪ್ರಭೇ ॥ ಸರ್ವಲಕ್ಷಣಸಂಪೂರ್ಣೇ ಭವನಾಶಿನಿ ತೇ ನಮಃ ॥ ಆಪೋಹಿಷ್ಠೇತಿ ಶುದ್ಧೋದಕ ಸ್ನಾನಂ ॥ ವಿಷ್ಣುಪಾದಾಬ್ಜ ಸಂಭೂತೇ ಗಂಗೇ ತ್ರಿಪಥಗಾಮಿನಿ ॥ ಸರ್ವಪಾಪಹರೇ ದೇವಿ ಭಾಗೀರಥ್ಯೈ ನಮೋಽಸ್ತು ತೇ । ಶ್ವೇತವಸ್ತ್ರಂ ಸಮರ್ಪಯಾಮಿ ॥ ತ್ರ್ಯಂಬಕಸ್ಯ ಜಟೋದ್ಭೂತೇ ಗೌತಮಸ್ಯಾಘನಾಶಿನಿ ॥ ಸಪ್ತಧಾ ಪ್ರಾಗತಂ ಯಾತೇ ಗೋದಾವರಿ ನಮೋಽಸ್ತು ತೇ ॥ ಕಂಚುಕಂ ಸಮರ್ಪಯಾಮಿ ॥ ಮಾಣಿಕ್ಯಮುಕ್ತಾಮಣಿ ಕೌಸ್ತುಭಾಂಶ್ಚ ವೈಡೂರ್ಯ ಗೋಮೇದಿಕ ಪುಷ್ಯರಾಗೈಃ ॥ ವಜ್ರೈಶ್ಚ ನೀಲೈಶ್ಚ ಸುಶೋಭಿತಾನಿ ಗೃಹಾಣ ಸರ್ವಾಭರಣಾನಿ

ದೇವಿ ॥ ಸರ್ವಾಭರಣಾನಿ ಸಮರ್ಪಯಾಮಿ ॥ ಚಂದನಾಗರುಕಸ್ತೂರೀರೋಚನಂ ಕುಂಕುಮಂ ತಥಾ ॥ ಕರ್ಪೂರೇಣ ಸಮಾಯುಕ್ತಂ ಗಂಧಂ ದದ್ಮಿ ಚ ಭಕ್ತಿತಃ ॥ ಗಂಧದ್ವಾರಾಂ ಇತಿ ಗಂಧಾರ್ನ್ ಧಾರಯಾಮಿ ॥ ಶ್ವೇತಾಂಶ್ಚ ಚಂದ್ರವರ್ಣಾಭಾನ್ ಹರಿದ್ರಾರಾಗರಂಜಿತಾನ್ ॥ ಅಕ್ಷತಾಂಶ್ಚ ಸುರಶ್ರೇಷ್ಠೇ ದದಾಮಿ ಯಮುನೇ ಶುಭೇ ॥ ಅಕ್ಷತಾನ್ ಸಮರ್ಪಯಾಮಿ ॥ ಮಂದಾರಮಾಲತೀಜಾಜಿಕೇತಕೀಪಾಟಲ್ಯಶ್ಯಭ್ಯೈಃ॥ ಪೂಜಯಾಮಿ ಸದಾ ದೇವಿ ಯಮುನೇ ಭಕ್ತವತ್ಸಲೇ ॥ ಪುಷ್ಪಾಣಿ ಸಮರ್ಪಯಾಮಿ ॥ ಅಥಾಂಗ ಪೂಜಾ ॥ ಓಂ ಚಂಚಲಾಯೈ ನಮಃ । ಪಾದೌ ಪೂಜಯಾಮಿ ॥ ಓಂ ಚಪಲಾಯೈ ನಮಃ । ಜಾನುನೀ ಪೂಜಯಾಮಿ ॥ ಓಂ ಭಕ್ತವತ್ಸಲಾಯೈ ನಮಃ । ಕಟಿಂ ಪೂಜಯಾಮಿ ॥ ಓಂ ಮಹೋದಾರಾಯೈ ನಮಃ । ನಾಭಿಂ ಪೂಜಯಾಮಿ ॥ ಓಂ ಮನ್ಮಥವಾಸಿನ್ಯೈ ನಮಃ । ಗುಹ್ಯಂ ಪೂಜಯಾಮಿ ॥ ಓಂ ಅಜ್ಞಾನನಾಶಿನ್ಯೈ ನಮಃ । ಹೃದಯಂ ಪೂಜಯಾಮಿ ॥ ಓಂ ಭದ್ರಾಯೈ ನಮಃ । ಸ್ತನೌ ಪೂಜಯಾಮಿ ॥ ಓಂ ಅಘಹಂತ್ರ್ಯೈ ನಮಃ । ಭುಜೌ ಪೂಜಯಾಮಿ ॥ ಓಂ ರಕ್ತಕಂಠ್ಯೈ ನಮಃ । ಕಂಠಂ ಪೂಜಯಾಮಿ ॥ ಓಂ ಭವಹೃದ್ಯಯೇ ನಮಃ । ಮುಖಂ ಪೂಜಯಾಮಿ । ಓಂ ಗೌರ್ಯೈ ನಮಃ । ನೇತ್ರೇ ಪೂಜಯಾಮಿ ॥ ಓಂ ಭಾಗೀರಥ್ಯೈ ನಮಃ । ಲಲಾಟಂ ಪೂಜಯಾಮಿ ॥ ಓಂ ಯಮುನಾಯೈ ನಮಃ । ಶಿರಃ ಪೂಜಯಾಮಿ ॥ ಓಂ ಸರಸ್ವತ್ಯೈ ನಮಃ । ಸರ್ವಾಂಗಾನಿ ಪೂಜಯಾಮಿ ॥ ಅಥ ನಾಮಪೂಜಾ ॥ ಓಂ ಯಮುನಾಯೈ ನಮಃ । ಓಂ ಶೀತಾಯೈ ನಮಃ । ಓಂ ವಿವಲಾಯೈ ನಮಃ । ಓಂ ಉತ್ಪಲಾಯೈ ನಮಃ । ಓಂ ಅಭೀಷ್ಟದಾಯೈ ನಮಃ । ಓಂ ನರ್ಮದಾಯೈ ನಮಃ । ಓಂ ಗೌರ್ಯೈ ನಮಃ । ಓಂ ಭಾಗೀರಥ್ಯೈ ನಮಃ । ಓಂ ತುಂಗಾಯೈ ನಮಃ । ಓಂ ಭದ್ರಾಯೈ ನಮಃ । ಓಂ ಕೃಷ್ಣವೇಣ್ಯೈ ನಮಃ । ಓಂ ಭವನಾಶಿನ್ಯೈ ನಮಃ । ಓಂ ಸರಸ್ವತ್ಯೈ ನಮಃ । ಓಂ ಕಾವೇರ್ಯೈ ನಮಃ । ಓಂ ಸಿಂಧವೇ ನಮಃ । ಓಂ ಗೌತಮ್ಯೈ ನಮಃ । ಓಂ ಗೋತಮ್ಯೈ ನಮಃ । ಓಂ ಗಾಯತ್ರ್ಯೈ ನಮಃ । ಓಂ ಗಾರುಡಾಯೈ ನಮಃ । ಓಂ ಗಿರಿಜಾಯೈ ನಮಃ । ಓಂ ಚಂದ್ರಚೂಡಾಯೈ ನಮಃ । ಓಂ ಸರ್ವೇಶ್ವರ್ಯೈ ನಮಃ । ಓಂ ಮಹಾಲಕ್ಷ್ಮ್ಯೈ ನಮಃ । ಓಂ ಶ್ರೀಯಮುನಾದೇವ್ಯೈ ನಮಃ । ಸರ್ವಪಾಪಹರೇ ದೇವಿ ಸರ್ವೋಪದ್ರವನಾಶಿನಿ । ಸರ್ವಸಂಪತ್ಪ್ರದೇ ದೇವಿ ಯಮುನಾಯೈ ನಮೋಽಸ್ತು ತೇ ॥ ಇತಿ ಪೂಜಾವಿಧಾನಂ ॥

ದಶಾಂಗಂ ಗುಗ್ಗುಲಂ ಲೋಪೇತಂ ಸುಗಂಧ ಚ ಮನೋಹರಂ । ಕಪಿಲಾಘೃತಸಂಯುಕ್ತಂ ಧೂಪಂ ಸ್ವೀಕುರು ಸೂರ್ಯಜೇ ॥ ಧೂಪಮಾಘ್ರಾಪಯಾಮಿ ॥ ಘೃತವರ್ತಿ ಸಮಾಯುಕ್ತಂ ವಹ್ನಿನಾ ಯೋಜಿತಂ ಮಯಾ । ಗೃಹಾಣ ದೀಪಂ ದೇವಿ ಸರ್ವೈಶ್ವರ್ಯಪ್ರದಾಯಿನಿ । ದೀಪಂ ದರ್ಶಯಾಮಿ ॥ ಶರ್ಕರಾಮಧುಸಂಯುಕ್ತಂ ದಧಿಕ್ಷೀರಂ ಸುಸರ್ಪಿಷಂ ॥ ಪಕ್ವಾನ್ನಂ ಚ ಮಯಾ ದತ್ತಂ ನೈವೇದ್ಯಂ ಪ್ರತಿಗೃಹ್ಯತಾಂ ।

ದ್ಯಂ (ಗಣಪತಿವ್ರತವನ್ನು ನೋಡಿ) ಪಾನೀಯಂ ಪಾವನಂ ಶ್ರೇಷ್ಠಂ ಗಂಗಾದಿ ಸರಿದುದ್ಭವಂ । ಹಸ್ತಪ್ರಕ್ಷಾಳನಂ ದೇವಿ ಗೃಹಾಣ ಮುಖಶೋಧನಂ॥ಹಸ್ತಪ್ರಕ್ಷಾಳನಂ ॥ ಕರ್ಪೂರೇಣ ಸಮಾಯುಕ್ತಂ ಯಮುನೇ ಚಾರುಚಂದನಂ । ಸಮರ್ಪಿತಂ ಮಯಾ ತುಭ್ಯಂ ಕರೋದ್ವರ್ತನಕಂ ಕುರು । ಕರೋದ್ವರ್ತನಾರ್ಥೇ ಪುಷ್ಪಂ ಸಮರ್ಪಯಾಮಿ । ಪೂಗೀಫಲಸಮಾಯುಕ್ತಂ ನಾಗವಲ್ಲೀ ದಳೈರ್ಯುತಂ । ಕರ್ಪೂರಚೂರ್ಣಸಂಯುಕ್ತಂ ತಾಂಬೂಲಂ ಪ್ರತಿಗೃಹ್ಯತಾಂ ॥ ತಾಂಬೂಲಂ ಸಮರ್ಪಯಾಮಿ ॥ ಹಿರಣ್ಯಗರ್ಭಗರ್ಭಸ್ಥಂ ಹೇಮಬೀಜಂ ವಿಭಾವಸೋಃ । ಅನಂತಪುಣ್ಯಫಲಂ ಅತಃ ಶಾಂತಿಂ ಪ್ರಯಚ್ಛ ಮೇ । ಸುವರ್ಣಪುಷ್ಪಂ । ತ್ರೈಲೋಕ್ಯಪಾವನೇ ಗಂಗೇ ಅಂಧಕಾರ ವಿನಾಶಿನೀ । ಪಂಚಾರ್ತಿಕ್ಯಂ ಗೃಹಾಣೇದಂ ವಿಶ್ವಪ್ರೀತ್ಯೈ ನಮೋಽಸ್ತು ತೇ । ಕರ್ಪೂರ ನೀರಾಜನಂ ಸಮರ್ಪಯಾಮಿ । ಕೇತಕೀಜಾತಿಕುಸುಮೈಃ ಮಲ್ಲಿಕಾಮಾಲತೀಶುಭೈಃ । ಪುಷ್ಪಾಂಜಲಿರ್ಮಯಾ ದತ್ತಃ ರುದ್ರಪ್ರೀತ್ಯೈ ನಮೋಽಸ್ತು ತೇ । ಪುಷ್ಪಾಂಜಲಿಂ ಸಮರ್ಪಯಾಮಿ । ಯಾನಿ ಕಾನಿ ಚ ಪಾಪಾನಿ ಜನ್ಮಾಂತರ ಕೃತಾನಿ ಚ। ತಾನಿ ತಾನಿ ವಿನಶ್ಯಂತಿ ಪ್ರದಕ್ಷಿಣಪದೇ ಪದೇ ॥ ಪಾಪೋಽಹಂ ಪಾಪಕರ್ಮಾಹಂ ಪಾಪಾತ್ಮಾ ಪಾಪಸಂಭವಃ । ತ್ರಾಹಿ ಮಾಂ ನರಕಾದ್ಘೋರಾತ್ ದಿವ್ಯಜ್ಯೋತಿರ್ನಮೋಽಸ್ತು ತೇ॥ ಪ್ರದಕ್ಷಿಣ ನಮಸ್ಕಾರಂ ॥ ಅನ್ಯಥಾ ಶರಣಂ ನಾಸ್ತಿ ತ್ವಮೇವ ಶರಣಂ ಮಮ। ತಸ್ಮಾತ್ಕಾರುಣ್ಯಭಾವೇನ ರಕ್ಷ ರಕ್ಷ ಸುರೇಶ್ವರೀ॥ ನಮಸ್ಕಾರಃ ॥ ಸುರಾಸುರೇಂದ್ರಾದಿ ಕಿರೀಟಮೌಕ್ತಿಕೈರ್ಯುಕ್ತಂ ಸದಾ ಯತ್ತವ ಪಾದಪಂಕಜಂ ॥ ಪರಾ ಪರಂ ಪಾತು ವರಂ ಸುಮಂಗಳಂ ನಮಾಮಿ ಭಕ್ತ್ಯಾ ಮಮ ಕಾಮಸಿದ್ಧಯೇ । ಭವಾನಿ ಚ ಮಹಾಲಕ್ಷ್ಮಿ ಸರ್ವಕಾಮಪ್ರದಾಯಿನಿ । ವ್ರತಂ ಸಂಪೂರ್ಣತಾಂ ಯಾತು ಯಮುನಾಯೈ ನಮೋಽಸ್ತು ತೇ ॥ ಪ್ರಾರ್ಥನಾಂ । ಇತಿ ಶ್ರೀಯಮುನಾಪೂಜಾ ಸಮಾಪ್ತಾ ॥

ಶ್ರೀಮದನಂತಪದ್ಮನಾಭಾಯ ನಮಃ ॥ ಆಗಮಾರ್ಥಂ ತು ಲಾಂಛನಂ ॥ ಇತಿ ಘಂಟಾನಾದಂ ಕೃತ್ವಾ ॥ ಅಪಸರ್ಪಂತು ಯೇ ಭೂತಾಃ........ಶಿವಾಜ್ಞಯಾ ॥ ಇತಿ ಭೂತೋಚ್ಚಾಟನಂ ಕೃತ್ವಾ ॥ ತೀಕ್ಷ್ಣದಂಷ್ಟ್ರ ಮಹಾಕಾಯ ಕಲ್ಪಾಂತ ದಹನೋಪಮ । ಭೈರವಾಯ ನಮಸ್ತುಭ್ಯಂ ಅನುಜ್ಞಾಂ ದಾತುಮರ್ಹಸಿ ।। ಇತಿ ಭೈರವಾನುಜ್ಞಾಂ ಲಬ್ಧ್ವಾ ॥ ಪೃಥಿವೀತ್ವಯೇತಿ ಭೂಮಿಂ ಸಂಪ್ರಾರ್ಥ್ಯ ಕಲಶಸ್ಥಾಪನಂ ಕೃತ್ವಾ ॥ ಪ್ರಾಣಾನಾಯಮ್ಯ ॥ ಏವಂ ಗುಣೇತ್ಯಾದಿ ಶುಭತಿಥೌ ಅಸ್ಮಾಕಂ ಸಹ ಕುಟುಂಬಾನಾಂ ಪುತ್ರ ಪೌತ್ರ ಕಳತ್ರ ಮಿತ್ರ ಭ್ರಾತೃ ಬಂಧುವರ್ಗ ಸಹಿತಾನಾಂ ಕ್ಷೇಮಸ್ಥೈರ್ಯ ವಿಜಯ ಆಯುರಾರೋಗ್ಯ ಐಶ್ವರ್ಯಾಭಿವೃದ್ಧ್ಯರ್ಥಂ ಧರ್ಮಾರ್ಥ ಕಾಮ ಮೋಕ್ಷರೂಪ ಚತುರ್ವಿಧ ಫಲ ಪುರುಷಾರ್ಥ ಸಿದ್ಧ್ಯರ್ಥಂ ಸರ್ವಾಭ್ಯುದಯಾರ್ಥಂ ಅನಂತಕೀರ್ತ್ಯನಂತ ಸಂಪದಾನಂತ ಸೌಭಾಗ್ಯಾನಂತ ಸೌಖ್ಯಾನಂತ ಪುತ್ರ ಪೌತ್ರಾಭಿವೃದ್ಧ್ಯರ್ಥಂ ಅನಂತೆ ಕಲ್ಪೋಕ್ತದ್ವಾರಾ ಶ್ರೀಮದನಂತಪದ್ಮನಾಭಸ್ವಾಮಿ

ದೇವತಾ ಪ್ರೀತ್ಯರ್ಥಂ ಭವಿಷ್ಯೋತ್ತರ ಪುರೋಣೋಕ್ತ ಪ್ರಕಾರೇಣ ಸಂಭವದ್ಭಿರ್ನಿಯಮೈಸ್ಸಂಭವದ್ಭಿರ್ದ್ರವ್ಯೈಶ್ಚ ಯಾವಚ್ಛಕ್ತ್ಯ ಧ್ಯಾನಾವಾಹನಾದಿ ಷೋಡಶೋಪಚಾರಪೂಜಾಂ ಕರಿಷ್ಯೇ । ತದಂಗಕಲಶಾರಾಧನಂ ಕರಿಷ್ಯೇ । (೯ ನೇ ಪುಟ ನೋಡಿ) ಕಲಶಂ ಗಂಧಾಕ್ಷತಪತ್ರಪುಷ್ಪೈರಭ್ಯರ್ಚ್ಯ । ಕಲಶಸ್ಯ....ಸನ್ನಿಧಿಂ ಕುರು । ಕಲಶೋದಕೇನ ಪೂಜಾದ್ರವಾಣಿ ಆತ್ಮಾನಂ ಚ ದೇವಂ ಚ ಪ್ರೋಕ್ಷ್ಯ। ದರ್ಭಮಯಮಾಸನಂ ಕಲಶೋಪರಿ ಸಂಸ್ಥಾಪ್ಯ । ಶ್ರೀಮದನಂತಪದ್ಮನಾಭಂ ಧ್ಯಾಯೇತ್ । ಕಲಶಸ್ಥಾಪನಮಂತ್ರಃ । ಯಸ್ಯ ದೇಹೇ ಸ್ಥಿತಾ ಲೋಕಾಃ ಸರ್ವೇ ತಿಷ್ಠಂತಿ ಪನ್ನಗಾಃ ಸಾಗರಾಃ ಸರಿತಶ್ಚಾಪಿ ಸೋಽಸ್ಮಿನ್ ಸಂಸ್ಥಾಪ್ಯತೇ ಹರಿಃ । ಏಹ್ಯೇಹಿ ಕೃಪಯಾನಂತ ಕ್ಷೀರೋದಾರ್ಣವಸಂಸ್ಥಿತ । ಪದ್ಮ ಚಕ್ರ ಗದಾ ಶಂಖ ಗರುಡಾದಿ ಸಮನ್ವಿತ । ಶ್ರೀವತ್ಸ ಕೌಸ್ತುಭೋರಸ್ಕ ಫಣಸ್ಸಪ್ತಾನ್ವಿತ ಪ್ರಭೋ । ವ್ರತಸ್ಯೋಪಕ್ರಮೇ ಶೀಘ್ರಂ ಸರ್ವಾಭೀಷ್ಟಪ್ರದೋ ಭವ । ಇತಿ ಧ್ಯಾತ್ವಾ । ಪ್ರಾಣಪ್ರತಿಷ್ಠಾಂ ಕುರ್ಯಾತ್ । (೧೧ನೇ ಪುಟ ನೋಡಿ) ಕುಸುಮಾಕ್ಷತಾನ್ ಗೃಹೀತ್ವಾ । ಅಥ ಪೀಠಪೂಜಾ । ಸ್ವಸ್ಯ ವಾಮಪಾರ್ಶ್ವೇ ಗುರವೇ ನಮಃ । ದಕ್ಷಿಣಪಾರ್ಶ್ವೇ ಗಣನಾಥಾಯ ನಮಃ। ಪೀಠಸ್ಯಾಧೋಭಾಗೇ ಆಧಾರಶಕ್ತ್ಯೈ ನಮಃ । ಕೂರ್ಮಾಯ ನಮಃ। ಯಜ್ಞವರಹಾಯ ನಮಃ । ದಕ್ಷಿಣೇ ಕ್ಷೀರೋದಧಯೇ ನಮಃ । ಸಿಂಹಾಸನಾಯ ನಮಃ । ಸಿಂಹಾಸನಸ್ಯಾಗ್ನೇಯಕೋಣೇ ಕೂರ್ಮಾಯ ನಮಃ । ನೈಋತಿಕೋಣೇ ಜ್ಞಾನಾಯ ನಮಃ । ವಾಯುವ್ಯಕೋಣೇ ವೈರಾಗ್ಯಾಯ ನಮಃ । ಈಶಾನ್ಯಕೋಣೇ ಐಶ್ವರ್ಯಾಯ ನಮಃ । ಪೂರ್ವದಿಶಿ ಧರ್ಮಾಯ ನಮಃ । ಪಶ್ಚಿಮದಿಶಿ ವೈರಾಗ್ಯಾಯ ನಮಃ । ಉತ್ತರದಿಶಿ ಅನೈಶ್ವರ್ಯಾಯ ನಮಃ । ಪೀಠಮಧ್ಯೇ ಮೂಲಾಯ ನಮಃ । ನಾಳಾಯ ನಮಃ । ಪತ್ರೇಭ್ಯೋ ನಮಃ। ಕೇಸರೇಭ್ಯೋ ನಮಃ । ಕರ್ಣಿಕಾಯೈ ನಮಃ। ಕರ್ಣಿಕಾವಧ್ಯೇ ಸಂ ಸತ್ವಾಯ ನಮಃ । ರಂ ರಜಸೇ ನಮಃ । ತಂ ತಮಸೇ ನಮಃ । ಸೂರ್ಯಮಂಡಲಾಯ ನಮಃ । ಸೂರ್ಯಮಂಡಲಾಧಿಪತಯೇ ಬ್ರಹ್ಮಣೇ ನಮಃ । ಸೋಮಮಂಡಲಾಯ ನಮಃ । ಸೋಮಮಂಡಲಾಧಿಪತಯೇ ವಿಷ್ಣವೇ ನಮಃ । ವಹ್ನಿಮಂಡಲಾಯ ನಮಃ । ವಹ್ನಿ ಮಂಡಲಾಧಿಪತಯೇ ಈಶ್ವರಾಯ ನಮಃ। ಅಥ ದ್ವಾರಪಾಲಕಪೂಜಾ ॥ ಪೂರ್ವದ್ವಾರೇ ದ್ವಾರಶ್ರಿಯೈ ನಮಃ । ಧಾತ್ರೇ ನಮಃ । ವಿಧಾತ್ರೇ ನಮಃ । ದಕ್ಷಿಣದ್ವಾರೇ ದ್ವಾರಶ್ರಿಯೈ ನಮಃ । ಚಂಡಾಯ ನಮಃ ॥ ಪ್ರಚಂಡಾಯ ನಮಃ । ಪಶ್ಚಿಮದ್ವಾರೇ ದ್ವಾರಶ್ರಿಯೈ ನಮಃ । ಗಂಗಾಯೈ ನಮಃ । ಯಮುನಾಯೈ ನಮಃ। ಉತ್ತರದ್ವಾರೇ ದ್ವಾರಶ್ರಿಯೈ ನಮಃ। ಶಂಖನಿಧಯೇ ನಮಃ । ಪದ್ಮನಿಧಯೇ ನಮಃ ॥ ಮಧ್ಯೇ ಶ್ರೀಮದನಂತಪದ್ಮನಾಭಸ್ವಾಮಿನೇ ನಮಃ । ದ್ವಾರಪಾಲಕಪೂಜಾಂ ಸಮರ್ಪಯಾಮಿ॥ ಅಥ ದಿಕ್ಪಾಲಪೂಜಾ । ಇಂದ್ರಾಯ ನಮಃ । ಅಗ್ನಯೇ ನಮಃ ।

ಯಮಾಯ ನಮಃ । ನಿಋತಯೇ ನಮಃ । ವರುಣಾಯ ನಮಃ। ವಾಯವೇ ನಮಃ । ಕುಬೇರಾಯ ನಮಃ । ಈಶಾನಾಯ ನಮಃ । ಮಧ್ಯೇ ಅನಂತಪದ್ಮನಾಭಸ್ವಾಮಿನೇ ನಮಃ । ದಿಕ್ಪಾಲಕಪೂಜಾಂ ಸಮರ್ಪಯಾಮಿ । ತಸ್ಯಾಗ್ರತೋ ದೃಢಂ ಸೂತ್ರಂ ಕುಂಕುಮಾಕ್ತಂ ಸುದೋರಕಂ । ಚತುರ್ದಶಗ್ರಂಥಿಯುಕ್ತ ಮುಪಕಲ್ಪ್ಯ ಪ್ರಪೂಜಯೇತ್ । ನೂತನದೋರಸ್ಥಾಪನಂ । ದೋರಕೇ ಗ್ರಂಥಿದೇವತಾನಾವಾಹ್ಯ । ವಿಷ್ಣುರಗ್ನಿಸ್ತಥಾ ಸೂರ್ಯಃ ಸಹಸ್ರಾಕ್ಷ ಪಿತಾಮಹಃ । ವಾಯುಃ ಪಿನಾಕೀ ವಿಘ್ನೇಶಃ ಸ್ಕಂಧಃ ಸೋಮಸ್ತಥೈವ ಚ। ಆಕಾಶೇ ವರುಣಃ ಪೃಥ್ವೀ ವಸವೋ ಗ್ರಂಥಿದೇವತಾಃ । ಇತಿ ವಿಷ್ಣ್ವಾದಿ ಚತುರ್ದಶಗ್ರಂಥಿದೇವತಾನಾವಾಹ್ಯ । ವಿಷ್ಣ್ವಾದಿ ಚತುರ್ದಶ ಗ್ರಂಥಿದೇವತಾಭ್ಯೋ ನಮಃ । ಧಾನ್ಯಾದಿ ಸರ್ವೋಪಚಾರ ಪೂಜಾಂ ಸಮರ್ಪಯಾಮಿ । ಕುಸುಮಾಕ್ಷತಾ ಗೃಹೀತ್ವಾ । ತತಃ ಕ್ಷೀರಸಾಗರೇ ಫಣಸಪ್ತಾನ್ವಿತ ಶೇಷಶಾಯಿನಂ । ನಿಲೋತ್ಪಲದಳಶ್ಯಾಮಂ ಪಿಂಗಭ್ರೂಶ್ಮಶ್ರುಲೋಚನಂ ॥ ಚತುರ್ಭುಜಂ ಶಂಖಚಕ್ರಗದಾಪದ್ಮ ಶಾರ್ಙ್ಗನಂದಕಮುಸಲಾದಿ ದಿವ್ಯಾಯುಧೈಃ ಪರಿವೇಷ್ಟಿತಂ । ಗರುಡವಿಷ್ವಕ್ಸೇನಾದಿ ಸಂಸೇವ್ಯಮಾನಂ ಶ್ರೀಭೂನೀಳಾಸಮೇತಂ ಕೌಸ್ತುಭಧರಂ ॥ ಹಾರನೂಪುರಕೇಯೂರ ಮಕುಟರತ್ನ ಕಾಂಚ್ಯಂಗುಳೀಯಾದಿ ಭೂಷಣೈರುಪಶೋಭಿತಂ । ಜಯವಿಜಯಾದಿ ದ್ವಾರಪಾಲಕೋಪೇತಂ । ಯಕ್ಷಕಿನ್ನ ಗಂಧರ್ವ ವಿದ್ಯಾಧರ ಗುಹ್ಯಕಾದಿ ದೇವಯೋನಿವಿಶೇಷೈಃ ಸಂಸೇವ್ಯಮಾನಂ ಬ್ರಹ್ಮೇಶಾನಶಕ್ರಾದಿಸುರೈಃ ಸಂಪೂಜ್ಯಮಾನಂ ನಿಖಿಲವೇದಶಾಸ್ತ್ರಪುರಾಣೈರುದ್ಗೀಯಮಾನಂ ಸನಕ ಸನಂದನ ಸನತ್ಕುಮಾರ ಸನತ್ಸುಜಾತ ಭೃಗ್ವಾದಿ ಮುನಿಸೇವಿತಂ ಶ್ರೀಮದನಂತ ಪದ್ಮನಾಭಸ್ವಾಮಿನಂ ಧ್ಯಾಯೇತ್॥ ಕೃತ್ವಾ ದರ್ಭಮಯಂ ದೇವಂ ವಾರಾಂನಿಧಿಸಮಪ್ರಭಂ । ಫಣಸಪ್ತಾನ್ವಿತಂ ದೇವಂ ಪಿಂಗಳಾಕ್ಷಂ ಚತುರ್ಭುಜಂ । ದಕ್ಷಿಣಾಗ್ರಕರೇ ಪದ್ಮಂ ಶಂಖಂ ತಸ್ಯಾಪ್ಯಧಃಕರೇ । ಚಕ್ರಮೂರ್ಧ್ವಕರೇ ವಾಮೇ ಗಧಾಂ ತಸ್ಯ ಪ್ರಯತ್ನಃ । ದಧಾನಂ ಸರ್ವಲೋಕೇಶಂ ಸರ್ವಾಭರಣಭೂಷಿತಂ । ದುಗ್ಧಾಬ್ಧಿಮಧ್ಯೇ ಸಂಸ್ಥಾಪ್ಯ ತತ ಆವಾಹಯೇತ್ಸುಧೀಃ ॥ ಏವಂ ಸಾಂಗಂ ಸಾಯುಧಂ ಸಪರಿವಾರಂ ಶ್ರೀಮದನಂತಪದ್ಮನಾಭಸ್ವಾಮಿನಂ ಧ್ಯಾಯೇತ್ । ಓಂ ಸಹಸ್ರ ಶೀರ್ಷಾ ಪುರುಷಃ ಸಹಸ್ರಾಕ್ಷ ಸ್ಸಹಸ್ರಪಾತ್ । ಸಭೂಮಿಂ ವಿಶ್ವತೋ ವೃತ್ವಾತ್ಯತಿಷ್ಠದ್ದಶಾಂಗುಲಂ । ನವಾಮ್ರಪಲ್ಲವಾಭಾಸಂ ಪಿಂಗಭ್ರೂಶ್ಮಶ್ರುಲೋಚನಂ । ಪಿತಾಂಬರಧರಂ ದೇವಂ ಶಂಖಚಕ್ರಗದಾಧರಂ । ವಿಶ್ವಾಕಾರಂ ವಿಶ್ವಯೋನಿಂ ವಿಶ್ವಾಧಾರಂ ಪರಂ ಹರಿಂ । ಸಹಸ್ರಶಿರಸಂ ವಿಷ್ಣುಂ ಶೇಷಸಂಜ್ಞಂ ರಮಾಪತಿಂ ॥ ಅಲಂಕೃತಸಮುದ್ರಸ್ಥಂ ವಿಶ್ವರೂಪಂ ವಿಚಿಂತಯೇತ್ ॥ ಧ್ಯಾನಂ ॥ ಅಗಚ್ಛಾನಂತದೇವೇಶ ತೇಜೋರಾಶೇ ಜಗತ್ಪತೇ । ಇಮಾಂ ಮಯಾ ಕೃತಾಂ ಪೂಜಾಂ ಗೃಹಾಣ ಪುರುಷೋತ್ತಮ। ಓಂ ಪುರುಷೋತ್ತಮಾಯ ನಮಃ। ಧ್ಯಾನಂ ಸಮರ್ಪಯಾಮಿ॥ ಪುರುಷ ಏವೇದಗ್ಂ.

ಸರ್ವಂ ಯದ್ಭೂತಂ ಯಚ್ಚ ಭವ್ಯಂ । ಉತಾಮೃತತ್ವಸ್ಯೇಶಾನಃ ಯದನ್ನೇನಾತಿರೋಹತಿ । ತದ್ವಿಷ್ಣೋಃ ಪರಮಂ ಪದಂ ಸದಾ ಪಶ್ಯಂತಿ ಸೂರಯಃ।ತದ್ವಿಪ್ರಾಸೋ ವಿಪನ್ಯವೋ । ದಿವೀವ ಚಕ್ಷುರಾತತಂ । ಯಾಚುವಾಣಸಸ್ಸವಿಂಧತೇ । ವಿಷ್ಣೋರ್ಯತ್ಪರಮಂ ಪದಂ। ಆಗಚ್ಛಾನಂತ ದೇವೇಶ ತೇಜೋರಾಶೇ ಜಗತ್ಪತೇ।ಇಮಾಂ ಮಯಾ। ಕೃತಾಂ ಪೂಜಾಂ ಗೃಹಾಣ ಪುರುಷೋತ್ತಮ । ಆವಾಹನಂ ಸಮರ್ಪಯಾಮಿ ಯೋಗಾಸನಂ ಮಹದ್ದಿವ್ಯಂ ನಾನಾರತ್ನ ಸುಶೋಭಿತಂ । ಸುವರ್ಣೇನ ಯುತಂ ದೇವ ಗೃಹಾಣ ಕಮಲಾಪತೇ । ಕಮಲಾಪತಯೇ ನಮಃ । ಸಿಂಹಾಸನಂ ಸಮರ್ಪಯಾಮಿ ॥ ದೇವದೇವ ಜಗನ್ನಾಥ ಪ್ರಣತಾರ್ತಿಹರ ಪ್ರಭೋ । ಗೃಹಾಣ ಪಾದ್ಯಂ ಪುಷ್ಪಾಢ್ಯಂ ಪರಮಾತ್ಮ ನಮೋಽಸ್ತು ತೇ। ಏತಾವಾನಸ್ಯ ಮಹಿಮಾ ಅತೋಜ್ಯಾಯಾಗ್‌ಶ್ಚ ಪುರುಷಃ। ಪಾದೋಽಸ್ಯ ವಿಶ್ವಾ ಭೂತಾನಿ ತ್ರಿಪಾದಸ್ಯಾಮೃತಂ ದಿವಿ। ಪರಮಾತ್ಮನೇ ನಮಃ । ಪಾದಯೋಃ ಪಾದ್ಯಂ ಸಮರ್ಪಯಾಮಿ । ಅನಂತಾನಂತದೇವೇಶ ಪುರಾಣಪುರುಷೋತ್ತಮ । ಅರ್ಘ್ಯಂ ಗೃಹಾಣ ಭಗವನ್ ಗಂಧಪುಷ್ಪಾಕ್ಷತೈರ್ಯುತಂ । ತ್ರಿಪಾದೂರ್ಧ್ವ ಉದೈತ್ಪುರುಷಃ।ಪಾದೋಽಸ್ಯೇಹಾ ಭವಾತ್ಪುನಃ।ತತೋ ವಿಷ್ವಙ್ವ್ಯಕ್ರಾಮತ್ । ಸಾಶನಾನಶನೇ ಅಭಿ । ಅನಂತಾಯ ನಮಃ । ಅರ್ಘ್ಯಮರ್ಘ್ಯಂ ಸಮರ್ಪಯಾಮಿ । ಸುರಾಸುರಾಣಾಮಧಿಪ ಕ್ಷೀರಾಬ್ಧಿಶಯನಾಚ್ಯುತ । ಗೃಹಾಣಾಚಮನಂ ದೇವ ವಿಶ್ವರೂಪಧರ ಪ್ರಭೋ।ತಸ್ಮಾದ್ವಿರಾಡಜಾಯತ। ವಿರಾಜೋ ಅಧಿಪೂರುಷಃ। ಸ ಜಾತೋ ಅತ್ಯರಿಚ್ಯತ । ಪಶ್ಚಾದ್ಭೂಮಿಮಥೋ ಪುರಃ । ವಿಶ್ವರೂಪಧರಾಯ ನಮಃ।ಆಚಮ... ಸಮರ್ಪಯಾಮಿ । ದಧಿಕ್ಷೀರಘೃತೋಪೇತಂ ಶರ್ಕರಾಮಧುಮಿಶ್ರಿತಂ । ಮಧುಪರ್ಕಂ ಗೃಹಾಣ ತ್ವಂ ಸಚ್ಚಿದಾನಂದವಿಗ್ರಹ ॥ ಮಧುವಾತಾ ಋತಾಯತೇ ಮಧುಕ್ಷರಂತಿ ಸಿಂಧವಃ । ಮಾಧ್ವೀನಸ್ಸಂತ್ವೋಷಧೀಃ । ಮಧುನಕ್ತ ಮುತೋಷಸಿ ಮಧುಮತ್ಪಾರ್ಥಿವಂ ರಜಃ। ಮಧುದ್ಯೌರಸ್ತು ನಃ ಪಿತಾ।ಮಾಧುಮಾನ್ನೋ ವನಸ್ಪತಿಃ ಮಧುಮಾಗ್‌ಂ ಅಸ್ತು ಸೂರ್ಯಃ । ಮಾಧ್ವೀರ್ಗಾವೋ ಭವಂತು ನಃ । ಸಚ್ಚಿದಾನಂದವಿಗ್ರಹಾಯ ನಮಃ । ಮಧುಪರ್ಕಂ ಸಮರ್ಪಯಾಮಿ । ಸ್ನಾನಂ ಪಂಚಾಮೃತಕೃತಂ ದೇವದೇವ ಸುರಾರ್ಚಿತ । ಗೃಹಾಣ ದಧಿ ಮಧ್ವಾಜ್ಯ ಶರ್ಕರಾಕ್ಷೀರಸಂಯುತಂ । ಯತ್ಪುರುಷೇಣ ಹವಿಷಾ ॥ ದೇವಾ ಯಜ್ಞಮತನ್ವತ । ವಸಂತೋ ಅಸ್ಯಾಸೀದಾಜ್ಯಂ ಗ್ರೀಷ್ಮ ಇಧ್ಮಶ್ಶರದ್ಧವಿಃ (೭ನೇ ಪುಟ ನೋಡುವದು)ಸುರಾರ್ಚಿತಾಯ ನಮಃ ಪಂಚಾಮೃತಸ್ನಾನಂ ಸಮರ್ಪಯಾಮಿ । ಸುರಭೇಸ್ತು ಸಮುದ್ಭೂತಂ ದೇವನಾಮಪಿ ದುರ್ಲಭಂ । ಪಯೋ ದದಾಮಿ ದೇವೇಶ ಸ್ನಾನಾರ್ಥಂ ಪ್ರತಿಗೃಹ್ಯತಾಂ । ಆಪ್ಯಸ್ವೇತಿ ಕ್ಷೀರಂ।ಚಂದ್ರಮಂಡಲಂ ಸಂಕಾಶಂ ಸರ್ವದೇವಪ್ರಿಯಂ ಹಿ ಯತ್।ದದಾಮಿ ದಧಿ ದೇವೇಶ ಸ್ನಾನಾರ್ಥಂ ಪ್ರತಿಗೃಹ್ಯತಾಂ । ದಧಿಕ್ರಾವ್ಣೋ ಇತಿ ದಧಿ। ಸುರಾಣಾಮಾಜ್ಯಮಾಹಾರಮಾಜ್ಯಂ ಯಜ್ಞೇ ಪ್ರತಿಷ್ಠಿತಂ । ತೇಜಃ ಪವಿತ್ರಾಂ ಪರಮಂ

ಸ್ನಾನಾರ್ಥಂ ಪ್ರತಿಗೃಹ್ಯತಾಂ । ಶುಕ್ರಮಸೀತಿ ಆಜ್ಯಂ॥ ಇದಂ ಮಧು ಮಯಾ ದೇವ
ದತ್ತಂ ತುಷ್ಟ್ಯರ್ಥಮೇವ ಚ । ಗೃಹಾಣ ದೇವದೇವೇಶ ಮಮ ಶಾಂತಿಪ್ರದೋ ಭವ।
ಮಧುವಾತಾ ಋತಾಯತೇತಿ ಮಧು । ಇಕ್ಷುದಂಡಸಮುದ್ಭೂತಾಂ ಶರ್ಕರಾಂ
ಮಧುರಾಂ ಶುಭಾಂ । ಸ್ನಾನಯ ತೇ ಮಯಾ ದತ್ತಾಂ ಗೃಹಾಣ ಪರಮೇಶ್ವರ ।
ಸ್ವಾದುಃ ಪಯಸ್ವೇತಿ ಶರ್ಕರಾಸ್ನಾನಂ । ಯಾಃ ಫಲನೀರಿತಿ ಫಲೋದಕಂ । ಯೋ
ಪಾಂ ಪುಷ್ಪಂ ವೇದ ಪುಷ್ಪವಾರ್ ಭವತಿ । ಪುಷ್ಪೋದಕಂ ॥ ಗಂಧದ್ವಾರೇತಿ ಗಂಧೋ
ಧಕಂ । ಹಿರಣ್ಯರೂಪೇತಿ ಸುವರ್ಣೋದಕಂ । ಸಹಿ ರತ್ನಾನೀತಿ ನವರತ್ನೋದಕ
ಸ್ನಾನಂ । ಆಪೋಹಿಷ್ಠೇತಿ ಶುದ್ಧೋದಕಂ । ಫಲತೋಯೈರ್ಗಂಧತೋಯೈಃ ನಾರಿ
ಕೇರಕಶೋದಕೈಃ । ಸ್ನಾನಂ ಪುಣ್ಯಜಲೈರ್ಯುಕ್ತಂ ಗೃಹಾಣ ಸುರನಾಯಕ । ಸುರ
ನಾಯಕಾಯ ನಮಃ । ಪಂಚಾಮೃತಸ್ನಾನಾನಂತರಂ ಶುದ್ಧೋದಕಸ್ನಾನಂ ಸಮರ್ಪ
ಯಾಮಿ । ವಾಸುದೇವ ಜಗನ್ನಾಥ ಪೀತಾಂಬರ ಧರಾಚ್ಯುತ । ಪೀತವಸ್ತ್ರದ್ವಯಂ
ಚಿತ್ರಂ ಗೃಹಾಣಾಮರಪೂಜಿತ। ಸಪ್ತಾಸ್ಯಾಸನ್ ಪರಿಧಯಃ ತ್ರಿಸ್ಸಪ್ತಸಮಿಧಃ ಕೃತಾಃ।
ದೇವಾಯದ್ಯಜ್ಞಂ ತನ್ವಾನಾಃ ಅಬಧ್ನನ್ ಪುರುಷಂ ಪಶುಂ।ಅಮರಪೂಜಿತಾಯ ನಮಃ।
ರಕ್ತವಸ್ತ್ರಂ ಸಮರ್ಪಯಾಮಿ। ದಾಮೋದರ ನಮಸ್ತೇಽಸ್ತು ತ್ರಾಹಿಮಾಂ ಭವಸಾಗ
ರಾತ್ । ಬ್ರಹ್ಮಸೂತ್ರಂ ಚೋತ್ತರೀಯಂ ಗೃಹಾಣ ಮಧುಸೂಡನ । ತಂ ಯಜ್ಞಂ
ಬರ್ಹಿಷಿ ಪ್ರೌಕ್ಷನ್ ಪುರುಷಂ ಜಾತಮಗ್ರತಃ । ತೇನ ದೇವಾ ಅಯಜಂತ ಸಾಧ್ಯಾ
ಋಷಯಶ್ಚ ಯೇ। ದಾಮೋದರಾಯ ನಮಃ। ಯಜ್ಞೋಪವೀತಂ ಸಮರ್ಪಯಾಮಿ
ಲಕ್ಷ್ಮೀಪತೇ ಜಗನ್ನಾಥ ಭಕ್ತಾನುಗ್ರಹಕಾರಕ । ದಾಸ್ಯಾಮಿ ಭೂಷಣಾನ್ಯದ್ಯ ನವರ
ತ್ನೋಜ್ಜ್ವಲಾನ್ಯಪಿ। ಲಕ್ಷ್ಮೀಪತಯೇ ನಮಃ ತಸ್ಮಾದ್ಯಜ್ಞಾತ್ಸರ್ವಹುತಃ ಸಂಭೃತಂ ।
ಪೃಷದಾಜ್ಯಂ । ಪಶೂಗ್ಂ ಸ್ತಾಗ್ಂ ಶ್ಚಕ್ರೇ ವಾಯವ್ಯಾನ್ ಅರಣ್ಯಾನ್ಗ್ರಾಮ್ಯಾಶ್ಚ
ಯೇ । ಆಭರಣಾನಿ ಸಮರ್ಪಯಾಮಿ । ಚಂದನಾಗರುಕಸ್ತೂರೀ ಕುಂಕುಮಾದ್ಯೈರ್ಮ
ನೋಹರಂ । ವಿಲೇಪನಂ ಸುರಶ್ರೇಷ್ಠ ಧಾರಾಯಾಽಜ್ಞಾನವಾರಕ। ತಸ್ಮಾದ್ಯಜ್ಞಾತ್ಸ
ರ್ವಹುತಃ ಸಂಭೃತಂ ಪೃಷದಾಜ್ಯಂ । ಪಶೂಗ್ಂ ಸ್ತಾಂಗ್ ಶ್ಚಕ್ರೇ ವಾಯವ್ಯಾನ್
ಅರಣ್ಯಾನ್ಗ್ರಾಮ್ಯಾಶ್ಚ ಯೇ।ಅಜ್ಞಾನನಿವಾರಕಾಯ ನಮಃ। ಗಂಧಂ ಸಮರ್ಪಯಾಮಿ
ಶಾಲೀಯಾನಕ್ಷತಾನ್ ಶ್ವೇತಾನ್ ಚಂದ್ರಾಭಾನ್ವಿಮಲಾನ್ ಶುಭಾನ್ । ಗೃಹಾಣ ದೇವದೇ
ವೇಶ ಪುರಾಣಪುರುಷೋತ್ತಮ।ತಸ್ಮಾದ್ಯಜ್ಞಾತ್ಸರ್ವಹುತಃ ಋಚಸ್ಸಾಮಾನಿ ಜಜ್ಞಿರೇ
ಛಂದಾಗ್ಂಸಿ ಜಜ್ಞಿರೇ ತಸ್ಮಾತ್ ಯಜುಸ್ತಸ್ಮಾದಜಾಯತ । ಪುರುಷೋತ್ತಮಾಯ
ನಮಃ । ಅಕ್ಷತಾನ್ ಸಮರ್ಪಯಾಮಿ । ಮಾಲ್ಯಾನಿ ಚ ಸುಗಂಧೀನಿ ಮಾಲತ್ಯಾದೀನಿ
ಚ ಪ್ರಭೋ । ಮಯಾಽಹೃತಾನಿ ಪೂಜಾರ್ಥಂ ಪುಷ್ಪಾಣಿ ಪ್ರತಿಗೃಹ್ಯತಾಂ । ತಸ್ಮಾ
ದಶ್ವಾ ಅಜಾಯಂತ ಯೇಕೇ ಚೋಭಯಾದತಃ । ಗಾವೋಹ ಜಜ್ಞಿರೇ ತಸ್ಮಾತ್
ತಸ್ಮಾಜ್ಜಾತಾ ಅಜಾವಯಃ।ಪಾದಾದಾರಭ್ಯ ಕೇಶಾಂತಂ ತಥಾ ವಿಭವಮಾರ್ಗತಃ ।

ಪೂಜಯಾಮಿ ತವಾಂಗಾನಿ ಮುಕ್ತ್ವಾಹಂ ಕರುಣಾನಿಧೇ । ಓಂ ಶ್ರೀಕರುಣಾನಿಧಯೇ ನಮಃ । ಪುಷ್ಪಾಣಿ ಸಮರ್ಪಯಾಮಿ । ಅಥಾಂಗಪೂಜಾ । ಓಂ ಅನಂತಾಯ ನಮಃ। ಪಾದೌ ಪೂಜಯಾಮಿ । ಓಂ ಶೇಷಾಯ । ಗುಲ್ಫೌ । ಓಂ ಕಮಲಾಪತಯೇ ಜಾನುನೀ । ಓಂ ವಿಶ್ವರೂಪಿಣೇ ಜಂಘೇ। ಓಂ ಕೃಷ್ಣಾಯ ಊರೂ।ಕಮಲಾಕ್ಷಾಯ ಜಘನಂ । ಹರಯೇ ಕಟಿಂ । ಕಮಲಾಕ್ಷಾಯ ಉದರಂ। ಓಂ ಪರಮಾತ್ಮನೇ ನಮಃ।ಹೃದಯಂ । ಓಂ ಕೇಶವಾಯ ನಮಃ। ಭುಜೌ । ವೈಕುಂಠಾಯ ಪೃಷ್ಠದೇಶಂ। ಓಂ ಸರ್ವ ಗದಾಧರಾಯ ಉದರಂ । ಓಂ ಅಚ್ಯುತಾಯ ಕಂಠಂ । ಓಂ ವಿಶ್ವರೂಪಧರಾಯ ವದನಂ । ಹೃಷೀಕೇಶಾಯ ನಾಸಿಕಾಂ । ಓಂ ದಿಕ್ಶ್ರೋತ್ರಾಯ ಶ್ರೋತ್ರೇ। ಓಂ ಸಹಸ್ರಾಕ್ಷಾಯ ನಮಃ । ~~ಕರ್ಣೌ~~ ನೇತ್ರೆ । ಓಂ ಲೋಕರಕ್ಷಕಾಯ ಭ್ರುವೌ।ಓಂ ಪರಮಾತ್ಮನೇ ಭ್ರೂಮಧ್ಯಂ । ಓಂ ಸರ್ವೋತ್ತಮಾಯ ಲಲಾಟಂ । ಓಂ ಸೃಷ್ಟಿಸ್ಥಿತಿಸಂಹಾರಕಾರಣಾಯ ಶಿರಃ ಪೂಜಯಾಮಿ। ಓಂ ಸರ್ವೇಶ್ವರಾಯ। ಸರ್ವಾಂಗಾನ್ ಪೂಜಯಾಮಿ । ಅಥ ಪುಷ್ಪಪೂಜಾ । ಓಂ ಶ್ರೀಮನ್ನಾರಾಯಣಾಯ ನಮಃ। ಕರವೀರಪುಷ್ಪಂ ಸಮರ್ಪಯಾಮಿ॥(ಇದನ್ನು ಎಲ್ಲಾ ನಾಮಕ್ಕೂ ಹೇಳಬೇಕು) ಓಂ ಲಕ್ಷ್ಮೀವಲ್ಲಭಾಯ ಜಾಜೀ। ಓಂ ಭಕ್ತವತ್ಸಲಾಯ ಚಂಪಕಪುಷ್ಪಂ ॥ ಓಂ ಕಮಲಾಕ್ಷಾಯ ವಕುಳಪುಷ್ಪಂ ॥ ಓಂ ಉಪೇಂದ್ರಾಯ ಶತಪತ್ರಪುಷ್ಪ॥ಓಂ ವಿಷ್ಣವೇ ಪುನ್ನಾಗಪುಷ್ಪಂ ॥ ಓಂ ಮಾಧವಾಯ ಮಾಲತೀಪುಷ್ಪಂ ॥ ಓಂ ಕೃಷ್ಣಾಯ ಕೇತಕೀಪುಷ್ಪಂ॥ ಓಂ ಸಹಸ್ರಶಿರಸೇ ಕಲ್ಹಾರಪುಷ್ಪಂ ॥ ಮಧುಸೂದನಾಯ ಕಂದಪುಷ್ಪಂ ॥ ಓಂ ವಾಸುದೇವಾಯ । ಅತಸೀಪುಷ್ಪಂ ॥ ಸಂಕರ್ಷಣಾಯ ಗಿರಿಕರ್ಣಿಕಾಪುಷ್ಪಂ ॥ ಓಂ ತ್ರಿವಿಕ್ರಮಾಯ ಪಾರಿಜಾತಪುಷ್ಪಂ ॥ ಶ್ರೀಮದನಂತಪದ್ಮನಾಭಸ್ವಾಮಿನೇ ನಮಃ । ಪುಷ್ಪಪೂಜಾಂ ಸಮರ್ಪಯಾಮಿ ॥ ಅಥ ತುಲಸೀ ಪೂಜಾ ॥ ಓಂ ಕೇಶವಾಯ ನಮಃ । ಓಂ ನಾರಾಯಣಾಯ ನಮಃ ॥ ಓಂ ಮಾಧವಾಯ ನಮಃ ॥ ಓಂ ಗೋವಿಂದಾಯ ನಮಃ ॥ ಓಂ ಮಧುಸೂದನಾಯ ನಮಃ ॥ ಓಂ ತ್ರಿವಿಕ್ರಮಾಯ ನಮಃ ॥ ಓಂ ವಾಮನಾಯ ನಮಃ ॥ ಓಂ ಶ್ರೀಧರಾಯ ನಮಃ ॥ ಓಂ ಹೃಷೀಕೇಶಾಯ ನಮಃ ॥ ಓಂ ಪದ್ಮನಾಭಾಯ ನಮಃ ॥ ಓಂ ದಾಮೋದರಾಯ ನಮಃ ॥ ಓಂ ಸಂಕರ್ಷಣಾಯ ನಮಃ ॥ ಓಂ ವಾಸುದೇವಾಯ ನಮಃ ॥ ಓಂ ಪ್ರದ್ಯುಮ್ನಾಯ ನಮಃ ॥ ಓಂ ಅನಿರುದ್ಧಾಯ ನಮಃ ॥ ಓಂ ಪುರುಷೋತ್ತಮಾಯ ನಮಃ ॥ ಓಂ ಅಧೋಕ್ಷಜಾಯ ನಮಃ ॥ ಓಂ ನಾರಸಿಂಹಾಯ ನಮಃ ॥ ಓಂ ಅಚ್ಯುತಾಯ ನಮಃ ॥ ಓಂ ಜನಾರ್ದನಾಯ ನಮಃ ॥ ಓಂ ಉಪೇಂದ್ರಾಯ ನಮಃ ॥ ಓಂ ಹರಯೇ ನಮಃ ॥ ಓಂ ಶ್ರೀಕೃಷ್ಣಾಯ ನಮಃ ॥ ಇತಿ ತುಲಸೀಪೂಜಾಂ ಸಮರ್ಪಯಾಮಿ ॥ ಸೇವಂತಿಕಾವಕುಳಚಂಪಕ ಪಾಟಲಬ್ಜಪುನ್ನಾಗಜಾಜಿ ಕರವೀರರಸಾಲಪುಷ್ಪೈಃ ॥ ಬಿಲ್ವಪ್ರವಾಳತುಲಸೀದಳ ಮಲ್ಲಿಕಾ

ಭಿಸ್ತ್ವಾಂ ಪೂಜಯಾಮಿ ಜಗದೀಶ್ವರ ಮೇ ಪ್ರಸೀದ ॥ ಆರಾಮಪುಷ್ಪಾಣಿ ಮನೋಹರಾಣಿ ಜಲಶಯಸ್ಥಾನಿ ಸುಮಂಗಲಾನಿ ॥ ಸುವರ್ಣಪುಷ್ಪಾಣಿ ಚ ರಾಜಿತಾನಿ ಗೃಹಾಣ ದೇವೇಶ ಮಯಿ ಪ್ರಸೀದ ॥ ಸರ್ವಾಣಿ ಪುಷ್ಪಾಣಿ ಸಮರ್ಪಯಾಮಿ ॥ ಅಥ ಆವರಣಪೂಜಾ ॥ ಓಂ ಶ್ರೀಮದನಂತಸ್ಯ ದಕ್ಷಿಣಪಾರ್ಶ್ವೇ ರಮಾಯೈ ನಮಃ । ಓಂ ವಾಮಪಾರ್ಶ್ವೇ ಭವಾನ್ಯೈ ನಮಃ (ಆವರಣದೇವತಾಮಾವಾಹ್ಯ) ಶಂಖೋದಕ ಸಮೇತಪುಷ್ಪಂ ಗೃಹೀತ್ವಾ ತತ್ ಪುಷ್ಪಂ ದೇವಸ್ಯೋಪರಿ ನಿಕ್ಷಿಪೇತ್ ॥ ಓಂ ದಯಾಬ್ಧೇ ತ್ರಾಹಿ ಸಂಸಾರಸರ್ಪಾನ್ಮಾಂ ಶರಣಾಂಗತಂ ॥ ಭಕ್ತ್ಯಾ ಸಮರ್ಪಯೇತ್ತುಭ್ಯಂ ಪ್ರಥಮಾವರಣಾರ್ಚನಂ ॥ ಓಂ ಆದಿಮಧ್ಯಾಂತಶೂನ್ಯಾಯ ನಮಃ ॥ ಓಂ ವಿಷ್ಣವೇ ನಮಃ ॥ ಓಂ ಹರಯೇ ನಮಃ ॥ ಓಂ ಸರ್ವವ್ಯಾಪಿನೇ ನಮಃ ॥ ಓಂ ಈಶ್ವರಾಯ ನಮಃ ॥ ಓಂ ಮಹಾಕಾಲಾಯ ನಮಃ ॥ ಓಂ ಸೃಷ್ಟಿಸ್ಥಿತ್ಯಂತಕಾರಕಾಯ ನಮಃ ॥ ಓಂ ಇತಿ ದ್ವಿತೀಯಾವರಣಾರ್ಚನಂ ಸಮರ್ಪಯಾಮಿ ॥ ಓಂ ದಯಾಬ್ಧೇ ತ್ರಾಹಿ ಸಂಸಾರಸರ್ಪಾನ್ಮಾಂ ಶರಣಾಗತಂ ಭಕ್ತ್ಯಾ ಸಮರ್ಪಯೇ ತುಭ್ಯಂ ದ್ವಿತೀಯಾವರಣಾರ್ಚನಂ ॥ ಓಂ ಬ್ರಹ್ಮಣೇ ನಮಃ । ಓಂ ಭಾಸ್ಕರಾಯ ನಮಃ । ಓಂ ಸೋಮಾಯ ನಮಃ । ಓಂ ಅನಂತಾಯ ನಮಃ ॥ ಓಂ ಸಂಕರ್ಷಣಾಯ ನಮಃ । ಓಂ ಕಾಲಾತ್ಮನೇ ನಮಃ ॥ ಓಂ ವಿಶ್ವರೂಪಿಣೇ ನಮಃ । ಓಂ ಅಚ್ಯುತಾಯ ನಮಃ ॥ ಓಂ ಸರ್ವವ್ಯಾಪಿನೇ ನಮಃ ॥ ಓಂ ಪದ್ಮಾಸನಾಯ ನಮಃ ॥ ಓಂ ದಾಮೋದರಾಯ ನಮಃ ॥ ಓಂ ಪರಮಾತ್ಮನೇ ನಮಃ ॥ ಓಂ ವೈಕುಂಠಾಯ ನಮಃ ॥ ಓಂ ಸರ್ವಾಸ್ತ್ರಧಾರಿಣೇ ನಮಃ ॥ ಓಂ ವಾಚಸ್ಪತಯೇ ನಮಃ ॥ ಓಂ ದಿವ್ಯಚಕ್ಷುಷೇ ॥ ಓಂ ಕೇಶವಾಯ ನಮಃ ॥ ತೃತೀಯಾವರಣಪೂಜಾಂ ಸಮರ್ಪಯಾಮಿ ॥ ಓಂ ಅನಂತಾಯ ನಮಃ ॥ ಓಂ ಕಪಿಲಾಯ ನಮಃ ॥ ಓಂ ಶೇಷಾಯ ನಮಃ ॥ ಓಂ ಸಂಕರ್ಷಣಾಯ ನಮಃ ॥ ಓಂ ನೀಲಕಂಠಾಯ ನಮಃ ॥ ಓಂ ಶ್ರೀಧರಾಯ ನಮಃ ॥ ಓಂ ಬಲಭದ್ರಾಯ ನಮಃ ॥ ಓಂ ಲೋಕನಾಥಾಯ ನಮಃ ॥ ಓಂ ಸಹಸ್ರಫಣಾಮಣಿವಿಭೂಷಿತಾಯ ನಮಃ ॥ ಓಂ ಆನಂದಾಯ ನಮಃ ॥ ಚತುರ್ಥಾವರಣಂ ಪೂಜಾಂ ಸಮರ್ಪಯಾಮಿ ॥ ಓಂ ಇಂದ್ರಾಯ ನಮಃ । ಓಂ ಅಗ್ನಯೇ ನಮಃ । ಓಂ ನಿರಋತಯೇ ನಮಃ । ಓಂ ವರುಣಾಯ ನಮಃ । ಓಂ ವಾಯುವೇ ನಮಃ । ಓಂ ಕುಬೇರಾಯ ನಮಃ । ಓಂ ಈಶಾನಾಯ ನಮಃ । ಇತಿ ಪಂಚಮಾವರಣಪೂಜಾಂ ಸಮರ್ಪಯಾಮಿ । ಓಂ ಮೇಷಾಯ ನಮಃ । ಓಂ ವೃಷಭಾಯ ನಮಃ । ಓಂ ಮಿಥುನಾಯ ನಮಃ । ಓಂ ಸಿಂಹಾಯ ನಮಃ । ಓಂ ಕನ್ಯಾಯೈ ನಮಃ । ಓಂ ತುಲಾಯೈ ನಮಃ । ಓಂ ವೃಶ್ಚಿಕಾಯ ನಮಃ । ಓಂ ಧನುಷೇ ನಮಃ । ಓಂ ಮಕರಾಯ ನಮಃ । ಓಂ ಕುಂಭಾಯ ನಮಃ । ಓಂ ಮೀನಾಯ ನಮಃ । ಇತಿ ಷಷ್ಠಾವರಣಪೂಜಾಂ ಸಮರ್ಪಯಾಮಿ । ಓಂ ಚಕ್ರಾಯ ನಮಃ । ಓಂ

ಗದಾಯೈ ನಮಃ । ಓಂ ಪದ್ಮಾಯ ನಮಃ । ಓಂಶಾಙ್ಗಾಯ ನಮಃ । ಓಂ ವಜ್ರಾಯ ನಮಃ । ಓಂ ಖಡ್ಗಾಯ ನಮಃ । ಓಂ ತ್ರಿಶೂಲಾಯ ನಮಃ । ಓಂ ಇತಿ ಸಪ್ತಮಾವರಣಪೂಜಾಂ ॥ ಓಂ ಬ್ರಾಹ್ಮ್ಯೈ ನಮಃ । ಮಾಹೇಶ್ವರ್ಯೈ ನಮಃ ॥ ಓಂ ಕೌಮಾರ್ಯೈ ನಮಃ । ಓಂ ವೈಷ್ಣವ್ಯೈ ನಮಃ । ಓಂ ವರಾಹ್ಯೈ ನಮಃ । ಓಂ ಇಂದ್ರಾಣ್ಯೈ ನಮಃ । ಓಂ ಚಾಮುಂಡಾಯೈ ನಮಃ।ಓಂ ಇತಿ ಅಷ್ಟಮಾವರಣ ಪೂಜಾಂ ಸಮರ್ಪಯಾಮಿ ॥ ಅಥ ಪತ್ರಪೂಜಾ । ಓಂ ಅನಂತಾಯ ನಮಃ । ಭೃಂಗ ರಾಜಪತ್ರಂ । ಓಂ ಸಂಕರ್ಷಣಾಯ ನಮಃ । ಮರುವಕಪತ್ರಂ । ಓಂ ಕಪಿಲಾಯ ನಮಃ। ಮಾಚೀಪತ್ರಂ। ಓಂ ಶೇಷಾಯ ನಮಃ। ಚೂತಪತ್ರಂ। ಓಂ ಹಲಾಯುಧಾಯ ನಮಃ । ದ್ರೋಣಪತ್ರಂ । ಓಂ ವಿಶ್ವರೂಪಾಯ ನಮಃ । ಕರವೀರಪತ್ರಂ । ಓಂ ವಾಸುದೇವಾಯ ನಮಃ । ಜಾಜೀಪತ್ರಂ । ಓಂ ಸನಾತನಾಯ ನಮಃ । ದೂರ್ವಾ ಪತ್ರಂ । ಓಂ ವಾಮನಾಯ ನಮಃ । ಶತಪತ್ರಪುಷ್ಪಂ । ಓಂ ಪುಣ್ಯಾಯ ನಮಃ । ತುಲಸೀಪತ್ರಂ । ಓಂ ಪುರುಷೋತ್ತಮಾಯ ನಮಃ । ಅಪಮಾರ್ಗಪತ್ರಂ । ಓಂ ಶ್ರೀನಿ ವಾಸಾಯ ನಮಃ । ದೇವದಾರುಪತ್ರಂ । ಓಂ ಶ್ರೀನಿಕೇತಾಯ ನಮಃ । ಶ್ರೀಗಂಧ ಪತ್ರಂ । ಓಂ ಕ್ಷೇತ್ರಪಾಲಕಾಯ ನಮಃ । ಬಿಲ್ವಪತ್ರಂ । ಓಂ ಕೇಶವಾಯ ನಮಃ । ವಿಷ್ಣುಕ್ರಾಂತಪತ್ರಂ । ಓಂ ಲಕ್ಷ್ಮೀವಲ್ಲಭಾಯ ನಮಃ । ಅರ್ಜುನಪತ್ರಂ । ಓಂ ಶ್ರೀಮದನಂತಪದ್ಮನಾಭಸ್ವಾಮಿನೇ ನಮಃ । ನಾನಾವಿಧಪರಿಮಳಪತ್ರಪೂಜಾಂ ಸಮ ರ್ಪಯಾಮಿ । ಅಥ ದೋರಗ್ರಂಥಿಪೂಜಾ । ಓಂ ಅನಂತಾಯ ನಮಃ । ಪ್ರಥಮ ಗ್ರಂಥಿಂ ಪೂಜಯಾಮಿ । ಓಂ ಕಲಾತ್ಮನೇ ನಮಃ । ದ್ವಿತೀಯಗ್ರಂಥಿಂ । ಓಂ ಕೇಶ ವಾಯ ನಮಃ । ತೃತೀಯಗ್ರಂಥಿಂ । ಓಂ ಸಂಕರ್ಷಣಾಯ ನಮಃ । ಚತುರ್ಥಿ ಗ್ರಥಿಂ । ಓಂ ಹಲಾಯುಧಾಯ ನಮಃ । ಪಂಚಮಗ್ರಂಥಿಂ । ಓಂ ಮುಸಲಿನೇ ನಮಃ । ಷಷ್ಠಗ್ರಂಥಿಂ । ಓಂ ಸೀರಪಾಣಯೇ ನಮಃ । ಸಪ್ತಮಗ್ರಂಥಿಂ । ಓಂ ಬಟಭದ್ರಾಯ ನಮಃ । ಅಷ್ಟಮಗ್ರಂಥಿಂ । ಓಂ ಹರಯೇ ನಮಃ । ನವಮಗ್ರಂಥಿಂ ಓಂ ಕೃಷ್ಣಾಯ ನಮಃ । ದಶಮಗ್ರಂಥಿಂ । ಓಂ ಅಚ್ಯುತಾಯ ನಮಃ । ಏಕಾದಶ ಗ್ರಂಥಿಂ । ಓಂ ವೈಕುಂಠಾಯ ನಮಃ । ದ್ವಾದಶಗ್ರಂಥಿಂ । ಓಂ ಜನಾರ್ದನಾಯ ನಮಃ । ತ್ರಯೋದಶಗ್ರಂಥಿಂ । ಓಂ ಉಪೇಂದ್ರಾಯ ನಮಃ । ಚತುರ್ದಶಗ್ರಂಥಿಂ । ಶ್ರೀಮದನಂತಪದ್ಮನಾಭಸ್ವಾಮಿನೇ ನಮಃ । ದೋರಗ್ರಂಥಿಪೂಜಾಂ ಸಮರ್ಪಯಾಮಿ । ಅಥ ಅಷ್ಟೋತ್ತರಶತನಾಮಪೂಜಾಂ ಚ ಕರಿಷ್ಯೇ ॥

ಓಂ ಅನಂತಪದ್ಮನಾಭಾಯ ನಮಃ । ಓಂ ಅಕಾರವಾಚ್ಯಾಯ ನಮಃ ॥ ಓಂ ಅವಾಙ್ಮನಸಗೋಚರಾಯ ನಮಃ । ಓಂ ಅನಂತಲೀಲಾಯ ನಮಃ । ಓಂ ಅನಂತ ಶ್ರಿಯೈ ನಮಃ । ಓಂ ಅನಂತಕೀರ್ತಯೇ ನಮಃ । ಓಂ ಅನಂತಮಹತ್ಮ್ಯಾಯ

ನಮಃ । ಓಂ ಅನಂತವಿದ್ಯಾಪ್ರಭವೇ ನಮಃ । ಓಂ ಅನಂತದೋರ್ದಂಡಾಯ ನಮಃ । ಓಂ ಅನಂತಗುಣಗಂಭೀರಾಯ ನಮಃ । ಓಂ ಅನಂತಫಲಪ್ರದಾಯ ನಮಃ । ಓಂ ಅದ್ಭುತವಿಗ್ರಹಾಯ ನಮಃ । ಓಂ ಅದ್ಭುತಬಲಾಯ ನಮಃ । ಓಂ ಆದಿತ್ಯೆ ಕರ್ತ್ರೇ ನಮಃ । ಓಂ ಆದಿತ್ಯೇಶಾಯ ನಮಃ । ಓಂ ಅಧ್ಯಾತ್ಮವಿದ್ಯಾಯ ನಮಃ । ಓಂ ಅಧಾರನಿಲಯಾಯ ನಮಃ । ಓಂ ಅಧಿಕಪ್ರದಾಯ ನಮಃ । ಓಂ ಅದೃಷ್ಟಾಯ ನಮಃ । ಓಂ ಅಥರ್ವಶತ್ರವೇ ನಮಃ । ಓಂ ಅಭೂತಾಯ ನಮಃ । ಓಂ ಅಚಿಂತ್ಯಾಯ ನಮಃ । ಓಂ ಅಚಲಾಯ ನಮಃ । ಓಂ ಅಚ್ಯುತಾಯ ನಮಃ । ಓಂ ಅತೀಂದ್ರಿಯಾಯ ನಮಃ । ಓಂ ಅಮಿತಾಯ ನಮಃ । ಓಂ ಅಕ್ಷಯಾಯ ನಮಃ । ಓಂ ಅಕ್ಷರಾಯ ನಮಃ । ಓಂ ಅನೀಶಾಯ ನಮಃ । ಓಂ ಅವ್ಯಯಾಯ ನಮಃ । ಓಂ ಅಘೌರ್ಘಾಯ ನಮಃ । ಓಂ ಆತ್ಮತತ್ವಾಧಿಕಾಯ ನಮಃ । ಓಂ ಅಧಿವಿದ್ಯೇಶಾಯ ನಮಃ । ಓಂ ಅಪರೋಕ್ಷತ್ತಮಾಯ ನಮಃ । ಓಂ ಅರ್ಜುನಾಯ ನಮಃ । ಓಂ ಅಕ್ರೂರೋದ್ಧವಮುಖ್ಯಾಯ ನಮಃ । ಓಂ ಅಸ್ತ್ರಭೃತೇ ನಮಃ । ಓಂ ಅಸಿರುದ್ಧಾಯ ನಮಃ । ಓಂ ಅಶ್ವತ್ಥಾಯ ನಮಃ । ಓಂ ಅಶೇಷವೃಕ್ಷರಾಜಾಯ ನಮಃ । ಓಂ ಅಜಾಯ ನಮಃ । ಓಂ ಅನಾದಿಬ್ರಹ್ಮಚಾರಿಣೇ ನಮಃ । ಓಂ ಅನುಲ್ಲಂಘ್ಯಾಯ ನಮಃ । ಓಂ ಆನಂದಾಯ ನಮಃ । ಓಂ ಅಂತರ್ವ್ಯಾಪಿನೇ ನಮಃ । ಓಂ ಅನಂತಸಾಕ್ಷಿಣೇ ನಮಃ । ಓಂ ಅನುತ್ತಮಾಯ ನಮಃ । ಓಂ ಅಸುರಾಂತಕಾಯ ನಮಃ । ಓಂ ಅನರ್ದೇಶ್ಯವಪುಷೇ ನಮಃ । ಓಂ ಆದಿದೇವಾಯ ನಮಃ । ಓಂ ಅಖಿಲಲೋಕೇಶಾಯ ನಮಃ । ಓಂ ಅನಂತಮಂತ್ರಕೋಟೀಶಾಯ ನಮಃ । ಓಂ ಆದಿವಿದುಷೇ ನಮಃ । ಓಂ ಅಖಂಡಿತಧಿಯೇ ನಮಃ । ಓಂ ಆದಿಕೂರ್ಮಾಯ ನಮಃ । ಓಂ ಅಖಿಲಾಧಾರಾಯ ನಮಃ । ಓಂ ಅಮರೀಕೃತದೇಹಾಯ ನಮಃ । ಓಂ ಆತ್ಮದಾಯ ನಮಃ । ಓಂ ಅಖಿಲೇಷ್ಟದಾಯ ನಮಃ । ಓಂ ಅನಘಾಯ ನಮಃ । ಓಂ ಅದ್ವಿತೀಯತಪೋಮೂರ್ತಯೇ ನಮಃ । ಓಂ ಆದಿರಾಜಾಯ ನಮಃ । ಓಂ ಅಖಿಲಾರ್ತಿಹೃತೇ ನಮಃ । ಓಂ ಅತೀಂದ್ರಿಯಾಯ ನಮಃ । ಓಂ ಅಗಸ್ತ್ಯಾದಿವಂದಿತಾಯ ನಮಃ । ಓಂ ಅಖಿಲಪುಣ್ಯಕೃತೇ ನಮಃ । ಓಂ ಅವ್ಯಕ್ತಾಯ ನಮಃ । ಓಂ ಅಪರಾಜಿತಾಯ ನಮಃ । ಓಂ ಅಕ್ಷರಕೃತೇ ನಮಃ । ಓಂ ಅಘೋರಾಯ ನಮಃ । ಓಂ ಅರಿಮರ್ದನಾಯ ನಮಃ । ಓಂ ಅನಿಷ್ಟಮಥನಾಯ ನಮಃ । ಓಂ ಅಸಾಧ್ಯೈಕ ಜಗಚ್ಛಾಸ್ತ್ರೇ ನಮಃ । ಓಂ ಅಪ್ರಮೇಯಾಯ ನಮಃ । ಓಂ ಅಮರಪ್ರಭವೇ ನಮಃ । ಓಂ ಆತ್ಮಗುಹ್ಯಾಯ ನಮಃ । ಓಂ ಆತ್ಮವತೇ ನಮಃ । ಓಂ ಅಪ್ರಮೇಯಾತ್ಮನೇ ನಮಃ । ಓಂ ಅಸಮ್ಮಿತಾಯ ನಮಃ । ಓಂ ಅಮೋಘಾಯ ನಮಃ । ಓಂ ಅಮೃತಾಯ ನಮಃ । ಓಂ ಅನಿಮಿಷಾಯ ನಮಃ । ಓಂ ಅಗ್ರಗಣ್ಯಾಯ ನಮಃ । ಓಂ ಆವರ್ತನಾಯ ನಮಃ । ಓಂ ಅಹಃ ಸಂವರ್ತಕಾಯ

ನಮಃ । ಓಂ ಅನಿಲಾಯ ನಮಃ । ಓಂ ಅಸಂಖ್ಯೇಯಾಯ ನಮಃ । ಓಂ ಅಮೃತಾಂಶೂದ್ಭವಾಯ ನಮಃ । ಓಂ ಅನಲಾಯ ನಮಃ । ಓಂ ಅಪಾಂ ನಿಧಯೇ ನಮಃ । ಓಂ ಅಧಿಷ್ಠಾನಾಯ ನಮಃ । ಓಂ ಅಶೋಕಾಯ ನಮಃ । ಓಂ ಅನಂತಾಯ ನಮಃ । ಓಂ ಶ್ರೀಮದನಂತಪದ್ಮನಾಭಸ್ವಾಮಿನೇ ನಮಃ ॥ ಇತಿ ಅಷ್ಟೋತ್ತರ ಶತನಾಮ ಪೂಜಾಂ ಸಮರ್ಪಯಾಮಿ ॥

ದಶಾಂಗಂ ಗುಗ್ಗುಲೋಪೇತಂ ಚಂದನಾಗರುಸಂಯುತಂ । ಸರ್ವೇಷಾಮುತ್ತಮಂ ಧೂಪಂ ಗೃಹಾಣ ಸುರಪೂಜಿತ। ಯತ್ಪುರುಷಂ ವ್ಯದಧುಃ ಕತಿಧಾವ್ಯಕಲ್ಪಯನ್ । ಮುಖಂ ಕಿಮಸ್ಯ ಕೌ ಬಾಹೂ । ಕಾ ಊರೂ ಪಾದವುಚ್ಯೇತೇ । ಧೂಪಂ । ಸಾಜ್ಯಂ ತ್ರಿವರ್ತಿ ಸಂಯುಕ್ತಂ ವಹ್ನಿನಾ ಯೋಜಿತಂ ಮಯಾ । ಗೃಹಾಣ ದೀಪಂ ದೇವೇಶ ತ್ರೈಲೋಕ್ಯತಿಮಿರಾಪಹ । ಬ್ರಾಹ್ಮಣೋಽಸ್ಯ ಮುಖಮಾಸೀದ್ಬಾಹೂ ರಾಜನ್ಯಃ ಕೃತಃ । ಊರೂ ತದಸ್ಯ ಯದ್ವೈಶ್ಯಃ । ಪದ್ಭ್ಯಾಗ್‌ಂ ಶೂದ್ರೋ ಅಜಾಯತ । ದೀಪಂ ದರ್ಶಯಾಮಿ । ನೈವೇದ್ಯಂ ಗೃಹ್ಯತಾಂ ದೇವ ಭಕ್ತಿಂ ಮೇ ಅಚಲಾಂ ಕುರು । ಈಪ್ಸಿತಂ ಮೇ ವರಂ ದೇಹಿ ಪರತ್ರ ಚ ಪರಾಂ ಗತಿಂ । ಅನ್ನಂ ಚತುರ್ವಿಧಂ ಸ್ವಾದು ಪಯೋದಧಿಘೃತಂ ತಥಾ । ನಾನಾ ವ್ಯಂಜನ ಶೋಭಾಢ್ಯಂ ನೈವೇದ್ಯಂ ಪ್ರತಿಗೃಹ್ಯತಾಂ । ಚಂದ್ರಮಾ ಮನಸೋ ಜಾತಃ ಚಕ್ಷೋಸ್ಸೂರ್ಯೋ ಅಜಾಯತ । ಮುಖಾದಿಂದ್ರಶ್ಚಾಗ್ನಿಶ್ಚ ಪ್ರಾಣಾದ್ವಾಯುರಜಾಯತ ॥ ವಿಶ್ವಾಮಿತ್ರಋಷಿಃ ಸವಿತಾ ದೇವತಾ ಗಾಯತ್ರೀ ಛಂದಃ । ಇತಿ ನೈವೇದ್ಯಂ ಸಮರ್ಪಯಾಮಿ । ಮಧ್ಯೇ ಪಾನೀಯಂ । ಉತ್ತರಾಪೋಶನಾರ್ಥಂ ಚ ದದ್ಮಿ ತೋಯಂ ಸುನಿರ್ಮಲಂ । ಗೃಹಾಣ ಸುಮುಖೋ ಭೂತ್ವಾ ಅನಂತಾಯ ನಮೋ ನಮಃ । ಉತ್ತರಾಪೋಶನಂ । ಹಸ್ತಪ್ರಕ್ಷಾಳನಂ । ಪಾದಪ್ರಕ್ಷಾಳನಂ ॥ ಕರೋದ್ವರ್ತಕಂ ದೇವ ಮಯಾ ದತ್ತಂ ಹಿ ಭಕ್ತಿತಃ । ಚಾರುಚಂದ್ರಪ್ರಭಂ ದಿವ್ಯಂ ಗೃಹಾಣ ಜಗದೀಶ್ವರ । ಕರೋದ್ವರ್ತನಂ । ಪುನರಾಚಮನಂ । ಇದಂ ಫಲಂ ಮಯಾ ದೇವಸ್ಥಾಪಿತಂ ಪುರತಸ್ತವ। ತೇನ ಮೇ ಸಫಲಾವಾಪ್ತಿರ್ಭವೇಜ್ಜನ್ಮನಿ ಜನ್ಮನಿ। ನಾರಿಕೇಳಫಲಾರ್ಪಣಂ । ಪೂಗೀಫಲಂ ಮಹದ್ದಿವ್ಯ ನಾಗವಲ್ಲೀ ದಳೈರ್ಯುತಂ । ಕರ್ಪೂರೇಣ ಸಮಾಯುಕ್ತಂ ತಾಂಬೂಲಂ ಪ್ರತಿಗೃಹ್ಯತಾಂ। ನಾಭ್ಯಾಆಸೀದಂತರಿಕ್ಷಂ ಶೀರ್ಷ್ಣೋ ದ್ಯೌಃ ಸಮವರ್ತತ । ಪದ್ಭ್ಯಾಂ ಭೂಮಿರ್ದಿಶಶ್ಶ್ರೋತ್ರಾತ್‌ ತಥಾ ಲೋಕಾಗ್‌ಂ ಅಕಲ್ಪಯನ್ । ತಾಂಬೂಲಂ ಸಮರ್ಪಯಾಮಿ । ಚಂದ್ರಾದಿತ್ಯೌ ಚ ಧರಣೀ ವಿದ್ಯುದಗ್ನಿಸ್ತ್ವಮೇವ ಹಿ । ತ್ವ ಮೇವ ಸರ್ವಜ್ಯೋತೀಂಷಿ ಭಜ ನೀರಾಜನಂ ಪ್ರಭೋ । ವೇದಾಹಮೇತಂ ಪುರುಷಂ ಮಹಾಂತಂ ಆದಿತ್ಯವರ್ಣಂ ತಮಸಃ ಪರಸ್ತಾತ್ । ಸರ್ವಾಣಿ ರೂಪಾಣಿ ವಿಚಿತ್ಯ ಧೀರಃ ನಾಮಾನಿ ಕೃತ್ವಾ ಅಭಿವದನ್ಯದಾಸ್ತೇ । ಉತ್ತರನೀರಾಜನಂ ಸಮರ್ಪಯಾಮಿ । ಅನಂತಗುಣರತ್ನಾಯ ವಿಶ್ವರೂಪಧರಾಯ ಚ । ಅನಂತ

ರೂಪಿಣೇ। ತುಭ್ಯಂ ಗೃಹಾಣಾರ್ಘ್ಯಂ ನಮೋಽಸ್ತು ತೇ। ಪುನರರ್ಘ್ಯಂ ಸಮರ್ಪಯಾಮಿ। ಅದ್ಯ ಮೇ ಸಫಲಂ ಜನ್ಮ ಜೀವಿತಂ ಚ ಸುಜೀವಿತಂ । ಯತ್ತವಾಂಘ್ರಿಯುಗಾಂಭೋಜಮನ್ಮೂರ್ಧ್ನಾ ಭ್ರಮರಾಯತೇ । ಧಾತಾ ಪುರಸ್ತಾದ್ಯಮುದಾಜಹಾರ ಶಕ್ರಃ ಪ್ರವಿದ್ವಾನ್ ಪ್ರತಿಶಶ್ಚತಸ್ರಃ । ತ್ವಮೇವಂ ವಿದ್ವಾನಮೃತ ಇಹ ಭವತಿ । ನಾನ್ಯಃ ಪಂಥಾ ಅಯನಾಯ ವಿದ್ಯತೇ। ತದ್ವಿಷ್ಣೋಃ ಪದಂ ॥ ರಾಜಾಧಿರಾಜಾಯ ನಮಃ ॥ ಸಹಸ್ರಶೀರ್ಷಂ-ಭೂರ್ಭುವಸ್ಸುವರೋಂ ಇತಿ ಮಂತ್ರಪುಷ್ಪಂ । ಪಾಪೋಽಹಂ ಪಾಪಕರ್ಮಾಹಂ ಪಾಪಾತ್ಮಾ ಪಾಪಸಂಭವಃ । ತ್ರಾಹಿ ಮಾಂ ಪುಂಡರೀಕಾಕ್ಷ ಶರಣಾಗತವತ್ಸಲ। ಇತಿ ಪ್ರದಕ್ಷಿಣಂ ॥ ನಮಸ್ತೇ ದೇವದೇವೇಶ ನಮಸ್ತೇ ಧರಣೀಧರ ॥ ನಮಸ್ತೇ ಸರ್ವನಾಗೇಂದ್ರ ನಮಸ್ತೇ ಪುರುಷೋತ್ತಮ । ನಮಸ್ಕಾರಾನ್ ॥ ಅನಂತಕಾಮದಂ ದೇವಂ ಸರ್ವಪಾಪಪ್ರಣಾಶನ ॥ ಅನಂತದೋರರೂಪೇಣ ಪುತ್ರಪೌತ್ರಾನ್ ಪ್ರವರ್ಧಯ ॥ ದೋರಗ್ರಹಣಂ । ಅನಂತಸಂಸಾರಮಹಾಸಮುದ್ರೇ ಮಗ್ನಂ ಸಮಭ್ಯುದ್ಧರ ವಾಸುದೇವ ॥ ಅನಂತರೂಪಿನ್ವಿನಿಯೋಜಯಸ್ವ ಹ್ಯನಂತಸೂತ್ರಾಯ ನಮೋ ನಮಸ್ತೇ । ದೋರನಮಸ್ಕಾರಃ । ಸಂಸಾರಗಹ್ವರಗುಹಾಸು ಸುಖಂ ವಿಹರ್ತುಂ ವಾಂಛತಿ ಯೇ ಕುರುಕುಲೋದ್ಭವಶುದ್ಧಸತ್ವಾಃ। ಸಂಪೂಜ್ಯ ತಂ ತ್ರಿಭುವನೇಶಮನಂತದೇವಂ ಬಧ್ನಂತಿ ದಕ್ಷಿಣಕರೇ ವರದೋರಕಂ ತೇ ॥ ದೋರಬಂಧನಂ ॥ ನಮಸ್ತೇ ಸರ್ವದೇವಾಯ ವಿಶ್ವರೂಪಧರಾಯ ಚ ॥ ಸೂತ್ರಗ್ರಂಥಿಷು ಸಂಸ್ಥಾಯ ಅನಂತಾಯ ನಮೋ ನಮಃ ॥ ಜೀರ್ಣದೋರವಿಸರ್ಜನಂ ॥ ಯಾನಿ ಕಾನಿ ಚೇತಿ ನಮಸ್ಕಾರಃ। ಧಾತಾ ಪುರಸ್ತಾದಿತಿ ನಮಸ್ಕಾರಂ ಸಮರ್ಪಯಾಮಿ ॥ ಜ್ಞಾನತೋಽಜ್ಞಾನತೋ ವಾಪಿ ಯನ್ಮಯಾ ಚರಿತಂ ವ್ರತಂ । ತನ್ಮಾಮಕಂ ಕೃತಂ ಸರ್ವಂ ಕ್ಷಮಸ್ವ ಕರುಣಾನಿಧೇ । ಪ್ರಾರ್ಥನಾಂ ॥ ಅಥ ಉಪಾಯನದಾನಂ । ಅನಂತಸ್ಸರ್ವನಾಗಾನಾಮಧಿಪಃ ಸರ್ವಕಾಮದಃ । ದಾನೇನಾನೇನ ಸುಪ್ರೀತೋ ಭವತ್ವಿಹ ಸದಾ ಮಮ ॥ ಅನಂತಃ ಪ್ರತಿಗೃಹ್ಣಾತಿ ಅನಂತೋ ವೈ ದದಾತಿ ಚ ॥ ಅನಂತಸ್ತಾರಕೋಭಾಭ್ಯಾಮನಂತಾಯ ನಮೋ ನಮಃ॥ ದೇವಸ್ಯ ತ್ವಾ ಪ್ರತಿಗೃಹ್ಣಾತು ॥ ಪ್ರತಿಗೃಹ್ಣಾಮೀತಿ ಪ್ರತಿವಚನಂ ॥ ಪುನಃ ಪೂಜಾಂ ಕುರ್ಯಾತ್ ॥ ಛತ್ರಮಿತ್ಯಾದಿ ॥ ಯಸ್ಯ ಸ್ಮೃತ್ಯಾ ಚ ಅನಯಾ ಪೂಜಯಾ ಭಗವಾನ್ ಸರ್ವಾತ್ಮಕಃ ಶ್ರೀ ಅನಂತಪದ್ಮನಾಭಃ ಸುಪ್ರೀತೋ ಭವತು ॥

ಇತಿ ಪೂಜಾವಿಧಾನಂ ಸಂಪೂರ್ಣಂ

ಅಥ ಅನಂತಪದ್ಮನಾಭ ವ್ರತಕಥಾ

ಶ್ಲೋ॥ ಆರಣ್ಯೇ ವರ್ತಮಾನಾಸ್ತೇ ಪಾಂಡವಾಃ ದುಃಖಕರ್ಷಿತಾಃ ॥ ಕೃಷ್ಣಂ ದೃಷ್ಟ್ವಾ ಮಹಾತ್ಮಾನಂ ಪ್ರಣಿಪತ್ಯ ಯಥಾಕ್ರಮಂ ॥ ಯುಧಿಷ್ಠಿರ ಉವಾಚ ॥ ಅಹಂ ದುಃಖೇನ ಸಂತಪ್ತೋ ಭ್ರಾತೃಭಿಃ ಪರಿವಾರಿತಃ ॥ ಕಥಂ ಮುಕ್ತಿರ್ಭವೇದಾಸ್ಮಾಕ ಮನಂತಾದ್ದುಃಖಸಾಗರಾತ್ ॥ ಶ್ರೀಕೃಷ್ಣ ಉವಾಚ ॥ ಅನಂತವ್ರತಮಿತ್ಯಸ್ತಿ ಸರ್ವ ಪಾಪಪ್ರಣಾಶನಂ ॥ ಸರ್ವಸಿದ್ಧಿಪ್ರದಂ ನೃಣಾಂ ಸ್ತ್ರೀಣಾಂ ಚೈವ ಯುಧಿಷ್ಠಿರ ॥ ಅನಂತ ಕೀರ್ತಿದಂ ನೃಣಾಮನಂತಶ್ರೀಕರಂ ಶುಭಂ ॥ ಅನಂತಪುತ್ರಸುಖದಂ ಮನಂತಾಭೀಷ್ಟ ದಾಯಕಂ ॥ ಶುಕ್ಲಪಕ್ಷೇ ಚತುರ್ದಶ್ಯಾಂ ಮಾಸಿ ಭಾದ್ರಪದೇ ಶುಭೇ ॥ ತಸ್ಯಾನು ಷ್ಠಾನ ಮಾತ್ರೇಣ ಸರ್ವಪಾಪೈಃ ಪ್ರಮುಚ್ಯತೇ ॥ ಯುಧಿಷ್ಠಿರಃ ಉವಾಚ । ಕೃಷ್ಣಃ ಕೋಽಯಂ ತ್ವಯಾ ಖ್ಯಾತಃ ಕೋಽನಂತ ಇತಿ ವಿಶ್ರುತಃ । ಕಿಂ ಶೇಷೋ ನಾಗ ರೂಪೋ ವಾ ಅನಂತಸ್ತಕ್ಷಕೋಽಪಿ ವಾ । ಪರಮಾತ್ಮಾಥವಾನಂತ ಉತ ಬ್ರಹ್ಮಾ ಸ ಉಚ್ಯತೇ । ಕೋ ಯಂ ದೇವೋಽನಂತಸಂಜ್ಞಸ್ತಥ್ಯಂ ಮೇ ಬ್ರೂಹಿ ಕೇಶವ । ಶ್ರೀಕೃಷ್ಣ ಉವಾಚ । ಅನಂತ ಇತ್ಯಹಂ ಪಾರ್ಥ ವಿಶ್ವರೂಪ ನಿಬೋಧ ಮೇ । ಆದಿತ್ಯಃ ಗ್ರಹಚಾರೇಣ ಯಃ ಕಾಲ ಉಪಪದ್ಯತೇ । ಕಳಾಕಾಷ್ಠಾ ಮುಹೂರ್ತಾದಿ ದಿನರಾತ್ರಿಶರೀರವಾನ್ । ಪಕ್ಷರ್ತುಮಾಸವರ್ಷಾದಿ ಯುಗಕಲ್ಪವ್ಯವಸ್ಥಯಾ । ಯೋಽ ಯಂ ಕಾಲೋ ಮಯಾಽಖ್ಯಾತಃ ಸೋಽನಂತ ಇತಿ ಸಂಜ್ಞಕಃ । ಸೋಽಹಂ ಕಾಲೋ ವತೀರ್ಣೋತ್ರ ಭೂಮಿಭಾರಾಪನುತ್ತಯೇ । ದಾನವಾನಾಂ ವಿನಾಶಾಯ ವಸುದೇವ ಕುಲೋದ್ಭವಂ ॥ ಮಾಂ ವಿದ್ಧ್ಯನಂತಂ ತ್ವಂ ಪಾರ್ಥ ಕೃಷ್ಣಂ ವಿಷ್ಣುಂ ಹರಿಂ ಶಿವಂ । ಬ್ರಹ್ಮಾಣಾ ಭಾಸ್ಕರಂ ಶೇಷಂ ಸರ್ವವ್ಯಾಪಿನಮೀಶ್ವರಂ । ವಿಶ್ವರೂಪಂ ಮಹಾತ್ಮಾನಾಂ ಸೃಷ್ಟಿಸ್ಥಿತ್ಯಂತಕಾರಣಂ । ಅನಂತಂ ಪದ್ಮನಾಭಂ ಚ ನಾರಸಿಂಹಂ ಚ ವಾಮನಂ । ಪ್ರತ್ಯಯಾರ್ಥಂ ಮಯಾ ಪಾರ್ಥ ಮಮ ರೂಪಂ ಪ್ರದರ್ಶಿತಂ ॥ ಪೂರ್ವಮೇವ ಪರಬ್ರಹ್ಮ ಯೋಗಿಧ್ಯೇಯಮನುತ್ತಮಂ । ವಿಶ್ವರೂಪಮನಂತಂ ಚ ಯಸ್ಮಿನ್ನಿಂದ್ರಾಶ್ಚತುರ್ದಶ ॥ ವಸವೋಽಷ್ಟೌ ದ್ವಾದಶಾರ್ಕಾ ರುದ್ರಾ ಏಕಾದಶ ಸ್ಮೃತಾಃ । ಸಪ್ತರ್ಷಯಸ್ಸಮುದ್ರಾಶ್ಚ ಪರ್ವತಾಸ್ಸರಿತೋ ದ್ರುಮಾಃ । ನಕ್ಷತ್ರಾಣಿ ದಿಶೋ ಭೂಮಿಃ ಪಾತಾಳಂ ಭೂರ್ಭುವಾ ದಿಕಂ । ಮಾ ಕುರುಷ್ವಾತ್ರ ಸಂದೇಹಮಹಮೇವ ಯುಧಿಷ್ಠಿರ ॥ಯುಧಿಷ್ಠಿರ ಉವಾಚ॥ ಕಿಂ ಪುಣ್ಯಂ ಕಿಂ ಫಲಂ ತಸ್ಯ ಕಿಂ ದಾನಂ ಕಶ್ಯ ಪೂಜನಂ । ಕೇನ ಚಾಪಿ ಪುರಾ ಚೀರ್ಣಂ ಮರ್ತ್ಯಲೋಕೇ ಪ್ರಕಾಶಿತಂ । ಏತತ್ಸಮಸ್ತಂ ವಿಸ್ತಾರ್ಯ ತಥ್ಯಂ ಮೇ ಬ್ರೂಹಿ ಕೇಶವ ॥ ಶ್ರೀಕೃಷ್ಣ ಉವಾಚ ॥ ಆಸೀತ್ಪುರಾ ಕೃತಯುಗೇ ಸುಮಂತೋ ನಾಮ ವೈ ದ್ವಿಜಃ । ವಶಿಷ್ಠಗೋತ್ರೇ ಚೋತ್ಪನ್ನಸ್ಸುರೂಪಾಂ ಚ ಭೃಗೋಸ್ಸುತಾಂ । ದೀಕ್ಷಾನಾ ಮೋಪಯೇಮೇ ತಾಂ ವೇದೋಕ್ತವಿಧಿನಾ ತತಃ ॥ ತಸ್ಯಾಃ ಕಾಲೇನ ಸಂಜಾತಾ

ದುಹಿತಾನಂತಲಕ್ಷಣಾ ॥ ಶೀಲಾ ನಾ ಸುಶೀಲಾ ಚ ವರ್ಧತೇ ಮಾತೃವೇಶ್ಮನಿ ॥ ಮಾತಾ ಚ ತಸ್ಯಾಃ ಕಾಲೇನ ಜ್ವರದಾಹೇನ ಪೀಡಿತಾ । ವಿನನಾಶ ನದೀತೀರೇ ಮಾತಾ ಸ್ವರ್ಗಪುರಂ ಯಯೌ । ಸುಮಂತೋಽಪಿ ತತೋಽನ್ಯಾಂ ವೈ ಧರ್ಮಲೋಪಭಯಾತ್ಪ್ರಸಃ ॥ ಉಪಯೇಮೇ ವಿಧಾನೇನ ಕರ್ಕಶಾಂನಾಮ ಕನ್ಯಕಾಂ ॥ ದುಶ್ಶೀಲಾಂ ಕರ್ಕಶಾಂ ಚಂಡೀಂ ನಿತ್ಯಂ ಕಲಹಕಾರಿಣೀಂ । ಸಾಪಿ ಶೀಲಾ ಪಿತುರ್ಗೇಹೇ ಗೃಹಾರ್ಚನ ರತಾ ಬಭೌ । ಕುತಸ್ತಂಬ ಬಹಿರ್ದ್ವಾರ ದೇಹಳೀ ತೋರಣಾದಿಷು । ಚಾತುರ್ವರ್ಣ್ಯೈಕ ರಂಗೈಶ್ಚ ರಕ್ತಪೀತೈಸ್ಸಿತಾಸಿತೈಃ । ಸ್ವಸ್ತಿಕೈಃ ಪದ್ಮಸಂಖ್ಯೈಶ್ಚ ಸಾರ್ಚಯಂತೀ ಮುಹುರ್ಮುಹುಃ।ಪಿತಾ ದೃಷ್ಟ್ವಾ ಸುಮಂತೋಽಪಿಸ್ತ್ರೀಚಿಹ್ನಾಂ ಯೌವನೇ ಸ್ಥಿತಾಂ।ಕಸ್ಮೈ ದೇಯಾ ಮಯಾ ಬಾಲೇತ್ಯಚಿಂತಯದತೀವ ಸಃ।ಮುನಿಃಕೌಂಡಿನ್ಯನಾಮಾ ವೈ ವಿವಾಹೇಚ್ಛುರಥಾಗತಃ । ತಸ್ಮೈ ದೇಯಾ ಕನ್ಯಕೇತಿ ಸುಮಂತೇನಾಪಿ ನಿಶ್ಚಿತಂ।ತತೋ ದದ್ವಾ ಮುನೀಂದ್ರಾಯ ಕೌಂಡಿನ್ಯಾಯ ಶುಭೇದಿನೇ।ಸ್ವಗೃಹ್ಯೋಕ್ತ ವಿಧಾನೇನ ವಿವಾಹಮಕರೋತ್ತತಃ । ನಿರ್ವರ್ತ್ಯೌದ್ವಾಹಿಕಂ ಸರ್ವಂ ಪ್ರೋಕ್ತವಾನ್ ಕರ್ಕಶಾಂ ದ್ವಿಜಃ । ಕಿಂಚಿದ್ವೈವಾಹಿಕಂ ದೇಯಂ ಜಾಮಾತುಃ ಪಾರಿತೋಷಿಕಂ । ತಚ್ಛ್ರುತ್ವಾ ಕರ್ಕಶಾ ಶ್ರುದ್ಧಾ ಪ್ರವಿಶ್ಯ ಗೃಹಮಂಟಪಂ॥ ಕವಾಟಂ ಸುಸ್ಥಿರಂ ಬದ್ಧ್ವಾ ಬಭಾಷೇ ಗವ್ಯತಾಮಿತಿ । ಭೋಜ್ಯಾವಶಿಷ್ಟಚೂರ್ಣೇನ ಪಾಥೇಯಂ ಚ ಚಕಾರ ಸಃ॥ ಕೌಂಡಿನ್ಯೋಽಪಿ ವಿವಾಹ್ಯೈನಾಂ ಪಥಿ ಗಚ್ಛನ್ ಶನೈಶ್ಶನೈಃ।ಶೀಲಾಂ ಸುಶೀಲಾಮಾದಾಯ ನವೋಢಾಂ ಗೋರಥೇನ ಚ।ಗಚ್ಛನ್ ಮಧ್ಯಾಹ್ನವೇಳಾಯಾಂ ಸಮುತ್ತೀರ್ಯ ಸರಿತ್ತಟೇ।ಕರ್ತುಂ ಮಧ್ಯಾಹ್ನಿಕಂ ಕರ್ಮ ಜಲಾಶಯಮುಪಾಗಮತ್ ॥ ದದರ್ಶ ಶೀಲಾ ಸಾ ಸ್ತ್ರೀಣಾಂ ಸಮೂಹಂ ರಕ್ತವಾಸಸಾಂ । ಚತುರ್ದಶ್ಯಾಮರ್ಚಯಂತೀ ಭಕ್ತ್ಯಾ ದೇವಂ ಪೃಥಕ್ಪೃಥಕ್ । ಉಪಗಮ್ಯ ಶನೈಶ್ಶೀಲಾ ಪಪ್ರಚ್ಛ ಸ್ತ್ರೀಕದಂಬಕಂ। ನಾರ್ಯಃ ಕಿಮೇತನ್ಮೇ ಬ್ರೂಥ ಕಿಂ ನಾಮ ವ್ರತಮೀದೃಶಂ । ತಾ ಊಚುರ್ಯೋಷಿತಾಸ್ಸರ್ವಾ ಅನಂತವ್ರತಮಿತ್ಯಥ । ಸಾ ಬ್ರವೀದಹಮಪ್ಯೇತತ್ ಕರಿಷ್ಯೇ ವ್ರತಮುತ್ತಮಂ ॥ ವಿಧಾನಂ ಕೀದೃಶಂ ತತ್ರ ಕೋ ದೇವಃ ಕಸ್ಯ ಪೂಜನಂ । ಬ್ರೂಥ ಪುಣ್ಯಾಂಗನಾಸ್ಸರ್ವಾ ಏತದ್ವಿಸ್ತಾರ್ಯ ತತ್ತ್ವತಃ ॥ ಸ್ತ್ರಿಯ ಊಚುಃ । ಶುಕ್ಲಪಕ್ಷೇ ನಭಸ್ಯೇ ತು ಚತುರ್ದಶ್ಯಾಂ ಪ್ರಪೂಜಯೇತ್ । ಅನಂತಂ ಸರಿತಸ್ತೀರೇ ಶ್ರುತ್ವಾ ಚೈವ ಹರೇಃ ಕಥಾಂ ॥ ಸ್ನಾತ್ವಾ ನದ್ಯಾಂ ನಮಸ್ಕೃತ್ಯ ಧೌತವಸ್ತ್ರಧರಶ್ಶುಚಿಃ । ಶುಚೌ ದೇಶೇ ಸಮಾಲಿಪ್ಯ ಗೋಮಯೇನ ವಿಚಕ್ಷಣಃ ॥ ಮಂಟಪಂ ಕಾರಯೇತ್ತತ್ರ ಸರ್ವತೋ ಭದ್ರಸಂಜ್ಞಿಕಂ । ಪದಮಷ್ಟದಳೋಪೇತಂ ಮಧ್ಯೇ ಕರ್ಣಿಕಯಾನ್ವಿತಂ ॥ ವಿಧಿನಾ ಪರಿತಃ ಕುರ್ಯಾತ್ತತ್ರ ಶೋಭೋಪಶೋಭಿತಂ । ಶ್ವೇತತಂಡುಲಚೂರ್ಣೇನ ಪಂಚವರ್ಣೇನ ಕಾರಯೇತ್ ॥ ತಸ್ಯ ದಕ್ಷಿಣಪಾರ್ಶ್ವೇ ತು ಕುಂಭಂ ಸಂಸ್ಥಾಪಯೇದ್ಬುಧಃ ॥ ತನ್ಮಧ್ಯೇ ಚಾರ್ಚಯೇದ್ದೇವ

ಮನಂತಂ ಸರ್ವತೋಮುಖಂ ॥ ಕೃತ್ವಾ ದರ್ಭಮಯಂ ದೇವಂ ಶ್ವೇತದ್ವೀಪೇ ಸ್ಥಿತಂ ಹರಿಂ । ಸಮನ್ವಿತಂ ಸಪ್ತಫಣೈಃ ಪಿಂಗಳಾಕ್ಷಂ ಚತುರ್ಭುಜಂ ॥ ದಕ್ಷಿಣಾಗ್ರಕರೇ ಪದ್ಮಂ ಶಂಖಂ ತಸ್ಯಾಪ್ಯಧಃ ಕರೇ।ಚಕ್ರಮೂರ್ಧ್ವಕರೇ ವಾಮೇ ಗದಾಂತಸ್ಯಾಪ್ಯಧಃ ಕರೇ ॥ ಏವಂ ಧ್ಯಾನಮನಂತಸ್ಯ ಕಥಿತಂ ಬ್ರಹ್ಮವಿತ್ತಮಃ । ಕುಂಭೇ ಚ ಮಂಡಲೇ ಚೈವ ಬಿಂಬೇ ಚೈವ ಸಮರ್ಚಯೇತ್ ॥ ಅರ್ಚಯೇದ್ದೇವದೇವೇಶಂ ಮಂಡಲೇ ಧೂಪದೀಪಕೈಃ । ದಿವ್ಯಪುಷ್ಪೈಶ್ಚ ನೈವೇದ್ಯೈಃ ಪ್ರತ್ಯೇಕಂ ಚ ಚತುರ್ದಶ ॥ ತಸ್ಯಾಗ್ರತೋ ದೃಢಂ ಸೂತ್ರಂ ಕುಂಕುಮಾಕ್ತಂ । ಸುದೋರಕಂ।ಚತುರ್ದಶಗ್ರಂಥಿಯುಕ್ತಮುಪಕಲ್ಪ್ಯ ಪ್ರಪೂಜಯೇತ್ । ಪಂಚಪ್ರಸ್ಥ ಪ್ರಮಾಣೇನ ಗೋಧೂಮಾನಾಂ ಚ ಚೂರ್ಣತಃ। ಅಷ್ಟಾವಿಶಂತಿ ಸಂಖ್ಯಾನಿ ಅಪೂಪಾನಿ ಚ ಕಾರಯೇತ್॥ಅರ್ಧಂ ವಿಪ್ರಾಯ ದಾತವ್ಯಮರ್ಧಂ ಭೋಕ್ತವ್ಯಮಾತ್ಮನಾ।ಪೂಜಾದ್ರವ್ಯಾಣಿ ಸರ್ವಾಣಿ ಸ್ಯುಶ್ಚತುರ್ದಶಸಂಖ್ಯಯಾ ॥ ಬ್ರಾಹ್ಮಣಾನ್ಭೋಜಯೇತ್ಪಶ್ಚಾದ್ಭುಂಜಿಯಾತ್ ಸ್ವಸ್ಥಮಾನಸಃ। ಧ್ಯಾತ್ವಾ ನಾರಾಯಣಂ ದೇವಮನಂತಂ ವಿಶ್ವರೂಪಿಣಂ ॥ ವರ್ಷೇ ವರ್ಷೇ ನವಂ ಸೂತ್ರಂ ಯತ್ನೇನೈವ ತು ಧಾರಯೇ ॥ ತತಶ್ಚತುರ್ದಶೇ ವರ್ಷೇ ಕುರ್ಯಾದುದ್ಯಾಪನಂ ಬುಧಃ ॥ ಭುಕ್ತ್ವಾ ತತೋ ವ್ರಜೇದ್ಗೇಹಮಿದಂ ಪ್ರೋಕ್ತಂ ವ್ರತಂ ತವ। ಇತ್ಯುಕ್ತ್ವಾ ತಾಭಿರಾರ್ಯಾಣಿ ಸ್ವತ್ನಹಾಯನ ಧೀಮತಿ । ಸುಶೀಲಾ ತದ್ವ್ರತಂ ಚಕ್ರೇ ಕರೇ ಬದ್ಧ್ವಾ ಸುದೋರಕಂ॥ಪಾಥೇಯಶೇಷಂ ವಿಪ್ರಾಯ ದತ್ವಾ ಭುಕ್ತ್ವಾ ತತಸ್ತತಃ ತಸ್ಮಿನ್ ಕ್ಷಣೇ ಪ್ಯನಂತಸ್ಯ ಪ್ರಸಾದಾದ್ಭೂತಿರುತ್ತಮಾ । ಅಷ್ಟೈಶ್ವರ್ಯಂ ವ್ರತೇನೈವ ಸಂಜಾತಂ ಲೋಕಸಮ್ಮತಂ॥ ದಿವ್ಯಾಶ್ರಮಂ ಶ್ರಿಯಾ ಯುಕ್ತಂಧನಧಾನ್ಯಸಮನ್ವಿತಂ॥ ಆಗತಾತಿಥಿಸತ್ಕಾರಶೋಭಿತಂ ಶಾಂತಸತ್ವವತ್ । ತದ್ದೃಷ್ಟ್ವಾ ಬಾಂಧವಾಸ್ಸರ್ವೇ ಪ್ರಹರ್ಷಂ ಪರಮಂ ಗತಾಃ॥ಅನಂತವ್ರತಮಾಹಾತ್ಮ್ಯಂ ಖ್ಯಾತಂ ಸರ್ವತ್ರ ಭೂರಿಶಃ ॥ ಸಾಽಪಿ ಮಾಣಿಕ್ಯಕಾಂಚೀಭಿರ್ನೂಪುರೈಶ್ಚ ವಿಭೂಷಿತಾ ॥ ದಿವ್ಯಸ್ರಗ್ವಸ್ತ್ರ ಸಂಪನ್ನಾ ಸಾವಿತ್ರೀ ಪ್ರತಿಮಾ ಬಭೌ ॥ ಕದಾಚಿದುಪವಿಷ್ಟೇನ ಕೌಂಡಿನ್ಯೇನ ದುರಾತ್ಮನಾ ॥ ಶೀಲಯಾ ಹಸ್ತ ಮೂಲೇ ತು ದೃಷ್ಟ್ವಾ ಬದ್ಧಂ ಸುದೋರಕಂ॥ಕಿಮಿದಂ ದೋರಕಂ ಶೀಲೇ ಕಸ್ಯ ವಶ್ಯಾಯ ತೇ ಧೃವಂ॥ ಮಮ ವಾನ್ಯಸ್ಯ ವಾ ಚಾಥ ಕಿಮರ್ಥಂ ಭ್ರೂಹಿ ತತ್ವತಃ ॥ ಸತ್ಯಂ ಪ್ರೋವಾಚ ಸಾ ಶೀಲಾ ಹ್ಯನಂತೋಽಯಂ ಮಯಾ ಧೃತಃ। ತಸ್ಯ ಪ್ರಸಾದಾತ್ಸಂಜಾತಾ ಧನಧಾನ್ಯಾದಿಸಂಪದಃ ॥ ಲಭಂತೇ ಸಂಪದಸ್ಸರ್ವೇ ತದಿದಂ ಹಿ ಮಯಾ ಧೃತಂ।ತಸ್ಯಾಸ್ತದ್ವಚನಂ ಶ್ರುತ್ವಾ ಸಾಕ್ಷೇಪಂ ತ್ರುಟಿತಂ ರುಷಾ॥ಕೋಽನಂತ ಇತಿ ದೇವೋಽಯಂ ಬ್ರುವತಾ ತೇನ ಪಾಂಡವ।ಕ್ಷಿಪ್ತಂ ಜ್ವಾಲಾಕುಲೇ ವಹ್ನೌ ಹಾಹಾ ಕೃತ್ವಾ ಪ್ರಧಾವತೀ । ಶೀಲಾ ಗೃಹೀತ್ವಾ ತತ್ಸೂತ್ರಂ ಕ್ಷೀರಮಧ್ಯೇಽವ್ಯನಿಕ್ಷಿಪತ್।ತೇನ ಕರ್ಮವಿಪಾಕೇನ ತಸ್ಯ ಸಾ ಶ್ರೀಃ ಕ್ಷಯಂ ಗತಾ । ಗೋಧನಂ ತಸ್ಕರೈರ್ನಷ್ಟಂ ಗೃಹಂ

ಚಾಗ್ನಿ ವಿದಾಹಿತಂ॥ ಯತ್ರ ಯತ್ರ ಸ್ಥಿತೀ ಗೇಹೇ ತತ್ರ ತತ್ರ ವಿನಾಶಿತಂ ॥ ಸ್ವಜನೈಃ ಕಲಹಂ ನಿತ್ಯಂ ವರ್ಜಿತಂ ಭಾಷಿತಂ ಜನೈಃ॥ ಅನಂತಾಕ್ಷೇಪ ದೋಷೇಣ ದಾರಿದ್ರ್ಯಂ ಚಾಗತಂ ಗೃಹೇ ॥ ನಕೈಶ್ಚಿದ್ಭಾಷಿತಂ ಲೋಕೇ ತೇನ ಸಾರ್ಧಂ ಯುಧಿಷ್ಠಿರ ॥ ತತೋ ಜಗಾಮ ಕೌಂಡಿನ್ಯೋ ನಿರ್ವೇದಾದ್ವನಗಹ್ವರಂ ॥ ಅನಂತಂ ಮನಸಾ ಧ್ಯಾಯನ್ ಕದಾ ದ್ರಕ್ಷ್ಯಾಮಿ ಕೇಶವಂ ॥ ಏವಂ ನಿರಶನಂ ಗೃಹ್ಯ ಬ್ರಹ್ಮಚರ್ಯವ್ರತಂ ಚರನ್ । ವಿಹ್ವಲಂ ಪಯಯೌ ಪಾರ್ಥ ಅರಣ್ಯ ಜನವರ್ಜಿತಂ ॥ ತತ್ರಾಪಶ್ಯನ್ಮಹಾಚೂತಂ ಫಲಿತಂ ಪುಷ್ಪಿತಂ ತಥಾ ॥ ವರ್ಜಿತಂ ಪಕ್ಷಿಸಂಘೈಶ್ಚ ಕೀಟಕೈಶ್ಚ ವಿವರ್ಜಿತಂ ॥ ತಂ ಪ್ರಪಚ್ಛ ತ್ವಯಾನಂತಃ ಕಚ್ಚಿದೃಷ್ಟೋ ಮಹಾದ್ರುಮಃ ॥ ತ್ವಂ ಬ್ರೂಹಿ ಸೋಽಪ್ಯುವಾಚೈನಂ ನಾನಂತಂ ವೇದ್ಮ್ಯಹಂ ದ್ವಿಜ ॥ ಏವಂ ನಿರಾಕೃತಸ್ತೇನ ಗಾಂ ದದಶ ಸವತ್ಸಕಾಂ ॥ ತೃಣಮಧ್ಯೇ ಪ್ರಧಾವಂತೀ ಮಿತಶ್ಚೇತಶ್ಚ ಪಾಂಡವ । ತಾಮಪ್ಯುವಾಚ ಕೌಂಡಿನ್ಯೋ ಕಿಮನಂತಸ್ತ್ವಯೇಕ್ಷಿತಃ ॥ಗೌರಪ್ಯುವಾಚ॥ ಕೌಂಡಿನ್ಯಂ ನಾನಂತಂ ವೇದ್ಮ್ಯಹಂ ದ್ವಿಜ॥ ತತೋ ವ್ರಜನ್ ದದರ್ಶಾಗ್ರೇ ಗೋವೃಷಂ ಶಾದ್ವಲೇ ಸ್ಥಿತಂ॥ದೃಷ್ಟ್ವಾ ಪಪ್ರಚ್ಛ ಗೋಸ್ವಾಮಿನ್ನನಂತೋ ವೀಕ್ಷಿತಸ್ತ್ವಯಾ ॥ ಗೋವೃಷಸ್ತಮುವಾಚೈನಂ ನಾನಂತಂ ವೇದ್ಮ್ಯಹಂ ದ್ವಿಜ ॥ ತತೋ ವ್ರಜನ್ ದದರ್ಶಾಗ್ರೇ ರಮ್ಯಂ ಪುಷ್ಕರಿಣೀದ್ವಯಂ॥ಅನ್ಯೋನ್ಯಂ ಜನಕಲ್ಲೋಲಂ ವೀಚಿಪರ್ಯಂಕಶೋಭಿತಂ ॥ ಛನ್ನಂ ಕಮಲಕಲ್ಹಾರೈಃ ಕುಮುದೋತ್ಪಲಮಂಡಿತಂ ॥ ಸೇವಿತಂ ಭ್ರಮರೈರ್ಹಂಸೈಶ್ಚಕ್ರಕಾರಂಡಕೈರ್ಬಕೈಃ ॥ ತೇಽಪ್ಯಪೃಚ್ಛದ್ದ್ವಿಜೋನಂತಃ ಯುವಾಭ್ಯಾಮುಪಲಕ್ಷಿತಃ ॥ ಊಚತುಃ ಪುಷ್ಕರಿಣ್ಯೌ ತೇಽ ನಾವಾಭ್ಯಾಮುಪಲಕ್ಷಿತಃ ॥ ತತೋ ವ್ರಜನ್ ದದರ್ಶಾಗ್ರೇ ಗಾರ್ಧಭಾ ಕುಂಜರೇ ತಥಾ ॥ತಾವಪ್ಯುವಾಚ॥ ಕೌಂಡಿನ್ಯೋ ಯುವಾಭ್ಯಾಮುಪಲಕ್ಷಿತಃ॥ ನಾವಾಭ್ಯಾಂ ವೀಕ್ಷಿತೋಽನಂತಸ್ತಚ್ಛ್ರುತ್ವಾ ವಿಷಸಾದ ಹ॥ ತಸ್ಮಿನ್ ಕ್ಷಣೇ ತು ನಿರ್ವಿಣ್ಣಃ ಕೌಂಡಿನ್ಯೋ ಬ್ರಾಹ್ಮಣೋತ್ತಮಃ । ಕೃಪಯಾನಂತದೇವೋಽಪಿ ಪ್ರತ್ಯಕ್ಷಸ್ತತ್ಕ್ಷಣಾದಭೂತ್ ॥ ವೃದ್ಧಬ್ರಾಹ್ಮಣರೂಪೇಣ ಏಹ್ಯೇಹೀತ್ಯುಕ್ತವಾನ್ ದ್ವಿಜಃ॥ ಪ್ರವೇಶಯಿತ್ವಾ ಸ್ವಗೃಹಂ ಗೃಹೀತ್ವಾ ದಕ್ಷಿಣಂ ಕರಂ॥ ಸ್ವಾಂ ಪುರೀಂ ದರ್ಶಯಾಮಾಸ ದಿವ್ಯನಾರೀಗಣೈರ್ಯುತಾಂ ॥ ತಸ್ಮಿನ್ ನಿವಿಷ್ಟಮಾತ್ಮಾನಂ ವರಸಿಂಹಾಸನೇ ಶುಭೇ ॥ ಪಾರ್ಶ್ವತಶ್ಶಂಖಚಕ್ರಾಢ್ಯಂ ಸದಾ ಗರುಡಸೇವಿತಂ ॥ ದರ್ಶಯಾಮಾಸ ವಿಪ್ರಾಯ ಪೂರ್ವೋಕ್ತಂ ವಿಶ್ವರೂಪಿಣಂ। ವಿಭೂತಿಭಿರಿದಾಷ್ಟಾಭಿರನಂತಂ ವಿಶ್ವತೋಮುಖಂ ॥ ತಂ ದೃಷ್ಟ್ವಾ ಸದ್ವಿಜೋಽನಂತಮುವಾಚ ಪರಯಾ ಮುದಾ । ನಮೋ ನಮೋಽಸ್ತು ವೈಕುಂಠ ಶ್ರೀವತ್ಸ ಶುಭಲಾಂಛನ॥ತ್ವನ್ನಾಮಸ್ಮರಣಾತ್ಪಾಪಮಶೇಷಂ ನಃ ಪ್ರಣಶ್ಯತು॥ ನಮೋ ನಮಸ್ತೇ ಗೋವಿಂದ ನಾರಾಯಣ ಜನಾರ್ದನ ॥ ತ್ವನ್ನಾಮಸ್ಮರಣಾತ್ಪಾಪಮಶೇಷಂ ನಃ ಪ್ರಣಶ್ಯತು ॥ ಪ್ರಳಯಾಗ್ನಿ ಸಹಸ್ರಸ್ಯ ಮೋಹ ದ್ವಿಪಶತಸ್ಯ ಚ ಸಂಸಾರವಾರ್ಧೇರ್ನೌಕಾಯ ನಮಸ್ತುಭ್ಯಂ ಜನಾರ್ದನ ॥ ಪ್ರಮಾಣೇನ ದಿಶಶ್ಚೈವ

ಪಾತಾಳಂ ಭೂರ್ಭುವಾದಿಕಂ ॥ ಸೃಜತೇ ಬ್ರಹ್ಮರೂಪೇಣ ತ್ರಾಯತೇ ವಿಷ್ಣುರೂಪಧೃಕ್ ॥ ಹರತೇ ರುದ್ರರೂಪೇಣ ನಮಸ್ತುಭ್ಯಂ ತ್ರಿಮೂರ್ತಯೇ ॥ ಪಾಪೋಽಹಂ ಪಾಪಕರ್ಮಾಹಂ ಪಾಪಾತ್ಮಾ ಪಾಪಸಂಭವಃ ॥ ತ್ರಾಹಿ ಮಾಂ ಪುಂಡರೀಕಾಕ್ಷ ಶರಣಾಗತವತ್ಸಲ॥ ಅದ್ಯ ಮೇ ಸಫಲಂ ಜನ್ಮ ಜೀವಿತಂ ಚ ಸುಜೀವಿತಂ॥ ಯತ್ತವಾಂಘ್ರಿಯುಗಾಂಭೋಜೇ ಮನ್ಮನೋ ಭ್ರಮರಾಯತೇ ॥ ತತಸ್ತುಷ್ಟೋ ಹ್ಯನಂತೋಽಪಿ ದದೌತಸ್ಮೈ ವರತ್ರಯಂ ॥ ದಾರಿದ್ರ್ಯನಾಶನಂ ಧರ್ಮಂ ವಿಷ್ಣುಲೋಕಂ ಚ ಶಾಶ್ವತಂ ॥ ಲಬ್ಧ್ವಾ ವರತ್ರಯಂ ವಿಪ್ರೋಽಪ್ಯುವಾಚ ಸುರಸತ್ತಮಂ ॥ ಕಶ್ಚೂತಃ ಕಾ ಚ ಗೌಹ್ಯೇಕೋ ಕೋ ವೃಷಃ ಕಿಂ ಸರೋಽದ್ವಯಂ ॥ ಕಃ ಖರಃ ಕುಂಜರಃ ಕೋ ವಾ ಕೋ ವಾ ಕೋ ದ್ವಿಜೋ ಬ್ರೂಹಿ ಕೇಶವ ॥ ಅನಂತ ಉವಾಚ ॥ ಚೂತಂ ವಿದ್ಧಿ ಮಹಾವಿದ್ವಾನ್ ವಿದ್ಯಾಗರ್ವ ಸಮನ್ವಿತಂ ॥ ಶಿಷ್ಯೇಭ್ಯೋ ನ ದದೌ ವಿದ್ಯಾಂ ತಸ್ಮಾದ್ವೃಕ್ಷೋಽಭವದ್ದ್ವಿಜಃ ॥ ಸಾ ಗೌರ್ಧನಾಢ್ಯೋ ವಿಪ್ರೇಭ್ಯಃ ನ ದದಾತಿ ಸುಸತ್ಕೃತಂ ॥ ಅನ್ನಂ ತಸ್ಮಾತ್ತೃಷ್ಣ ಭುವಿ ನಾಸ್ತಿ ಸಾ ಕಾರಣಾತ್ತತಃ ॥ ವೃಷೋಽಪಿ ಗರ್ವಯುಕ್ತಸ್ಸನ್ನೂಷರಕ್ಷೇತ್ರದೋ ನೃಪಃ ॥ ಧರ್ಮಾಧರಾ ಸರೋಯುಗ್ಮಂ ಸ ಖರಃ ಪರನಿಂದಕಃ ॥ ಕುಂಜರೋಽಸೌ ದ್ವಿಜಶ್ರೇಷ್ಠೋ ಧರ್ಮವಿಕ್ರಯಿಕೋ ನರಃ ॥ ಇತ್ಯುಕ್ತಂ ಚ ಮಯಾ ಸರ್ವಮನಂತೋ ವಿಪ್ರರೂಪಧೃತ್ ॥ ಚರಾನಂತವ್ರತಂ ತ್ವಂ ಚ ನವವರ್ಷಾಣಿ ಪಂಚ ಚ ॥ ತತಸ್ತುಷ್ಟಃ ಪ್ರದಾಸ್ಯಾಮಿ ನಕ್ಷತ್ರಸ್ಥಾನಮುತ್ತಮಂ ॥ ಇಹಲೋಕೇ ಸುವಿಪುಲಾನ್ಸ್ವರ್ಗಾನ್ಕಾಮಾನವಾಪ್ನುಹಿ ॥ ಇತಿ ದತ್ವಾ ವರಂ ದೇವಸ್ತತ್ರೈವಾಂತರಧೀಯತ ॥ ಕೌಂಡಿನ್ಯೋಽಪ್ಯಾಗತೋ ಗೇಹೇ ಚಚಾರ ವ್ರತಮುತ್ತಮಂ ॥ ಶೀಲಯಾ ಸಹ ಧರ್ಮಾತ್ಮಾ ಭುಕ್ತ್ವಾ ಭೋಗಾನ್ಯಥೇಪ್ಸಿತಾನ್ ॥ ಪುತ್ರಪೌತ್ರೈಃ ಸಮಾವೃತ್ತಃ । ತತೋ ನಕ್ಷತ್ರತಾಂ ಗತಃ ॥ ಕಲ್ಪಸ್ಥಾಯೀ ಚ ಸಂಭೂತೋ ದೃಶ್ಯತೇಽದ್ಯಾಪಿ ಸೋ ದ್ವಿಜಃ ॥ ಕುಂಭಜೇನ ಪುರಾ ಚೀರ್ಣಂ ಮರ್ತ್ಯಲೋಕೇ ಪ್ರಕಾಶಿತಾ ॥ ಸಗರೇಣ ದಿಲೀಪೇನ ಭರತೇನ ಮಹಾತ್ಮನಾ ॥ ಹರಿಶ್ಚಂದ್ರೇಣ ಭೂಪೇನ ಜನಕೇನಾಪಿ ಪಾಂಡವ ॥ ಏತೇ ಚಾನ್ಯೇ ಚ ಬಹವೋ ರಾಜ್ಯಂ ಭುಕ್ತ್ವಾ ದಿವಂ ಗತಾಃ ॥ ಏತತ್ತೇ ಕಥಿತಂ ಪಾರ್ಥ ವ್ರತಾನಾಮುತ್ತಮಂ ವ್ರತಂ ॥ ಯತ್ಕೃತ್ವಾ ಸರ್ವಪಾಪೇಭ್ಯೋ ವಿಮುಕ್ತಸ್ಸುಖಮಶ್ನುತೇ ॥ ಯೇ ವೈ ಶೃಣ್ವಂತಿ ಸತತಂ ಪಠ್ಯಮಾನಂ ನೃಪೋತ್ತಮ ॥ ಅಷ್ಟೈಶ್ವರ್ಯಾದಿ ಭೋಗಾಂಶ್ಚ ಭುಕ್ತ್ವೇಹ ಸ್ವಜನೈಸ್ಸಹ ॥ ಸರ್ವಪಾಪೈರ್ವಿನಿರ್ಮುಕ್ತಾಸ್ತೇ ಯಾಂತಿ ಪರಮಾಂ ಗತಿಂ ॥

ಇತಿ ಶ್ರೀಭವಿಷ್ಯೋತ್ತರಪುರಾಣೇ ಅನಂತವ್ರತಕಥಾ ಸಂಪೂರ್ಣಾ.

ಶ್ರೀ ಅನಂತ ಪದ್ಮನಾಭವ್ರತಕಥಾಸಂಗ್ರಹ.

ಅರಣ್ಯವಾಸಿಗಳಾಗಿ ನಾನಾಕಷ್ಟವನ್ನು ಅನುಭವಿಸುತ್ತ ಸದಾಚಾರತತ್ಪರರಾಗಿ ಸರ್ವದಾ ಶ್ರೀಕೃಷ್ಣಸ್ವಾಮಿಯನ್ನು ಧ್ಯಾನಿಸುತ್ತಿದ್ದ ಪಾಂಡುವಾಗ್ರಣಿಯಾದ ಧರ್ಮರಾಯನ ಬಳಿಗೆ ಒಂದಾನೊಂದು ದಿನ ಶ್ರೀಕೃಷ್ಣಮೂರ್ತಿಯು ಬಂದನು. ಆಗ ಧರ್ಮರಾಯನು ಭಕ್ತಿ ಪೂರ್ವಕವಾಗಿ ಶ್ರೀಕೃಷ್ಣನನ್ನು ವಂದಿಸಿ ಪೂಜಾದಿಗಳಿಂದ ತೃಪ್ತಿಗೊಳಿಸಿ ಉಚಿತಾಸನದಲ್ಲಿ ಕುಳ್ಳಿರಿಸಿ, ಅಂಜಲೀಬದ್ಧನಾಗಿ ಎದುರಿಗೆ ನಿಂತು ಎಲೈ ಸರ್ವತಂತ್ರ ಸ್ವತಂತ್ರನಾದ ಕೃಷ್ಣ ಸ್ವಾಮಿಯೇ ! ಈಗ ನಮಗೆ ಪ್ರಾಪ್ತವಾಗಿರುವ ಈ ಅನಂತ ಕಷ್ಟಪರಂಪರಗಳು ಹೇಗೆ ನಾಶ ವಾದೀತು? ನನ್ನ ತಮ್ಮಂದಿರೂ ದ್ರೌಪದಿಯೂ ನನಗೋಸ್ಕರವಾಗಿ ಅನುಭವಿಸುತ್ತಿರುವ ಕಷ್ಟ ವನ್ನು ನಾನು ನೋಡಿ ಸಹಿಸಲಾರೆ! ಕರುಣಾಳುವಾದ ನೀನು ಈ ನಮ್ಮ ಕಷ್ಟಕ್ಕೆ ತಕ್ಕ ಉಪಾಯ ವನ್ನು ಹುಡುಕಿ ಹೇಳಬೇಕೆಂದು ಬೇಡಿಕೊಂಡನು. ಬಳಿಕ ಕೃಷ್ಣಸ್ವಾಮಿಯು ಎಲೈ ಧರ್ಮರಾ ಯನೇ ಕೇಳು ಲೋಕದಲ್ಲಿ ಸರ್ವಪಾಪಗಳನ್ನು ಪರಿಹಾರಮಾಡಿ ಭಕ್ತರ ಸಂಕಟಗಳನ್ನು ನಿವಾ ರಿಸಿ, ಇಹಲೋಕದ ಭೋಗಭಾಗ್ಯಸಾಧನವಾದ ಅಷ್ಟೈಶ್ವರ್ಯಪುತ್ರಸಂತಾನಾದಿಗಳನ್ನು ಕೊಟ್ಟು ಕಡೆಗೆ ಪರಲೋಕ ಸಾಧನವಾದ ಮುಕ್ತಿಯನ್ನು ಕೊಡುವ ಸರ್ವಶ್ರೇಷ್ಠವಾದ ಅನಂತಪದ್ಮ ನಾಭವ್ರತವೆಂಬ ಒಂದು ವ್ರತವುಂಟು. ಇದು ಬಹು ಶ್ರೇಷ್ಠವಾದದ್ದು. ಈ ವ್ರತವನ್ನು ಕಲ್ಪೋಕ್ತಪ್ರಕಾರದಿಂದ ಭಾದ್ರಪದ ಶುದ್ಧ ಚತುರ್ದಶಿಯದಿನ ಮಾಡಿದರೆ ಅದರಿಂದ ಅವರ ಪಾಪಗಳೆಲ್ಲ ಪರಿಹಾರವಾಗಿ ಕೇವಲ ಪುಣ್ಯವೇ ಲಭಿಸುವುದು. ಭಕ್ತರಕ್ಷಣಕಾರಕವಾದ ವ್ರತಗಳಲ್ಲಿ ಇದಕ್ಕಿಂತ ಅತಿಶಯವಾದ ವ್ರತವೇ ಇಲ್ಲ ಎಂದು ಹೇಳಿದನು. ಬಳಿಕ ಧರ್ಮ ರಾಯನು ಪುನಃ ಅಂಜಲೀಬದ್ಧನಾಗಿ ಎಲೈ ದೇವದೇವನೇ ! ಈಗ ನೀನು ಅನಂತನೆಂದು ಹೇಳಿದ ದೇವರು ಯಾರು ? ಆದಿಶೇಷನೇ ! ಅಥವ ತಕ್ಷಕನೆ ! ಹಾಗಿಲ್ಲವಾದರೆ ಸೃಷ್ಟಿಕರ್ತ ನಾದ ಬ್ರಹ್ಮನೇ! ಅದೂ ಅಲ್ಲದಿದ್ದರೆ ಪರಬ್ರಹ್ಮಮೂರ್ತಿಯೇ! ನನಗೆ ಯಾವುದೂ ತಿಳಿಯಲಿಲ್ಲ ಆದಕಾರಣ ಅದನ್ನು ವಿವರಿಸಿ ಹೇಳಬೇಕೆನಲು, ಶ್ರೀಕೃಷ್ಣನು ಎಲೈ ಧರ್ಮರಾಯನೇ! ಅನಂತ ನೆಂಬುವನು ಮತ್ತಾರೂ ಅಲ್ಲ ನಾನೆ ! ಸರ್ವದೇವತಾ ಸ್ವರೂಪನು ನನ್ನ ಹೊರತು ಅನ್ಯರಿಲ್ಲ. ಸೂರ್ಯನ ಸಂಚಲನೆಯಿಂದುಂಟಾಗುವ ಕಲಾಕಾಷ್ಠ ಮುಹೂರ್ತ ಶಿವರಾತ್ರಿ ದಿನ ಪಕ್ಷ ಮಾಸ ಋತು ಅಯನ ಸಂವತ್ಸರ ಯುಗ ಕಲ್ಪ ಮೊದಲಾದ ಸಂಜ್ಞೆಗಳುಳ್ಳ ಕಾಲವೇ ನನ್ನ ಸ್ವರೂಪವಾಗಿದೆ. ಇದು ಸತ್ಯ. ಇಂಥ ನಾನು ಭೂಭಾರವನ್ನು ತಗ್ಗಿಸಿ ದುಷ್ಟಸಂಹಾರಕ್ಕಾಗಿಯೂ ಶಿಷ್ಟಪರಿಪಾಲನೆಗಾಗಿಯೂ ವಸುದೇವ ದೇವಕಿಯರ ಗರ್ಭದಲ್ಲಿ ಮನುಷ್ಯರೂಪದಿಂದ ಅವ ತರಿಸಿದ್ದೇನೆ. ನನ್ನನ್ನು ಕೃಷ್ಣನೆಂದೂ ವಿಷ್ಣುವೆಂದೂ ಹರಿಯೆಂದೂ ಕರೆಯುವರು. ಇದೂ ಅಲ್ಲದೆ ನಿಜವಾಗಿ ನೋಡಿದರೆ ಶಿವನೂ ನಾನೇ ಸೂರ್ಯನೂ ನಾನೇ ! ಭೂಮಂಡಲವನ್ನು ಹೊತ್ತಿರುವ ಆದಿಶೇಷನೂ ನಾನೇ ಸೃಷ್ಟಿಕರ್ತನಾದ ಬ್ರಹ್ಮನೂ ನಾನೇ ! ಸಕಲ ಜೀವರಾಶಿ ಗಳ ಹೃದಯದಲ್ಲಿ ವ್ಯಾಪಕನಾಗಿದ್ದುಕೊಂಡು ಕಾಲಾನುಸಾರವಾಗಿ ದಶಾವತಾರಗಳನ್ನು ಮಾಡುವನೋ ನಾನೇ, ಲೋಕಗಳನ್ನು ಸಂಹಾರಮಾಡುವ ಲಯಕರ್ತನಾದ ಪರಮೇಶ್ವರನೂ ನಾನೇ, ಈ ಅರ್ಥದಲ್ಲಿ ಸ್ವಲ್ಪವೂ ಸಂಶಯವಿಲ್ಲ. ನನ್ನ ಉದರದಲ್ಲಿ ಹದಿನಾಲ್ಕು ಲೋಕಗಳೂ, ಚತುರ್ದಶ ಇಂದ್ರರೂ, ದ್ವಾದಶಾದಿತ್ಯರೂ ಏಕಾದಶ ರುದ್ರರೂ, ಅಷ್ಟವಸುಗಳೂ, ಸಪ್ತಋಷಿ ಗಳೂ, ಭೂಮ್ಯಾಕಾಶಗಳೂ, ನದೀನದ ಪರ್ವತಗಳೂ ತುಂಬಿ ತುಳುಕಾಡುತ್ತಿವೆ. ನೋಡು

ಎಂದು ಹೇಳಿ ತನ್ನ ನಿಜವಾದ ವಿಶ್ವರೂಪವನ್ನು ಧರ್ಮರಾಯನಿಗೆ ತೋರಿಸಿದನು. ಆ ವಿಧವಾದ ಅನಂತರೂಪನ ವಿಶ್ವರೂಪವನ್ನು ನೋಡಿ ತೃಪ್ತನಾದ ಬಳಿಕ ಧರ್ಮರಾಯನಿಗೆ ಭಕ್ತಿಯು ಇಮ್ಮಡಿಯಾಗಿ ಅಡಿಗಡಿಗೆ ಕೈಮುಗಿದು ಹೊಗಳುತ್ತ ಎಲೈ ದೇವದೇವನೇ! ಭಕ್ತರಕ್ಷಣಪರಾಯಣನೇ! ಈ ಅನಂತವ್ರತದಿಂದ ಯಾವ ದೇವರನ್ನು ಪೂಜಿಸಬೇಕು ? ಯಾವ ದಾನವನ್ನು ಕೊಡಬೇಕು ಈ ವ್ರತವನ್ನು ಮಾಡುವುದರಿಂದ ಯಾವ ಫಲವುಂಟಾಗುತ್ತದೆ ? ಪೂರ್ವದಲ್ಲಿ ಇದನ್ನು ಮಾಡಿ ಯಾರು ಯಾವ ಫಲ ಪ್ರಯೋಜನವನ್ನು ಹೊಂದಿರುತ್ತಾರೆ. ಅದೆಲ್ಲವನ್ನು ನನಗೆ ಹೇಳಬೇಕೆಂದು ಪ್ರಾರ್ಥಿಸಿದನು. ಆಗ ಸಂತುಷ್ಟನಾದ ಶ್ರೀಹರಿಯು ಧರ್ಮರಾಯನ ಭಕ್ತಿಗೆ ಮೆಚ್ಚಿ ಆತನನ್ನು ಕುರಿತು ಪೂರ್ವದಲ್ಲಿ ಕೃತಯುಗದಲ್ಲಿ ಪ್ರತ್ಯಕ್ಷವಾಗಿ ನಡೆದ ಇತಿಹಾಸವನ್ನು ಹೀಗೆಂದು ಹೇಳಲಾರಂಭಿಸಿದನು.

ಕೃತಯುಗದಲ್ಲಿ ವಸಿಷ್ಠಗೋತ್ರದಲ್ಲಿ ಹುಟ್ಟಿದ ಸುಮಂತನೆಂಬ ಬ್ರಾಹ್ಮಣನು ಸ್ವಕರ್ಮನಿರತನಾಗಿ ಕರ್ಮಠನಾಗಿದ್ದುಕೊಂಡು ಭೃಗುವಿನ ಮಗಳಾದ ದೀಕ್ಷಾದೇವಿಯನ್ನು ವರಿಸಿ ಮದುವೆಯಾದನು. ಆ ದಂಪತಿಗಳಿಗೆ ರೂಪಲಕ್ಷಣ ಸಂಪನ್ನಳಾದ ಸುಶೀಲೆ ಎಂಬ ಮಗಳು ಹುಟ್ಟಿದಳು. ಆ ಮಗಳು ಇನ್ನೂ ಚಿಕ್ಕವಳಾಗಿ ಬೆಳೆಯುತ್ತಿರುವಾಗಲೇ ದೀಕ್ಷಾದೇವಿಯು ಕಾಲವಶದಿಂದ ಸತ್ತುಹೋದಳು. ಆಗ ಸುಮಂತನು ತನ್ನ ಕರ್ಮನಿಷ್ಠೆಗೆ ಅಡ್ಡಿಬರಬಾರದೆಂದು ಕನ್ಯಾರ್ಥಿಯಾಗಿ ಹುಡುಕುತ್ತ ಹೋಗಿ ಕಡೆಗೆ ಕರ್ಕಶೆ ಎಂಬ ಹೆಣ್ಣನ್ನು ಮದುವೆ ಮಾಡಿಕೊಂಡು ಸದಾಚಾರಸಂಪನ್ನನಾಗಿರುತ್ತಿದ್ದನು. ಎರಡನೆಯ ಹೆಂಡತಿಯಾದ ಕರ್ಕಶೆಯಾದರೋ ಪತಿಯನ್ನು ಲಕ್ಷ್ಯಮಾಡದೆ ಕಾರಣಾಂತರದಿಂದ ಇಲ್ಲದ ನೆವವನ್ನು ಹುಡುಕಿ ಜಗಳವಾಡುತ್ತ ಕ್ರೂರಾತ್ಮಳಾಗಿ ಪಾಪಭೀತಿಯಿಲ್ಲದೆ ದುರಾಚಾರದಿಂದ ಕೂಡಿ ಮೆರೆಯುತ್ತಿದ್ದಳು. ಮಗಳಾದ ಸುಶೀಲೆಯು ತನ್ನ ಬಲತಾಯಿಯ ತೊಂದರೆಗಳನ್ನು ಲೆಕ್ಕಿಸದೆ ಸದಾಚಾರತತ್ಪರಳಾಗಿ ತಂದೆಗೆ ನಿತ್ಯಕರ್ಮದಲ್ಲಿ ಸಹಾಯ ಮಾಡುತ್ತ ಮನೆಯನ್ನು ಸಾರಿಸಿ ಗುಡಿಸಿ ಚಿತ್ರವರ್ಣಗಳಾದ ರಂಗವಲ್ಲಿಗಳಿಂದ ದೇವರ ಸನ್ನಿಧಿಯಲ್ಲಿ ಶಂಖ ಚಕ್ರ ಪದ್ಮ ಮೊದಲಾದ ಚಿತ್ರಗಳನ್ನು ರಚಿಸುತ್ತ ಭಕ್ತಿವಂತಳಾಗಿ ಭಗವಂತನನ್ನು ಪೂಜಿಸುತ್ತಿದ್ದಳು. ಇಂಥ ಮಗಳಿಗೆ ಪ್ರಾಯಸವೃದ್ಧಿಯುಂಟಾಗಿ ಯೌವನದ ಕುರುಹುಗಳು ಕಂಡುಬರುತ್ತಿರಲು ಸುಮಂತನು ತನ್ನ ಮನಸ್ಸಿನ ಚಿಂತಾಕ್ರಾಂತನಾಗಿ ವಿವಾಹಯೋಗ್ಯಳಾದ ಈ ಮಗಳನ್ನು ಯಾರಿಗೆ ಕೊಡಬೇಕು ? ಹೇಗೆ ಮದುವೆಯಾದೀತು ಎಂದು ಚಿಂತಿಸುತ್ತಿದ್ದನು. ಹೀಗಿರುವಲ್ಲಿ ಭಕ್ತವತ್ಸಲನಾದ ಭಗವಂತನ ಕೃಪೆಯಿಂದ ಶುದ್ಧಾತ್ಮನೂ, ವಿದ್ಯಾಸಂಪನ್ನನೂ ಆದ ಕೌಂಡಿನ್ಯನೆಂಬ ಋಷಿಯು ಕನ್ಯಾರ್ಥಿಯಾಗಿ ಸಂಚರಿಸುತ್ತ ಬಂದು ಸುಮಂತನನ್ನು ಕಂಡು ಆತನಿಂದ ಸತ್ಕೃತನಾಗಿ ತನ್ನ ಇಷ್ಟಾರ್ಥವನ್ನು ಆತನಿಗೆ ಹೇಳಿದನು. ಆಗ ಸುಮಂತನು ಸಂತೋಷಯುಕ್ತನಾಗಿ ಸುಶೀಲೆಯನ್ನು ಅವನಿಗೆ ಕೊಟ್ಟು ಶಾಸ್ತ್ರೋಕ್ತವಾಗಿ ಮದುವೆ ಮಾಡಿದಮೇಲೆ ಅಳಿಯನಿಗೆ ಕೊಡಬೇಕಾದ ಮರ್ಯಾದೆಗಳನ್ನು ತಂದಿಡು ಎಂದು ಹೇಳಲು ಕಠಿನಹೃದಯಳಾದ ಕರ್ಕಶೆಯು ಮನೆಗೆಹೋಗಿ ಬಾಗಿಲು ಮುಚ್ಚಿಕೊಂಡು ಏನೂ ಇಲ್ಲವೆಂದು ಹೇಳಿಬಿಟ್ಟಳು. ಅದನ್ನು ಕಂಡು ಚಿಂತಾಕ್ರಾಂತನಾದ ಸುಮಂತನು ಮಗಳನ್ನು ಅಳಿಯನನ್ನು ಹರಿಸಿ, ಸಂತೋಷದಿಂದ ಅವರಿಗೆ ದಾರಿಯಪಾಥೇಯಕ್ಕಾಗಿ ಸ್ವಲ್ಪ ಹುರಿದ ಹಿಟ್ಟನ್ನು ಕೊಟ್ಟು ತಾನು ಸ್ವಲ್ಪದೂರ ಹೋಗಿ ಅವರನ್ನು ಸಾಗಕಳುಹಿಸಿದನು.

ಬಳಿಕ ಕೌಂಡಿನ್ಯನು ಹೆಂಡತಿಯಾದ ಸುಶೀಲೆಯನ್ನು ಕರೆದುಕೊಂಡು ಪ್ರಯಾಣ ಹೊರಟು ಬರುತ್ತ ಮಧ್ಯಾಹ್ನ ಹನ್ನೆರಡು ಗಂಟೆಯ ಹೊತ್ತಿಗೆ ಒಂದು ನದೀತೀರಕ್ಕೆ ಬಂದು ಸೇರಿದನು. ಆ ದಿನ ಭಾದ್ರಪದ ಶುದ್ಧ ಚತುರ್ದಶಿಯಾದ ಕಾರಣ ಬಹುಮಂದಿ ಬ್ರಾಹ್ಮಣರೂ ಸುವಾಸಿನಿಯರೂ ಮಿಂದು ಮಡಿಯುಟ್ಟು ರಕ್ತವಸ್ತ್ರಧಾರಿಗಳಾಗಿ ಸಂತೋಷದಿಂದ ಅನಂತ ಪದ್ಮನಾಭನನ್ನು ಪೂಜಿಸುತ್ತಿದ್ದರು. ಅದನ್ನು ಕಂಡು ಆಶ್ಚರ್ಯಯುಕ್ತಳಾಗಿ ಸುಶೀಲೆಯು ವ್ರತವನ್ನು ಮಾಡುತ್ತಿರುವ ಸ್ತ್ರೀಯರ ಬಳಿಗೆ ಹೋಗಿ ಅಮ್ಮಾ! ಇದೇನು ನೀವು ಏನುಮಾಡು-ತ್ತಿರುವಿರಿ? ನೀವು ಮಾಡುತ್ತಿರುವ ಪೂಜೆಗೆ ಹೆಸರೇನು? ಇದನ್ನು ಮಾಡಿದರೆ ಏನು ಫಲ ವಾದೀತು? ಇದೆಲ್ಲವನ್ನು ನನಗೆ ಹೇಳಬೇಕೆಂದು ಕೇಳಿದಳು. ಆಗ ಆ ಸ್ತ್ರೀಯರು ಅಮ್ಮಾ! ಇದಕ್ಕೆ ಅನಂತವ್ರತವೆಂದು ಹೆಸರು. ಈ ವ್ರತದಿಂದ ಅನಂತಾನಂತ ಫಲಪ್ರಾಪ್ತಿಯಾಗುತ್ತದೆ ಎಂದು ಹೇಳಲು ಸಂತೋಷಭರಿತಳಾದ ಸುಶೀಲೆಯು ಹಾಗಾದರೆ ನಾನೂ ಈ ವ್ರತವನ್ನು ಮಾಡುತ್ತೇನೆ. ಇದನ್ನು ಹೇಗೆ ಮಾಡಬೇಕು? ಯಾರನ್ನು ಪೂಜಿಸಬೇಕು? ಯಾವ ನಿಯಮದಿಂದಿರಬೇಕು? ಇದೆಲ್ಲವನ್ನು ದಯಮಾಡಿ ತಿಳಿಸಬೇಕೆಂದು ಬೇಡಿಕೊಂಡಳು. ಕೂಡಲೇ ಆ ಸ್ತ್ರೀಯರು ಸುಶೀಲೆಯ ಭಕ್ತಿಗೆ ಮೆಚ್ಚಿ, ಅಮ್ಮಾ! ಹಾಗಾದರೆ ನಿನಗೋಸ್ಕರ ವಾಗಿ ಅನಂತವ್ರತ ಮಹಾತ್ಮ್ಯವನ್ನು ಹೇಳುವೆವು ಕೇಳು. ಈ ವ್ರತವನ್ನು ಭಾದ್ರಪದ ಶುದ್ಧ ಚತುರ್ದಶಿಯದಿನ ಆಚರಿಸಬೇಕು. ನದೀ ತೀರಕ್ಕೆ ಹೋಗಿ ಅಲ್ಲಿ ಶುಚಿಯಾಗಿ ಸ್ನಾನಮಾಡಿ ಮಡಿಗಳನ್ನುಟ್ಟು ಭಕ್ತಿಪೂರ್ವಕವಾಗಿ ಅನಂತಪದ್ಮನಾಭನನ್ನು ಪೂಜಿಸಿ, ಆ ವ್ರತದ ಮಹಾತ್ಮ್ಯೆಯನ್ನು ಕೇಳಬೇಕು. ಇನ್ನು ಆ ವ್ರತವನ್ನು ಮಾಡುವ ವಿಧಾನವನ್ನು ಹೇಳುವೆವು ಕೇಳು. ಮಂಗಳಸ್ನಾನಮಾಡಿ ಮಡಿಗಳನ್ನುಟ್ಟು ಶುದ್ಧವಾದ ಸ್ಥಳದಲ್ಲಿ ಗೋಮಯದಿಂದ ಸಾರಿಸಿ, ತಾವರೆದಂಟಿನ ಆಕಾರವುಳ್ಳ ಸರ್ವತೋಭದ್ರವೆಂಬ ಅಷ್ಟದಳದ ಪದ್ಮವನ್ನು ಬರೆದು ಅದರ ಮಧ್ಯದಲ್ಲಿ ಪಂಚವರ್ಣದ ರಂಗವಲ್ಲಿಯನ್ನಿಟ್ಟು ಅಕ್ಕಿಯಹಿಟ್ಟಿನಿಂದ ಮನೋಹರವಾದ ಚಿತ್ರಗಳನ್ನು ಬರೆದು ಮಂಟಪವನ್ನು ನಿರ್ಮಿಸಬೇಕು. ಆ ಮಂಟಪದ ದಕ್ಷಿಣಭಾಗದಲ್ಲಿ ಉದಕಪೂರ್ಣಕಲಶವನ್ನು ಸ್ಥಾಪಿಸಿ ಆ ಕಲಶದಲ್ಲಿ ಅನಂತಸ್ವ ರೂಪನಾದ ಶ್ರೀಮದನಂತಪದ್ಮನಾಭನನ್ನು ಆವಾಹನೆ ಮಾಡಿ ಕಲ್ಪೋಕ್ತಪ್ರಕಾರದಿಂದಪೂಜಿಸ ಬೇಕು. ಸಪ್ತಶಿರಸ್ಸುಗಳುಳ್ಳವನಾಗಿ ಶ್ವೇತದ್ವೀಪದಲ್ಲಿ ವಾಸಮಾಡತಕ್ಕವನಾಗಿ ಚತುರ್ಭುಜ ದಿಂದ ಕೂಡಿ, ಕೆಂಪು, ಬಿಳಿಪು, ಹಳದಿ ಕಣ್ಣುಗಳುಳ್ಳವನಾಗಿರುವ ಅನಂತಪದ್ಮನಾಭನ ಮೂರ್ತಿಯನ್ನು ಮನಸ್ಸಿನಲ್ಲಿ ಧ್ಯಾನಿಸುತ್ತ ಏಳು ದರ್ಭೆಗಳನ್ನು ಗಂಟುಹಾಕಿ ಏಳು ಹೆಡೆ ಗಳುಳ್ಳ ಅನಂತಮೂರ್ತಿಯನ್ನು ಕಲ್ಪಿಸಬೇಕು. ಹಾಗೆ ಕಲ್ಪಿಸಿದ ದೇವಮೂರ್ತಿಯ ಬಲಗೈಯಲ್ಲಿ ಪದ್ಮವೂ, ಎಡಗೈಯಲ್ಲಿ ಶಂಖವೂ, ಮೂರನೆಯದರಲ್ಲಿ ಚಕ್ರವೂ, ನಾಲ್ಕನೆಯ ಕೈಯಲ್ಲಿ ಗದೆಯೂ ಇರುವಂತೆ ನಿರ್ಮಿಸುತ್ತ ಕಲಶಮಧ್ಯದಲ್ಲಿ ಪ್ರತಿಮೆಯನ್ನಿಟ್ಟು ಆವಾಹಿಸಿ ಧೂಪದೀಪ ನೈವೇದ್ಯಗಳಿಂದ ಪೂಜಿಸುತ್ತ ಬಗೆಬಗೆಯಾದ ಹೂಗಳನ್ನು ಪತ್ರೆಗಳನ್ನು ಸಮರ್ಪಣೆಮಾಡಿ ಹದಿನಾಲ್ಕು ಗಂಟುಳ್ಳ ಕೆಂಪಿನ ದಾರವನ್ನು ದೇವರ ಮುಂದಿರಿಸಿ ಪೂಜಿಸ ಬೇಕು. ಬಳಿಕ ಗೋಧಿಯಿಂದಾಗಲಿ ಅಥವಾ ಅಕ್ಕಿಯಿಂದಲಾಗಲಿ ಮಾಡಿದ ಹಿಟ್ಟಿನಿಂದ ೨೮ ಇಪ್ಪತ್ತೆಂಟು ಅತಿಸರಗಳು ಪಕ್ವಾನ್ನ ಸಹಿತವಾಗಿ ಅನಂತಪದ್ಮನಾಭನಿಗೆ ನಿವೇದನೆ ಮಾಡಿ ಹದಿನಾಲ್ಕು ಅತಿಸರಗಳನ್ನು ಬ್ರಾಹ್ಮಣನಿಗೆ ದಾನವಾಗಿ ಕೊಟ್ಟು ಉಳಿದುದನ್ನು ತಾನು ತನ್ನ ಬಂಧು ಮಿತ್ರ ಸಹಿತನಾಗಿ ಭುಂಜಿಸಬೇಕು. ಪೂಜಾಸಾಮಗ್ರಿಗಳು ಪ್ರತಿ

ಯೊಂದೂ ಹದಿನಾಲ್ಕರ ಸಂಖ್ಯೆಯುಳ್ಳದ್ದಾಗಿರಬೇಕು. ಹೀಗೆ ವ್ರತವನ್ನು ಮಾಡಿದನಂತರ ಕಾರ್ಪಣ್ಯಹೀನನಾಗಿ ಭಕ್ತಿಯಿಂದ ಬ್ರಾಹ್ಮಣ ಮುತ್ತೈದೆಯರಿಗೆ ಸಂತರ್ಪಣೆಮಾಡಿಸಿ, ಅವರನ್ನು ಗಂಧ ಪುಷ್ಪಾಕ್ಷತೆ ತಾಂಬೂಲ ದಕ್ಷಿಣೆಗಳಿಂದ ಸಂತೈಸಬೇಕು. ಹೀಗೆ ಹದಿನಾಲ್ಕು ವರ್ಷಗಳು ಭಕ್ತಿಯಿಂದ ಈ ವ್ರತವನ್ನು ಆಚರಿಸುತ್ತಿದ್ದು ಪ್ರತಿವರ್ಷವೂ ಹೊಸಹೊಸ ದಾರವನ್ನು ಕಟ್ಟಿಕೊಳ್ಳುತ್ತ ಹದಿನೈದನೆಯ ವರ್ಷದಲ್ಲಿ ವಿಧಿ ಪ್ರಕಾರವಾಗಿ ಉದ್ಯಾಪನೆಯನ್ನು ಮಾಡಿ ಬ್ರಾಹ್ಮಣರನ್ನು ದಾನಧರ್ಮ ಅನ್ನವಸ್ತ್ರಾದಿಗಳಿಂದ ಸತ್ಕರಿಸಿ ಯಥಾವಿಧಿಯಾಗಿ ಭಕ್ತಿಯಿಂದ ಶ್ರೀಮನ್ನಾರಾಯಣನನ್ನು ಧ್ಯಾನಿಸುತ್ತಿರಬೇಕು ಎಂದು ಹೇಳಲು, ಸುಶೀಲೆಯು ಪರಮಸಂತೋಷದಿಂದ ಮಿಂದು ಮಡಿಯುಟ್ಟು ಭಕ್ತಿವಂತಳಾಗಿ ಅವರ ಜೊತೆಯಲ್ಲಿ ತಾನೂ ಅನಂತ ವ್ರತವನ್ನು ಮಾಡಿ ದಾರವನ್ನು ಬಲಗೈಗೆ ಕಟ್ಟಿಕೊಂಡು ತನ್ನ ತಂದೆಯು ಪಾಥೇಯಕ್ಕಾಗಿ ತನಗೆ ಕೊಟ್ಟಿದ್ದ ಹುರಿಹಿಟ್ಟನ್ನು ನಿವೇದನೆಮಾಡಿ, ಅದರಲ್ಲಿ ಅರ್ಧವನ್ನು ಬ್ರಾಹ್ಮಣನಿಗೆ ಕೊಟ್ಟುಬಿಟ್ಟು ತನ್ನ ಪತಿಗೆ ಉಳಿದುದನ್ನು ಕೊಟ್ಟು ತಾನೂ ಸ್ವಲ್ಪವನ್ನು ತಿಂದು ಸಂತೋಷಭರಿತಳಾಗಿ ಅನಂತ ಪದ್ಮನಾಭನನ್ನು ಧ್ಯಾನಿಸುತ್ತ ತನ್ನ ಗಂಡನೊಡನೆ ಹೊರಟು ಆತನ ಆಶ್ರಮವನ್ನು ಸೇರಿದಳು.

ಅಷ್ಟರೊಳಗಾಗಿ ಅನಂತ ವ್ರತದ ಮಹಿಮೆಯಿಂದ ಕೌಂಡಿನ್ಯನ ಆಶ್ರಮವು ಅಷ್ಟೈಶ್ವರ್ಯ ನಿಬಿಡವಾಗಿ ಮನೋಹರವಾಗಿದ್ದಿತು. ಅದನ್ನು ಕಂಡು ಆತನ ಬಂಧುಗಳೆಲ್ಲರೂ ಸಂತೋಷಭರಿತರಾಗಿ ತಾವು ಅನಂತ ವ್ರತವನ್ನು ಮಾಡಬೇಕೆಂಬ ಕುತೂಹಲದಿಂದ ವ್ರತದಿವಸವನ್ನು ಎದುರುನೋಡುತ್ತಿದ್ದರು. ಸದಾಚಾರ ಸಂಪನ್ನೆಯಾದ ಸುಶೀಲೆಯು ಪೀತಾಂಬರವನ್ನುಟ್ಟು ದಿವ್ಯಾಭರಣಗಳನ್ನು ಧರಿಸಿ ತನ್ನ ಪತಿವ್ರತಾಮಾಹಾತ್ಮ್ಯೆಯಿಂದ ಸಾವಿತ್ರಿಯಂತೆ ತೇಜಸ್ವಿಯಾಗಿ ಹೊಳೆಯುತ್ತಿದ್ದಳು. ಒಂದಾನೊಂದು ದಿನ ಸತಿಪತಿಗಳಿಬ್ಬರೂ ವಿನೋದವಾಗಿ ಕುಳಿತು ಮಾತನಾಡುತ್ತಿರುವಾಗ ದೈವಹತನಾದ ಕೌಂಡಿನ್ಯನು ದುರ್ಬುದ್ಧಿಯುಳ್ಳವನಾಗಿ ತನ್ನ ಹೆಂಡತಿಯು ಕೈಯ್ಯಲ್ಲಿದ್ದ ದಾರವನ್ನು ಕಂಡು ಆಶ್ಚರ್ಯಭರಿತನಾಗಿ ಏನೆಲೆ ! ನೀಚಳೆ ? ನೀನು ಯಾರನ್ನು ವಶಮಾಡಿಕೊಳ್ಳುವುದಕ್ಕಾಗಿ ಈ ದಾರವನ್ನು ಕೈಗೆ ಕಟ್ಟಿಕೊಂಡಿರುವೆ? ನಿನಗೆ ಇದು ಎಲ್ಲಿಂದ ಬಂದಿತು ? ನಿಜವಾದ ಸಂಗತಿಯನ್ನು ಹೇಳು, ಇಲ್ಲವಾದರೆ ನಿನ್ನನ್ನು ಸುಮ್ಮನೆ ಬಿಡುವುದಿಲ್ಲ ಎಂದು ಗದರಿಸಿದನು. ಆಗ ಭಕ್ತಿನಮ್ರಳಾದ ಸುಶೀಲೆಯು ಸ್ವಾಮಿ ! ಇದು ಅಮೋಘವಾದ ಅನಂತೈಶ್ವರ್ಯವನ್ನು ಕೊಡುವ ಭಕ್ತವತ್ಸಲನಾದ ಅನಂತಮೂರ್ತಿಯ ವ್ರತವನ್ನು ಮಾಡಿ ಕಟ್ಟಿಕೊಂಡ ದಾರ, ಲೋಕದಲ್ಲಿ ಆಸ್ತಿಕಶಿರೋಮಣಿಗಳಾದ ಬಹುಮಂದಿ ಮಹಾತ್ಮರು ಈ ವ್ರತವನ್ನು ಮಾಡಿ ಬಹಳವಾದ ಐಶ್ವರ್ಯವನ್ನು ಹೊಂದಿ ಸುಖಪಡುತ್ತಿರುವರು. ನಿಮ್ಮೊಡನೆ ನಾನು ತಂದೆಯ ಮನೆಯಿಂದ ಈ ಆಶ್ರಮಕ್ಕೆ ಬರುವಕಾಲದಲ್ಲಿ ಮಧ್ಯಾಹ್ನ ಸಮಯದಲ್ಲಿ ನದೀತೀರದಲ್ಲಿ ಬ್ರಾಹ್ಮಣ ಮುತ್ತೈದೆಯರು ಈ ವ್ರತವನ್ನು ಮಾಡುತ್ತಿದ್ದುದನ್ನು ಕಂಡು ನಾನೂ ಆ ವ್ರತವನ್ನು ಮಾಡಿ ದಾರವನ್ನು ಕಟ್ಟಿಕೊಂಡೆನು. ಆ ವ್ರತದ ಮಹಿಮೆಯಿಂದ ನಮಗೆ ಅನಂತೈಶ್ವರ್ಯ ಪ್ರಾಪ್ತವಾಗಿರುವುದು ಆದಕಾರಣ ಇದನ್ನು ತಿರಸ್ಕರಿಸುವುದು. ನ್ಯಾಯವಲ್ಲ ಎಂದು ಹೇಳಿದಳು. ಅದನ್ನು ಕೇಳಿ ಕೌಂಡಿನ್ಯನಿಗೆ ಬಹಳವಾಗಿ ಕೋಪಬಂದು ಅನಂತವೆಂದರೇನು ? ದಾರವನ್ನು ಏಕೆ ಕಟ್ಟಿಕೊಳ್ಳಬೇಕು ? ಇದರಿಂದೇನು ಪ್ರಯೋಜನ ಎಂದು ಹೆಂಡತಿಯನ್ನು ಹಿಯ್ಯಾಳಿಸಿ ಆ ದಾರವನ್ನು ಕಿತ್ತು ಉರಿಯುತ್ತಿರುವ ಬೆಂಕಿಯಲ್ಲಿ ಹಾಕಿಬಿಟ್ಟನು.

ತಕ್ಷಣವೇ ಸುಶೀಲೆಯು ಓಡಿಹೋಗಿ ಆ ದಾರವನ್ನು ಎತ್ತಿಕೊಂಡು ಹಾಲಿನಲ್ಲಿ ಮುಳುಗಿಸಿದಳು. ಕೌಂಡಿನ್ಯನ ಈ ವಿಧವಾದ ವರ್ತನೆಯಿಂದ ಅವನ ಐಶ್ವರ್ಯವು ದಿನದಿನಕ್ಕೆ ಕುಗ್ಗುತ್ತ ಬದಿಂತು. ನೆಂಟರಲ್ಲಿ ನಿಷ್ಕಾರಣವಾಗಿ ವಿರೋಧವು ಹೆಚ್ಚುತ್ತ ಬಂದಿತು. ದನಕರುಗಳು ಇದ್ದಕ್ಕಿದಹಾಗೆ ಸತ್ತುಬಿದ್ದುವು. ಮನೆಗೆ ಬೆಂಕಿಬಿದ್ದು ಸುಟ್ಟು ಎಲ್ಲೆಲ್ಲಿದ್ದ ಧನಕನಕ ವಸ್ತುಗಳು ಅಲ್ಲಲ್ಲೇ ಮಾಯವಾದವು. ಸಾಲದುದಕ್ಕೆ ಕಳ್ಳರು ನುಗ್ಗಿ ಇದ್ದುದನ್ನೆಲ್ಲ ಕದ್ದು ಕೊಂಡು ಹೋದರು. ಇಷ್ಟೆಲ್ಲ ಆದಮೇಲೆ ತನ್ನ ದುಷ್ಕೃತ್ಯದಿಂದ ತನಗೆ ಈ ಗತಿಯಾಯಿತೆಂದು ತಿಳಿದು ಚಿತಾಕ್ರಾಂತನಾಗಿ ಕೌಂಡಿನ್ಯನು ಭಗವಂತನಾದ ಅನಂತಪದ್ಮನಾಭಸ್ವಾಮಿಯನ್ನು ಹುಡುಕುತ್ತ ಅರಣ್ಯವನ್ನು ಹೊಕ್ಕು ಸಂಚರಿಸುತ್ತಿದ್ದನು.

ಹೀಗೆ ತನಗೆ ಬಡತನವುಂಟಾಗಿ ಕೇವಲ ದುಃಖವೇ ಪ್ರಾಪ್ತವಾದಕಾರಣ ಭಗವಂತನನ್ನು ಕಾಣಬೇಕೆಂದು ಅರಣ್ಯದಲ್ಲಿ ಹುಡುಕುತ್ತ ಸಂಚರಿಸುತ್ತಿದ್ದ ಕೌಂಡಿನ್ಯನು ಮೊದಲು ಫಲ ಪುಷ್ಪಭರಿತವಾದ ಒಂದು ಮಾವಿನ ಮರವನ್ನು ಕಂಡು ಎಲೈ ಚೂತವೃಕ್ಷವೇ ? ನೀನು ಅನಂತಪದ್ಮನಾಭನನ್ನು ಕಂಡೆಯಾ ? ಎಂದು ಕೇಳಲು ಅದು ನನಗೆ ತಿಳಿಯದು ಎಂದು ಉತ್ತರಕೊಟ್ಟಿತು. ಅಲ್ಲಿಂದ ಮುಂದೆ ಹೊರಟುಬರುತ್ತ ದಾರಿಯಲ್ಲಿ ಕರುವಿನೊಡನೆ ನಿಂತಿರುವ ಒಂದು ಹಸುವನ್ನು ನೋಡಿ ಆಶ್ಚರ್ಯಪಡುತ್ತಾ ನೀವೇನಾದರೂ ಅನಂತಪದ್ಮನಾಭನನ್ನು ಕಂಡಿರಾ ! ಎಂದು ಪ್ರಶ್ನೆಮಾಡಲು ನಮಗೆ ಗೊತ್ತಿಲ್ಲವೆಂದೂ ಅವೆರಡೂ ಹೇಳಿ ಬಿಟ್ಟವು. ಅಲ್ಲಿಂದ ಸ್ವಲ್ಪದೂರ ಬಂದಮೇಲೆ ಕೌಂಡಿನ್ಯನು ಹುಲ್ಲುಗಾವಲಿನ ಮಧ್ಯದಲ್ಲಿ ನಿಂತು ಹುಲ್ಲನ್ನು ತಿನ್ನದೆ ಸೋಯುತ್ತಿರುವ ಎತ್ತನ್ನು ನೋಡಿದವನಾಗಿ ಎಲೈ ವೃಷಭರಾಜನೆ ನೀನು ಅನಂತಪದ್ಮನಾಭನನ್ನು ಕಂಡಿರುವೆಯಾ ಎಂದು ಕೇಳಲು ಅದೂ ನನಗೆ ತಿಳಿಯದು ಎಂದು ಹೇಳಿಬಿಟ್ಟಿತು. ಅಲ್ಲಿಂದ ಹೊರಟು ಸ್ವಲ್ಪದೂರ ಬರುವಲ್ಲಿ ಉಕ್ಕಿ ಹರಿಯುವಂತೆ ನೀರು ತುಂಬಿಹೋಗಿ ಎರಡೂಒಂದಾಗಿರುವ ಸರೋವರಗಳೆರಡನ್ನು ಕಂಡು ಕೌಂಡಿನ್ಯನು ಚಿಂತಾಕ್ರಾಂತನಾಗಿ ಕಮಲ ಕಲ್ಹಾರ ಹಂಸಕಾರಂಡಕಾದಿಗಳಿಂದ ಮನೋಹರವಾಗಿರುವ ಈ ಸರೋವರವನ್ನಾದರೂ ಪ್ರಶ್ನೆಮಾಡಬೇಕೆಂದು ಯೋಚಿಸಿ ನೀವು ಅನಂತ ಪದ್ಮನಾಭಸ್ವಾಮಿಯನ್ನು ಕಂಡಿರಾ ? ಎಂದು ಕೇಳಲು ತಾವು ಕಾಣೆವೆಂದು ಹೇಳಿ ಬಿಟ್ಟವು. ಕಡೆಗೆ ಕೌಂಡಿನ್ಯನು ಚಿಂತೆಯಿಂದ ಕಂಗೆಟ್ಟು ಮುಂದೆ ಹೊರಟು ಬರುತ್ತ ಒಂದು ಕತ್ತೆಯನ್ನು ಒಂದು ಆನೆಯನ್ನು ಕಂಡು ವಿಸ್ಮಿತನಾಗಿ ನೀವು ಅನಂತಸ್ವಾಮಿಯನ್ನು ನೋಡಿದಿರಾ ! ಎಂದು ಕೇಳಲು ಅವೆರಡೂ ನಾವು ಕಾಣೆವು ಎಂದು ಹೇಳಿಬಿಟ್ಟವು. ಆಗ ತನ್ನ ಪ್ರಯತ್ನವೆಲ್ಲ ವ್ಯರ್ಥವಾಯಿತೆಂದು ತಿಳಿದು ಕೌಂಡಿನ್ಯನು ಪ್ರಜ್ಞಾಹೀನನಾಗಿ ಮೂರ್ಛೆಗೆ ಸಂದು ನೆಲಕ್ಕೆಬಿದ್ದು ಸಾಯುವ ಸ್ಥಿತಿಗೆ ಬಂದನು. ಆಗ ದಯಾಳುವಾದ ಕರುಣಾಸಮುದ್ರನಾದ ಅನಂತಪದ್ಮನಾಭನು ಮುದಿಬ್ರಾಹ್ಮಣನ ವೇಷದಿಂದ ಅಲ್ಲಿಗೆ ಬಂದು ಆತನಿಗೆ ಕಾಲೋಚಿತವಾದ ಶೈತ್ಯೋಪಚಾರಮಾಡಿ ಅವನನ್ನು ಸಮಾಧಾನಗೊಳಿಸಿ ತನ್ನೊಡನೆ ಅವನನ್ನು ತನ್ನರಮನೆಗೆ ಕರೆದುಕೊಂಡು ಹೋಗಿ ಅನಂತವೈಭವದಿಂದ ಕೂಡಿದ ಅನಂತ ಮಹಿಮಾಯುಕ್ತವಾದ ತನ್ನ ಐಶ್ವರ್ಯವನ್ನು ತೋರಿಸಿ ನಿಜವಾದ ತನ್ನ ವಿಶ್ವ ರೂಪವನ್ನು ಪ್ರಕಾಶಗೊಳಿಸಿದನು. ಆಗ ಕೌಂಡಿನ್ಯನಿಗೆ ಜ್ಞಾನೋದಯವಾಯಿತು. ಕೂಡಲೇ ರತ್ನಸಿಂಹಾಸನದಲ್ಲಿ ಕುಳಿತು ಮಹಾಲಕ್ಷ್ಮಿಯೊಡನೆ ಅಲಂಕೃತನಾಗಿ, ಶ್ರೀವತ್ಸಕೌಸ್ತುಭ ಧಾರಿಯಾಗಿ ನಾಲ್ಕು ಕೈಗಳಿಂದ ಶಂಖಚಕ್ರ ಗದಾಪದ್ಮಗಳನ್ನು ಹಿಡಿದು ಚತುರ್ದಶಭುವನ

ರಕ್ಷಕ! ಎಂಬ ಬಿರುದನ್ನು ವಹಿಸಿ ಮೆರೆಯುತ್ತಿರುವ ಪರಬ್ರಹ್ಮಸ್ವರೂಪನಾದ ಅನಂತಮೂರ್ತಿಯನ್ನು ನಿಗಮ ಸಮ್ಮತವಾದ ಅನೇಕ ಸ್ತೋತ್ರಪರಂಪರೆಗಳಿಂದಹೊಗಳಿ ಸಂತೋಷಪಡಿಸಿದನು. ಆತನ ಭಕ್ತಿಗೆ ಮೆಚ್ಚಿ ದಯಾಳುವಾದ ದೇವದೇವನು ಅವನಿಗೆ ಮೂರು ವರಗಳನ್ನು ಕೊಟ್ಟನು. ಅವನ ದಾರಿದ್ರ್ಯಕ್ಕೆ ನಾಶವೇ ಮೊದಲನೆಯದು ಧರ್ಮಾಚರಣೆಯೇ ಎರಡನೆಯದು, ಮೂರನೆಯದು ಮುಕ್ತಿಸೌಭಾಗ್ಯವೆಂಬ ವರಗಳನ್ನು ಪಡೆದು ಹಿಂದಿರುಗಿ ಬರುವಾಗ ಕೌಂಡಿನ್ಯನು ಎಲೈ ಕರುಣಾಮಯನಾದ ಸ್ವಾಮಿಯೇ ನಾನು ನಿನ್ನನ್ನು ಹುಡುಕಿಕೊಂಡು ಅರಣ್ಯದಲ್ಲಿ ಬರುತ್ತಿರುವಾಗ ನನಗೆ ದಾರಿಯಲ್ಲಿ ಸಿಕ್ಕಿದ ಮಾವಿನಮರದ ಸಮಾಚಾರವೇನು?ಹಸುವೇಕೆ ಅಲ್ಲಿ ನಿಂತಿತ್ತು ತೃಣಸಮೃದ್ಧಿಯಾಗಿದ್ದರೂಹುಲ್ಲು ತಿನ್ನದೆ ತಲ್ಲಣಿಸುತ್ತಿದ್ದ ವೃಷಭವು ಯಾರು? ಉಕ್ಕಿ ಹರಿಯುತ್ತ ಒಟ್ಟಾಗಿ ಸೇರಿಕೊಂಡಿದ್ದ ಸರೋವರಗಳ ವಿಚಾರವೇನು? ನನ್ನನ್ನು ಸಂತೈಸಿ ಕರೆತಂದ ವೃದ್ಧಬ್ರಾಹ್ಮಣನು ಯಾರು? ಕತ್ತೆಯೂ ಆನೆಯೂ ಅರಣ್ಯದಲ್ಲಿ ಒಂಟಿಯಾಗಿರುವುದಕ್ಕೆ ಕಾರಣವೇನು ಇದೆಲ್ಲವನ್ನು ನನಗೆ ತಿಳಿಯಹೇಳಬೇಕೆಂದು ಕೇಳಿಕೊಂಡನು ಆಗ ಭಕ್ತವತ್ಸಲನಾದ ಭಗವಂತನು ಕೌಂಡಿನ್ಯನನ್ನು ಕುರಿತು ಎಲೈ ಭಕ್ತಾಗ್ರಣಿಯೆ ಕೇಳು. ತಾನು ಪೂರ್ಣ ವಿದ್ಯಾವಂತನಾಗಿದ್ದರೂ ತನ್ನ ಶಿಷ್ಯರಿಗೆ ಪಾಠವನ್ನು ಹೇಳಿಕೊಡದೆ ಮರ್ಖಿಯಾಗಿದ ಬ್ರಾಹ್ಮಣನು ಯಾರಿಗೂ ಪ್ರಯೋಜನವಿಲ್ಲದಂತೆ ಅರಣ್ಯದಲ್ಲಿ ಮರವಾಗಿ ಹುಟ್ಟಿರುವನು. ಸಂಪೂರ್ಣ ಧನಿಕನಾಗಿದ್ದರೂ ತಾನು ತಿನ್ನದೆ ಇತರರಿಗೂ ಕೊಡದೆ ಕೇವಲ ಕೃಪಣನಾಗಿದ್ದವನೊಬ್ಬನು ಈ ಜನ್ಮದಲ್ಲಿ ಹಸುವಾಗಿ ಹುಟ್ಟಿ ನಿಂತಿರುವನು. ದೊರೆಯೆಂಬ ಅಹಂಕಾರದಿಂದ ತನ್ನ ರಾಜ್ಯದಲ್ಲಿದ್ದ ಬ್ರಾಹ್ಮಣರಿಗೆ ಏನೂ ಬೆಳೆಯಾಗದ ಊಸರ ಕ್ಷೇತ್ರವನ್ನು ದಾನಮಾಡಿದ ರಾಜಪುತ್ರನು ವೃಷಭವಾಗಿ ಹುಟ್ಟಿರುವನು. ಧರ್ಮವೊಂದು ಅಧರ್ಮವೊಂದು ಇವೆರಡೂ ಒಟ್ಟಾಗಿ ಸೇರಿ ಒಂದಕ್ಕೊಂದು ಸೇರಿಕೊಂಡಿರುವುದೇ ಆ ಸರೋವರಗಳು. ಆಸ್ತಿಕ ಶಿರೋಮಣಿಗಳಾದ ಪೂರ್ವಿಕರ ಧರ್ಮವನ್ನು ಮಾರಿಕೊಂಡವನೊಬ್ಬನು ಆನೆಯಾಗಿ ಹುಟ್ಟಿ ಅಲೆಯುತ್ತಿರುವನು. ದುರ್ಮಾರ್ಗದಿಂದ ಪರದೂಷಣೆಯನ್ನು ಮಾಡುತ್ತಿದ್ದವನೇ ಕತ್ತೆಯಾಗಿ ಜನಿಸಿರುವನು. ಇದೆಲ್ಲವನ್ನು ನಿನಗೋಸ್ಕರವಾಗಿ ಹೇಳಿದೆ, ನೀನು ಹದಿನಾಲ್ಕು ವರ್ಷಕಾಲ ಭಕ್ತಿಯಿಂದ ಈ ವ್ರತವನ್ನು ಮಾಡಿ ಹದಿನೈದನೆಯ ವರ್ಷದಲ್ಲಿ ಉದ್ಯಾಪನೆಯನ್ನು ಮಾಡಿದರೆ ಅದರಿಂದ ನನಗೆ ಪ್ರೀತಿಯುಂಟಾಗಿ ನಿನಗೆ ಚಂದ್ರಲೋಕದಲ್ಲಿ ಶಾಶ್ವತವಾದ ನಕ್ಷತ್ರಪದವಿಯನ್ನು ಅನುಗ್ರಹಿಸುವೆನು. ಎಂದು ಹೇಳಿ ಅನಂತಪದ್ಮನಾಭನು ಮಾಯವಾದನು.

ಬಳಿಕ ಕೌಂಡಿನ್ಯನು ತನ್ನ ಮನೆಗೆ ಬಂದು ಭಕ್ತಿಯಿಂದ ಅನಂತವ್ರತವನ್ನು ಮಾಡಿ ಪುತ್ರಪೌತ್ರ ಅಷ್ಟೈಶ್ವರ್ಯಸಹಿತರಾಗಿ ಸುಶೀಲೆಯೊಡನೆ ಸಕಲ ಸೌಖ್ಯಗಳನ್ನೂ ಅನುಭವಿಸುತ್ತಿದ್ದು ಕಡೆಗೆ ನಕ್ಷತ್ರಮಂಡಲವನ್ನು ಸೇರಿ ಈಗಲೂ ಅಲ್ಲಿ ಪ್ರಕಾಶಿಸುತ್ತಿರುವನು. ಪೂರ್ವದಲ್ಲಿ ಅಗಸ್ತ್ಯಮಹಾಮುನಿಯಿಂದ ಆಚರಿಸಲ್ಪಟ್ಟ ಪ್ರಸಿದ್ಧವಾದ ಈ ವ್ರತವನ್ನು ಜನಕರಾಯನೂ, ಸಗರ, ದಿಲೀಪ, ಹರಿಶ್ಚಂದ್ರಾದಿಗಳು ಆಚರಿಸಿ ಧನ್ಯರಾದರು. ಎಲೈ ಧರ್ಮರಾಯನೇ! ಆದಕಾರಣ ಭಕ್ತಿವಂತನಾದ ನೀನೂ ಕೂಡ ಸಪರಿವಾರನಾಗಿ ಈ ವ್ರತವನ್ನು ಮಾಡಿದರೆ ನಿನ್ನ ದುಃಖವೆಲ್ಲ ನಾಶವಾಗಿ ನಿನಗೆ ಸುಖವುಂಟಾಗುವುದೆಂದು ಶ್ರೀಕೃಷ್ಣನು ಧರ್ಮರಾಯನಿಗೆ ಹೇಳಲು ಧರ್ಮಪುತ್ರನು ಅದರಂತೆ ಅನಂತವ್ರತವನ್ನು ಮಾಡಿ ತನ್ನ ಇಷ್ಟಾರ್ಥಸಿದ್ಧಿಯನ್ನು ಪಡೆದನು. ಆದಕಾರಣ ಉತ್ತಮೋತ್ತಮವಾದ ಈ ವ್ರತಕಥೆ

ಯನ್ನು ಯಾರು ಹೇಳುವರೋ ಯಾರು ಕೇಳುವರೋ ಮತ್ತು ಯಾರು ಪಠಿಸುವರೋ ಅಂಥವರು ಸರ್ವಪಾಪವಿಮುಕ್ತರಾಗಿ ಅಷ್ಟೈಶ್ವರ್ಯಪ್ರದವಾದ ಸುಖಸಂತಾನವನ್ನು ಪಡೆದು ಇಹದಲ್ಲಿ ಸುಖವನ್ನು ಪರದಲ್ಲಿ ಕೀರ್ತಿಯನ್ನು ಹೊಂದುವುದರಲ್ಲಿ ಯಾವ ಸಂಶಯವೂ ಇಲ್ಲವೆಂದು ಸೂತಪುರಾಣಿಕನು ಶೌನಕಾದಿಮಹರ್ಷಿಗಳಿಗೆ ಹೇಳಿದ ಭವಿಷ್ಯೋತ್ತರ ಪುರಾಣಸ್ಥವಾದ ಶ್ರೀಮದನಂತಪದ್ಮನಾಭ ವ್ರತಕಥೆಯು ಸಂಪೂರ್ಣವಾದುದು.

——()——

ಅಥ ಉದ್ಯಾಪನ ವಿಧಿ

ಹದಿನಾಲ್ಕು ವರ್ಷಕಾಲ ಅನಂತವ್ರತವನ್ನು ಮಾಡಿದಮೇಲೆ ಹದಿನೈದನೆಯ ವರ್ಷದಲ್ಲಿ ಅನಂತನ ಕಲಶಗಳು ಹದಿನಾಲ್ಕು ಬ್ರಹ್ಮಕಲಶವೊಂದು ಹದಿನೈದು ಕಲಶ, ಹದಿನೈದು ವಸ್ತ್ರ, ಹದಿನೈದು ನಾರಿಕೇಳಗಳಿಂದ ಅಲಂಕರಿಸಿದ ಕಲಶಗಳನ್ನು ವಿಧಿವತ್ತಾಗಿ ಸೇರಿಸಿಕೊಂಡಿದ್ದು ಉದ್ಯಾಪನೆಯದಿನ ಮಧ್ಯಾಹ್ನದಲ್ಲಿ ವ್ರತವನ್ನು ಮಾಡಿ ಸಾಯಂಕಾಲಕ್ಕೆ ಕಲಶಸ್ಥಾಪನೆ ಮಾಡಬೇಕು. ಅನಂತರ ನಿಯಮದಿಂದ ರಾತ್ರಿ ನಾಲ್ಕು ಯಾಮಗಳಲ್ಲಿಯೂ ಒಂದೊಂದು ಯಾಮಕ್ಕೆ ಒಂದೊಂದು ಪೂಜೆಯಂತೆ ಅರ್ಚಿಸಿ ಬೆಳಗಾದಮೇಲೆ ಸ್ನಾನಮಾಡಿ ಮರಳಿ ತನ್ನ ಶಾಖೆಗೆ ಸಂಬಂಧಪಟ್ಟಂತೆ ಆಚಾರಾನುಸಾರವಾಗಿ ಸಂಕಲ್ಪಮಾಡಿ ಕುಳಿತುಕೊಂಡು "ಇದಂ ವಿಷ್ಣುರ್ವಿಚಕ್ರಮೆ" ಎಂಬ ಮಂತ್ರದಿಂದ ಸ್ಥಂಡಿಲಪುರಸ್ಸರವಾಗಿ ನೂರಿಪ್ಪತ್ತೆಂಟು ಹೋಮಗಳನ್ನು ಮಾಡಿ ಪೂರ್ಣಾಹುತಿಯನ್ನು ಕೊಟ್ಟು ಆಚಾರ್ಯಪೂಜೆಯನ್ನು ಮಾಡಿ ಕಲಶಪ್ರತಿಮೆಗಳನ್ನು ದಾನಮಾಡಿದ ನಂತರ ಬ್ರಾಹ್ಮಣ ಸುವಾಸಿನಿಯರನ್ನು ಯಥಾವಿಧಿಯಾಗಿ ಭೋಜನ ದಕ್ಷಿಣೆ ತಾಂಬೂಲಾದಿಗಳಿಂದ ಸತ್ಕರಿಸಿ ಅವರ ಅನುಗ್ರಹದಿಂದ ವ್ರತಿಯು ಭೋಜನಮಾಡಿ ಅಲ್ಲಿಂದ ಮುಂದೆ ತಾನಿರುವವರೆಗೂ ಈ ವ್ರತವನ್ನು ತಪ್ಪದೆ ಮಾಡುತ್ತಿರಬೇಕೆಂದು ಉದ್ಯಾಪನ ವಿಧಿಯಲ್ಲಿ ಹೇಳಿದೆ.

ಇತಿ ಅನಂತಪದ್ಮನಾಭ ವ್ರತೋದ್ಯಾಪನೆಯ ವಿಧಿ ಸಂಪೂರ್ಣಂ. ಶ್ರೀಃ ಶ್ರೀಃ ಶ್ರೀಃ.

೫. ಅಥ ವರಲಕ್ಷ್ಮೀವ್ರತಕಲ್ಪಃ

ತತ್ರ ವ್ರತವಿವೇಕಃ

ಶುಕ್ಲೇ ಶ್ರಾವಣಿಕೇ ಮಾಸಿ ಪೂರ್ಣಿಮೋಪಾಂತ್ಯಭಾರ್ಗವೇ ॥ ವರಲಕ್ಷ್ಮ್ಯಾಃ ವ್ರತಂ ಕಾರ್ಯಂ ಎಂಬ ವಾಕ್ಯಪ್ರಕಾರ ಶ್ರಾವಣ ಶುದ್ಧ ಹುಣ್ಣಿಮೆ (ಪೂರ್ಣಿಮೆ) ಗೆ

ಮೊದಲು ಬರುವ ಶುಕ್ರವಾರದಲ್ಲಿ ಅಂದರೆ ಶ್ರಾವಣಮಾಸದ ಎರಡನೆ ಅಥವಾ ಮೂರನೆ ಶುಕ್ರವಾರದಲ್ಲಿ ಸಾಯಂಕಾಲದ ಹೊತ್ತಿನಲ್ಲಿ ಸುಮಂಗಲಿಯರಿಂದ ಆಚರಿಸಲ್ಪಡಬೇಕಾದದ್ದು ವರಲಕ್ಷ್ಮೀವ್ರತವು. ಅದನ್ನು ಅವರವರ ಪದ್ಧತಿಗನುಸಾರವಾಗಿ ಕಲಶ ಸ್ಥಾಪನೆಮಾಡಿ ಯಮುನಾಪೂಜಾ ಪುರಸ್ಸರವಾಗಿ ಪ್ರದೋಷಕಾಲಕ್ಕೆ ಪೂಜೆಯನ್ನು ಆರಂಭಿಸಿ ರಾತ್ರಿ ಪ್ರಥಮ ಯಾಮದೊಳಗಾಗಿ ಪೂಜೆಯನ್ನು ಮುಗಿಸಬೇಕು.

ಅಥ ಸಾಧಕಃ ಪ್ರಾತಃಕಾಲೇ ಮಂಗಳಂ ಸ್ನಾನಂ ಕೃತ್ವಾ ನಿತ್ಯಕರ್ಮಾಣಿ ನಿರ್ವರ್ತ್ಯ ಮಂಟಪಮಲಂಕೃತ್ಯ ಸುಖಾಸನೇ ಉಪವಿಶ್ಯ ತ್ರಿರಾಚಮ್ಯ ಏವಂ ಶುದ್ಧಿಕರ್ಮಾ ಕೃತಸರ್ವ ವ್ರತಸಂಭಾರಾನ್ ಸಂಗೃಹ್ಯ ಸಂಕಲ್ಪಂ ಕುರ್ಯಾತ್ । ಶುಭೇ ಶೋಭನೇ ಮುಹೂರ್ತೇ ದ್ವಿತೀಯಪ್ರಹರಾರ್ಧೇ ಶ್ವೇತವರಾಹಕಲ್ಪೇ ವೈವಸ್ವತಮನ್ವಂತರೇ ಕಲಿಯುಗೇ ಪ್ರಥಮಪಾದೇ ಜಂಬೂದ್ವೀಪೇ ಭರತವರ್ಷೇ ಭರತಖಂಡೇ ಅಸ್ಮಿನ್ ವ್ಯಾವಹಾರಿಕೇ ಚಾಂದ್ರಮಾನೇನ ಪ್ರಭವಾದಿ ಷಷ್ಠಿ ಸಂವತ್ಸರಾಣಾಂ ಮಧ್ಯೇ.... ನಾಮ ಸಂವತ್ಸರೇ ದಕ್ಷಿಣಾಯನೇ ವರ್ಷಋತೌ ಶ್ರಾವಣಮಾಸೇ ಶುಕ್ಲಪಕ್ಷೇ ತಿಥೌ ಭಾರ್ಗವಾಸರಯುಕ್ತಾಯಾಂ ಏವಂ ಗುಣ ವಿಶೇಷಣ ವಿಶಿಷ್ಟಾಯಾಂ ಶುಭತಿಥೌ ಅಸ್ಮಾಕಂ ಸಹಕುಟುಂಬಾನಾಂ ಕ್ಷೇಮಸ್ಥೈರ್ಯ ಆಯುರಾರೋಗ್ಯ ಐಶ್ವರ್ಯಾಭಿವೃದ್ಧ್ಯರ್ಥಂ ಮಮ ಗೃಹೇ ಶ್ರೀವರಮಹಾಲಕ್ಷ್ಮೀ ಸ್ಥೈರ್ಯತಾಸಿದ್ಧ್ಯರ್ಥಂ ರಾಜಪ್ರಸಾದ ದೇವತಾಪ್ರಸಾದ ಸಿದ್ಧ್ಯರ್ಥಂ ಯಾವಜ್ಜೀವ ದೀರ್ಘಸೌಮಂಗಲ್ಯಾಭಿವೃದ್ಧ್ಯರ್ಥಂ ಧನಕನಕ ವಸ್ತುವಾಹನ ಧನ ಧಾನ್ಯ ಪಶು ಸುತ ಕ್ಷೇತ್ರಾಯುರಾರೋಗ್ಯೈಶ್ವರ್ಯಾದಿ ಸಕಲಮನೋರಥಾವಾಪ್ತ್ಯರ್ಥಂ ಸಮಸ್ತಮಂಗಳಾವ್ಯಾಪ್ತ್ಯರ್ಥಂ ವರ್ಷೇ ವರ್ಷೇ ಕರ್ತವ್ಯಮೇತದ್ವರ್ಷಪ್ರಯುಕ್ತ ಸಂಪೂರ್ಣ ಸಮಗ್ರ ಸಕಲ ಫಲಾವಾಪ್ತ್ಯರ್ಥಂ ಭವಿಷ್ಯೋತ್ತರ ಪುರಾಣೋಕ್ತ ಪ್ರಕಾರೇಣ ಯಥಾಶಕ್ತಿ ಸಂಭಾವಿತ ನಿಯಮೇನ ಸಂಭವಿತ ಪ್ರಕಾರೇಣ ಸಂಭವದ್ಭಿರ್ದ್ರವ್ಯೈಃ ಸಂಭವದ್ಭಿರುಪಚಾರೈಶ್ಚ ಯಾವಚ್ಛಕ್ತ್ಯಾ ಧ್ಯಾನಾವಾಹನಾದಿ ಷೋಡಶೋಪಚಾರಪೂಜಾಂ ಚ ಕರಿಷ್ಯೇ । ತದಂಗ ಕಲಶಾರಾಧನಂ ಕರಿಷ್ಯೇ । ಕಲಶಂ ಗಂಧಪುಷ್ಪಾಕ್ಷತೈರಭ್ಯರ್ಚ್ಯ । ಕಲಶಸ್ಯ ಮುಖೇ ವಿಷ್ಣುಃ (೯–೧೦ನೇ ಪುಟ ನೋಡಿ) ಜಲೇsಸ್ಮಿನ್ ಸನ್ನಿಧಿಂ ಕುರು । ಅಪೋವಾ । ಆಪ ಓಂ ಕಲಶೋದಕೇನ ಪೂಜೋಪದ್ರವ್ಯಾಣಿ ಸಂಪ್ರೋಕ್ಷ್ಯ–ಆತ್ಮಾನಂ ದೇವತಾಂ ಚ ಸಂಪ್ರೋಕ್ಷ್ಯ ಆದೌ ನಿರ್ವಿಘ್ನತಾಸಿದ್ಧ್ಯರ್ಥಂ ಮಹಾಗಣಪತಿ ಪೂಜಾಂ ಕೃತ್ವಾ ॥ ತತಃ ಪ್ರಾಣಪ್ರತಿಷ್ಠಾಪನಂ ಕುರ್ಯಾತ್ ॥ ಅಸುನೀತ ಪುನರಸ್ಮಾಸು ಚಕ್ಷುಃ (೧೨ನೇ ಪುಟ ನೋಡಿ) ಪುನಃ ಪ್ರಾಣಮಿಹ ನೋ ದೇಹಿ ಭೋಗಂ–ಜ್ಯೋಕ್ಪಶ್ಯೇಮ ಸೂರ್ಯಮುಚ್ಚರಂತ ಮನುಮತೇ ಮೃಡಯಾನಃ ಸ್ವಸ್ತಿ ॥ ಆವಾಹಿತಾ ಭವ । ಸ್ಥಾಪಿತಾ ಭವ । ಸನ್ನಿಹಿತಾ ಭವ । ಸನ್ನಿರುದ್ಧಾ ಭವ । ಸುಪ್ರಸನ್ನಾ ಭವ । ವರದಾ ಭವ । ಶಾಂತಾ

ಭವ । ಮಮ ಸರ್ವಾಭೀಷ್ಟಫಲಪ್ರದಾ ಭವ ॥ ವರಲಕ್ಷ್ಮ್ಯೈ ನಮಃ ॥ ಪ್ರಾಣಪ್ರತಿಷ್ಠಾ
ಪನಮುಹೂರ್ತಸ್ಸುಮುಹೂರ್ತೋಽಸ್ತು ॥ ಅಥ ದ್ವಾರಪಾಲಕಪೂಜಾಂ ಕರಿಷ್ಯೇ ॥
ಪೂರ್ವದ್ವಾರೇ ದ್ವಾರಶ್ರಿಯೈ ನಮಃ । ಧಾತ್ರೇ ನಮಃ । ವಿಧಾತ್ರೇ ನಮಃ । ದಕ್ಷಿಣ
ದ್ವಾರೇ ದ್ವಾರಶ್ರಿಯೈ ನಮಃ । ಚಂಡಾಯ ನಮಃ । ಪ್ರಚಂಡಾಯ ನಮಃ । ಪಶ್ಚಿಮ
ದ್ವಾರೇ ದ್ವಾರಶ್ರಿಯೈ ನಮಃ । ಜಯಾಯ ನಮಃ । ವಿಜಯಾಯ ನಮಃ । ಉತ್ತರ
ದ್ವಾರೇ ದ್ವಾರಶ್ರಿಯೈ ನಮಃ । ಗಂಗಾಯೈ ನಮಃ । ಯಮುನಾಯೈ ನಮಃ । ಓಂ
ನಮೋ ಭಗವತ್ಯೈ ಸಕಲದೇವತಾಶಕ್ತ್ಯಾತ್ಮಿಕಾಯೈ ಶ್ರೀವರಮಹಾಲಕ್ಷ್ಮ್ಯೈ ನಮಃ ।
ದ್ವಾರಪಾಲಕಪೂಜಾಂ ಸಮರ್ಪಯಾಮಿ ॥ ಅಥ ಪೀಠಪೂಜಾ । ತನ್ಮಧ್ಯೇ ನವರತ್ನ
ಖಚಿತಪೀಠಂ ಧ್ಯಾತ್ವಾ । ಪೀಠಸ್ಯಾಧೋಭಾಗೇ ಆಧಾರಶಕ್ತ್ಯೈ ನಮಃ ॥ ಆದಿ
ಕೂರ್ಮಾಯ ನಮಃ ॥ ಅನಂತಾಯ ನಮಃ ॥ ವರಾಹಾಯ ನಮಃ ॥ ಸ್ವರ್ಣವೇದಿಕಾಯ
ನಮಃ । ರತ್ನಮಂಟಪಾಯ ನಮಃ । ಸಿಂಹಾಸನಾಯ ನಮಃ । ತನ್ಮಧ್ಯೇ ಶ್ರೀವರ
ಮಹಾಲಕ್ಷ್ಮ್ಯೈ ನಮಃ । ಪೀಠಪೂಜಾಂ ಸಮರ್ಪಯಾಮಿ ॥ ಕೌಮಂ ನವಂ ಮಹಾ
ದೇವ್ಯಾ ಕುಂಕುಮಾಕ್ತಂ ಸುದೋರಕಂ ॥ ದ್ವಾದಶಗ್ರಂಥಿಸಂಯುಕ್ತಮುಪಕಲ್ಪ್ಯ
ಪ್ರಪೂಜಯೇತ್ । ನೂತನದೋರಸ್ಥಾಪನಂ ॥ ತತ್ಪೂಜಾಂ ಚ ಕುರ್ಯಾತ್ ॥ ಅಥ
ಧ್ಯಾನಂ । ಪದ್ಮಾಸನೇ ಪದ್ಮಕರೇ ಸರ್ವಲೋಕೈಕಪೂಜಿತೇ । ನಾರಾಯಣಪ್ರಿಯೇ
ದೇವಿ ಸುಪ್ರೀತಾ ಭವ ಸರ್ವದಾ ॥ ವರದಾಂ ಚತುರ್ಭುಜಾಂ ಪದದ್ವಯಾಸಕ್ತಕ
ರೋಜ್ವಲಾಂ । ನಾನಾಭರಣದೀಪ್ತಾಂಗೀಂ ಧ್ಯಾಯೇತ್ಪದ್ಮೋಪರಿ ಸ್ಥಿತಾಂ ॥ ಹಿರಣ್ಯ
ವರ್ಣಾಂ ಹರಿಣೀಂ ಸುವರ್ಣರಜತಸ್ರಜಾಂ । ಚಂದ್ರಾಂ ಹಿರಣ್ಮಯೀಂ ಲಕ್ಷ್ಮೀಂ
ಜಾತವೇದೋ ಮಮಾವಹ ॥ ಶ್ರೀವರಮಹಾಲಕ್ಷ್ಮ್ಯೈ ನಮಃ । ಧ್ಯಾನಂ ಸಮರ್ಪ
ಯಾಮಿ ॥ ೧ ॥ ನಾರಾಯಣಿ ಮಹಾಲಕ್ಷ್ಮಿ ಕ್ಷೀರಸಾಗರವಾಸಿನಿ ॥ ಗುಣತ್ರಯಧರೇ
ದೇವಿ ಮಹಾಲಕ್ಷ್ಮಿ ನಮೋಽಸ್ತು ತೇ ॥ ತಾಂ ಮ ಆವಹ ಜಾತವೇದೋ
ಲಕ್ಷ್ಮೀಮನಪಗಾಮಿನೀಂ । ಯಸ್ಯಾಂ ಹಿರಣ್ಯಂ ವಿಂದೇಯಂ ಗಾಮಶ್ವಂ ಪುರು
ಷಾನಹಂ ॥ ಶ್ರೀವರಮಹಾಲಕ್ಷ್ಮ್ಯೈ ನಮಃ ॥ ಆವಾಹನಂ ॥ ೨ ॥ ವಜ್ರವೈಡೂರ್ಯ
ಮುಕ್ತಾದಿ ನವರತ್ನವಿರಾಜಿತಂ । ಸಿಂಹಾಸನಂ ಪ್ರದಾಸ್ಯಾಮಿ ಗೃಹ್ಯತಾಮಿದ
ಮುತ್ತಮಂ ॥ ಅಶ್ವಪೂರ್ವಾಂ ರಥಮಧ್ಯಾಂ ಹಸ್ತಿನಾದ ಪ್ರಬೋಧಿನೀಂ ॥ ಶ್ರಿಯಂ
ದೇವೀಮುಪಹ್ವಯೇ ಶ್ರೀರ್ಮಾದೇವೀರ್ಜುಷತಾಂ ॥ ಶ್ರೀವರಮಹಾಲಕ್ಷ್ಮ್ಯೈ
ನಮಃ । ಸಿಂಹಾಸನಂ ಸಮರ್ಪಯಾಮಿ ॥ ೩ ॥ ಸಾಕ್ಷತಂ ಹೇಮಪಾತ್ರಸ್ಥಂ
ಪದ್ಮಪುಷ್ಪೇಣ ಸಂಯುತಂ । ಪಾದ್ಯಂ ದಾಸ್ಯಾಮಿ ವರದೇ ಗೃಹ್ಯತಾಂ
ವಿಷ್ಣುವಲ್ಲಭೇ ॥ ಕಾಂಸ್ಯೋಸ್ಮಿತಾಂ ಹಿರಣ್ಯಪ್ರಾಕಾರಾಮಾರ್ದ್ರಾಂ ಜ್ವಲಂತೀಂ ॥
ತೃಪ್ತಾಂ ತರ್ಪಯಂತೀಂ । ಪದ್ಮೇ ಸ್ಥಿತಾಂ ಪದ್ಮವರ್ಣಾಂ ತಾಮಿಹೋಪಹ್ವಯೇ
ಶ್ರಿಯಂ । ಶ್ರೀವರಮಹಾಲಕ್ಷ್ಮ್ಯೈ ನಮಃ । ಪಾದ್ಯಂ ಸಮರ್ಪಯಾಮಿ ॥ ೪ ॥ ಸುಶೀತಲ

ಮಿದಂ ರಮ್ಯಂ ಸರ್ವತೀರ್ಥಸಮುದ್ಭವಂ॥ಅರ್ಘ್ಯಂ ಗೃಹಾಣ ದೇವಿ ತ್ವಂ ಸರ್ವದೇವ ನಮಸ್ಕೃತೇ । ಚಂದ್ರಾಂ ಪ್ರಭಾಸಾಂ ಯಶಸಾ ಜ್ವಲಂತೀಂ ಶ್ರಿಯಂ ಲೋಕೇ ದೇವ ಜುಷ್ಟಾಮುದಾರಾಂ । ತಾಂ ಪದ್ಮಿನೀಂ ಶರಣಮಹಂ ಪ್ರಪದ್ಯೇ ॥ ಅಲಕ್ಷ್ಮೀರ್ಮೇ ನಶ್ಯತಾಂ ತ್ವಾಂ ವೃಣೇ । ವರಮಹಾಲಕ್ಷ್ಮ್ಯೈ ನಮಃ । ಅರ್ಘ್ಯಮರ್ಘ್ಯಂ ॥ ೫ ॥ ವಿಷ್ಣುಪತ್ನಿ ಜಗದ್ವಂದ್ಯೇ ಸ್ವರ್ಣಪಾತ್ರೇ ಸ್ಥಿತಂ ಜಲಂ । ಗೃಹಾಣಾಚಮನಂ ದೇವಿ ಮಮಾಭೀಷ್ಟಪ್ರದಾ ಭವ । ಓಂ ಆದಿತ್ಯವರ್ಣೇ ತಪಸೋಧಿಜಾತೋ ವನಸ್ಪತಿಸ್ತವ ವೃಕ್ಷೋಽಥ ಬಿಲ್ವಃ। ತಸ್ಯ ಫಲಾನಿ ತಪಸಾ ನುದನ್ತು ಮಾಯಾನ್ತರಾಯಾಶ್ಚ ಬಾಹ್ಯಾ ಅಲಕ್ಷ್ಮೀಃ । ಶ್ರೀವರಮಹಾಲಕ್ಷ್ಮ್ಯೈ ನಮಃ । ಆಚಮನಮಾಚಮನಂ ॥೬॥ ವಿಶುದ್ಧೇ ರಾಜಿತೇ ಪಾತ್ರೇ ದಧಿಮಧ್ವಾಜ್ಯಸಂಯುತಂ । ಮಧುಪರ್ಕಂ ಗೃಹಾಣೇದಂ ಮಯಾ ತವ ಸಮರ್ಪಿತಂ । (ಹಾಲು ಹಣ್ಣು ಸಕ್ಕರೆ ಜೇನು ಫಲೋದಕ) ಮಧುಪರ್ಕಂ । ಪಯೋದಧಿಘೃತೋಪೇತಂ ಶರ್ಕರಾಮಧುಸಂಯುತಂ । ಕ್ಷುತ್ಪಿಪಾಸಾಮಲಾಂ ಜ್ಯೇಷ್ಠಾಮಲಕ್ಷ್ಮೀಂ ನಾಶಯಾಮ್ಯಹಂ। ಅಭೂತಿಮಸಮೃದ್ಧಿಂ ಚ ಸರ್ವಾಂನ್ನಿರ್ಣುದ ಮೇ ಗೃಹಾತ್ । ಪಂಚಮೃತಸ್ನಾನಮಿದಂ ಗೃಹಾಣ ಕಮಲಾಲಯೇ । ಉಪೈತು ಮಾಂ ದೇವಸಖಃ ಕೀರ್ತಿಶ್ಚ ಮಣಿನಾ ಸಹ । ಪ್ರಾದುರ್ಭೂತೋಽಸ್ಮಿ ರಾಷ್ಟ್ರೇಽಸ್ಮಿನ್ ಕೀರ್ತಿವೃದ್ಧಿಂ ದದಾತು ಮೇ । ಶ್ರೀವರಮಹಾಲಕ್ಷ್ಮ್ಯೈ ನಮಃ । ಪಂಚಾಮೃತ ಸ್ನಾನಂ (ಗಣಪತಿ ವ್ರತವನ್ನು ನೋಡಿ) ಯಶ್ಶುಚಿಃ ಪ್ರಯತೋ ಭೂತ್ವಾ ಜುಹುಯಾ ದಾಜ್ಯಮನ್ವಹಂ । ಶ್ರಿಯಃ ಪಂಚದಶರ್ಚಂ ಚ ಶ್ರೀಕಾಮಸ್ಸತತಂ ಜಪೇತ್। ಗಂಗಾ ಗೋದಾವರೀ ಕೃಷ್ಣಾ ಗೌತಮೀ ನರ್ಮದಾಜಲೈಃ । ಸ್ನಾನಾರ್ಥಮಾಹೃತಂ ಮಾತೇ ಸ್ವೀಕುರುಷ್ವ ಹರಿಪ್ರಿಯೇ।ಆಪಸ್ಸೃಜಂತು ಸ್ನಿಗ್ಧಾನಿ ಚಿಕ್ರೀತ ವಸ ಮೇ ಗೃಹೇ। ನಿಚ ದೇವೀಂ ಮಾತರಂ ಶ್ರಿಯಂ ವಾಸಯ ಮೇ ಕುಲೇ ॥ ಶುದ್ಧೋದಕಸ್ನಾನಂ । ವಂದಿ ತಾಂಘ್ರಿಯುಗೇ ದೇವಿ ದುಕೂಲಂ ಚ ಹರಿಪ್ರಿಯೇ।ಸುವರ್ಣಮಿಶ್ರಿತಂ ದೇವಿ ಗೃಹಾಣ ಹರಿವಲ್ಲಭೇ । ಕ್ಷುತ್ಪಿಪಾಸಾಮಲಾಂ ಜ್ಯೇಷ್ಠಾಮಲಕ್ಷ್ಮೀಂ ನಾಶಯಾಮ್ಯಹಂ।ಅಭೂ ತಿಮಸಮೃದ್ಧಿಂ ಚ ಸರ್ವಾನ್ನಿರ್ಣುದ ಮೇ ಗೃಹಾತ್ । ಶ್ರೀವರಮಹಾಲಕ್ಷ್ಮ್ಯೈ ನಮಃ। ಅಭಿವಸ್ತ್ರೇತಿ ವಸ್ತ್ರಯುಗ್ಮಂ ॥೮॥ ಜಾಂಬೂನದಕೃತಂ ರಮ್ಯಂ ಮುಕ್ತಾಮಣಿವಿರಾಜಿ ತಂ । ಪದ್ಮಹಸ್ತೇ ಮಹಾಲಕ್ಷ್ಮೀ ಗೃಹ್ಯತಾಮುತ್ತರೀಯಕಂ॥ಉಪವೀತಂ।ಹಾರಗ್ರೈ ವೇಯತಾಟಂಕಕಂಕಣಾಂಗುಳಿಭೂಷಣಂ । ಕಾಂಚೀನೂಪುರಮುಖ್ಯಾನಿ ಭೂಷಣಾನಿ ದದಾಮಿ ತೇ । ಹಿರಣ್ಯರೂಪಸ್ಸಹಿರಣ್ಯ ಸಂದೃಗಪಾನ್ನಪಾತ್ಸೇ ದು ಹಿರಣ್ಯವರ್ಣಃ॥ ಹಿರಣ್ಯಯಾತ್ಪರ್ಯೋನೇ ನ್ಯಷದ್ಯ ಹಿರಣ್ಯ ದಾದಾ ದದ್ಯನ್ನಮಸ್ಮೈ । ಶ್ರೀ ವರ ಮಹಾಲಕ್ಷ್ಮ್ಯೈ ನಮಃ । ಸಕಲಾಭರಣಾನಿ ಸಮರ್ಪಯಾಮಿ । ಚಂದನಾಗರು ಸಂಭೂತಂ ಘನಸಾರೇಣ ಸಂಯುತಂ। ಗಂಧಂ ಗೃಹಾಣ ದೇವಿ ತ್ವಂ ವರದೇ ವಿಷ್ಣು ವಲ್ಲಭೇ । ಗಂಧದ್ವಾರಾಂ ದುರಾಧರ್ಷಾಂ ನಿತ್ಯಪುಷ್ಟಾಂ ಕರೀಷಿಣೀಂ । ಈಶ್ವರೀಂ

ಸರ್ವಭೂತಾನಾಂ ತಾಮಿಹೋಹ್ವಯೇ ಶ್ರಿಯಂ। ಶ್ರೀವರ—ನಮಃ । ದಿವ್ಯಗಂಧಾನ್ ॥೯॥ ಅಕ್ಷತಾ ಕುಂಕುಮಯುತಾ ಶಾಲೀಯಾನ್ಕಣವರ್ಜಿತಾ । ದೇವಾದ್ಯೈ ರರ್ಚಿತಪದೇ ಗೃಹಾಣ ತ್ವಂ ಸುಮಧ್ಯಮೇ । ಮನಸಃ ಕಾಮಮಾಕೂತಿಂ ವಾಚಸ್ಸತ್ಯ ಮಶೀ ಮಹೀ॥ ಪಶೂನಾಂ ರೂಪಮನ್ನಸ್ಯ ಮಯಿ ಶ್ರೀಃಶ್ರಯತಾಂ ಯಶಃ । ಶ್ರೀವರ ಮಹಾ-ನಮಃ ॥ ಅಕ್ಷತಾ ॥ ಪದ್ಮೋತ್ಪಲಸುಪುನ್ನಾಗ ಕೇತಕೀಶತಪತ್ರಕೈಃ । ಚಂಪಕೈರ್ವಕುಳೈಶ್ಚೈವ ಪೂಜಾಂ ತವ ಕರೋಮ್ಯಹಂ। ಕರ್ದಮೇನ ಪ್ರಜಾ ಭೂತಾ ಮಯಿ ಸಂಭವ ಕರ್ದಮ। ಶ್ರಿಯಂ ವಾಸಯ ಮೇ ಕುಲೇ ಮಾತರಂ ಪದ್ಮಮಾಲಿನೀಂ। ಶ್ರೀವರ ನಮಃ । ಪುಷ್ಪಾಣಿ ॥೧೧॥ ಪದ್ಮಾಸನೇ ಪದ್ಮ ಊರೂ ಪದ್ಮಾಕ್ಷೀ ಪದ್ಮ ಸಂಭವೇ । ತ್ವಂ ಮಾಂ ಭಜಸ್ವ ಪದ್ಮಾಕ್ಷಿ ಯೇನ ಸೌಖ್ಯಂ ಲಾಭಾಮ್ಯಹಂ । ಹಂದ್ರಾ ಚೂರ್ಣಂ । ಅಶ್ವದಾಯಿ ಗೋದಾಯಿ ಧನದಾಯಿ ಮಹಾಧನೇ । ಧನಂ ಮೇ ಜುಷತಾಂ ದೇವಿ ಸರ್ವಕಾಮಾಂಶ್ಚ ದೇಹಿ ಮೇ । ಕುಂಕುಮಚೂರ್ಣಂ ॥

ಅಥಾಂಗಪೂಜಾ ಓಂ ರಮಾಯೈ ನಮಃ ॥ ಪಾದೌ ಪೂಜಯಾಮಿ । ಓಂ ಕ್ಷೀರಾಬ್ಧಿತನಯಾಯೈ ನಮಃ । ಗುಲ್ಫೌ । ಓಂ ಪದ್ಮಾಯೈ ನಮಃ । ಜಾನುನೀಂ ॥ ಓಂ ಕಮಲಾಯೈ ನಮಃ । ಜಂಘೇ । ಓಂ ಸರ್ವಸಂಪತ್ಪ್ರದಾಯಿನ್ಯೈ ನಮಃ ॥ ಊರೂ ಓಂ ಇಂದಿರಾಯೈ ನಮಃ । ಕಟಿಂ ॥ ಓಂ ಸರ್ವದಾಯಿನ್ಯೈ ನಮಃ ॥ ನಾಭಿಂ ॥ ಓಂ ಕಮಲವಾಸಿನ್ಯೈ ನಮಃ ಕುಕ್ಷಿಂ । ಓಂ ಸರ್ವದಾಯಿನ್ಯೈ ನಮಃ । ಉದರಂ । ಓಂ ಹರಿಪ್ರಿಯಾಯೈ ನಮಃ । ಹೃದಯಂ । ಓಂ ಮಂಗಳದೇವತಾಯೈ ನಮಃ । ವಕ್ಷಸ್ಥಲಂ । ಓಂ ಶ್ರಿಯೈ ನಮಃ । ಸ್ತನೌ ಪೂಜಯಾಮಿ । ಓಂ ಲೋಕಮಾತ್ರೇ ನಮಃ । ಬಾಹೂ । ಓಂ ಕಮಲಹಸ್ತಾಯೈ ನಮಃ । ಹಸ್ತೌ । ಓಂ ವರಪ್ರದಾಯೈ ನಮಃ ಭುಜೌ ಪೂಜಯಾಮಿ । ಓಂ ಕಂಬುಕಂಠ್ಯೈ ನಮಃ । ಕಂಠಂ । ಓಂ ಶ್ರುತಿಸ್ತುತಾಯೈ ನಮಃ । ಶ್ರೋತ್ರದ್ವಯಂ। ಓಂ ಲೋಕಜನನ್ಯೈ ನಮಃ। ನೇತ್ರಾಣಿ। ಓಂ ಪ್ರಸನ್ನವದನಾಯೈ ನಮಃ । ಮುಖಂ । ಇಂದಿರಾಯೈ ನಮಃ । ಲಲಾಟಂ ಪೂಜಯಾಮಿ । ಓಂ ಕ್ಷೀರಸಾಗರಕನ್ಯಕಾಯೈ ನಮಃ । ಶಿರಃ ಪೂಜಯಾಮಿ । ಅಥ ಗ್ರಂಥಿಪೂಜಾ । ಓಂ ರಮಾಯೈ ನಮಃ । ಪ್ರಥಮಗ್ರಂಥಿ ಪೂಜಯಾಮಿ ॥ ಓಂ ಸರ್ವ ಮಂಗಳಾಯೈ ನಮಃ । ದ್ವಿತೀಯಗ್ರಂಥಿಂ ॥ ಓಂ ಕಮಲವಾಸಿನ್ಯೈ ನಮಃ । ತೃತೀಯ ಗ್ರಂಥಿಂ। ಓಂ ಮನ್ಮಥಜನನ್ಯೈ ನಮಃ। ಚತುರ್ಥಗ್ರಂಥಿಂ । ಓಂ ವಿಷ್ಣುವಲ್ಲಭಾಯೈ ನಮಃ । ಪಂಚಮಗ್ರಂಥಿಂ ॥ ಓಂ ಕ್ಷೀರಾಬ್ಧಿಕನ್ಯಕಾಯೈ ನಮಃ । ಷಷ್ಠಗ್ರಂಥಿಂ । ಓಂ ಲೋಕಮಾತ್ರೇ ನಮಃ । ಸಪ್ತಮಗ್ರಂಥಿಂ । ಓಂ ಪದ್ಮಹಸ್ತಾಯೈ ನಮಃ । ಅಷ್ಟ ಮಗ್ರಂಥಿಂ । ಓಂ ಪುಷ್ಟ್ಯೈ ನಮಃ । ನವಮಗ್ರಂಥಿಂ । ಓಂ ತುಷ್ಟ್ಯೈ ನಮಃ । ದಶಮ ಗ್ರಂಥಿಂ ॥ ರಮಾಯೈ ನಮಃ । ಏಕಾದಶಗ್ರಂಥಿಂ ॥ ಓಂ ಶ್ರೀವರಮಹಾಲಕ್ಷ್ಮ್ಯೈ ಶಿ ಟ.

ನಮಃ। ದ್ವಾದಶಗ್ರಂಥಿಂ। ಇತಿ ಗ್ರಂಥಿಪೂಜಾ। ಅಥ ಕುಸುಮಪೂಜಾ ॥ ಓಂ ರಮಾಯೈ। ಜಾಜೀಪುಷ್ಪಂ ಸಮರ್ಪಯಾಮಿ । ಓಂ ಇಂದಿರಾಯೈ ನಮಃ ॥ ಪೂಗಪುಷ್ಪಂ । ಓಂ ಪದ್ಮಪ್ರಿಯಾಯೈ ನಮಃ । ಪುನ್ನಾಗಪುಷ್ಪಂ । ಓಂ ಹರಿಪ್ರಿಯಾಯೈ ನಮಃ । ವಕುಳ ಪುಷ್ಪಂ ॥ ಓಂ ಲೋಕಮಾತ್ರೇ ನಮಃ । ಮಲ್ಲಿಕಾಪುಷ್ಪಂ । ಓಂ ಕಮಲವಾಸಿನ್ಯೈ ನಮಃ । ಸೇವಂತಿಕಾಪುಷ್ಪಂ । ಓಂ ಪದ್ಮನಿಲಯಾಯೈ ನಮಃ । ಪದ್ಮಪುಷ್ಪಂ । ಓಂ ವರಲಕ್ಷ್ಮ್ಯೈ ನಮಃ । ನೀಲೋತ್ಪಲಪುಷ್ಪಂ । ಓಂ ಸರ್ವೈಶ್ವರ್ಯಕಾರಣಾಯೈ ನಮಃ। ನಾನಾವಿಧಪರಿಮಳ ಪುಷ್ಪಾಣಿ ಸಮರ್ಪಯಾಮಿ ॥ ಅಥ ಪತ್ರಪೂಜಾ । ಓಂ ಮಹಾ ಲಕ್ಷ್ಮ್ಯೈ ನಮಃ । ಓಂ ಪದ್ಮನಿಲಯಾಯೈ ನಮಃ । ಓಂ ಲೋಕಮಾತ್ರೇ ನಮಃ । ಓಂ ಪದ್ಮವಾಸಿನ್ಯೈ ನಮಃ। ಓಂ ಹರಿಪ್ರಿಯಾಯೈ ನಮಃ । ಓಂ ಮಹಾಲಕ್ಷ್ಮ್ಯೈ ನಮಃ । ಓಂ ಕ್ಷೀರಾಬ್ಧಿತನಯಾಯೈ ನಮಃ । ಓಂ ರಮಾಯೈ ನಮಃ । ಓಂ ಇಂದಿ ರಾಯೈ ನಮಃ । ಓಂ ಲೋಕರಕ್ಷಿಣ್ಯೈ ನಮಃ। ಓಂ ಭಕ್ತಾನುಗ್ರಹಕಾರಿಣ್ಯೈ ನಮಃ । ಓಂ ಲಕ್ಷ್ಮ್ಯೈ ನಮಃ । ಓಂ ಪದ್ಮಾಯೈ ನಮಃ । ಓಂ ದೇವ್ಯೈ ನಮಃ । ಓಂ ಮಹೇಶ್ವರ್ಯೈ ನಮಃ । ಓಂ ನಿತ್ಯಾನಂದಿನ್ಯೈ ನಮಃ । ಓಂ ವೇದಮಾತ್ರೇ ನಮಃ । ಓಂ ಸರ್ವದಾಯೈ ನಮಃ । ಓಂ ಸಿದ್ಧಲಕ್ಷ್ಮ್ಯೈ ನಮಃ । ಓಂ ಸುಸ್ವರೂಪಿಣ್ಯೈ ನಮಃ । ಓಂ ನಿರಂಜನ್ಯೈ ನಮಃ । ಓಂ ಕ್ರಿಯಾಲಕ್ಷ್ಮ್ಯೈ ನಮಃ / ಓಂ ಸರ್ವೋ ಪದ್ರವಹಾರಿಣ್ಯೈ ನಮಃ । ಓಂ ವಿಶಾಲಾಕ್ಷ್ಯೈ ನಮಃ । ಓಂ ವಿಶಾಲಗಾಯೈ ನಮಃ ॥೨೮॥

ಓಂ ಸುರೇಶ್ವರ್ಯೈ ನಮಃ । ಓಂ ಸರ್ವೇಶ್ವರ್ಯೈ ನಮಃ । ಓಂ ಭೂದೇಯಾವ್ಯೈ ನಮಃ । ಓಂ ಗೋಮತ್ಯೈ ನಮಃ । ಓಂ ಗೌತಮ್ಯೈ ನಮಃ। ಓಂ ಕಮಲೋದ್ಭ ವಾಯೈ ನಮಃ । ಓಂ ಕಲ್ಯಾಣ್ಯೈ ನಮಃ । ಓಂ ಮೋಹಿನ್ಯೈ ನಮಃ । ಓಂ ವೇದ ಮಾತ್ರೇ ನಮಃ । ಓಂ ಭಾಗೀರಥ್ಯೈ ನಮಃ । ಓಂ ಅರ್ಥಮಾತ್ರೇ ನಮಃ । ಓಂ ಸಾವಿ ತ್ರ್ಯೈ ನಮಃ । ಓಂ ಗಾಯತ್ರ್ಯೈ ನಮಃ । ಓಂ ಗುಹ್ಯರೂಪಿಣ್ಯೈ ನಮಃ । ಓಂ ಚಂದ್ರವದನಾಯೈ ನಮಃ । ಓಂ ಸಹಸ್ರಾಕ್ಷ್ಯೈ ನಮಃ । ಓಂ ಸರ್ವಸಂಪತ್ಪ್ರದಾ ಯಿನ್ಯೈ ನಮಃ । ಓಂ ಕಾಮಿನ್ಯೈ ನಮಃ । ಓಂ ಕಮಲಾಯೈ ನಮಃ । ಓಂ ದೇವ ವೇದ್ಯೈ ನಮಃ । ಓಂ ನಕ್ಷತ್ರರೂಪಾಯೈ ನಮಃ । ಓಂ ಪದ್ಮಚಾರಿಣ್ಯೈ ನಮಃ। ಓಂ ಆದಿಲಕ್ಷ್ಮ್ಯೈ ನಮಃ । ಓಂ ಉಪೇಂದ್ರನಾಯಕ್ಯೈ ನಮಃ । ಓಂ ಭುವನೇಶ್ವರ್ಯೈ ನಮಃ ॥೫॥ ಓಂ ರುಕ್ಮಿಣೀಕನ್ಯಕಾಯೈ ನಮಃ । ಓಂ ರುಕ್ಮಿಣ್ಯೈ ನಮಃ । ಓಂ ಸರ್ವಸಂಪನ್ನಾಯೈ ನಮಃ । ಓಂ ಜ್ಯೋತಿಶ್ಶಾಸ್ತ್ರಪ್ರವರ್ತಕಾಯೈ ನಮಃ । ಓಂ ಸತ್ಯಾಯೈ ನಮಃ । ಓಂ ಸಾಧ್ಯೈ ನಮಃ । ಓಂ ಕಾಲಚಕ್ರವರ್ತಕಾಯೈ ನಮಃ । ಓಂ ನಾರಸಿಂಹ್ಯೈನಮಃ । ಓಂ ವೇದರೂಪಿಣ್ಯೈ ನಮಃ । ಓಂ ಅಶ್ವಾರೂಢಾಯೈ ನಮಃ।

ಓಂ ಮಂಗಳಕಾರಿಣ್ಯೈ ನಮಃ । ಓಂ ವಿಶ್ವೇಶ್ವರ್ಯೈ ನಮಃ । ಓಂ ಜಗದ್ಧಾತ್ರ್ಯೈ ನಮಃ । ಓಂ ಸಾಧಕಾಯೈ ನಮಃ । ಓಂ ನಿರಾಶ್ರಯಾಯೈ ನಮಃ । ಓಂ ಚಂಚಲಾಯೈ ನಮಃ । ಓಂ ದೇವ್ಯೈ ನಮಃ । ಓಂ ತರುಣಾಯೈ ನಮಃ । ಓಂ ಪದ್ಮವಾಸಿನ್ಯೈ ನಮಃ । ಓಂ ನಾರಾಯಣ್ಯೈ ನಮಃ । ಓಂ ಮಹಾಮಾತ್ರೇ ನಮಃ ॥೭೫॥ ಓಂ ಜನನ್ಯೈ ನಮಃ । ಓಂ ತ್ರಿಲೋಕಪೂಜಿತಾಯೈ ನಮಃ । ಓಂ ಪುಣ್ಯಮೂರ್ತಯೇ ನಮಃ । ಓಂ ನಳಿನಾಕ್ಷ್ಯೈ ನಮಃ । ಓಂ ತ್ರಿಲೋಕಪೂಜಿತಾಯೈ ನಮಃ । ಓಂ ಸದಾನಂದಿನ್ಯೈ ನಮಃ । ಓಂ ಭೂಷಿಣ್ಯೈ ನಮಃ । ಓಂ ಪದ್ಮಹಸ್ತಾಯೈ ನಮಃ । ಪ್ರಕೃತ್ಯೈ ನಮಃ । ಓಂ ವಿದ್ಯಾಯೈ ನಮಃ । ಓಂ ಶ್ರದ್ಧಾಯೈ ನಮಃ । ಓಂ ಸುರಧ್ಯೇಯಾಯೈ ನಮಃ । ಓಂ ಗುಣತ್ರಯಾಯೈ ನಮಃ । ಓಂ ಯಜಮಾನಸ್ವರೂಪಿಣ್ಯೈ ನಮಃ । ಓಂ ನಾಮರೂಪವರ್ಜಿತಾಯೈ ನಮಃ । ಓಂ ನಿಷ್ಪ್ರಪಂಚಾಯೈ ನಮಃ । ಓಂ ಸ್ವಾಹಾಯೈ ನಮಃ । ಓಂ ವಿಶ್ವೇಶ್ವರ್ಯೈ ನಮಃ । ಓಂ ಸ್ವಧಾಯೈ ನಮಃ । ಓಂ ಮಾಯಾಯೈ ನಮಃ । ಓಂ ವಿಶ್ವರೂಪಿಣ್ಯೈ ನಮಃ । ಓಂ ತ್ರಿಗುಣಾತ್ಮಿನ್ಯೈ ನಮಃ । ಓಂ ತ್ರಿಲೋಕರಕ್ಷಕಾಯೈ ನಮಃ । ಓಂ ಇಂದಿರಾಯೈ ನಮಃ । ಓಂ ರಮಾಯೈ ನಮಃ ॥ ೧೦೦ ॥ ಓಂ ಮಂಗಳದೇವತಾಯೈ ನಮಃ । ಓಂ ಭಾರ್ಗವ್ಯೈ ನಮಃ । ಓಂ ಕ್ಷೀರಸಾಗರಕನ್ಯಕಾಯೈ ನಮಃ । ಓಂ ಐಶ್ವರ್ಯೈ ನಮಃ । ಓಂ ಉಮಾಯೈ ನಮಃ । ಓಂ ಈಪ್ಸಿತವರಪ್ರದಾಯೈ ನಮಃ । ಓಂ ಉನ್ಮತ್ತಕಾರಣಾಯೈ ನಮಃ । ಓಂ ತತ್ವಾತ್ಮಿಕಾಯೈ ನಮಃ । ಓಂ ತತ್ವಮಯ್ಯೈ ನಮಃ । ಓಂ ಶ್ರೀವರಮಹಾಲಕ್ಷ್ಮ್ಯೈ ನಮಃ । ಕಮಲಾಷ್ಟೋತ್ತರ ಶತನಾಮಪೂಜಾಂ ಸಮರ್ಪಯಾಮಿ ॥ ಲಕ್ಷ್ಮ್ಯಷ್ಟೋತ್ತರ ಶತನಾಮ ಲಕ್ಷ್ಮೀಸಹಸ್ರನಾಮಾಭಿರ್ವಾ ಪೂಜಾಂ ಕುರ್ಯಾತ್ ॥ ಚಂದನಾಗರುಕರ್ಪೂರಶ್ವೇತಗುಗ್ಗುಳಸಂಯುತಃ । ಕಪಿಲಾಘೃತಸಂಯುಕ್ತಂ। ಧೂಪೋಯಂ ಪ್ರತಿಗೃಹ್ಯತಾಂ ॥ ಆಪಸ್ರುಜನ್ತು ಸ್ನಿಗ್ಧಾನಿ ಚಿಕ್ಲೀತ ವಸ ಮೇ ಗೃಹೇ । ನಿಚ ದೇವೀಂ ಮಾತರಂ ಶ್ರಿಯಂ ವಾಸಯ ಮೇ ಕುಲೇ। ಶ್ರೀವರಮಹಾಲಕ್ಷ್ಮ್ಯೈ ನಮಃ। ಧೂಪಂ॥ ಕ್ಷೌಮಸೂತ್ರಂ ಕೃತಾವರ್ತಿಃ ಕರ್ಪೂರಾಜ್ಯೇನ ಸಂಯುತಂ । ದೀಪಂ ಪ್ರಜ್ವಲಿತಂ ದೇವೀ ಗೃಹಾಣ ವರದಾ ಭವ ॥ ಆರ್ದ್ರಾಂ ಪುಷ್ಕರಿಣೀಂ ಪುಷ್ಟಿಂ ಪಿಂಗಳಾಂ ಪದ್ಮಮಾಲಿನೀಂ । ಚಂದ್ರಾಂ ಹಿರಣ್ಮಯೀಂ ಲಕ್ಷ್ಮೀಂ ಜಾತವೇದೋ ಮಮಾವಹ । ಸಾಜ್ಯಂ ತ್ರಿವರ್ತಿಮಿತಿ ದೀಪಂ ॥೧೩॥ ಗುಡಮುದ್ಗಾದಿ ಸಂಯುಕ್ತಂ ಪೂರ್ಣಗರ್ಭಂ ಮನೋಹರಂ । ಮೋದಕಾಪೂಪಸಂಯುಕ್ತಂ ದಧ್ಯಾಜ್ಯಂ ಮಧುಪಾಯಸಂ। ನಾನಾಶಾಕಸಮಾಯುಕ್ತಂ ಸೂಪಂ ಶಾಲ್ಯಾನ್ನಸಂಯುತಂ । ರಸಾಯನೋಪದಂಶಾದಿ ನೈವೇದ್ಯಂ ಪ್ರತಿಗೃಹ್ಯತಾಂ । ಆರ್ದ್ರಾಂ ಯಃ ಕರಿಣೀಂ ಯಷ್ಟಿಂ ಸುವರ್ಣಾಂ ಹೇಮಮಾಲಿನೀಂ ॥ ಸೂರ್ಯಾಂ ಹಿರಣ್ಮಯೀಂ ಲಕ್ಷ್ಮೀಂ ಜಾತವೇದೋ ಮಮಾವಹ ॥೧೪॥

ಶ್ರೀವರಲಕ್ಷ್ಮ್ಯೈ ನಮಃ ॥ನಾನಾವಿಧನೈವೇದ್ಯಂ॥ ಪೂಗೀಫಲಮಿತಿ ತಾಂಬೂಲಂ । ಹಿರಣ್ಯಗರ್ಭಮಿತಿ ಸುವರ್ಣಪುಷ್ಪಂ॥ ಸರ್ವೋಪಚಾರಾನ್ ಸಮರ್ಪಯಾಮಿ॥ ಜ್ಯೋತಿರ್ಮಯಸ್ವರೂಪಾಯೈ ಸರ್ವಲೋಕತಮೋಪಹೇ ॥ ನೀರಾಜನಂ ಪ್ರದಾಸ್ಯಾಮಿ ಗೃಹ್ಯತಾಂ ಭಕ್ತವತ್ಸಲೇ॥ ತಾಂ ಮ ಆವಹ ಜಾತವೇದೋ ಲಕ್ಷ್ಮೀಮನಪಗಾಮಿನೀಂ । ಯಸ್ಯಾಂ ಹಿರಣ್ಯಂ ಪ್ರಭೂತಂ ಗಾವೋ ದಾಸ್ಯೋಽಶ್ವಾನ್ ವಿಂದೇಯಂ ಪುರುಷಾನಹಂ॥ ಶ್ರೀವರಲಕ್ಷ್ಮ್ಯೈ ನಮಃ ॥ ಕರ್ಪೂರನೀರಾಜನಂ ॥೧೫॥ ಬ್ರಹ್ಮಾದ್ಯೈರರ್ಚಿತಪದೇ ಕಲಧೌತಸಮಪ್ರಭೇ । ಜೀಮೂರವಿಂದಮಾಲ್ಯಾದ್ಯೈರ್ಮಂತ್ರಪುಷ್ಪಂ ದದಾಮ್ಯಹಂ ॥ ದೇವೀಂ ವಾಚಮಜನಯಂತ ದೇವಾಸ್ತಾಂ ವಿಶ್ವರೂಪಾಃ । ಪಶವೋ ವದಂತಿ ಸಾನೋ ಮಂದ್ರೇಷ ಮೂರ್ಜಂ ದುಹಾನಾ ಧೇನುರ್ವಾಗಸ್ಮಾನುಪ ಸುಷ್ಟುತೈತು ॥ ಸರ್ವಮಂಗಳ ಮಾಂಗಲ್ಯೇ ಶಿವೇ ಸರ್ವಾರ್ಥಸಾಧಕೇ ॥ ಶರಣ್ಯೇ ತ್ರ್ಯಂಬಕೇ ದೇವಿ ನಾರಾಯಣಿ ನಮೋಽಸ್ತುತೇ ॥ ವೇದೋಕ್ತಮಂತ್ರಪುಷ್ಪಂ ॥ ಭೂಯಾದ್ಭೂಯಾದ್ವಿಪದ್ಮಾಭಯ ವರದಕರಾತಪ್ತಕಾರ್ತಸ್ವರಾಭಾ । ಶುಭ್ರಾಭ್ರಾಭೇಭಯುಗ್ಮದ್ವಯಕರಧೃತಕುಂಭಾದ್ಭಿ ರಾಸಿಚ್ಯಮಾನಾ ॥ ರತ್ನೌಘಾಬದ್ಧಮೌಳಿರ್ವಿಮಲತರ ದುಕೂಲಾರ್ತವಾಲೇಪನಾಢ್ಯಾ । ಪದ್ಮಾಕ್ಷೀ ಪದ್ಮನಾಭೋರಸಿ ಕೃತವಸತಿಃ ಪದ್ಮಗಾಶ್ರೀ ಶ್ರಿಯೈ ನಮಃ । ಪ್ರದಕ್ಷಿಣಂ ॥ ಪದ್ಮಾಸನೇ ಪದ್ಮ ಕರೇ ಸರ್ವಲೋಕೈಕಪೂಜಿತೇ । ನಾರಾಯಣಪ್ರಿಯೇ ದೇವಿ ಸುಪ್ರೀತಾ ಭವ ಸರ್ವದಾ ॥ನಮಸ್ಕಾರಂ॥ ಕ್ಷೀರೋದಾರ್ಣವಸಂಭೂತೇ ವಿಷ್ಣುಪತ್ನಿ ಸುಶೋಭನೇ । ಅರ್ಘ್ಯಂ ಗೃಹೀತ್ವಾ ತ್ವಂ ದೇವಿ ಸರ್ವಾಭೀಷ್ಟಂ ಚ ದೇಹಿ ಮೇ ಪುನರರ್ಘ್ಯಂ ॥ ದೀರ್ಘಮಾಯುರ್ಧನಂ ಧಾನ್ಯಂ ಸೌಮಂಗಲ್ಯಂ ಚ ಪುತ್ರತಾಂ । ದೇಹಿ ಮೇ ದೇವಿ ಸುಪ್ರೀತೇ ಪಶುರತ್ನಾದಿಸಂಪದಃ। ಪ್ರಾರ್ಥನಾಂ॥ ದಾರಿದ್ರಸಾಗರೇ ಮಗ್ನಾ ಭೀತ್ಯಾಹಂ ಭವಭೀತಿಭಿಃ । ದೋರಂ ಗೃಹ್ಣಾಮಿ ಕಮಲೇ ಮಮಾಭೀಷ್ಟಪ್ರದಾ ಭವ ॥ ದೋರಗ್ರಹಣಂ ॥ ಕಮಲೇ ದೋರರೂಪೇಣ ಸ್ಥಿತೇ ಸರ್ವಾಘಹಾರಿಣಿ। ನಮಸ್ತ್ರೈಲೋಕ್ಯಜನನಿ ದಾರಿದ್ರ್ಯಂ ಮೇ ನಿವಾರಯ ॥ ದೋರನಮಸ್ಕಾರಂ ॥ ದ್ವಾದಶಗ್ರಂಥಿಸಂಯುಕ್ತಂ ಕೃತಂ ದ್ವಾದಶತಂತುಭಿಃ । ಧಾರಯಾಮಿ ಮಹಾದೇವಿ ಸೂತ್ರಂ ತೇ ಸರ್ವಮಂಗಳೇ ॥ ದೋರಬಂಧನಂ ॥ ದಾಮೋದರಿ ನಮಸ್ತೇಽಸ್ತು ನಮಸ್ತೇ ಲೋಕನಾಯಕೇ । ನಮಸ್ತೇಽಸ್ತು ಮಹಾಲಕ್ಷ್ಮಿ ತ್ರಾಹಿಂ ಮಾಂ ಪರಮೇಶ್ವರಿ ॥ನಮಸ್ಕಾರಂ॥ಜೀರ್ಣದೋರವಿಸರ್ಜನಂ॥ ದೇವಿ ಸರ್ವಜಗದ್ರೂಪೇ ದೇವತಾನಾಮಭೀಷ್ಟದೇ। ಪುಷ್ಪಾಂಜಲಿಂ ಪ್ರದಾಸ್ಯಾಮಿ ಸರ್ವಸಿದ್ಧಿಪ್ರದಾಯಿನೀ। ಪುಷ್ಪಾಂಜಲಿಂ॥ ಫಲಸಮರ್ಪಣಂ । ಇಂದಿರಾ ಪ್ರತಿಗೃಹ್ಣಾತಿ ಇಂದಿರಾ ವೈ ದದಾತಿ ಚ ॥ ಇಂದಿರಾ ತಾರಕೋಬಾಭ್ಯಾಮಿಂದಿರಾಯೈ ನಮೋ ನಮಃ ॥ ಉಪಾಯನಂ ॥ ಪುನಃ ಪೂಜಾಂ । ಛತ್ರಂ ಸಮರ್ಪಯಾಮಿ-ಚಾಮರಂ ಸಮರ್ಪಯಾಮಿ-ನೃತ್ಯಂ ಗೀತಂ-ವಾದ್ಯಂ

ನಾಟ್ಯಂ-ಆಂದೋಳಿಕಂ-ಅಶ್ವಾರೋಹಂ-ಗಜಾರೋಹಂ-ಧ್ವಜಾರೋಹಣಂ ಸಮಸ್ತ ರಾಜೋಪಚಾರಶಕ್ತಿ ಭಕ್ತ್ಯುಪಚಾರ ಪೂಜಾಂ ಸಮರ್ಪಯಾಮಿ ॥ ಯಸ್ಯ ಸ್ಮೃತ್ಯಾ ಚ ನಾಮೋಕ್ತ್ಯಾ ತಪಃ ಪೂಜಾಕ್ರಿಯಾದಿಷು । ನ್ಯೂನಂ ಸಂಪೂರ್ಣತಾಂ ಯಾತಿ ಸದ್ಯೋ ವಂದೇ ತಮಚ್ಯುತಂ । ಮಂತ್ರಹೀನಂ ಕ್ರಿಯಾ ಹೀನಂ ಭಕ್ತಿಹೀನಂ ಸುರೇಶ್ವರಿ । ಯತ್ಪೂಜಿತಂ ಮಯಾ ದೇವಿ ಪರಿಪೂರ್ಣಂ ತದಸ್ತು ಮೇ ॥ ಅನಯಾ ಮಯಾ ಕೃತ ಪೂಜಯಾ ಭಗವತೀ ಸರ್ವಾತ್ಮಿಕಾ ಶ್ರೀವರಲಕ್ಷ್ಮೀದೇವೀ ಸುಪ್ರೀತಾ ಸುಪ್ರಸನ್ನಾ ವರದಾ ಭವತು ॥

ಇತಿ ಪೂಜಾವಿಧಾನಂ ಸಂಪೂರ್ಣಂ.

ಅಥ ವರಲಕ್ಷ್ಮೀ ವ್ರತಕಥಾ

ಋಷಯ ಊಚುಃ ॥ ಸನಕದ್ಯಾ ಮುನಿಶ್ರೇಷ್ಠಾಃ ಸೂತಂ ದೃಷ್ಟ್ವಾ ಮಹಾಮುನಿಂ । ಲೋಕಾನಾಂ ಚ ಹಿತಾರ್ಥಾಯ ಪಪ್ರಚ್ಛುರ್ವ್ರತಮುತ್ತಮಂ ॥ ವದ ಸೂತ ಮಹಾಭಾಗ ಸರ್ವಶಾಸ್ತ್ರಾರ್ಥಕೋವಿದ । ಯೇನ ಚೀರ್ಣೇನ ಮರ್ತ್ಯಾನಾಂ ಸರ್ವ ಸೌಭಾಗ್ಯಸಂಪದಃ ॥೨॥ ತದ್ವ್ರತಂ ಬ್ರೂಹಿ ಮೇ ಬ್ರಹ್ಮನ್ ಸರ್ವಕಾಮಾರ್ಥ ಸಿದ್ಧಯೇ ॥ ಶ್ರೀಸೂತಃ । ಕೈಲಾಸಶಿಖರೇ ರಮ್ಯೇ ನಾನಾಗಣ ಸಮಾವೃತೇ ॥೩॥ ಚಿಂತಾಮಣಿಪುರೋಗೈಶ್ಚ ರತ್ನೈರ್ಮಣಿಸುಸಂವೃತೇ ॥ ಬ್ರಹ್ಮೇಂದ್ರಾದಿ ಸುರಾಕೀರ್ಣೇ ಋಷಿಸಂಘನಿಷೇವಿತೇ ॥ ರುದ್ರೈರ್ವಸುಭಿರಾದಿತ್ಯೈರ್ವಿಶ್ವೇದೇವೈರ್ಮರುದ್ಗಣೈಃ । ಯಕ್ಷರಾಕ್ಷಸಗಂಧರ್ವಸಿದ್ಧವಿದ್ಯಾಧರಾನ್ವಿತೇ ॥೭॥ ಮಂದಾರ ವಿಟಪಾಕ್ರಾಂತ ಸರ್ವರತ್ನೋಜ್ವಲೇ ಶುಭೇ । ಸ್ವರ್ಣಸಿಂಹಾಸನಾಸೀನಂ ಶಂಕರಂ ಲೋಕಶಂಕರಂ॥೮॥ ಪ್ರಣಿಪತ್ಯ ಮಹಾದೇವ ಪಾರ್ಶ್ವೇ ಸ್ಥಿತ್ವಾ ಕೃತಾಂಜಲಿಃ।ಪಪ್ರಚ್ಛ ಗೌರೀ ಸಂತುಷ್ಟಾ ಲೋಕಾನುಗ್ರಹಕಾಂಕ್ಷಯಾ ॥ಪಾರ್ವತ್ಯುವಾಚ॥ ಭಗವನ್ ಸರ್ವಲೋಕೇಶ ಸರ್ವಭೂತದಯಾನಿಧೇ ,। ಯದ್ರಹಸ್ಯಮಿದಂ ನೃಣಾಂ ಸರ್ವಸೌಭಾಗ್ಯದಾಯಕಂ ॥೧೦॥ ವ್ರತಂ ಬ್ರೂಹಿ ಸುರಶ್ರೇಷ್ಠ ಕೃಪಯಾ ಮಮ ಶಂಕರ। ಈಶ್ವರಃ। ಶೃಣು ಭದ್ರೇ ಪ್ರವಕ್ಷ್ಯಾಮಿ ಸಾವಧಾನಮನಾ ಭವ ॥೧೧॥ ವ್ರತಾನಾಮುತ್ತಮಂ ಕಾಮ್ಯಂ ಸರ್ವ ಸೌಭಾಗ್ಯಕಾರಣಂ ॥ ಸರ್ವಸಂಪತ್ಪ್ರದಂ ಕೀರ್ತಿಃ ಪುತ್ರಪೌತ್ರಪ್ರವರ್ಧನಂ । ಶುಕ್ಲೇ ಶ್ರಾವಣಿಕೇ ಮಾಸೇ ಪೌರ್ಣಮೋಪಾಂತ್ಯಭಾರ್ಗವೇ ॥೧೩॥ ಶ್ರೀಪಾರ್ವತ್ಯುವಾಚ ॥ ವಿಧಿನಾ ಕೇನ ಕರ್ತವ್ಯಂ ತತ್ರ ಕಾ ನಾಮ ದೇವತಾ॥ಕೇನ ಚಾರಾಧಿತಾ ಪೂರ್ವಂ ಬ್ರೂಹಿ ಶಂಭೋ ಸವಿಸ್ತರಂ॥ಈಶ್ವರ॥ ವರಲಕ್ಷ್ಮೀತಿ ವಿಖ್ಯಾತಾ ದೇವತಾ ಶೃಣು ಪಾರ್ವತಿ।

ಯೇಚೇಷ್ಟ್ವ ಕಾಮಿನೋಲೋಕೇ ಸ್ತ್ರಿಯೋವಾಪುರುಷಾಶ್ಚ ವಾ॥೧೫॥ಶುಕ್ಲೇ ಶ್ರಾವಣಿಕೇ ಮಾಸಿ ಪೌರ್ಣಿಮೋಪಾಂತ್ಯಭಾರ್ಗವೇ।ವ್ರತಂ ಕುರ್ವಂತಿ ದೇವೇಡ್ಯೇ ತೇಷಾಮಿಷ್ಟಂ ಭವೇದ್ಧ್ರುವಂ॥ಅತ್ರೇತಿಹಾಸಂ ಪ್ರವಕ್ಷ್ಯಾಮಿ ಸುಪುಣ್ಯಾಂ ಶೃಣು ಪಾರ್ವತಿ ॥ ಕುಂಡಿನಂ ನಾಮ ನಗರಂ ಸರ್ವಮಂಗಳಮಂಡಿತಂ ॥ ಹೇಮಪ್ರಾಕಾರಸಹಿತಂ ಚಾಮೀಕರ ಗೃಹೋಜ್ವಲಂ । ತತ್ರಾಭೂದ್ಬ್ರಾಹ್ಮಣೀ ಕಾಚಿನ್ನಾಮ್ನಾ ಚಾರುಮತೀ ಶುಭಾ॥ಪತಿಭಕ್ತಿಮತೀ ಸಾಧ್ವೀ ಪತಿಶುಶ್ರೂಷಣೇ ರತಾ । ದಾರಿದ್ರ್ಯೈಃಖಿದ್ಯಮಾನಾಪಿ ಸತತಂ ಮೃದುಭಾಷಿಣೀ॥ಪತಿಶುಶ್ರೂಷಣಂ ಕೃತ್ವಾ ದಿನೇ ಕಸ್ಮಿನ್ ಪತಿವ್ರತಾ।ಸಮಾಪ್ಯ ಸರ್ವಕಾರ್ಯಾಣಿ ರಾತ್ರೌ ಶಯನಮಾಗತಾ ॥ ೨೦ ॥ ಪೂರ್ವಪುಣ್ಯಪ್ರಭಾವೇನ ಸ್ವಪಂತ್ಯಾಃ ಸ್ಯಾತ್ ಸುಲೋಚನೇ। ವರಲಕ್ಷ್ಮೀಸ್ತದಾ ಸ್ವಪ್ನೇ ತಾಮುವಾಚೇತಿ ಪಾರ್ವತೀ॥೨೧॥ ಉತ್ತಿಷ್ಠೋತ್ತಿಷ್ಠ ಶೀಘ್ರಂತ್ವಾಂವರಲಕ್ಷ್ಮ್ಯಾಗತಾಸ್ಮ್ಯಹಂ।ಹಿತಂ ಬ್ರವೀಮಿ ತೇ ವತ್ಸೇ ಶೃಣುಸರ್ವಾರ್ಥಸಾಧನಂ ॥ ಶುಕ್ಲಪಕ್ಷೇಪೌರ್ಣಿಮಾಸ್ಯಾಂ ಶ್ರಾವಣ್ಯಾಂ ತು ಭೃಗೋರ್ದಿನೇ।ಮತ್ಪೂಜನಂ ಪ್ರಕರ್ತವ್ಯಂ ವರಂ ದಾಸ್ಯಾಮಿ ಕಾಂಕ್ಷಿತಂ॥೨೪॥ವರಲಕ್ಷ್ಮೀತಿ ಮನ್ನಾಮ ವರದಾಂ ಹರಿವಲ್ಲಭಾ । ಮತ್ಪೂಜಾಂ ಯೇ ಪ್ರಕುರ್ವಂತಿ ಸುಭಕ್ತ್ಯಾ ಭೃಗುವಾಸರೇ॥೨೫॥ತೇ ಕಾಮಿಷ್ಟಾಂಶ್ಚ ಕಾಮಾಂಶ್ಚ ಪ್ರದಾಸ್ಯಾಮೋ ನ ಸಂಶಯಃ । ಮತಿರ್ಯಸ್ಯ ಪ್ರಜಾಯೇತ ಮತ್ಪೂಜಾರ್ಥಂ ಮಮ ಪ್ರಿಯೇ ॥೨೬॥ ತಸ್ಯೇಷ್ಟಾರ್ಥವರಂ ಶೀಘ್ರಂ ದಾಸ್ಯಾಮಿ ಕಮಲೇಕ್ಷಣೇ ॥ಜನ್ಮಾಂತರಸಹಸ್ರೇಷು ಸುಕೃತಸ್ಯ ಪ್ರಭಾವತಃ। ಮದ್ವ್ರತಾಚರಣೇ ಬುದ್ಧಿಸ್ಸಮಜಾಯತ ಶೋಭನೇ।ಯೋ ವಾ ಕರೋತಿ ಮತ್ಪೂಜಾಂ ಸ ಶೂರಃ ಸ ಚ ಪಂಡಿತಃ॥೨೮॥ಸಶ್ಲಾಘ್ಯಃ ಸ ಕುಲೀನಶ್ಚ ಸ ವಿದ್ವಾನ್ ಸ ಪತಿಃ ಶುಭೇ। ಸರ್ವಂ ಮಮ ಪ್ರಭಾವೇನ ಲಭತೇ ನಾತ್ರ ಸಂಶಯಃ॥ ಇತ್ಯುಕ್ತ್ವಾ ಕಮಲಾ ಸ್ವಪ್ನೇ ತಂತ್ರೈವಾಂತರಧೀಯತ।ತತಶ್ಚಾರುಮತೀ ತಸ್ಮಾತ್ಸ್ವಪ್ನಾದುತ್ಥಾಯ ಸಂಭ್ರಮಾತ್॥ ತತ್ಸರ್ವಂ ಕಥಯಾಮಾಸ ಬಂಧುನಾ ಪುರತಸ್ತದಾ । ಶ್ರುತ್ವಾ ತದ್ಬಾಂಧವಾಃ ಸರ್ವೇ ಸಾಧುಸಾಧ್ವೀತಿ ಚಾಬ್ರುವನ್ ॥೩೧॥ ತತಶ್ಚಾರುಮತೀ ಮುಖ್ಯಾಃ ಕಾಂಕ್ಷಮಾಣಾಭೃಗೋರ್ದಿನಂ । ಭಾಗ್ಯೋದಯೇನ ಸಂಪ್ರಾಪ್ತೇ ವರಲಕ್ಷ್ಮೀದಿನೇ ತದಾ॥ ಪೂರ್ವೋಕ್ತೇನ ಪ್ರಕಾರೇಣ ತೇ ಕುರ್ವದ್ವ್ರತಮುತ್ತಮಂ । ತತೋ ದೇವಿಪ್ರಭಾವೇನ ಬಹುಭಾಗ್ಯ ಮುಪಾಯಯಾ ॥೩೩॥ ವರಲಕ್ಷ್ಮೀಪ್ರಸಾದೇನ ಸರ್ವಾಭರಣಭೂಷಿತಾ ॥೩೪॥ ಪುತ್ರಪೌತ್ರೈಃ ಪರಿವೃತಾ ಧನಧಾನ್ಯಸಮನ್ವಿತಾ । ಅನ್ನದಾನರತಾ ನಿತ್ಯಂ ಬಂಧುಪೋಷಣತತ್ಪರಾ ॥೩೫॥ ಸಕಲೈಶ್ವರ್ಯ ಭೋಗಾಂತೇ ಪ್ರಾಪುರ್ವಿಷ್ಣೋಃ ಪರಾಂ ಗತಿಂ। ಅನ್ಯೋನ್ಯಂ ಭಾಂದವಾಸ್ಸರ್ವೇ ಶ್ರುತ್ವಾ ಚಾರುಮತೀ ಮುಖಾತ್ ॥೩೬॥ವರವಕ್ಷ್ಮೀವ್ರತಂ ಕೃತ್ವಾ ಪ್ರಾಪುರ್ಭಾಗ್ಯಂ ಚ ಪಾರ್ವತಿ॥ ಪಾರ್ವತೀಃ ॥ ವರಲಕ್ಷ್ಮೀವ್ರತಸ್ಯಾಸ್ಯ

ವಿಧಿಂ ಬ್ರೂಹಿ ಸುರಾರ್ಚಿತ ॥ ವ್ರತಮೇತತ್ಕಥಂ ಕಾರ್ಯಂ ಶ್ರೋತುಮಿಚ್ಛಾಮಿ ಶಂಕರ ॥ ಈಶ್ವರಃ ॥ ಶ್ರಾವಣೇ ಶುಕ್ರಪಕ್ಷೇ ತು ಪೂರ್ಣಿಮೋದಾಂತ್ಯಭಾರ್ಗವೇ ॥ ಸ್ನಾತ್ವಾ ಮಧ್ಯಾಹ್ನವೇಳಾಯಾಂ ಧೃತ್ವಾ ವಸ್ತ್ರಂ ಸುಶೋಭನಂ। ತತಂ ಪ್ರಕಲ್ಪಯೇಚ್ಛುದ್ಧದೇಶೇ ಮಂಟಪಮುತ್ತಮಂ ॥೩೯॥ ತನ್ಮಧ್ಯೇಷ್ಟದಳಂ ಪದ್ಮಂ ಪಂಚವರ್ಣ ಸಮನ್ವಿತಂ । ನೂತನೈಃ ಸ್ತಂಡುಲೈಃ ಪೂರ್ಣಕುಂಭೇ ಸಪಟಪಲ್ಲವೇ॥೪೦॥ಫಲಾನ್ವಿತೇರ್ಚಿತೇ ರಮ್ಯೇ ದೇವೀಮಾವಾಹಯೇಚ್ಛುಭಾಂ । ಕಲ್ಪೋಕ್ತೇನ ಪ್ರಕಾರೇಣ ಭಕ್ತ್ಯಾ ಶ್ರೀ ತಾಮರ್ಚಯೇದ್ವ್ರತೀ ॥೪೧॥ ಪದ್ಮಾಸನೇ ಪದ್ಮಕರೇ ಸರ್ವಲೋಕೈಕಪೂಜಿತೇ । ನಾರಾಯಣ ಪ್ರಿಯೇ ದೇವಿ ಸುಪ್ರೀತಾ ಭವ ಸರ್ವದಾ॥ ಮಂತ್ರೇಣಾನೇನ ಸಕಲಾನುಪಚಾರಾನ್ ಯಥಾಕ್ರಮಂ । ದೇವ್ಯಾಗ್ರೇ ಧೂಪಚೂರ್ಣೇನ ಪೂರ್ಣಗಧಾಂಶ್ಚ ಕಾರಯೇತ್ ॥೪೩॥ ಅಥವಾ ಶಾಲಿಪಿಷ್ಟೇನ ಯಥಾಶಕ್ತ್ಯನುಸಾರತಃ । ಫಲಾದಿಭಿಃ ಪ್ರಯತ್ನೇನ ನೈವೇದ್ಯಂ ಪರಿಕಲ್ಪಯೇತ್ । ಮುಖವಾಸನ ತಾಂಬೂಲಂ ನೀರಾಜನಮತಃ ಪರಂ । ಮಂತ್ರಪುಷ್ಪಂ ಚ ಕೃತ್ವಾಥ ಪ್ರದಕ್ಷಿಣನಮಸ್ಕ್ರಿಯಾಂ ॥೪೫॥ ಪುನರರ್ಘ್ಯೈರ್ಮಂತ್ರತಶ್ಚ ದೋರಂ ಬದ್ಧ್ವಾ ತತಃ ಪರಂ । ಪ್ರದದ್ಯಾದ್ದ್ವಾದಶಾಪೂಪಾನ್ ಪೂಗಪರ್ಣಸಮನ್ವಿತಾನ್ । ಉಪಾಯನಂ ದ್ವಿಜಾಗ್ರ್ಯಾಯ ದದ್ಯಾತ್ಸಫಲ ದಕ್ಷಿಣಾನ್ । ಭಕ್ತ್ಯಾ ದೇವೀ ಸಮೀಪೇ ತು ಗೃಹೀತ್ವಾ ಕುಸುಮಾಕ್ಷತಾನ್ ॥ ಶೃಣ್ವೇಮಾಂ ಚ ಕಥಾಂ ಪುಣ್ಯಾಂ ಬಂಧುಭಿಃ ಸಹ ಪಾರ್ವತಿ । ಸುವಾಸಿನೀಭಿಃ ಸಹಿತಾಸ್ಸರ್ಹಸ್ಯಂ ಚ ಸಮಾಚರೇತ್ ॥೪೮॥ ಏತದ್ವ್ರತೋತ್ತಮಂ ಮನುಜಾ ಭುವಿ । ತೇಷಾಂ ಪುತ್ರಾಶ್ಚ ಪೌತ್ರಾಶ್ಚ ಭವಿಷ್ಯಂತಿ ನ ಸಂಶಯಃ ॥೪೯॥ ಇದಂ ಸತ್ಯಮಿದಂ ಸತ್ಯಂ ನಾರೀ ಭದ್ರಾಣಿ ಪಶ್ಯತಿ ॥ ಅತಿಚಾರುಮತೀ ಮುಖ್ಯ ಉಪಲಬ್ಧ ಮನೋರಥಾ । ಪುಣ್ಯಾಚಾರಮತೀಚೈವ ಭೂಯೋ ಭಾಗ್ಯವತೀ ಚಿರಂ । ಯ ಇದಂ ಶೃಣುಯಾನ್ನಿತ್ಯಂ ಶ್ರಾವಯೇದ್ವಾ ಸಮಾಹಿತಃ ॥೫೧॥ ತದಾಶ್ರಯಾಣಿ ಸರ್ವಾಣಿ ಭವಿಷ್ಯಂತಿ ನ ಸಂಶಯಃ। ಇತೀದಂ ಕಥಿತಂ ದೇವ್ಯೈ ಪಾರ್ವತ್ಯೈ ಶಂಭುನಾ ಪುರಾ॥ ಸರ್ವಪಾಪಪ್ರಶಮನಂ ಸರ್ವಸಂಪತ್ಕರಂ ನೃಣಾ । ಯೇ ಕುರ್ವಂತಿ ವ್ರತಮಿದಂ ಭಕ್ತ್ಯಾ ಶೃಣ್ವಂತಿ ವಾನರಾಃ ॥೫೧॥ಶ್ರಾವಯಿಷ್ಯಂತಿ ಯೇ ತೇ ವೈ ಕೃತಾರ್ಥಸ್ಯುರ್ನ ಸಂಶಯಂ ॥ ಇತಿ ಶ್ರೀಭವಿಷ್ಯೋತ್ತರಪುರಾಣೇ ಉಮಾಮಹೇಶ್ವರ ಸಂವಾದೇ ವರ ಮಹಾಲಕ್ಷ್ಮೀವ್ರತಕಲ್ಪಂ ಸಂಪೂರ್ಣಂ.

ಅಥ ಶ್ರೀ ವರಲಕ್ಷ್ಮೀವ್ರತ ಕಥಾಸಂಗ್ರಹ

ಪೂರ್ವಕಾಲದಲ್ಲಿ ಸತ್ಯಲೋಕವಾಸಿಗಳಾದ ಋಷಿಶ್ರೇಷ್ಠರೆಲ್ಲರೂ ನೈಮಿಷಾರಣ್ಯದಲ್ಲಿ ಒಟ್ಟಾಗಿ ಸೇರಿ ಪುರಾಣಿಕ ಶಿಖಾಮಣಿಯಾದ ಸೂತಮಹರ್ಷಿಯನ್ನು ಕುರಿತು ಎಲೈ ಪುರಾಣ

ಪುರುಷೋತ್ತಮನೇ ! ತ್ರಿಕಾಲಜ್ಞಾನಿಯಾದ ನೀನು ನಮ್ಮಲ್ಲಿ ಅನುಗ್ರಹ ಮಾಡುವುದಾದರೆ, ಲೋಕದಲ್ಲಿ ಸರ್ವಸೌಭಾಗ್ಯಗಳನ್ನೂ ಕೊಡುವ ಉತ್ತಮವಾದ ವ್ರತವನ್ನು ಹೇಳು ಎಂದು ಕೇಳಲಾಗಿ ಸಂತುಷ್ಟನಾದ ಸೂತಮಹಾಮುನಿಯು ಎಲೈ ಋಷಿಗಳಿರಾ ! ಕೇಳಿ, ಲೋಕದಲ್ಲಿ ಭಕ್ತಿಯಿಂದ ಪೂಜಿಸುವವರಿಗೆ ಸಕಲೇಷ್ಟಾರ್ಥಗಳನ್ನು ಕೊಡುವ ಅತ್ಯುತ್ತಮವಾದ ವ್ರತವೊಂದುಂಟು. ಅದರ ವಿವರವನ್ನು ನಿಮಗೋಸ್ಕರವಾಗಿ ಹೇಳುವೆನು ಕೇಳಿ, ಮನೋಹರವಾದ ಶೃಂಗಗಳಿಂದ ಒಪ್ಪುತ್ತಿರುವ ಕೈಲಾಸಪರ್ವತವು ದೇವನದಿಗಳಿಂದ ಪೂರ್ಣವಾಗಿ ಫಲಭರಿತವಾದ ನಾನಾಬಗೆಯ ವೃಕ್ಷಸಮೂಹದಿಂದ ಕೂಡಿ ಕಾಮಧೇನು ಕಲ್ಪವೃಕ್ಷ ಸೇವಿತವಾಗಿ ಸಕಲ ಸುಖಗಳಿಗೂ ಆವಾಸಸ್ಥಾನವಾಗಿರುವದು. ಆದಕಾರಣ ಯಕ್ಷರಾಕ್ಷಸ ಗರುಡಗಂಧರ್ವ ದೇವಮಾನುಷಾದಿಗಳು ತಮ್ಮ ಪೂರ್ವಪುಣ್ಯಾನುಸಾರ ಸೇರಿ ಅಲ್ಲಿಗೆ ಒಡೆಯನಾದ ಪಾರ್ವತೀ ಪರಮೇಶ್ವರನನ್ನು ಸೇವಿಸುತ್ತಿರುವರು. ಒಂದಾನೊಂದುಕಾಲದಲ್ಲಿ ಹರ್ಷಯುಕ್ತನಾಗಿ ದೇವದೇವನಾದ ಪರಮೇಶ್ವರನು ಪಾರ್ವತಿಯೊಡನೆ ಸಂತೋಷದಿಂದ ಕುಳಿತಿರುವಾಗ ಲೋಕಾನುಗ್ರಹಾರ್ಥವಾಗಿ ಜಗನ್ಮಾತೆಯಾದ ಪಾರ್ವತಿಯು ಪರಮೇಶ್ವರನನ್ನು ಕುರಿತು, ಎಲೈ ಮಹಾದೇವನೇ ! ಪ್ರಪಂಚದಲ್ಲಿ ಸಕಲ ಸುಖಗಳನ್ನು ಕೊಟ್ಟು ಭಕ್ತರ ಕಷ್ಟವನ್ನು ಪರಿಹರಿಸಿ ಸೌಭಾಗ್ಯ ಸಂತೋಷಗಳನ್ನುಂಟುಮಾಡುವ ವ್ರತವಾವುದು ? ಅದನ್ನು ನನಗೆ ಹೇಳು ಎಂದು ಕೇಳಿದಳು. ಆಗ ಪರಮೇಶ್ವರನು ಎಲೌ ಪಾರ್ವತಿಯೇ ! ಕೇಳು. ಸರ್ವಸಂಪತ್ಪ್ರದವಾದ ಪುತ್ರಪೌತ್ರದಾಯಕವಾದ ಸನ್ಮಂಗಳ ಸಂತಾನಕಾರಕವಾದ ವರಲಕ್ಷ್ಮೀವ್ರತವೆಂಬುದೊಂದುಂಟು. ಈ ವ್ರತವನ್ನು ಭಕ್ತಿಸಂಪನ್ನರಾದ ಹೆಂಗಸರಾಗಲೀ ! ಗಂಡಸರಾಗಲೀ ! ಮಕ್ಕಳಾಗಲೀ ! ಮಾಡಬಹುದು.ಆ ವ್ರತವನ್ನು ಶ್ರಾವಣಮಾಸದ ಶುಕ್ಲಪದಲ್ಲಿ ಹುಣ್ಣಿಮೆಗೆ ಹತ್ತಿರವಾದ ಶುಕ್ರವಾರದದಿನ ಮಾಡಬೇಕು, ಎಂದು ಹೇಳಿದನು. ಆಗ ಪಾರ್ವತಿಯು ಸಂತೋಷಯುಕ್ತಳಾಗಿ ಸ್ವಾಮೀ! ಆ ವ್ರತದ ನಿಯಮವೇನು? ಅದನ್ನು ಹೇಗೆಮಾಡಬೇಕು ? ಆ ವ್ರತಕ್ಕೆ ಅಧಿದೇವತೆ ಯಾರು ? ಎಂದು ಪ್ರಶ್ನೆಮಾಡಿದಳು. ಆಗ ಪರಮೇಶ್ವರನು, ಆ ವ್ರತಕ್ಕೆ ಅಧಿದೇವತೆ ಮಹಾಲಕ್ಷ್ಮೀ, ಇದನ್ನು ಶ್ರಾವಣಮಾಸದಲ್ಲಿ ಪೌರ್ಣಿಮೆ ಸಮೀಪಸ್ಥವಾದ ಭೃಗುವಾರದಲ್ಲಿ ಅದನ್ನು ಮಾಡಬೇಕು. ಹಾಗೆ ಮಾಡಿದ ಭಕ್ತರಿಗೆ ಕೋರಿದಕೋರಿಕೆಗಳೆಲ್ಲ ಕೈಗೂಡಿ ಕಷ್ಟಕಾಯಕಗಳು ನಾಶವಾಗುವುವು. ಇದು ಸತ್ಯ. ಈ ವಿಷಯದಲ್ಲಿ ಪ್ರಸಿದ್ಧವಾದ ಒಂದು ಕಥೆಯುಂಟು ಅದನ್ನು ನಿನಗೋಸ್ಕರವಾಗಿ ವಿಸ್ತರಿಸಿ ಹೇಳುವೆನು ಕೇಳು,ಪೂರ್ವಕಾಲದಲ್ಲಿ ಮಹಾ ವೈಭವಯುಕ್ತವಾದ ವಿದರ್ಭದೇಸಕ್ಕೆ ರಾಜಧಾನಿಯಾದಕುಂಡಿನನಗರದಲ್ಲಿ ದರಿದ್ರಳಾದರೂ ಸದಾಚಾರಸಂಪನ್ನಳಾದ ಪತಿಶುಶ್ರೂಷೆಯೇ ಮುಖ್ಯವೆಂದು ತಿಳಿದು ಸದಾ ಸಂತೋಷಚಿತ್ತಳಾಗಿ ಪತಿಯ ಮನಸ್ಸನ್ನು ನೋಯಿಸದೆ ಸದ್ವರ್ತನೆಯುಳ್ಳವಳಾಗಿದ್ದ ಚಾರುಮತಿಯೆಂಬ ಸ್ತ್ರೀಯಿದ್ದಳು. ಇವಳ ಸದಾಚಾರಸಂಪನ್ನತೆಗೆ ಮೆಚ್ಚಿ ಕರುಣಾಳುವಾದ ಮಹಾಲಕ್ಷ್ಮಿಯು ಒಂದುದಿನ ಚಾರುಮತಿಯು ಮಲಗಿ ನಿದ್ರಿಸುತ್ತಿರುವಾಗ ಪ್ರತ್ಯಕ್ಷಳಾಗಿ ಸ್ವಪ್ನದಲ್ಲಿ ಬಂದು ಎಲೌ ಪತಿವ್ರತೆಯಾದ ಚಾರುಮತಿಯೇ ! ನಿನ್ನ ಗುಣಶೀಲಗಳಿಗೆ ಮೆಚ್ಚಿ ನಿನ್ನ ಪೂರ್ವಪುಣ್ಯಾನುಸಾರವಾಗಿ ನಿನ್ನಲ್ಲಿ ಅನುಗ್ರಹಮಾಡಲು ಬಂದಿರುವ ಮಹಾಲಕ್ಷ್ಮಿಯೇ ನಾನು. ಈಗ ನಾನು ಹೇಳುವ ವಿಷಯವನ್ನು ಗ್ರಹಿಸಿಕೊಂಡು ನೀನು ಆಚರಿಸಿದರೆ ಅದರಿಂದ ನಿನಗೆ ಮಹಾಪ್ರಯೋಜನವುಂಟಾಗುವದು. ನಿನ್ನ ದಾರಿದ್ರ್ಯವು ನಾಶವಾಗಿ ನಿನಗೆ ಅಷ್ಟೈಶ್ವರ್ಯವು ಪ್ರಾಪ್ತಿಯಾಗುವುದು. ಆದಕಾರಣ

ಶ್ರಾವಣಮಾಸದಲ್ಲಿ ಬರುವ ಎರಡನೆಯ ಶುಕ್ರವಾರದ ದಿನ ಪ್ರದೋಷ ಸಮಯಕ್ಕೆ ಸರಿಯಾಗಿ ವಿಧಿವತ್ತಾಗಿ ನನ್ನ ಪೂಜೆಯನ್ನು ಮಾಡಿದರೆ ನಾನು ಅವರಿಗೆ ಸಕಲ ಭೋಗಭಾಗ್ಯಗಳನ್ನು ಕೊಡುವೆನು. ಯಾರಿಗೆ ಪುಣ್ಯಸಂಪರ್ಕವಿರುವದೋ ಅಂಥವರಿಗೆ ಈ ವ್ರತದಲ್ಲಿ ಭಕ್ತಿ ಹುಟ್ಟುವುದಲ್ಲದೆ ಅನ್ಯರಿಗೆಂದಿಗೂ ಹುಟ್ಟಲಾರದು. ಇಹಲೋಕದಲ್ಲಿ ಯಾರು ನನ್ನನ್ನು ಭಕ್ತಿಯಿಂದ ಪೂಜಿಸುವರೋ ಅವರೇ ಧನ್ಯರು! ಅವರೇ ಶೂರರು! ಅವರೇ ಪುಣ್ಯಶಾಲಿಗಳು, ಅವರೇ ಮಹಾತ್ಮರು, ಸಾಹಸಿಗಳು, ಅವರೇ ಪಂಡಿತರು, ಅಂಥವರೇ ಸ್ತೋತ್ರಾರ್ಹರು ಬಹಳವಾಗಿ ಹೇಳುವುದೇನು ? ಅವರೇ ಸರ್ವೋತ್ತಮರು. ಯಾರು ನನ್ನ ಕಟಾಕ್ಷಕ್ಕೆ ಬಾಹಿರರಾಗಿರುವರೋ ! ಅವರ ಬಾಳು ಅಜಗಳಸ್ತನದಂತೆ ವ್ಯರ್ಥವೇ ಸರಿ. ಆದಕಾರಣ ನೀನು ಈ ವ್ರತವನ್ನುಮಾಡಿ ಧನ್ಯಳಾಗು ಎಂದು ನಿದ್ರೆಯಲ್ಲಿ ಉಪದೇಶಿಸಿ ಮಹಾಲಕ್ಷ್ಮಿಯು ಕಣ್ಮರೆಯಾದಳು. ಆಗ ಚಾರುಮತಿಯು ಭ್ರಾಂತಳಾಗಿ ನಿದ್ರೆಯಿಂದೆದ್ದು ನಡೆದ ಸಂಗತಿಯನ್ನೆಲ್ಲ ತನ್ನವರಿಗೆ ಹೇಳಿ ಅವರೊಡನೆ ಆನಂದಿಸುತ್ತ ಕೆಲವು ದಿವಸಗಳನ್ನು ಕಳೆಯಲು ಶ್ರಾವಣಮಾಸದ ಎರಡನೆಯ ಶುಕ್ರವಾರ ಬಂದಿತು. ಆದಿನ ಭಕ್ತಿವಂತರಾಗಿ ಶ್ರದ್ಧೆಯಿಂದ ಕಲ್ಪೋಕ್ತ ಪ್ರಕಾರವಾಗಿ ಬಹುಜನ ಭಕ್ತರು ವರಮಹಾಲಕ್ಷ್ಮಿಯನ್ನು ಪೂಜಿಸಿ ಸಂತೋಷದಿಂದ ಕೋರಿಕೆಗಳನ್ನು ಕೈಗೂಡಿಸಿಕೊಂಡು ಸುಖದಿಂದ ಬಾಳುತ್ತಿದ್ದರು. ಇತ್ತ ದರಿದ್ರಳಾದ ಚಾರುಮತಿಯು ನಿಯಮದಿಂದ ಈ ವ್ರತವನ್ನು ಮಾಡಿ ವರಲಕ್ಷ್ಮಿಯ ಕಟಾಕ್ಷದಿಂದ ಅಷ್ಟೈಶ್ವರ್ಯವನ್ನು ಪಡೆದು ಪುತ್ರಪೌತ್ರಾದಿಗಳಿಂದ ಕೂಡಿ, ಸುಖವನ್ನು ಅನುಭವಿಸುತ್ತ ಬಡವರಿಗೆ ಅನ್ನದಾನಮಾಡಿ, ಬಂಧುವರ್ಗದವರನ್ನು ಪ್ರೀತಿಯಿಂದ ಕಾಪಾಡುತ್ತ ಇಹಲೋಕದಲ್ಲಿ ಅನಂತವಾದ ಅಪಾರಸೌಖ್ಯವನ್ನು ಅನುಭವಿಸಿ ಪರಲೋಕದಲ್ಲಿ ಪರಮಶ್ರೇಷ್ಠವಾದ ಪತಿಸಾಯುಜ್ಯವನ್ನು ಪಡೆದಳು. ಆದಕಾರಣ ಲೋಕದಲ್ಲಿ ಭಕ್ತಿಭಾವದಿಂದ ಯಾರು ಈ ವ್ರತವನ್ನು ಆಚರಿಸುವರೋ ಅಂಥವರು ಅಖಂಡವಾದ ಐಶ್ವರ್ಯವನ್ನು ಪಡೆದು ವರಲಕ್ಷ್ಮಿಯ ಪ್ರಸಾದದಿಂದ ಭೋಗಭಾಗ್ಯಗಳನ್ನು ಅನುಭವಿಸುವರೆಂದು ಪರಮೇಶ್ವರನು ಹೇಳಲು, ಪಾರ್ವತಿಯು ಎಲೈ ದೇವದೇವನೇ! ನನ್ನಲ್ಲಿ ನಿನಗೆ ದಯೆಯುಂಟಾದರೆ ಈ ವಿಧಾನವನ್ನು ವಿವರವಾಗಿ ಹೇಳಬೇಕು ಎಂದು ಕೇಳಿಕೊಂಡ ಪಾರ್ವತಿಯನ್ನು ಕುರಿತು ಎಲೌ ದೇವಿಯೇ! ಕೇವಲ ಪುಣ್ಯಪ್ರದವಾದ ಶ್ರಾವಣಮಾಸದ ಎರಡನೆಯ ಶುಕ್ರವಾರದಿನ ಭಕ್ತಿಯುಳ್ಳ ಸ್ತ್ರೀಯರಾಗಲಿ ಪುರುಷರಾಗಲಿ ಅಭ್ಯಂಜನವನ್ನು ಮಾಡಿಕೊಂಡು ಮಂಗಳಸ್ನಾನಾನಂತರ ಶುಭ್ರವಸ್ತ್ರಗಳನ್ನು ಧರಿಸಿ ಮನೆಯಲ್ಲಿ ರಂಗವಲ್ಯಾದಿಗಳಿಂದ ಅಲಂಕೃತವಾದ ಶುದ್ಧಪ್ರದೇಶದಲ್ಲಿ ಮನೋಹರವಾದ ಮಂಟಪವನ್ನು ನಿರ್ಮಿಸಬೇಕು. ಅದರ ಮಧ್ಯದಲ್ಲಿ ಪಂಚವರ್ಣದಿಂದ ಕೂಡಿದ ಅಷ್ಟದಳ ಪದ್ಮವನ್ನು ರಚಿಸಿ ಅದರಮೇಲೆ ಮಾವಿನಚಿಗುರುಗಳಿಂದ ಕೂಡಿದ ಕಲಶವನ್ನು ಇಟ್ಟು ಪ್ರಾಣಪ್ರತಿಷ್ಠಾಪನಪುರಸ್ಸರವಾಗಿ ವರಮಹಾಲಕ್ಷ್ಮಿಯನ್ನು ಪೂಜಿಸಬೇಕು. "ಪದ್ಮಾಸನೇ, ಪದ್ಮ ಊರು ಪದ್ಮಾಕ್ಷೀ ಪದ್ಮಸಂಭವೇ"ಎಂಬ ಮಂತ್ರಪೂರ್ವಕವಾಗಿ ಷೋಡಶೋಪಚಾರ ಪೂಜೆಯಿಂದ ದೇವಿಯನ್ನು ತೃಪ್ತಿಪಡಿಸಿ ಯೋಗ್ಯನಾದ ಬ್ರಾಹ್ಮಣನಿಗೆ ಉಪಾಯನ ದಾನವನ್ನು ಕೊಟ್ಟು ಸುವಾಸಿನಿಯರನ್ನು ಸಮಾರಾಧನೆ ಸುಗಂಧ ತಾಂಬೂಲಗಳಿಂದ ತೃಪ್ತಿಪಡಿಸಬೇಕು. ಅನಂತರ ಭಕ್ತಿಯುಕ್ತರಾದ ಬ್ರಾಹ್ಮಣ ಸುವಾಸಿನಿಯರಿಗೆ ಭೋಜನ ಮಾಡಿಸಿ ಭೂರಿದಕ್ಷಿಣೆಗಳನ್ನು ಕೊಟ್ಟು ಈ ಕಥೆಯನ್ನು ಕೇಳಬೇಕು ಎಂದು ಪರಶಿವನು ಪಾರ್ವತಿಗೆ ಹೇಳಿದನೆಂದು ಸೂತಪುರಾಣಿಕನು ಶೌನಕಾದಿ ಋಷಿಗಳಿಗೆ ಹೇಳಿದನು. ಇಂಥ

ವರಲಕ್ಷ್ಮೀವ್ರತವನ್ನು ಯಾರು ಮಾಡುವರೋ ! ಈ ಕಥೆಯನ್ನು ಯಾರು ಕೇಳುವರೋ ! ಅವರಿಗೆ ದಾರಿದ್ರ್ಯ ದುಃಖಾದಿಗಳು ನಾಶವಾಗಿ ಪುತ್ರಪೌತ್ರಾದಿ ಸಂಪತ್ತಿನಿಂದ ಸಕಲ ಭಾಗ್ಯ ಗಳೂ ಕೈಗೂಡುವುದೆಂದು ಪ್ರಸಿದ್ಧವಾಗಿರುವ ಭವಿಷ್ಯೋತ್ತರ ಪುರಾಣ ಶ್ರೀ ವರಲಕ್ಷ್ಮೀ ವ್ರತಕಥಾ ಸಂಗ್ರಹಂ ಸಂಪೂರ್ಣಂ. ಶ್ರೀಃ. ಶ್ರೀಃ. ಶ್ರೀಃ.

೬. ಅಥ ಕೇದಾರೇಶ್ವರ ವ್ರತಕಲ್ಪಃ

ತತ್ರ ವ್ರತವಿವೇಕಃ

ಮಾಸಿ ಆಶ್ವಯುಜೇಽಷ್ಟಮ್ಯಾಂ ಶುಕ್ಲಪಕ್ಷೇ ಸಮಾಹಿತಃ । ಹಸ್ತೇ ಬದ್ಧ್ವಾ ಪ್ರತಿಸರಂ ಹ್ಯೇಕವಿಂಶತಿತಂತುಭಿಃ ಉಪೋಷ್ಯ ರಜನೀ ತಾಂ ತು ಕೃತ್ವಾ ಬ್ರಾಹ್ಮಣ ಭೋಜನಂ । ತದಾರಭ್ಯ ಪ್ರಕರ್ತವ್ಯಂ ಅಮಾವಾಸ್ಯಾವಧಿವ್ರತಂ ॥

ಈ ವ್ರತವನ್ನು ಆಶ್ವಯುಜ ಶುದ್ಧ ಅಷ್ಟಮಿಯದಿನ ಪ್ರಾರಂಭಮಾಡಿ ಅಮಾವಾಸ್ಯೆಯ ವರೆಗೂ, ಇಪ್ಪತ್ತೊಂದು ದಿನಗಳು ಪ್ರಾತಃಕಾಲದಲ್ಲಿ ನಿತ್ಯಕರ್ಮಾನುಷ್ಠಾನವನ್ನು ಮುಗಿಸಿ ವಿಧಿವತ್ತಾಗಿ ಇಪ್ಪತ್ತೊಂದು ಗಂಟಿನ ದಾರವನ್ನು ಸ್ಥಾಪಿಸಿ ಪೂಜಿಸಬೇಕು. ಅಮಾವಾಸ್ಯೆಯ ದಿನ ಸಂಧ್ಯಾಕಾಲದಲ್ಲಿ ವ್ರತವನ್ನು ಸಂಪೂರ್ಣವಾಗಿ ಮಾಡಿ ರಾತ್ರಿ ಉಪವಾಸವಿದ್ದು ಬ್ರಾಹ್ಮಣ ಭೋಜನವನ್ನು ಮಾಡಿಸಬೇಕು. ಹೀಗೆ ಮಾಡುವುದಕ್ಕೆ ಅಸಾಧ್ಯವಾದರೆ ಆಶ್ವ ಯುಜ ಬಹುಳ ಅಮಾವಾಸ್ಯೆಯ ದಿನ ಸಾಯಂಕಾಲದಲ್ಲಾದರೂ ಮಾಡಬಹುದು. ಇದನ್ನು ಭಕ್ತಿವಂತರಾದ ಗಂಡಸರೂ ಹೆಂಗಸರೂ ಚಾತುರ್ವರ್ಣ್ಯದವರೂ ಇತರರೂ ಮಾಡಬಹುದು.

ಹರಿಃ ಓಂ । ಶುಕ್ಲಾಂಬರಧರಂ ವಿಷ್ಣುಂ । ಶಶಿವರ್ಣಂ ಚತುರ್ಭುಜಂ ಪ್ರಸನ್ನ ವದನಂ ಧ್ಯಾಯೇತ್ ಸರ್ವ ವಿಘ್ನೋಪಶಾಂತಯೇ ॥ ಆಗಮಾರ್ಥಂ ತು ದೇವಾನಾಂ ಗಮನಾರ್ಥಂ ತು ರಕ್ಷಸಾಂ । ಕುರ್ವೇ ಘಂಟಾರವಂ ತತ್ರ ದೇವತಾಹ್ವಾನಲಾಂಛನಂ ॥ ಇತಿ ಘಂಟಾನಾದಂ ಕೃತ್ವಾ ಪ್ರಾಣಾನಾಯಮ್ಯ ದೇಶಕಾಲೌ ಸಂಕೀರ್ತ್ಯ (೭, ೮, ೯ನೇ ಪುಟ ನೋಡಿ) ಏವಂಗುಣವಿಶೇಷಣವಿಶಿಷ್ಟಾಯಾಂ ಅಸ್ಯಾಂ ಶುಭೇ ತಿಥೌ ಮಮ ಸಕಲ ಮನೋರಥಾವಾಪ್ತ್ಯರ್ಥಂ । ಪ್ರಾರೇಪ್ಸ್ಯಮಾಣ ಕರ್ಮಣಸ್ಯ ನಿರ್ವಿಘ್ನೇನ ಪರಿ ಸಮಾಪ್ತ್ಯರ್ಥಂ ಆದೌ ಶ್ರೀಮಹಾಗಣಪತಿಪೂಜಾಂ ಕರಿಷ್ಯೇ ॥ ಇತಿ ಸಂಕಲ್ಪ್ಯ ಗಣಪತಿಪೂಜಾಂ ಕುರ್ಯಾತ್ (೯ನೇ ಪುಟ ನೋಡಿ) ಮಹಾಗಣಪತಿಪೂಜಾನಂತರಂ

ಪ್ರಸಾದಂ ಗೃಹೀತ್ವಾ ಅನಯಾ ಪೂಜಯಾ ಕೃತ ಗಣಪತಿಪೂಜಾಯ ಶ್ರೀಮಹಾ ಗಣಪತಿಃ ಪ್ರಿಯತಾಮಿತಿ ಪ್ರಾರ್ಥ್ಯ ಪುನಃ ಸಂಕಲ್ಪಂ ಕುರ್ಯಾತ್॥ಶುಭತಿಥೌ ಶೋಭನೇ ಮುಹೂರ್ತೇ ಆದ್ಯಬ್ರಹ್ಮಣಃ ದ್ವಿತೀಯಪ್ರಹರಾರ್ಧೇ ಶ್ವೇತವರಾಹಕಲ್ಪೇ ವೈವಸ್ವತ ಮನ್ವಂತರೇ ಕಲಿಯುಗೇ ಪ್ರಥಮಪಾದೇ ಜಂಬೂದ್ವೀಪೇ ಭರತವರ್ಷೇ ಭರತಖಂಡೇ ಅಸ್ಮಿನ್ ವರ್ತಮಾನೇ ವ್ಯಾವಹಾರಿಕೇ ಚಾಂದ್ರಮಾನೇನ ಪ್ರಭವಾದಿ ಷಷ್ಠಿ ಸಂವತ್ಸರಾ ಣಾಂ ಮಧ್ಯೇ....ನಾಮ ಸಂವತ್ಸರೇ ದಕ್ಷಿಣಾಯನೇ ಶರದೃತೌ ಆಶ್ವಯುಜ ಮಾಸೇ ಕೃಷ್ಣಪಕ್ಷೇ ಅಮಾವಾಸ್ಯಾಂ ವಾಸರಯುಕ್ತಾಯಾಂ ಶುಭನಕ್ಷತ್ರ ಶುಭ ಯೋಗ ಶುಭಕರಣ ಏವಂ ಗುಣವಿಶೇಷಣವಿಶಿಷ್ಟಾಯಾಂ ಶುಭತಿಥೌ ಅಸ್ಮಾಕಂ ಸಹ ಕುಟುಂಬಾನಾಂ ಕ್ಷೇಮಸ್ಥೈರ್ಯ ವೀರ್ಯವಿಜಯ ಆಯುರಾರೋಗ್ಯ ಐಶ್ವರ್ಯಾಭಿ ವೃದ್ಧ್ಯರ್ಥಂ ಧರ್ಮಾರ್ಥ ಕಾಮಮೋಕ್ಷ ಚತುರ್ವಿಧ ಫಲಪುರುಷಾರ್ಥ ಸಿದ್ಧ್ಯರ್ಥಂ ಇಷ್ಟಕಾಮ್ಯಾರ್ಥಸಿದ್ಧ್ಯರ್ಥಂ ಸತ್ಸಂತಾನ ಸೌಭಾಗ್ಯ ಶುಭಫಲಾವಾಪ್ತ್ಯರ್ಥಂ ಶ್ರೀ ಪರಮೇಶ್ವರಪ್ರೀತ್ಯರ್ಥಂ ವರ್ಷೇ ವರ್ಷೇ ಕರ್ತವ್ಯ ಏತದ್ವರ್ಷಪ್ರಯುಕ್ತ ಶ್ರೀ ಕೇದಾರ ಗೌರೀ ದೇವತಾಮುದ್ದಿಶ್ಯ ಶ್ರೀಕೇದಾರಗೌರೀ ಪ್ರೀತ್ಯರ್ಥಂ ಭವಿಷ್ಯೋತ್ತರ ಪುರಾಣಾಂ ತರ್ಗತಕಲ್ಪೋಕ್ತ ಪ್ರಕಾರೇಣ ಯಾವಚ್ಛಕ್ತ್ಯಾ ಧ್ಯಾನಾವಾಹನಾದಿ ಷೋಡಶೋಪ ಚಾರಪೂಜಾಂ ಕರಿಷ್ಯೇ.

ತದಂಗತ್ವೇನ ಕಲಶಪೂಜಾಮಹಂ ಕರಿಷ್ಯೇ । ಕಲಶಂ ಗಂಧಪುಷ್ಪಾಕ್ಷತೈರ ಭ್ಯರ್ಚ್ಯ । ಕಲಶಸ್ಯ ಮುಖೇ ವಿಷ್ಣುಃ ಕಂಠೇ ರುದ್ರಃ ಸಮಾಹಿತಃ । ಮೂಲೇ ತತ್ರ ಸ್ಥಿತೋ ಬ್ರಹ್ಮಾ ಮಧ್ಯೇ ಮಾತೃಗಣಾಸ್ಮೃತಾಃ । ಕುಕ್ಷೌ ತು ಸಾಗರಾಸ್ಸರ್ವೇ ಸಪ್ತದ್ವೀಪಾ ವಸುಂಧರಾ। ಋಗ್ವೇದೋಽಥ ಯಜುರ್ವೇದೋ ಸಾಮವೇದೋಽಪ್ಯಥ ವರ್ಣಃ।ಅಂಗೈಶ್ಚ ಸಹಿತಾಸ್ಸರ್ವೇ ಕಲಶಾಂಬುಸಮಾಶ್ರಿತಾಃ।ಆಯಾಂತು ದೇವಪೂಜಾ ರ್ಥಂ ದುರಿತಕ್ಷಯಕಾರಕಾಃ । ಗಂಗೇ ಚ ಯಮುನೇ ಚೈವ ಗೋದಾವರಿ ಸರಸ್ವತಿ । ನರ್ಮದೇ ಸಿಂಧುಕಾವೇರೀ ಜಲೇಽಸ್ಮಿನ್ ಸನ್ನಿಧಿಂ ಕುರು ॥ ಇತಿ ಕಲಶಪೂಜಾಂ ಸಮಾಪ್ಯ । ತತಃ ಕೇದಾರೇಶ್ವರಪೂಜಾಮಾರಭೇತ್-ಅಥ ದ್ವಾರಪಾಲಕಪೂಜಾ- ಪೀಠಪೂಜಾಂ ಚ ಕರಿಷ್ಯೇ-ಪೂರ್ವದ್ವಾರೇ ದ್ವಾರಶ್ರಿಯೈ ನಮಃ । ಧಾತ್ರೇ ನಮಃ । ವಿಧಾತ್ರೇ ನಮಃ । ದಕ್ಷಿಣದ್ವಾರೇ ದ್ವಾರಶ್ರಿಯೈ ನಮಃ । ಚಂಡಾಯ ನಮಃ । ಪ್ರಚಂಡಾಯ ನಮಃ । ಪಶ್ಚಿಮದ್ವಾರೇ ದ್ವಾರಶ್ರಿಯೈ ನಮಃ । ಶಂಖನಿಧಯೇ ನಮಃ। ಪದ್ಮನಿಧಯೇ ನಮಃ । ಉತ್ತರದ್ವಾರೇ ದ್ವಾರಶ್ರಿಯೈ ನಮಃ । ಗಂಗಾಯೈ ನಮಃ । ಯಮುನಾಯೈ ನಮಃ । ಪೀಠಸ್ಯ ಅಧೋಭಾಗೇ ಓಂ ಆಧಾರಶಕ್ತ್ಯೈ ನಮಃ । ಓಂ ಮೂಲಪ್ರಕೃತ್ಯೈ ನಮಃ । ಓಂ ಅನಂತಾಯ ನಮಃ । ಓಂ ವರಾಹಾಯ ನಮಃ । ಓಂ ಕೂರ್ಮಾಯ ನಮಃ । ಇತಿ ಪೀಠಪೂಜಾಂ ಕೃತ್ವಾ । ತತೋ ದೇವಸ್ಯ ಪುರತಃ ನೂತನದೋರಂ ಸಂಸ್ಥಾಪ್ಯ [೨೧ ಗಂಟಿನ ಹೊಸ ದಾರವನ್ನು ದೇವರೆದುರಿಗೆ ಇಡ ಬೇಕು] ಹರಿದ್ರಾ ಕುಂಕುಮ ಪುಷ್ಪಾಕ್ಷತೈರಭ್ಯರ್ಚ್ಯ ಪರಮೇಶ್ವರಂ ಧ್ಯಾಯೇತ್ ॥

ಶೂಲಂ ಡಮರುಕಂ ಚೈವ ದಧಾನಂ ಹಸ್ತಯುಗ್ಮಕೇ । ಕೇದಾರದೇವ ಮೀಶಾನಂ ಧ್ಯಾಯೇತ್ತ್ರಿಪುರಘಾತಿನಂ ॥ ಶ್ರೀಕೇದಾರೇಶ್ವರಾಯ ನಮಃ । ಧ್ಯಾನಂ ಸಮರ್ಪಯಾಮಿ ॥ ಕೈಲಾಸಶಿಖರೇ ರಮ್ಯೇ ಪಾರ್ವತ್ಯಾ ಸಹಿತಪ್ರಭೋ । ಆಗಚ್ಛ ದೇವದೇವೇಶ ಮದ್ಭಕ್ತ್ಯಾ ಚಂದ್ರಶೇಖರ। ಶ್ರೀಕೇದಾರೇಶ್ವರಾಯ ನಮಃ । ಆವಾಹ ನಂ ಸಮರ್ಪಯಾಮಿ ॥ ಸುರಾಸುರಶಿರೋರತ್ನಪ್ರಭಾಸಿತಪಾದಾಂಬುಜ । ಕೇದಾರ ದೇವ ಮದ್ದತ್ತಂ ಆಸನಂ ಪ್ರತಿಗೃಹ್ಯತಾಂ ॥ ಶ್ರೀಕೇದಾರೇಶ್ವರಾಯ ನಮಃ । ರತ್ನ ಸಿಂಹಾಸನಂ ಸಮರ್ಪಯಾಮಿ ॥ ಗಂಗಾಧರ ನಮಸ್ತೇಽಸ್ತು ತ್ರಿಲೋಚನ ವೃಷಧ್ವಜ। ಮೌಕ್ತಿಕಾಸನಸಂಸ್ಥಾಯ ಕೇದಾರಾಯ ನಮೋ ನಮಃ । ಶ್ರೀ ಕೇದಾರೇಶ್ವರಾಯ ನಮಃ । ಪಾದಯೋಃ ಪಾದ್ಯಂ ಸಮರ್ಪಯಾಮಿ ॥ ಅರ್ಘ್ಯಂ ಗೃಹಾಣ ಭಗವನ್ ಭಕ್ತ್ಯಾ ದತ್ತಂ ಮಯಾ ಪ್ರಭೋ।ಪ್ರಯಚ್ಛ ಮೇ ಮನಸ್ತುಷ್ಟಿಂ ಭಕ್ತಾನಾಮಿಷ್ಟದಾ ಯಕ ॥ ಶ್ರೀಕೇದಾರೇಶ್ವರಾಯ ನಮಃ । ಹಸ್ತಯೋಃ ಅರ್ಘ್ಯಂ ಸಮರ್ಪಯಾಮಿ ॥ ಮುನಿಭಿರ್ನಾರದಪ್ರಖ್ಯೈಃ ನಿತ್ಯಮಾಖ್ಯಾತವೈಭವ । ಕೇದಾರದೇವ ಭಗವನ್ ಗೃಹಾ ಣಾಚಮನಂ ಪ್ರಭೋ ॥ ಶ್ರೀಕೇದಾರೇಶ್ವರಾಯ ನಮಃ ॥ ಮುಖೇ ಆಚಮನೀಯಂ ಸಮರ್ಪಯಾಮಿ । ಕೇದಾರದೇವ ಭಗವನ್ ಸರ್ವಲೋಕಸುಖಪ್ರದ । ಮಧುಪರ್ಕಂ ಪ್ರದಾಸ್ಯಾಮಿ ಗೃಹಾಣ ತ್ವಂ ಸುರೇಶ್ವರ।ಶ್ರೀಕೇದಾರೇಶ್ವರಾಯ ನಮಃ । ಮಧುಪರ್ಕ ನೈವೇದ್ಯಂ ಸಮರ್ಪಯಾಮಿ॥ (ಇಲ್ಲಿ ಹಾಲು ಹಣ್ಣು ಸಕ್ಕರೆ ನೈವೇದ್ಯಮಾಡಬೇಕು.

ಸ್ನಾನಂ ಪಂಚಾಮೃತಂ ದೇವ ಚಾರುಶುದ್ಧೋದಕೈರಪಿ । ಗೃಹಾಣ ದೇವ ದೇವೇಶ ತ್ವದ್ಭಕ್ತ್ಯಾ ಚ ಮಯಾರ್ಪಿತಂ ॥ ಪಂಚಾಮೃತಸ್ನಾನಂ ಆಪ್ಯಾಯಸ್ವ ಸ ಮೇ ತು ತೇ ಇತಿ (ಗಣಪತಿವ್ರತವನ್ನು ನೋಡು) ಶ್ರೀಕೇದಾರೇಶ್ವರಾಯ ನಮಃ । ಪಂಚಾಮೃತಸ್ನಾನಂ ಸಮರ್ಪಯಾಮಿ॥ಸರ್ವತೀರ್ಥ ಸಮಾಯುಕ್ತಂ ಮಯಾ ದತ್ತ ಮನುತ್ತಮಂ । ಶುದ್ಧೋದಕಂ ಮಹಾದೇವ ಗೃಹಾಣ ಪರಮೇಶ್ವರ ॥ ಶ್ರೀ ಕೇದಾರೇ ಶ್ವರಾಯ ನಮಃ । ಆಪೋಹಿಷ್ಠೇತಿ ಶುದ್ಧೋದಕಸ್ನಾನಂ ಸಮರ್ಪಯಾಮಿ ॥ ವಸ್ತ್ರ ಯುಗ್ಮಂ ಮಯಾ ದತ್ತಂ ಮನೋಹರಮಿದಂ ಶುಭಂ । ಸದಾ ಶುಭ್ರಂ ಗೃಹಾಣೇದಂ ಸದಾಶಿವ ನಮೋಽಸ್ತು ತೇ ॥ ಅಭಿವಸ್ತ್ರಾ ಸುವಸನಾನ್ಯರ್ಷಾಭೇದೇನೋ ಇತಿ ॥ ಶ್ರೀ ಕೇದಾರೇಶ್ವರಾಯ ನಮಃ । ವಸ್ತ್ರಯುಗ್ಮಂ ಸಮರ್ಪಯಾಮಿ ॥ ಸ್ವರ್ಣಯಜ್ಞೋಪ ವೀತಂ ಚ ಕಾಂಚನಂ ಚೋತ್ತರೀಯಕಂ । ರುದ್ರಾಕ್ಷಮಾಲಾಯುಕ್ತಂ ದದಾಮಿ ಸ್ವೀ ಕುರು ಪ್ರಭೋ ॥ ಯಜ್ಞೋಪವೀತಂ ಪರಮಂ ಪವಿತ್ರಂ ಪ್ರಜಾಪತೇರ್ಯತ್ಸಹಜಂ ಪುರಸ್ತಾತ್ । ಆಯುಷ್ಯಮಗ್ರ್ಯಂ ಪ್ರತಿಮುಂಚ ಶುಭ್ರಂ ಯಜ್ಞೋಪವೀತಂ ಬಲ ಮಸ್ತು ತೇಜಃ ॥ ಶ್ರೀ ಕೇದಾರೇಶ್ವರಾಯ ನಮಃ । ಯಜ್ಞೋಪವೀತಂ ಸಮರ್ಪ ಯಾಮಿ ॥ ಸಮಸ್ತಗಂಧ ದ್ರವ್ಯಾಣಾಂ ದೇವತ್ವಮಸಿ ಜನ್ಮಭೂಃ । ಭಕ್ತ್ಯಾ ಮಯಾ

ರ್ಪಿತಂ ದೇವ ॥ ಗಂಧಾನಿ ಪ್ರತಿಗೃಹ್ಯತಾಂ ॥ ಗಂಧದ್ವಾರಾಂ ದುರಾಧರ್ಷಾಂ ನಿತ್ಯ ಪುಷ್ಟಾಂ ಕರೀಷಿಣೀಂ । ಈಶ್ವರೀಂ ಸರ್ವಭೂತಾನಾಂ ತಾಮಿಹೋಪಹ್ವಯೇ ಶ್ರಿಯಂ ॥ ಶ್ರೀಕೇದಾರೇಶ್ವರಾಯ ನಮಃ । ದಿವ್ಯಪರಿಮಳಗಂಧಾನ್ ಸಮರ್ಪ ಯಾಮಿ ॥ ಅಕ್ಷತೋsಸಿ ಪ್ರಭಾವೇನ ಭಕ್ತಾನಾಮಕ್ಷತಂ ಪದಂ । ದದಾಸಿ ದೇವಮ ದ್ವತ್ತೈರಕ್ಷತೈಃ ಪ್ರಿಯತಾಂ ಭವಾನ್ ॥ ಆಯನೇ ತೇ ಪರಾಯಣೇ ದೂರ್ವಾ ರೋಹಂ ತು ಪುಷ್ಪಿಣೀಃ । ಹೃದಾಶ್ಚ ಪುಂಡರೀಕಾಣಿ ಸಮುದ್ರಸ್ಯ ಗೃಹಾ ಇಮೇ ॥ ಶ್ರೀಕೇದಾರೇಶ್ವರಾಯ ನಮಃ ಅಲಂಕರಣಾರ್ಥೇ ಅಕ್ಷತಾನ್ ಸಮರ್ಪಯಾಮಿ ॥ ಕಲ್ಪ ವೃಕ್ಷಪ್ರಸೂನೈಃ ತ್ವಂ ಪೂರ್ವೈ ರಭ್ಯರ್ಚಿತಾ ಸುರೈಃ । ಕುಂಕುಮೈಃ ಪಾರ್ಥಿವೈರೇಭಿಃ ಇದಾನೀಮರ್ಚಿತಾ ಮಯಾ ॥ ಶ್ರೀಕೇದಾರೇಶ್ವರಾಯ ನಮಃ । ಪುಷ್ಪಾಣಿ ಸಮರ್ಪ ಯಾಮಿ । ತದನಂತರಂ ಇಂದ್ರಾದಿ ಲೋಕಪಾಲಕಪೂಜಾಂ ಕುರ್ಯಾತ್ ॥

ಅಥ ಲೋಕಪಾಲಕ ಪೂಜಾ

ಓಂ ಇಂದ್ರಾಯ ನಮಃ । ಓಂ ಅಗ್ನಯೇ ನಮಃ । ಓಂ ಯಮಾಯ ನಮಃ । ಓಂ ನಿರಋತಯೇ ನಮಃ । ಓಂ ವರುಣಾಯ ನಮಃ । ಓಂ ವಾಯವೇ ನಮಃ । ಓಂ ಕುಬೇರಾಯ ನಮಃ । ಓಂ ಈಶಾನಾಯ ನಮಃ । ಶಿವಸ್ಯ ದಕ್ಷಿಣಭಾಗೇ ಬ್ರಹ್ಮಣೇ ನಮಃ । ಉತ್ತರಭಾಗೇ ವಿಷ್ಣವೇ ನಮಃ । ಮಧ್ಯೇ ಶ್ರೀಕೇದಾರೇಶ್ವರಾಯ ನಮಃ । ಇತಿ ಲೋಕಪಾಲಕ ಪೂಜಾಂ ಸಮರ್ಪಯಾಮಿ ॥

ಅಥ ಅಂಗಪೂಜಾ

ಓಂ ಮಹೇಶ್ವರಾಯ ನಮಃ	ಪಾದೌ	ಪೂಜಯಾಮಿ
ಓಂ ಈಶ್ವರಾಯ ನಮಃ	ಜಂಘೇ	ಪೂಜಯಾಮಿ
ಓಂ ಕಾಮರೂಪಾಯ ನಮಃ	ಜಾನುನೀ	ಪೂಜಯಾಮಿ
ಓಂ ಹರಾಯ ನಮಃ	ಊರೂ	ಪೂಜಯಾಮಿ
ಓಂ ತ್ರಿಪುರಾಂತಕಾಯ ನಮಃ	ಗುಹ್ಯಂ	ಪೂಜಯಾಮಿ
ಓಂ ಭವಾಯ ನಮಃ	ಕಟಿಂ	ಪೂಜಯಾಮಿ
ಓಂ ಗಂಗಾಧರಾಯ ನಮಃ	ನಾಭಿಂ	ಪೂಜಯಾಮಿ
ಓಂ ಮಹಾದೇವಾಯ ನಮಃ	ಉದರಂ	ಪೂಜಯಾಮಿ
ಓಂ ಪಶುಪತಯೇ ನಮಃ	ಹೃದಯಂ	ಪೂಜಯಾಮಿ
ಓಂ ಪಿನಾಕಿನೇ ನಮಃ	ಹಸ್ತೌ	ಪೂಜಯಾಮಿ
ಓಂ ಶಿವಾಯ ನಮಃ	ಭುಜೌ	ಪೂಜಯಾಮಿ
ಓಂ ಶಿತಿಕಂಠಾಯ ನಮಃ	ಕಂಠಂ	ಪೂಜಯಾಮಿ
ಓಂ ವಿರೂಪಾಕ್ಷಾಯ ನಮಃ	ಮುಖಂ	ಪೂಜಯಾಮಿ
ಓಂ ತ್ರಿನೇತ್ರಾಯ ನಮಃ	ನೇತ್ರಾಣಿ	ಪೂಜಯಾಮಿ
ಓಂ ರುದ್ರಾಯ ನಮಃ	ಲಲಾಟಂ	ಪೂಜಯಾಮಿ

ಓಂ ಶರ್ವಾಯ ನಮಃ ಶಿರಃ ಪೂಜಯಾಮಿ
ಓಂ ಚಂದ್ರಶೇಖರಾಯ ನಮಃ ಕಿರೀಟಂ ಪೂಜಯಾಮಿ
ಓಂ ಶ್ರೀ ಕೇದಾರೇಶ್ವರಾಯ ನಮಃ ಸರ್ವಾಂಗಾನಿ ಪೂಜಯಾಮಿ

ಅಥ ಪುಷ್ಪಪೂಜಾ ಪತ್ರಪೂಜಾ

ಓಂ ಮಹಾದೇವಾಯ ನಮಃ । ಮಲ್ಲಿಕಾಪುಷ್ಪಂ ಸಮರ್ಪಯಾಮಿ । ಓಂ ಸದಾಶಿವಾಯ ನಮಃ । ಸೇವಂತಿಕಾಪುಷ್ಪಂ ಸಮರ್ಪಯಾಮಿ (ಸಮರ್ಪಯಾಮಿ ಎಂದು ಎಲ್ಲಾ ನಾಮಗಳಿಗೂ ಹೇಳಿಕೊಳ್ಳಬೇಕು) ಓಂ ಕಾಮಾಸಯೇ ನಮಃ । ಕರವೀರಪುಷ್ಪಂ ॥ ಓಂ ಪಶುಪತಯೇ ನಮಃ । ಪಾಟಲೀಪುಷ್ಪಂ ॥ ಓಂ ಪಶುಪತಯೇ ನಮಃ । ಪಾಟಲೀಪುಷ್ಪಂ ॥ ಓಂ ಗಿರೀಶಾಯ ನಮಃ । ಗಿರಿಕರ್ಣಿಕಾಪುಷ್ಪಂ ॥ ಓಂ ಗಂಗಾಧರಾಯ ನಮಃ । ನಂದ್ಯಾವರ್ತಪುಷ್ಪಂ ॥ ಓಂ ಕಪರ್ದಿನೇ ನಮಃ । ಚಂಪಕಪುಷ್ಪಂ ॥ ಓಂ ಭವಾಯ ನಮಃ । ಬಿಲ್ವಪತ್ರಂ ॥ ಓಂ ಭಕ್ತವತ್ಸಲಾಯ ನಮಃ । ತುಲಸೀಪತ್ರಂ ॥ ಓಂ ಅಭಯಪ್ರದಾಯ ನಮಃ । ಅರ್ಜುನಪತ್ರಂ ॥ ಓಂ ಸದಾಶಿವಾಯ ನಮಃ । ಸಿಂಧುವಾರಪತ್ರಂ ॥ ಓಂ ಉಮಾಧವಾಯ ನಮಃ । ಮಾಚೀಪತ್ರಂ ॥ ಓಂ ಗಂಗಾಧರಾಯ ನಮಃ । ಶ್ರೀಗಂಧಪತ್ರಂ ॥ ಓಂ ಸರ್ವಜ್ಞಾಯ ನಮಃ । ಜಂಬೀರಪತ್ರಂ ॥ ಓಂ ಆಶ್ರಿತವತ್ಸಲಾಯ ನಮಃ । ಅಮಲಕಪತ್ರಂ ॥ ಓಂ ನಿತ್ಯಾನಂದಾಯ ನಮಃ । ನೀರ್ಗುಂಡಿಪತ್ರಂ ॥ ಓಂ ಶ್ರೀಕೇದಾರೇಶ್ವರಾಯ ನಮಃ । ನಾನಾವಿಧ ಪರಿಮಳಪತ್ರಪುಷ್ಪಾಣಿ ಸಮರ್ಪಯಾಮಿ ॥

ಅಥ ಶಿವಾಷ್ಟೋತ್ತರ ಶತನಾಮಪೂಜಾ

ಓಂ ಶಿವಾಯ ನಮಃ
ಓಂ ಮಹೇಶ್ವರಾಯ ನಮಃ
ಓಂ ಶಂಭವೇ ನಮಃ
ಓಂ ಪಿನಾಕಿನೇ ನಮಃ
ಓಂ ಶಶಿರೇಖಾಯ ನಮಃ
ಓಂ ವಾಮದೇವಾಯ ನಮಃ
ಓಂ ವಿರೂಪಾಕ್ಷಾಯ ನಮಃ
ಓಂ ಕಪರ್ದಿನೇ ನಮಃ
ಓಂ ನೀಲಲೋಹಿತಾಯ ನಮಃ
ಓಂ ಶಂಕರಾಯ ನಮಃ ॥೧೦॥
ಓಂ ಶೂಲಪಾಣಯೇ ನಮಃ
ಓಂ ಖಟ್ವಾಂಗಿಯೇ ನಮಃ
ಓಂ ವಿಷ್ಣುವಲ್ಲಭಾಯ ನಮಃ
ಓಂ ಶಿಪಿವಿಷ್ಟಾಯ ನಮಃ
ಓಂ ಅಂಬಿಕಾನಾಥಾಯ ನಮಃ
ಓಂ ಶ್ರೀಕಂಠಾಯ ನಮಃ
ಓಂ ಭಕ್ತವತ್ಸಲಾಯ ನಮಃ
ಓಂ ಭವಾಯ ನಮಃ
ಓಂ ಶರ್ವಾಯ ನಮಃ
ಓಂ ತ್ರಿಲೋಕೇಶಾಯ ನಮಃ ॥೨೦॥
ಓಂ ಶಿತಿಕಂಠಾಯ ನಮಃ
ಓಂ ಶಿವಪ್ರಿಯಾಯ ನಮಃ
ಓಂ ಉಗ್ರಾಯ ನಮಃ
ಓಂ ಕಪಾಲಭೃತೇ ನಮಃ

ಓಂ ಕಾಮಾರಯೇ ನಮಃ
ಓಂ ಅಂಧಕಾಸುರಸೂದನಾಯೈ ನಮಃ
ಓಂ ಗಂಗಾಧರಾಯ ನಮಃ
ಓಂ ಕೃಪಾನಿಧಯೇ ನಮಃ
ಓಂ ಭೀಮಾಯ ನಮಃ
ಓಂ ಪರಶುಹಸ್ತಾಯ ನಮಃ ||೩೦||
ಓಂ ಮೃಗಪಾಣಯೇ ನಮಃ
ಓಂ ಜಟಾಧರಾಯ ನಮಃ
ಓಂ ಕೈಲಾಸವಾಸಿನೇ ನಮಃ
ಓಂ ಕಠೋರಾಯ ನಮಃ
ಓಂ ತ್ರಿಪುರಾಂತಕಾಯ ನಮಃ
ಓಂ ವೃಷಾಂಕಾಯ ನಮಃ
ಓಂ ವೃಷಭಾರೂಢಾಯ ನಮಃ
ಓಂ ಭಸ್ಮೋದ್ಧೂಳಿತವಿಗ್ರಹಾಯ ನಮಃ
ಓಂ ಸಾಮಪ್ರಿಯಾಯ ನಮಃ
ಓಂ ಸರ್ವಮಾಯಾಯ ನಮಃ ||೪೦||
ಓಂ ತ್ರಯೀಮೂರ್ತಯೇ ನಮಃ
ಓಂ ಅನೀಶ್ವರಾಯ ನಮಃ
ಓಂ ಸರ್ವಜ್ಞಾಯ ನಮಃ
ಓಂ ಪರಮಾತ್ಮನೇ ನಮಃ
ಓಂ ಸೋಮಸೂರ್ಯಾಗ್ನಿಲೋಚನಾಯ [ನಮಃ
ಓಂ ಹವಿನೇ ನಮಃ
ಓಂ ಯಜ್ಞಮಯಾಯ ನಮಃ
ಓಂ ಸೋಮಾಯ ನಮಃ
ಓಂ ಪಂಚವಕ್ತ್ರಾಯ ನಮಃ
ಓಂ ಸದಾಶಿವಾಯ ನಮಃ ||೫೦||
ಓಂ ವಿಶ್ವೇಶ್ವರಾಯ ನಮಃ
ಓಂ ವೀರಭದ್ರಾಯ ನಮಃ
ಓಂ ಪ್ರಜಾಪತಯೇ ನಮಃ
ಓಂ ಹಿರಣ್ಯರೇತಸೇ ನಮಃ
ಓಂ ಲಲಾಟಾಕ್ಷಾಯ ನಮಃ
ಓಂ ಕಾಲಕಾಲಾಯ ನಮಃ
ಓಂ ಗಿರೀಶಾಯ ನಮಃ

ಓಂ ಅನಘಾಯ ನಮಃ
ಓಂ ಭುಜಂಗಭೂಷಣಾಯ ನಮಃ
ಓಂ ಭರ್ಗಾಯ ನಮಃ ||೬೦||
ಓಂ ಗಿರಿಧನ್ವಿನೇ ನಮಃ
ಓಂ ಗಿರಿಪ್ರಿಯಾಯ ನಮಃ
ಓಂ ಕೃತ್ತಿವಾಸಸೇ ನಮಃ
ಓಂ ಪುರಾರಾತಯೇ ನಮಃ
ಓಂ ಭಗವತೇ ನಮಃ
ಓಂ ಪ್ರಮಥಾಧಿಪಾಯ ನಮಃ
ಓಂ ಮೃತ್ಯುಂಜಯಾಯ ನಮಃ
ಓಂ ಸೂಕ್ಷ್ಮತನವೇ ನಮಃ
ಓಂ ಜಗದ್ವ್ಯಾಪಿನೇ ನಮಃ
ಓಂ ಜಗದ್ಗುರವೇ ನಮಃ ||೭೦||
ಓಂ ವ್ಯೋಮಕೇಶಾಯ ನಮಃ
ಓಂ ಮಹಾಸೇನಜನಕಾಯ ನಮಃ
ಓಂ ಚಾರುವಿಕ್ರಮಾಯ ನಮಃ
ಓಂ ರುದ್ರಾಯ ನಮಃ
ಓಂ ಭೂತಪತಯೇ ನಮಃ
ಓಂ ಸ್ಥಾಣವೇ ನಮಃ
ಓಂ ಅಹಿರ್ಬುಧ್ನ್ಯಾಯ ನಮಃ
ಓಂ ದಿಗಂಬರಾಯ ನಮಃ
ಓಂ ಅಷ್ಟಮೂರ್ತಯೇ ನಮಃ
ಓಂ ಅನೇಕಾತ್ಮನೇ ನಮಃ ||೮೦||
ಓಂ ಸಾತ್ವಿಕಾಯ ನಮಃ
ಓಂ ದುರ್ಧರ್ಷಾಯ ನಮಃ
ಓಂ ಶಾಶ್ವತಾಯ ನಮಃ
ಓಂ ಸುಸ್ಥಿತಾಯೈ ನಮಃ
ಓಂ ಖಂಡಪರಶವೇ ನಮಃ
ಓಂ ಅಜಾಯ ನಮಃ
ಓಂ ಪಾಶವಿಮೋಚಕಾಯ ನಮಃ
ಓಂ ಮೃಡಾಯ ನಮಃ
ಓಂ ಪಶುಪತಯೇ ನಮಃ
ಓಂ ದೇವಾಯ ನಮಃ ||೯೦||

ಓಂ ಮಹಾದೇವಾಯ ನಮಃ
ಓಂ ಅವ್ಯಯಾಯ ನಮಃ
ಓಂ ಹರಯೇ ನಮಃ
ಓಂ ಪೂಷದಂತಭಿದೇ ನಮಃ
ಓಂ ಅವ್ಯಗ್ರಾಯ ನಮಃ
ಓಂ ದಕ್ಷಾಧ್ವರಹರಾಯ ನಮಃ
ಓಂ ಹರಾಯ ನಮಃ
ಓಂ ಭಗನೇತ್ರಭಿದೇ ನಮಃ
ಓಂ ಅವ್ಯಕ್ತಾಯ ನಮಃ
ಓಂ ಸಹಸ್ರಾಕ್ಷಾಯ ನಮಃ ॥೧೦೦॥
ಓಂ ಸಹಸ್ರಪದೇ ನಮಃ
ಓಂ ಅಪವರ್ಗಪ್ರದಾಯ ನಮಃ
ಓಂ ಅನಂತಾಯ ನಮಃ
ಓಂ ತಾರಕಾಯ ನಮಃ
ಓಂ ಪರಮೇಶ್ವರಾಯ ನಮಃ
ಓಂ ಗಣನಾಥಾಯ ನಮಃ
ಓಂ ಕವಚಿನೇ ನಮಃ
ಓಂ ಶ್ರೀಕೇದಾರಸ್ವಾಮಿನೇ ನಮಃ ॥೧೦೮

ನಾನಾವಿಧ ಪರಿಮಳ ಪತ್ರಪುಷ್ಪಾಣಿ ಸಮರ್ಪಯಾಮಿ ॥ ಅಥ ಸೂತ್ರಗ್ರಂಥಿ ಪೂಜಾ ॥ (೨೧ ಗಂಟುಹಾಕಿದ ದಾರ) ಓಂ ಶಿವಾಯ ನಮಃ । ಪ್ರಥಮಗ್ರಂಥಿಂ ಪೂಜಯಾಮಿ ॥ ಓಂ ಶಾಂತಾಯ ನಮಃ । ದ್ವಿತೀಯಗ್ರಂಥಿಂ ಪೂಜಯಾಮಿ ॥ ಓಂ ಮಹಾದೇವಾಯ ನಮಃ । ತೃತೀಯಗ್ರಂಥಿಂ ಪೂಜಯಾಮಿ ॥ ಓಂ ವೃಷಭಧ್ವಜಾಯ ನಮಃ । ಚತುರ್ಥಗ್ರಂಥಿಂ ಪೂಜಯಾಮಿ ॥ ಓಂ ಗೌರೀಶಾಯ ನಮಃ । ಪಂಚಮಗ್ರಂಥಿಂ ಪೂಜಯಾಮಿ ॥ ಓಂ ರುದ್ರಾಯ ನಮಃ । ಷಷ್ಠಗ್ರಂಥಿಂ ಪೂಜಯಾಮಿ ॥ ಓಂ ಪಶುಪತಯೇ ನಮಃ । ಸಪ್ತಮಗ್ರಂಥಿಂ ಪೂಜಯಾಮಿ ॥ ಓಂ ಭೀಮಾಯ ನಮಃ । ಅಷ್ಟಮಗ್ರಂಥಿಂ ಪೂಜಯಾಮಿ ॥ ಓಂ ತ್ರ್ಯಂಬಕಾಯ ನಮಃ । ನವಮಗ್ರಂಥಿಂ ಪೂಜಯಾಮಿ ॥ ಓಂ ನೀಲಲೋಹಿತಾಯ ನಮಃ । ದಶಮಗ್ರಂಥಿಂ ಪೂಜಯಾಮಿ ॥ ಓಂ ಹರಯೇ ನಮಃ । ಏಕಾದಶಗ್ರಂಥಿಂ ಪೂಜಯಾಮಿ ॥ ಓಂ ಸ್ಮರಹರಾಯ ನಮ । ದ್ವಾದಶಗ್ರಂಥಿಂ ಪೂಜಯಾಮಿ ॥ ಓಂ ಭರ್ಗಾಯ ನಮಃ । ತ್ರಯೋದಶಗ್ರಂಥಿಂ ಪೂಜಯಾಮಿ ॥ ಓಂ ಶಂಭವೇ ನಮಃ । ಚತುರ್ದಶಗ್ರಂಥಿಂ ಪೂಜಯಾಮಿ ॥ ಓಂ ಶರ್ವಾಯ ನಮಃ । ಪಂಚದಶಗ್ರಂಥಿಂ ಪೂಜಯಾಮಿ ॥ ಓಂ ಸದಾಶಿವಾಯ ನಮಃ । ಷೋಡಶಗ್ರಂಥಿಂ ಪೂಜಯಾಮಿ ॥ ಓಂ ಉಗ್ರಾಯ ನಮಃ । ಅಷ್ಟಾದಶಗ್ರಂಥಿಂ ಪೂಜಯಾಮಿ ॥ ಓಂ ಶ್ರೀಕಂಠಾಯ ನಮಃ । ಏಕೋನವಿಂಶತಿಗ್ರಂಥಿಂ ಪೂಜಯಾಮಿ ॥ ಓಂ ನೀಲಕಂಠಾಯ ನಮಃ । ವಿಂಶತಿಗ್ರಂಥಿಂ ಪೂಜಯಾಮಿ ॥ ಓಂ ಮೃತ್ಯುಂಜಯಾಯ ನಮಃ । ಏಕವಿಂಶತಿಗ್ರಂಥಿಂ ಪೂಜಯಾಮಿ ॥ ಓಂ ಶ್ರೀಕೇದಾರೇಶ್ವರಾಯ ನಮಃ । ಗ್ರಂಥಿಪೂಜಾಂ ಸಮರ್ಪಯಾಮಿ ॥

ಶ್ಲೋಕ॥ ದಶಾಂಗಧೂಪಮುಖ್ಯಶ್ಚಾಪ್ಯಂಗಾರವಿನಿವೇಶಿತ ॥ ಧೂಪ ಸುಗಂಧೈರುತ್ಪನ್ನ ತ್ವಾಂ ಪ್ರೀಣಯತು ಶಂಕರ। ಧೂಪಂ॥ ಯೋಗಿನಾಂ ಹೃದಯೇ ಸ್ಥೈವ ಜ್ಞಾನದೀಪಾಂಕುರೋದ್ಭವಃ ॥ ಬಾಹ್ಯದೀಪೋ ಮಯಾ ದತ್ತೋ ಗೃಹ್ಯತಾಂ ಭಕ್ತವತ್ಸಲ।

॥ದೀಪಂ॥ ತ್ರೈಲೋಕ್ಯಮಪಿ ನೈವೇದ್ಯಂ ನ ತೇ ತೃಪ್ತಿಸ್ತಥಾ ಬಹಿಃ।ನೈವೇದ್ಯಂ ಭಕ್ತವಾತ್ಸಲ್ಯಾದ್ಗೃಹ್ಯತಾಂ ತ್ರ್ಯಂಬಕಪ್ರಭೋ॥ಓಂ ಭೂರ್ಭುವಸ್ಸುವಃ ಇತಿ ನೈವೇದ್ಯಂ॥ ನಿತ್ಯಾನಂದಸ್ವರೂಪಸ್ತ್ವಂ ಯೋಗಿಹೃತ್ಕಮಲೇ ಸ್ಥಿತಂ।ಗೃಹಾಣ ಭಕ್ತ್ಯಾ ಮದ್ದತ್ತಂ ತಾಂಬೂಲಂ ಗ್ರತಿಗೃಹ್ಯತಾಂ । ಪೂಗಿಫಲಸಮಾಯುಕ್ತಂ ನಾಗವಲ್ಲಿದಳೈರ್ಯುತಂ। ಇತಿ ತಾಂಬೂಲಂ॥ಅರ್ಘ್ಯಂ ಗ್ರಹಾಣ ಭಗವನ್ ಭಕ್ತ್ಯಾ ದತ್ತಂ ಮಹೇಶ್ವರ।ಪ್ರಯಚ್ಛ ಮೇ ಮನಸ್ತುಷ್ಟಿಂ ಭಕ್ತಾನಾಮಿಷ್ಟದಾಯಕ । ಪುನರರ್ಘ್ಯಂ ॥ ಕರ್ಪೂರಂ ಚಂದ್ರಸಂಕಾಶಂ ಜ್ಯೋತಿಸ್ಸೂರ್ಯವಿವೋದಿತಂ ॥ ಭಕ್ತ್ಯಾ ದಾಸ್ಯಾಮಿ ಕರ್ಪೂರಂ ನೀರಾಜನಮಿದಂ ಶಿವ । ಹಿರಣ್ಯಪಾತ್ರಮಿತಿ ನೀರಾಜನಂ॥ ಭೂತೇಶ ಭುವನಾಧೀಶ ಸರ್ವದೇವಾದಿಪೂಜಿತ । ಪ್ರದಕ್ಷಿಣಂ ಕರೋಮಿ ತ್ವಾಂ ವ್ರತಂ ಮೇ ಸಫಲಂ ಕುರು॥ ಪ್ರದಕ್ಷಿಣಂ । ಹರ ಶಂಭೋ ಮಹಾದೇವ ವಿಶ್ವೇಶಾಮರವಲ್ಲಭ। ಶಿವ ಶಂಕರ ಸರ್ವಾತ್ಮನ್ ನೀಲಕಂಠ ನಮೋಽಸ್ತು ತೇ ॥ ನಮಸ್ಕಾರಂ॥ ಅಭೀಷ್ಟಸಿದ್ಧಿಂ ಕುರು ಮೇ ಶಿವಾವ್ಯಯ ಮಹೇಶ್ವರ । ಭಕ್ತಾನಾಮಿಷ್ಟದಾನಾರ್ಥಂ ಮೂರ್ತೀಕೃತಕಳೇಬರ ॥ ಪ್ರಾರ್ಥನಾಂ॥ ಕೇದಾರ ದೇವದೇವೇಶ ಭಗವನ್ನಂಬಿಕಾಪತೇ । ಏಕವಿಂಶತಿಗ್ರಂಥಿಯುಕ್ತಂ ಸೂತ್ರಂ ಗೃಹ್ಣಾಮ್ಯಹಂ ಪ್ರಭೋ॥ ಸೂತ್ರಗ್ರಹಣಂ ॥ ಆಯುಷ್ಯವಿದ್ಯಾಂ ಚ ಸದಾ ಸುಖಂಚ ಸೌಭಾಗ್ಯವೃದ್ಧಿಂ ಕುರು ದೇವದೇವ । ಸಂಸಾರಘೋರಾಂಬುನಿಧೌ ನಿಮಗ್ನಂ ಮಾಂ ರಕ್ಷ ಕೇದಾರ ನಮೋನಮಸ್ತೇ ॥ ದೋರಬಂಧನಂ॥ಕೇದಾರಃ ಪ್ರತಿಗೃಹ್ಣಾತು ಕೇದಾರೋ ವೈ ದದಾತಿ ಚ । ಕೇದಾರಸ್ತಾರಕೋಭಾಭ್ಯಾಂ ಕೇದಾರಾಯ ನಮೋನಮಃ ॥ ಉಪಾಯನದಾನಂ ॥ ಕೇದಾರಪ್ರತಿಮಾಯಾಸ್ಮಾದ್ರಾಜಸೌಭಾಗ್ಯವರ್ಧಿನೀ ॥ ತಸ್ಮಾದಸ್ಯಾಃ ಪ್ರದಾನೇನ ಮಮಾಸ್ತು ಶ್ರೀರಚಂಚಲಾ । ಇತಿ ಪ್ರತಿಮಾದಾನಮಂತ್ರಃ ॥ ಛತ್ರಚಾಮರಾದಿ ಪುನಃಪೂಜಾಂ ಕೃತ್ವಾ।ಅನಯಾ ಮಯಾ ಕೃತಷೋಡಶೋಪಚಾರ ಪೂಜಯಾ ಶ್ರೀಕೇದಾರೇಶ್ವರಃ ಸುಪ್ರೀತಸ್ಸುಪ್ರಸನ್ನೋ ಭತು

ಇತಿ ಪೂಜಾವಿಧಾನಂ ಸಂಪೂರ್ಣಂ.

ಶ್ರೀಃ ಶ್ರೀಃ ಶ್ರೀಃ

ಕೇದಾರೇಶ್ವರ ವ್ರತಕಥಾ

ಸೂತ ಉವಾಚ॥ಯಸ್ಯ ಪ್ರಸಾದಾದ್ಭುವನಂ ಕ್ರಿಯತೇ ಸಚರಾಚರಂ।ತಂ ಪ್ರಣಮ್ಯ ಮಹಾದೇವಂ ಭಗವಂತಮುಮಾಪತಿಂ॥ ಕೇದಾರವ್ರತಮಾಹಾತ್ಮ್ಯಂ ಸರ್ವಕಲ್ಯಾಣ ಕಾರಣಂ। ಪ್ರವಕ್ಷ್ಯಾಮಿ ಜಗದ್ಭೂತ್ಯೈಃ ಮುನಿಭಿಶ್ಚ ಪುರಾಕೃತಂ॥ಹೃತಂ ಶಂಕರದೇಹಾರ್ಧಂ ದೇವ್ಯಾ ಯದ್ವ್ರತಚರ್ಯಯಾ । ಯದ್ವ್ರತಾಚರಣಾಲ್ಲೋಕೇ ಸಂಭವಂತಿ ವಿಭೂತಯಃ॥೩॥ಆರೋಗ್ಯಮಾಯುಃ ಕೀರ್ತಿಶ್ಚ ವರ್ಧಂತೇ ಶೃಣ್ವತಾಮಿದಂ । ಏಕವಿಂಶತಿವಾರಾನ್ಯಶ್ಚರತೇ ತದ್ವ್ರತೋತ್ತಮಂ ॥ ೪ ॥ ಇಹಾಮುತ್ರ ಚ ಕಲ್ಯಾಣಂ ವಿದಂತಿ ಧ್ರುವಮುತ್ತಮಂ । ವ್ರತಂ ಸಮಾಚರನ್ಮರ್ತ್ಯಃಸೌಭಾಗ್ಯಂ ಕಾಂತಿಮೇವ ಚ ॥ ೫ ॥ ಆಯುಶ್ಶ್ರಿಯಂ ಚ ಲಭತೇ ಶಿವಲೋಕೇ ಮಹೀಯತೇ। ತಸ್ಮಾದ್ದ್ವಿಜೋ ವಾ ರಾಜೋ ವಾ ವೈಶ್ಯೋ ವಾ ಶೂದ್ರ ಏವ ವಾ॥ ಯೇಚಾಪ್ಯನ್ಯೇ ನರಾಕುರ್ಯಾತ್ಸಂಯು

ತಾ ವ್ರತಮುತ್ತಮಂ ॥ ಅಸ್ತಿ ಪೂರ್ವೋತ್ತರೇ ಭಾಗೇ ಪೃಥಿವ್ಯಾಂ ಧರಣೀಧರಃ ॥೭॥
ಕೈಲಾಸ ಇತಿ ವಿಖ್ಯಾತಶ್ಶ್ರೀಮಾನ್ ಲೋಕನಮಸ್ಕೃತಃ।ರಾಜತೈರ್ವಿಮಲೈಶ್ಶೃಂಗೈಸ್ಸರ್ವ
ರತ್ನವಿಚಿತ್ರಿತೈಃ । ತಟಿದ್ಗಣಸಮಾಕೀರ್ಣೈಶ್ಶಾರದಾಭ್ರೈರ್ನಭಸ್ಥಿತೈಃ ॥ ನಾನಾದ್ರು
ಮಲತಾಕೀರ್ಣೈರ್ನಾನಾಪುಷ್ಪಫಲೈರ್ಯುತೈಃ । ನಾನಾವಿಹಸಂಪೃಷ್ಟೈರ್ನಾನಾನಿರ್ಝರ
ಸಂಕುಲೈಃ । ಸಾಲೈಸ್ತಮಾಲೈಸ್ತಿಲಕೈರ್ಹಿಂತಾಳೈರ್ವಕುಳೈರಪಿ। ಅಶೋಕೈಃ ಕರಕೈರ್ನಿಂ
ಬೈಶ್ಚಂದನೈರ್ದೇವದಾರುಭಿಃ । ನಾರಿಕೇಳಾಮ್ರಪನಸ ಪೂಗಪುನ್ನಾಗಚಂಪಕೈಃ ॥ ಏತೈ
ಶ್ಚಾನ್ಯೈರ್ವೃಕ್ಷೈಶ್ಚ ತರುಭಿಶ್ಶೋಭಿತಂ।ಪುಣ್ಯಕಾನನಂ।ಏತಸ್ಯ ಶಿಖರೇ ರಮ್ಯೇ ಯೋಗಿಬೃಂದ
ನಿಷೇವಿತೇ ॥ ೧೨ ॥ ಯಕ್ಷಕಿನ್ನರಗಂಧರ್ವಸಿದ್ಧವಿದ್ಯಾಧರೈರ್ವೃತೇ । ಸದಾವಸತಿ
ವಿಶ್ವಾತ್ಮಾ ಪಿನಾಕೀ ಪ್ರಮಥೈರ್ವೃತಃ ॥೧೩॥ ಅಂಬಿಕಾಸಹಿತಶ್ಶ್ರೀಮಾನ್ ಸರ್ವದೇವ
ನಮಸ್ಕೃತಃ।ಏಕದಾ ತಸ್ಯ ಶಿಖರೇ ರುದ್ರಾಣೀ ಸಹಿತಶ್ಶಿವಃ ॥೧೪॥ ತಥಾ ಪ್ರಕುರ್ವನ್
ವಸತಿಂ ಸುರಾಣಾಂ ದರ್ಶನಂ ದದೌ। ಅಗ್ನಿರ್ವಾಯುಸ್ತಥಾದಿತ್ಯಶ್ಚಂದ್ರಮಾಸ್ಸಹ
ತಾರಕಃ॥ಬ್ರಹ್ಮಾದಯೋ ವಸಿಷ್ಠಾದ್ಯಾಸ್ತೇ ಸರ್ವೇ ತಂ ನಿಷೇವಿರೇ । ರಂಭಾ ತಿಲೋ
ತ್ತಮಾ ಚೈವ ಘೃತಾಚೀ ಸಹಮೇನಕಾ॥೧೬॥ಯಾಶ್ಚಾನ್ಯಾ ದೇವವನಿತಾಃ ಪರಿತಸ್ತುಃ
ಪಿನಾಕಿನಂ।ಮಾತರಶ್ಚಂಡಿಕಾದ್ಯಾಶ್ಚ ಕಾರ್ತಿಕೇಯೋ ಗಜಾನನಃ॥೧೭॥ನಂದ್ಯಾದಯೋ
ದೇವಗಣಾಸ್ಸಾರೂಪ್ಯ ಸಹಿತಾಸ್ಥಿತಾಃ । ಏವಂ ಪ್ರವರ್ತಮಾನಾಯಾಂ ಸಭಾಯಾಂ
ರುದ್ರಸನ್ನಿಧೌ ॥೧೮॥ ನಾರದಪ್ರಮುಖಾಸ್ತತ್ರ ಜಗುಸ್ತೇನ ಪ್ರಚೋದಿತಾಃ । ತೇಷಾಂ
ಪವೃತ್ತೇ ಮಧುರೇ ಗೀತೇ ಸರ್ವಮನೋಹರೇ ॥ ೧೯ ॥ ವಾದಿತ್ರಲಯಸಂಯುಕ್ತಾ
ನನೃತುಶ್ಚಾಪ್ಸರೋ ಗಣಾಃ । ತಾಸಾಮಪ್ಸರಸಾಂ ಮಧ್ಯೇ ರಂಭಾ ಸರ್ವಾಂಗಸುಂದರೀ
॥ ೨೦ ॥ ಮಧುರಂ ಲಾಸ್ಯಮಕರೋತ್ಸರ್ವಗೀರ್ವಾಣಸಮ್ಮತಂ । ತತ್ರ ಭೃಂಗಿರಿಟಿ
ರ್ನಾಮ ಸಮಯೈಶ್ಶಿವಸಮ್ಮತಂ ॥೨೧॥ ಅದ್ಭುತಾಂ ವಿಕಟಂ ನೃತ್ತಮಕರೋಚ್ಛಿವ
ಸನ್ನಿಧೌ । ತತ್ರ ಪ್ರವರ್ತತೇ ಹಾಸಸ್ಸುರಾಣಾಂ ಶಿವಯೋ ಪುರಃ ॥ ಮಹಾನ್ ಕಲ
ಕಲಶ್ಚಾಸೀದ್ಗಿರಿಕಂದರಪೂರಣಃ। ಏವಂ ಪ್ರಹಸನಾಂತೇ ತು ಶ್ರೀಮಾನ್ ಸರ್ವೇಶ್ವರೋಽ
ಬ್ರವೀತ್ ॥ ೨೩ ॥ ಸಾಧು ಭೃಂಗೀರಿಟೆ ಸಮ್ಯಕ್ಕೃತಂ ಪ್ರಾಹಸನಂ ತ್ವಯಾ ।
ಇತ್ಯುಕ್ತ್ವಾ । ಭಗವಾನ್ ತಸ್ಮೈ ಪ್ರಸಾದಮಕರೋದ್ವಿಭುಃ ॥ ೨೪ ॥ ಹರಪ್ರಸಾದಾ
ತ್ಸುಪ್ರೀತಸ್ಸುರೈಶ್ಚ ಸುಬಹೂಕೃತಃ।ಹರಂ ಪ್ರದಕ್ಷಿಣೀಕುರ್ವನ್ ವಿನಾ ದೇವೀಂ ಸಮಾ
ಹಿತಃ । ಪ್ರಣಾಮಮಕರೋತ್ತಸ್ಮೈ ವಿನಯಾದಿಸಮನ್ವಿತಃ।ತತೋ ದೇವ್ಯಬ್ರವೀದ್ವಾ
ಕ್ಯಂ ದೇವಮುದ್ದೀಕ್ಷ್ಯ ಸಸ್ಮಿತಾ ॥ ೨೬ ॥ ಮದ್ಭಾಗಂ ಪರಿವೃತ್ಯಾಸೌಽ ಕೃತವಾನ್
ತ್ವತ್ಪ್ರದಕ್ಷಿಣಂ । ಪ್ರಣಾಮಸ್ಯ ಕಿಮೇತಸ್ಯ ಕಾರಣಂ ಪರಮೇಶ್ವರ ॥೨೭॥ ಬ್ರೂಹಿ
ಮೇ ತತ್ತ್ವತಸ್ಸರ್ವಂ ಶ್ರೋತಾಂ ಕೌತೂಹಲಂ ಹಿ ಮೇ।ತಯೈವಮುಕ್ತೋ ಭಗವಾನ್
ಬಭಾಷೇ ಶಶಿಶೇಖರಃ ॥ ೨೮ ॥ ಯೋಗಿನೋ ನನುಮಂತ್ವಾ ತಂ ಪರಮಾರ್ಥವಿದಃ
ಪ್ರಿಯೇ । ಯೇ ಭಜಂತಿ ಪ್ರಿಯತ್ವಾಂತು ತೇಷಾಂ ನಾಸ್ತಿ ಪ್ರಯೋಜನಂ ॥ ೨೯ ॥
ಇತ್ಯುಕ್ತಾ ಸಾ ಮೇಶೇನ ತಾಜಪ್ರಿಯಮೀಶ್ವರೀ । ಶಕ್ತ್ಯಾದಿನಾಕೃತಸ್ತ್ವೋಽಥ ತ್ವಗಸ್ಥಿ
ವಿಷಮಾಂಗಭೃತ್ ॥ ೩೦ ॥ ಅಂಬಾ ತ್ವಗಸ್ಥಿ ತೇಷಾಸೌ ಸಂಸಾರ ವಿಕಟಾಽಭವತ್ ।

ತತಸ್ತು ದೇವೀ ಕುಪಿತಾ ದೇವತಾಭಿಃ ಪ್ರಸಾದಿತಾ ॥ ಜಗಾಮ ತ್ಯಕ್ತ್ವಾ ಕೈಲಾಸಂ
ವಂದೇ ಗೌತಮಮಾಶ್ರಮಂ । ಸಿಂಹೈರ್ವ್ಯಾಘ್ರೈಶ್ಚ ಶಾರ್ದೂಲೈರ್ಹರಿಣ್ಯೈಶ್ಚ ನಿಷೇವಿತಂ
॥ ೩೨ ॥ ಪನ್ನಗೈರ್ಗರುಡೈಶ್ಚಾಪಿ ವಿಮುಕ್ತಾನ್ಯೋನ್ಯಮತ್ಸರೈಃ । ನಾನಾದ್ರುಮಲತಾ
ಕೀರ್ಣಂ ಸೇವಿತಂ ಪರಮರ್ಷಿಭಿಃ ॥ ೩೩ ॥ ಸರ್ವಲೋಕಪ್ರಿಯಕರಂ ಸರ್ವಕಾಮ
ಫಲಪ್ರದಂ । ಗೌತಮೋಽಪಿ ಮಹಾತೇಜಾ ಸಮಿತ್ಕುಶಫಲಾನಿ ಚ ॥ ೩೪ ॥ ವನ್ಯಾಪಿ
ಹೋಮಯೋಗ್ಯಾನಿ ವನಾದಾಹೃತ್ಯ ನಿರ್ಗತಃ । ಮುನಿಸ್ತು ಸ್ವಾಶ್ರಮಾಭ್ಯಾಸೇ ಶೋಭಾ
ಮುದ್ವೀಕ್ಷ್ಯ ವಿಸ್ಮಿತಃ ॥ ೩೫ ॥ ಕಿಮಿದಂ ತಾಪಸಾರಣ್ಯಮಿದಾನೀಂ ಶೋಭತೇ
ಭೃಶಂ । ಇತಿ ಚಿಂತಾಸಮಾವಿಷ್ಟೋ ವಿವೇಶ ಸ್ವಾಶ್ರಮಂ ಮುನಿಃ ॥ ೩೬ ॥ ಪ್ರವಿಶ
ಪದ್ಮಪತ್ರಾಕ್ಷೀಂ ಭವಾನೀಂ ವೀಕ್ಷ್ಯ ಭೂಷಿತಾಂ ॥ ಸೋಽಪೃಚ್ಛದಭಿಪೂಜ್ಯೈನಾಂ
ತತ್ರಾಗಮನಕಾರಣಂ ॥೩೭॥ ಪೃಷ್ಟಾ ಸಾ ಮುನಿನಾ ದೇವೀ ಸ್ವವಿವಾದಸ್ಯ ಕಾರಣಂ ।
ಉಕ್ತ್ವಾ ಚ ಸುಖಮಾಸೀನಂ ಪ್ರಣಮ್ಯ ಪುನರಬ್ರವೀತ್ ॥ ೩೮ ॥ ಭಗವನ್ ಹರದೇ
ಹಾರ್ಧಂ ಯಾದೃಶೇನಾಪ್ಯತೇ ಮಯಾ । ತಾದೃಶಂ ಮೇ ವ್ರತಂ ಬ್ರೂಹಿ ಯದ್ಭವೇ
ದ್ಯೋಗಿಸಂಮತಂ ॥ ೩೯ ॥ ತಚ್ಛ್ರುತ್ವಾ ತು ಮಹಾತೇಜಾ ಭವಾನ್ಯಾ ವಾಕ್ಯಮೀರಿ
ತಂ । ಸಮೀಕ್ಷ್ಯ ಸರ್ವಶಾಸ್ತ್ರಾಣಿ ಪುರಾಣಾನಿ ಚ ಸರ್ವಶಃ ॥ ೪೦ ॥ ಅಭೀಷ್ಟ
ವರದಂ ಚೈವ ಶ್ರೀಮತ್ಕೇದಾರನಾಮಕಂ । ಆಚಚಕ್ಷೇ ಮುನಿವರೋ ಭವಾನ್ಯೈ ಸುವ್ರ
ತಂ ಮಹತ್ ॥ ೪೧ ॥ ಸಾ ಪರಾಚಾಬ್ರವೀದ್ವಾಕ್ಯಂ ವ್ರತಸ್ಯಾಸ್ಯ ವಿಧಿಕ್ರಮಃ ಕಥಂ ।
ಕಥಯ ತಂ ದೇವ ಯಥಾಶಾಸ್ತ್ರಪ್ರಚೋದಿತಂ ॥೪೨॥ ಏವಂ ಬ್ರುವಾಣಾಂ ತಾಂ
ದೇವೀಮುವಾಚ ಮುನಿಪುಂಗವಃ । ಮಾಸಿ ಆಶ್ವಯುಜೇಽಷ್ಟಮ್ಯಾಂ ಶುಕ್ಲಪಕ್ಷೇ ಸಮಾ
ಹಿತಃ ॥೪೩॥ ಕ್ಷೌಮೇ ಕಾರ್ಪಾಸಕೈರ್ವಾಪಿ ಯಥಾರುಚಿಸುಶೋಭನೈಃ । ಹಸ್ತೇ ಬದ್ಧ್ವಾ
ಪ್ರತಿಸರಂ ಹ್ಯೇಕವಿಂಶತಿತಂತುಭಿಃ ॥ ೪೪ ॥ ಉಪೋಷ್ಯ ರಜನೀಂ ತಾಂ ತು ಕೃತ್ವಾ
ಬ್ರಾಹ್ಮಣಭೋಜನಂ । ತದಾರಭ್ಯ ಪ್ರಕರ್ತವ್ಯಮಮಾವಾಸ್ಯಾವಧಿವ್ರತಂ ॥ ೪೫ ॥
ನಿತ್ಯಂ ಪ್ರಾತಸ್ಸಮುತ್ಥಾಯ ಕೃತ್ವಾ ಪೂಜಾಂ ಪ್ರಯತ್ನತಃ । ಕೇದಾರದೇವಪೂಜಾಂ
ತು ಕುರ್ಯಾದಪಿ ವಿಶೇಷತಃ ॥೪೬॥ ವಿವಿಕ್ತೇಽಯಾಶುಚಿದೇಶೇ ತು ಧಾನ್ಯರಾಶಿಂ ನಿಧಾಯ
ಚ । ತಸ್ಯೋಪರಿ ನಿಧಾಯಾಥ ಪೂರ್ಣಕುಂಭಂ ಸುಶೋಭನಂ ॥೪೭॥ ಸಂವಿಷ್ಟ್ಯ
ಸೂತ್ರಜಾಲೈಶ್ಚ ಹ್ಯೇಕವಿಂಶತಿ ಸಂಖ್ಯಕೈಃ । ಕ್ಷೌಮೇನ ವಾ ದುಕೂಲೇನ ಕಾರ್ಪಾಸೇನಾ
ಪಿ ವೇಷ್ಟಯೇತ್ ॥೪೮॥ ನವರತ್ನಾನಿ ವಾ ತಸ್ಮಿನ್ ಸ್ವರ್ಣಂ ವಾ ತಥಾ ಫಲಂ । ನಿಧಾಯ
ಗಂಧಪುಷ್ಪಾದ್ಯೈರರ್ಚಯಿತ್ವಾ ಯಥಾವಿಧಿ ॥ ೪೯ ॥ ತ್ರಿಸಪ್ತಸಂಖ್ಯಕಾನ್ ದೇವಿ
ಬ್ರಾಹ್ಮಣಾನ್ ವೇದಪಾರಗಾನ್ । ಸಮಾಹೂಯ ಪ್ರತಿಷ್ಠಾಪ್ಯ ಪಾದಶೌಚಂ ವಿಧಾಯ ಚ
॥ ೫೦ ॥ ಪೂಜಯೇದಥ ತಾನ್ ಸರ್ವಾನ್ ಪುರೋಹಿತಪುರಸ್ಸರಾನ್ । ತತಃ ಕೇದಾರ
ದೇವಸ್ಯ ಕುರ್ಯಾದಾವಾಹನಂ ಪುನಃ ॥೫೧॥ ಆವಾಹ್ಯ ದೇವಂ ತತ್ರೈವ ಪ್ರತಿಷ್ಠಾಪ್ಯ
ಯಥಾವಿಧಿ । ಚಂದನಾಗರುಕರ್ಪೂರ ಕಸ್ತೂರೀ ಕುಂಕುಮಾದಿಕಾನ್ ॥ ಗಂಧಾಶ್ಚ
ವಿವಿಧಾನ್ ದೇವಿ ಪುಷ್ಪಾಣಿ ವಿವಿಧಾನಿ ಚ । ತಾಂಬೂಲಾನಿ ವಿಚಿತ್ರಾಣಿ ವಾಸಾಂಸಿ ಚ

ನಿವೇದಯೇತ್ ॥ ೫೩ ॥ ಪುಷ್ಪೈರಭ್ಯರ್ಚ್ಯ ವಿಧಿವದ್ಧೂಪದೀಪಾದಿಭಿಃ ಶಿವಂ। ಗೋಧೂಮಪಿಷ್ಟಸಂಕ್ಲಿಪ್ತಾದೇಕವಿಂಶತಿ ಸಂಖ್ಯಕಾನ್ ॥ ೫೪ ॥ ಅಪೂಪಾನ್ಕೃಷ್ಟಮನ್ನಂ ಚ ಪಾಯಸಂ ಗಂಡಸಂಯುತಂ । ದಧ್ಯಾಜ್ಯಮಧುಸಂಯುಕ್ತಮನೇಕೈರ್ವ್ಯಂಜನೈರ್ಯುತಂ ॥ ೫೫ ॥ ಫಲೈರನೇಕೈಸ್ಸಂಪೂರ್ಣಂ ಕದಳೀಪನಸಾಮ್ರಕೈಃ। ಸರ್ವಾನ್ನೈವೇದ್ಯ ದೇವಾಯ ಕೃತ್ವಾ ಚಾಚಮನೀಯಕಂ ॥೫೬॥ ತಾಂಬೂಲಂ ಚ ನಿವೇದ್ಯಾಥ ಸ್ತೋತ್ರಂ ಕುರ್ಯಾದ್ಯಥೇಪ್ಸಿತಂ॥ ಕೃತ್ವಾ ದೇವಸ್ಯ ಪೂಜಾಂ ಚ ದೇವಿ ಕೇದಾರನಾಯಕಂ ॥೫೭॥ ಯಥಾಶಕ್ತಿ ಸುವರ್ಣಾದಿ ಬ್ರಾಹ್ಮಣೇಭ್ಯಃ ಪ್ರದಾಯ ಚ।ವ್ರತಂ ಸಾಮಪ್ಯ ವಿಧಿವತ್ ಪ್ರೀಣಹುಸ್ವ ತ್ರಿಲೋಚಂ ॥ ಇತ್ಯಾಚಕ್ಷೇ ಮುನಿವರೋ ಯಥಾಶಾಸ್ತ್ರಾನುಸಾರತಃ । ತತಃ ಪ್ರೀತೋ ಮಹಾದೇವಸ್ಸರ್ವ ದೇವಗಣೈಸ್ಸಹ । ಆಗತ್ಯ ಸ್ವಶರೀರಾರ್ಧಂ ಭವತ್ಯೈ ದಾಸ್ಯತಿ ಸ್ವಯಂ ॥ ಏತಚ್ಛ್ರವಾಣೀ ಸುಪ್ರೀತಾ ಶ್ರುತ್ವಾ ಗೌತಮಭಾಷಿತಂ।ಯಥಾನಿರ್ದಿಷ್ಟಮೃಷಿಣಾ ತಥಾ ಸರ್ವಂ ಸಮಾಚರೇತ್ ॥೬೦॥ ತತಃ ಪ್ರೀತಮನಾ ಭೂತ್ವಾ ಭಗವಾನ್ ವೃಷಭಧ್ವಜಃ। ಗತ್ವಾ ದೇವಗಣೈಸ್ಸಾರ್ಧಂ ಸ್ವದೇಹಾರ್ಧಂ ದದೌ ಹರಃ ॥೬೧॥ ತತೋ ಭವಾನೀ ಸುಪ್ರೀತಾ ಶಂಕರಾರ್ಧಂ ಸಮೇತ್ಯ ಚ।ದೇವಂ ಪ್ರಸಾದಯಾಮಾಸ ಲೋಕಾನಾಂ ಹಿತಕಾಮ್ಯಯಾ ॥೬೨॥ ದೇವಪ್ರಸಾದಾತ್ತೇ ಲೋಕೇ ಚರಂತ್ಯೇತದ್ವ್ರತಂ ಜನಾಃ । ಯೋಽಯಂ ಪ್ರಾರ್ಥಯತೇ ಬುದ್ಧ್ಯಾ ತತ್ಸರ್ವಂ ಸಮವಾಪ್ನುಯಾತ್ ॥ ೬೩ ॥ ಇತಿ ಪ್ರಸಾದಿತೋ ದೇವ್ಯಾ ಭಗವಾನಂಬಿಕಾಸಖಃ । ತಥೇತ್ಯುಕ್ತ್ವಾ ಸುರಗಣೈಸ್ತತ್ರೈವಾಂತರಧೀಯತ॥೬೪॥ ತತಶ್ಚಿತ್ರಾಂಗದೋ ನಾಮ ಗಂಧರ್ವಶ್ಶಿವಭಕ್ತಿಮಾನ್ । ವ್ರತಾಚರ್ಯಾಂ ಕ್ರಮಂ ಲೇಭೇ ನಂದಿಕೇಶ್ವರ ಪಾರ್ಶ್ವತಃ ॥ ಮನುಷ್ಯ ವಿಷಯಂ ಪ್ರಾಪ್ಯ ವ್ರತಮೇತದಿಶಾಮ್ಯಹಂ। ಏವಂ ಸ ತು ವಿನಿಶ್ಚಿತ್ಯ ಜಗಾಮೋಜ್ಜಯಿನೀಂ ಪುರೀಂ ॥ ೬೬ ॥ ವಜ್ರದಂತಾಯ ವಿಧಿವದ್ದದೌ ರಾಜ್ಞೀಂ ವ್ರತಂ ಸುಧೀಃ । ವ್ರತಮೇನತ್ಮನುಷ್ಠಾಯ ಸಮಹಾನಭವತ್ಪ್ರಭುಃ ॥ ೬೭ ॥ ಅಥಾ ಭಗತಾಂ ವೈಶ್ಯಸುತೇ ತಸ್ಯಾಂ ಚ ಪುರಿಕನ್ಯಕೇ । ಏಕಾಂ ಪುಣ್ಯವತೀಂ ಪ್ರಾಹುರನ್ಯಾಂ ಭಾಗ್ಯವತೀಂ ವಿದುಃ ॥೬೮॥ ತೇ ಕನ್ಯೇಽಪಿ ಶರಂ ಪ್ರಾಪ್ಯ ಬಭಾಷಾತೇ ಪ್ರಿಯಂ ವಚಃ ಮಹತ್ಕೇದಾರದೇವಸ್ಯ ವ್ರತಂ ಕರ್ತುಂ ಪ್ರತೀಪಸಾ॥೬೯॥ ತಾಭ್ಯಾಮೇವಂ ನಿಗದಿತೇ ಪಿತ್ರೇ ತಂ ವಾಕ್ಯಮಬ್ರವೀತ್ । ವತ್ಸೇ ಬ್ರೂತಂ ದರಿದ್ರೋಽಹಂ ಕಥಮಾಸಾದ್ಯತೇ ಮಯಾ ॥೭೦॥ ಸಾಮಗ್ರಿ ಚಾಪ್ಯ ನಾಸ್ತ್ಯೇವ ಯುವಾಭ್ಯಾಂ ತದ್ವಿಮುಚ್ಯತಾಂ । ಇತಿ ಪಿತ್ರಾ ಸಮಾಚಷ್ಟೇ ಕನ್ಯೇ ಪುನರವೋಚ ತಂ॥೭೧॥ ಅನುಜ್ಞಾ ತೇ ತ್ವಯಾ ತಾತ ಕರ್ತುಮುಚ್ಛ್ರವ ಸುವ್ರತ । ತ್ವದನುಜ್ಞೈವ ನಿಯತಮಾವಯೋಃ ಪರಮಂ ಧನಂ ॥ ೭೨ ॥ ಇತ್ಯುಕ್ತ್ವಾ ತೇನ ವೈಶ್ಯೇನ ಕೃತಾರಾಜ್ಞೇಽಥ ಕನ್ಯಕೇ । ಕಸ್ಮಿಂಶ್ಚಿದ್ರುಚಿರೇ ದೇವೇ ವೃಕ್ಷ ಸಮಾಶ್ರಿತಃ ॥ ೭೩ ॥ ಬದ್ಧ್ವಾ ಪ್ರತಿಸರಂ ತತ್ರ ಚಕಾತೇರ್ಚ್ಚಾಂ ಯಥಾವಿಧಿ । ಏತಯೋರ್ಭಕ್ತಿ ಶೀಲೇನ ತತ್ಸಾಮಗ್ರೀಂ ದದೌ ಹರಃ॥೭೪॥ ವ್ರತಚರ್ಯಾಂ ಸಮಾಸಾದ್ಯ

ಪ್ರೀತ್ಯೈ ವೈ ಚಕ್ರತುರ್ವ್ರತಂ । ತತಃ ಪ್ರೀತೋ ಮಹಾದೇವಸ್ಸಾಂಬಸ್ಸನ್ನಿಹಿತೋ ಭವತ್ ॥ ಸ ತಯೋಃ ಕನ್ಯಯೋಃ ಪ್ರೀತೋ ರೂಪಮಪ್ಸರಸಾಂ ದದೌ । ಆನಂತ ಮಾಯುರೈಶ್ವರ್ಯಂ ದತ್ವಾ ಸೋಂತರ್ಹಿತೋ ಭವತ್ ॥೭೬॥ ಅಥ ಪುಣ್ಯವತೀಂ ವವ್ರೇ ರಾಜಾಹ್ಯುಜ್ಜಯಿನೀಂ ಪತಿಃ । ಅಚಿರಂ ಚೋಳಭೂಪಾಲೋ ನಾಮ್ನಾ ಭಾಗ್ಯವತೀಂ ತಥಾ ॥೭೭॥ ದತ್ವಾತ್ಮಜೇ ತದಾ ವೈಶ್ಯಸ್ಸಮೃದ್ಧೋಽನ್ವವಸತ್ಸುಖಂ । ಸಾಮ್ರಾಜ್ಯ ಸಂಪದಂ ಪ್ರಾಪ್ಯ ಪುತ್ರಾನ್ ಲಬ್ಧ್ವಾ ಮಹೌಜಸಃ ॥೭೮॥ ತೇ ಸುತೇ ಪಿತರಂ ಹೃಷ್ಟಂ ಚಕ್ರಾಂತೇ ಮಾತರಂ ತಥಾ । ಅಥ ಭಾಗ್ಯವತೀ ಕಾಮಮೈಶ್ವರ್ಯಮದಮೋಹಿತಾ ॥೭೯॥ ಗತೇ ಬಹುತಿಥೇ ವ್ರತಮೇತನ್ಮಮೋಚ ಸಾ । ಸೌಭಾಗ್ಯಹೀನಾ ಪುತ್ರೇಣ ಸಹ ಭರ್ತ್ರಾ ನಿವಾಸಿತಾ ॥ ವನಸಂಚಾರಖಿನ್ನಾ ಹಿ ಜಗಾಮ ಶಬರಾಲಯಂ। ತತಃ ಪುತ್ರಂ ಸಮಾಹೂಯ ವಾಕ್ಯಮೇತದುವಾಚ ಸಾ ॥ ೮೧ ॥ ಉಪಯೇಮೇ ಸ್ವಸಾ ರಮ್ಯೋ ಜ್ಯೇಷ್ಠಾಮುಜ್ಜಯಿನೀಪತಿಃ । ತಾಂ ದೃಷ್ಟ್ವಾ ಧನಮಾದಾಯ ಶೀಘ್ರಮಾಗಚ್ಛ ಪುತ್ರಕ ॥ ಇತಿ ಮಾತುರ್ವಚಃ ಶ್ರುತ್ವಾ ಜಗಾಮೋಜ್ಜಯಿನೀಂ ಪುರೀಂ ॥ ೧೩ ॥ ಪತ್ಯಾ ನಿವೇದಯಾಮಾಸ ಪುಣ್ಯವತ್ಯೈ ಸಪುತ್ರಕಃ । ಮಾತುರ್ನಿವಾಸಿತಂ ರಾಜ್ಯಾದ್ವನವಾಸಂಚ ಮತ್ಸಹ ॥ ತತಃ ಪುಣ್ಯವತೀ ಶ್ರುತ್ವಾ ದದೌ ತಸ್ಮೈ ಮಹದ್ಧನಂ । ಧನಮಾದಾಯ ಸುಪ್ರೀತಃ ಪ್ರಯಯೌ ಮಾತರಂ ಪ್ರತಿ॥೮೫॥ಗಚ್ಛನ್ಮಾರ್ಗೇ ಹೃತಸ್ತೇಽಮೋ ಭೂದ್ದೇವೀಸಾಽದೃಶ್ಯರೂಪಿಣಾ । ಪುನರ್ಗತ್ವಾ ಧನಂ ಗುಹ್ಯಂ ಪಚ್ಛತಸ್ತಸ್ಯ ತದ್ವನಂ॥ ॥೮೬॥ ಜಹಾರೇಶೋ ಜಗಾದೈನಂ ನಿತರಾಂ ದೀನಮಾನಸಂ । ಗಚ್ಛ ಭಾಗ್ಯ ಮಹೋ ಪುತ್ರ ಮಾ ಷಾದಂ ವೃಥಾಕೃಥಾಃ ॥೮೭॥ ಅಯೋಗ್ಯಂ ಭೂತೋಹ್ಯೇತದ್ವ್ರತಂ ಮೇ ಚರತಾಂ ಧನಂ । ಇತಿ ಶ್ರುತ್ವಾ ವಚಸ್ತಸ್ಯ ಕಿಮೇತದಿತಿ ವಿಸ್ಮಿತಂ ॥೮೮॥ ಪುಣ್ಯವತ್ಯೈ ಜಗಾದೈತತ್ಸರ್ವಂ ಗತ್ವಾ ಶತಸ್ತದಾ । ಸಾ ತದ್ವಿಜ್ಞಾಯ ನಿಪುಣಃ ಕಾರಯಾಮಾಸ ತದ್ವ್ರತಂ ॥ ಭಗಿನ್ಯಾ ಚ ಯಥಾಪೂರ್ವಂ ಕ್ರಿಯಾತಾಮಿತ್ಯುವಾಚ ಹ । ವ್ರತಾಂತೇ ಧನಮಾಹೃತ್ಯ ಗಚ್ಛ ಪೂರ್ವಕೃತಂ ಕಥಂ॥೯೦॥ ಸಂಪ್ರಾಪ್ತತತ್ತದೇಕಾಂತೀ ಪ್ರೀತಃ ಸ್ಥಿತ್ವಾ ಮಹದ್ಧನಂ । ಆದಾಯ ಮಹತೀಂ ಸೇನಾಂ ಗಜಾಶ್ವರಥ ಸಂಕುಲಾಂ ॥೯೧॥ ಜಗಾಮ ಕಾಂಚೀನಗರಂ ಪ್ರೀತಾ ಪ್ರತ್ಯುತೋಽಬ್ರವೀತ್ । ಮಾತ್ರಾ ಪಿತ್ರಾ ಚ ಸಹಿತಶ್ಚಿರಕಾಲಮವರ್ತತ ॥ ೯೨ ॥ ತದಾಪ್ರಭೃತಿ ಮಾತಾ ಚ ಚಕಾರ ವ್ರತಮಾದರಾತ್ । ಸಚ ಚೋಳನೃಪಃ ಪ್ರೀತಸ್ತದಾಪ್ರಭೃತಿ ತದ್ವ್ರತಂ ॥೯೩॥ ಯಥೋಕ್ತೇನ ವಿಧಾನೇನ ಯಃ ಕರೋತೀಪ್ಸಿತಂ ಲಭೇತ್ ॥ ಇತಿ ವ್ರತಸ್ಯ ಮಹಾತ್ಮ್ಯಂ ಯಃ ಶೃಣ್ವಂತಿ ಪಠಂತಿ ವಾ ॥೯೪॥ ತೇಷಾಮಪಿ। ಮಹಾದೇವಃ ಪ್ರೀತೋ ಭವತಿ ಸರ್ವದಾ। ಆಯುಷ್ಕರಂ ಪುಷ್ಟಿಕರಂ ಶ್ರೀಕರಂ ಚ ಯಶಸ್ಕರಂ ॥೯೫॥ ವ್ರತಮೇತತ್ಸಮುದ್ದಿಷ್ಟಂ ಗೌತಮೇನ ಮಹಾತ್ಮನಾ । ಆತ್ಮನೋಽಹಿತಕಾಂಕ್ಷನ್ಸ್ತ್ರಮೇತತ್ಸಮಾಚರೇತ್ ॥೯೬॥ ಮಹತೀಂ ಸಂಪದಂ ಪ್ರಾಪ್ಯ ಶಿವಸಾಯುಜ್ಯಮಶ್ನುತೇ ॥

ಇತಿ ಶ್ರೀಸ್ಕಾಂದಪುರಾಣೋಕ್ತಕೇದಾರವ್ರತಕಥಾ ಸಮಾಪ್ತಾ

ಅಥ ಕೇದಾರೇಶ್ವರವ್ರತ ಕಥಾಸಂಗ್ರಹ.

ಋಷಿಶ್ರೇಷ್ಠರಾದ ಶೌನಕಾದಿ ಮುನಿಗಳು ಪುರಾಣಿಕನಾದ ಸೂತಮಹಾಮುನಿಯನ್ನು ಕುರಿತು ವ್ರತಗಳಲ್ಲಿ ಸರ್ವೋತ್ತಮವಾದ ವ್ರತವನ್ನು ನಿರೂಪಿಸಬೇಕೆಂದು ಕೇಳಲು ಸೂತ ಮಹರ್ಷಿಯು ಶೌನಕಾದಿಗಳನ್ನು ಕುರಿತು ಎಲೈ ಋಷಿಗಳಿರಾ! ಕೇಳಿ ಪೂರ್ವದಲ್ಲಿ ಪರ ಮೇಶ್ವರನಿಂದ ಪಾರ್ವತೀದೇವಿಗೆ ಹೇಳಲ್ಪಟ್ಟ ಸಕಲ ಶ್ರೇಯಸ್ಕರವಾದ ಸರ್ವೋತ್ತಮವಾದ ಒಂದು ವ್ರತವುಂಟು. ಅಂಥ ಕೇದಾರೇಶ್ವರವ್ರತದ ಮಹಾತ್ಮ್ಯೆಯನ್ನು ನಾನು ನಿಮಗೋಸ್ಕರ ವಾಗಿ ಹೇಳುತ್ತೇನೆ. ಸಾವಧಾನಚಿತ್ತರಾಗಿ ಕೇಳಿ! ಈ ಕೇದಾರೇಶ್ವರವ್ರತವನ್ನು ಪಾರ್ವತೀ ದೇವಿಯು ಮಾಡಿ ಈಶ್ವರನ ಅರ್ಧಾಂಗದಲ್ಲಿ ಸೇರಿದಳು. ಈ ವ್ರತವನ್ನು ಬ್ರಹ್ಮ ಕ್ಷತ್ರಿಯ ವೈಶ್ಯ ಶೂದ್ರರಲ್ಲಿ ಯಾರಾದರೂ ಮಾಡಬಹುದು. ಈ ವ್ರತಾಚರಣೆಯಿಂದ ಲೋಕದಲ್ಲಿ ಸರ್ವರೂ ಆಯುರಾರೋಗ್ಯ ಐಶ್ವರ್ಯಗಳನ್ನು ಪಡೆದು ಸುಖಿಸುವರು. ಇಪ್ಪತ್ತೊಂದುದಿನ ಅವಿಚ್ಛಿನ್ನವಾಗಿ ಈ ವ್ರತವನ್ನು ಮಾಡಿದವರು. ಇಹಲೋಕದ ಸಕಲ ಭೋಗಗಳನ್ನೂ ಅನುಭವಿಸಿ ಪರದಲ್ಲಿ ಅತ್ಯುತ್ತಮವಾದ ಶಿವಸಾಯುಜ್ಯವನ್ನು ಪಡೆಯುವರು. ಈ ವಿಚಾರ ದಲ್ಲಿ ಪ್ರಸಿದ್ಧವಾಗಿರುವ ಇತಿಹಾಸವನ್ನು ಈಗ ನಾನು ನಿಮಗೆ ಹೇಳುತ್ತೇನೆ ಕೇಳಿ ಈ ಪ್ರಪಂಚದ ಈಶಾನ್ಯಭಾಗದಲ್ಲಿ ಕೈಲಾಸವೆಂಬ ಪರ್ವತವುಂಟು. ಅದು ಅನೇಕ ದಿವ್ಯ ರತ್ನಮಯವಾದ ಮನೋಹರ ಶಿಖರಗಳಿಂದ ಕಂಗೊಳಿಸುತ್ತಿರುವುದು. ಅಲ್ಲಿ ಲೋಕಪೂಜ್ಯ ರಾದ ಪಾರ್ವತೀಪರಮೇಶ್ವರರು ವಾಸಮಾಡಿಕೊಂಡಿರುವರು. ಬಗೆಬಗೆಯ ಫಲವೃಕ್ಷಗಳೂ, ನಾನಾವಿಧವಾದ ಪುಷ್ಪಲತೆಗಳೂ, ತಿಳಿನೀರಿನಿಂದ ತುಂಬಿ ಹರಿಯುವ ದೇವನದಿಗಳೂ ಅವುಗಳನ್ನಾಶ್ರಯಿಸಿಕೊಂಡು ಜೀವಿಸುತ್ತಿರುವ ಮೃಗಪಕ್ಷಿಗಳೂ ನಿಬಿಡವಾಗಿ ತುಂಬಿರಲು ಅತ್ಯಂತ ಮನೋಹರವಾದ ಆ ಕೈಲಾಸಪರ್ವತವನ್ನು ಯಕ್ಷ ಕಿನ್ನರ ಕಿಂಪುರುಷ ಗರುಡ ಗಂಧರ್ವ ದೇವಗಣಗಳು ಸದಾ ಸೇವಿಸುತ್ತ ಪರಮೇಶ್ವರನ ಲೀಲಾವಿಲಾಸಗಳನ್ನು ಹೊಗಳಿ ಕೊಂಡಾಡುತ್ತ ಸುಖಿಸುತ್ತಿರುವರು. ಅವರೆಲ್ಲರೂ ಪ್ರಮಥಗಣ ಸಹಿತರಾಗಿ ಪ್ರತಿದಿನವೂ ಪಾರ್ವತೀ ಪರಮೇಶ್ವರರನ್ನು ಪೂಜಿಸಿ ನಮಸ್ಕರಿಸುತ್ತಿದ್ದರು. ಅಂಥ ಭಕ್ತರಿಗೆ ತನ್ನ ಸಾಕಾರ ವನ್ನು ತೋರಿಸಬೇಕೆಂದು ಚಿಂತಿಸಿ ಸಂತುಷ್ಟನಾದ ಪರಶಿವನು ಪಾರ್ವತೀಸಹಿತನಾಗಿ ತನ್ನ ನಿಜರೂಪವನ್ನು ತೋರಿಸಿದನು. ಆಗ ಇಂದ್ರಾದಿ ಅಷ್ಟದಿಕ್ಪಾಲಕರೂ ಹರಿಹರಬ್ರಹ್ಮಾದಿ ತ್ರಿಮೂರ್ತಿಗಳೂ, ದೇವಗಣಗಳೂ, ರಂಭಾದ್ಯಪ್ಸರ ಸ್ತ್ರೀಯರೂ, ಸೂರ್ಯ ಚಂದ್ರರೂ, ನವಗ್ರಹಗಳೂ, ನಕ್ಷತ್ರ ಮಂಡಲದವರೂ, ಕುಮಾರ ಗಣಪತಿಗಳೂ, ದೇವಋಷಿಗಳೂ, ಬ್ರಹ್ಮಋಷಿಗಳೂ, ತುಂಬುರ ನಾರದರೂ ನೆರೆದು ಆನಂದಭರಿತರಾಗಿರಲು ಅಪ್ಸರಸ್ತ್ರೀಯರು ನರ್ತನಮಾಡಿದರು. ನಾರದಾದಿಗಳ ಗಾನವೂ ನಡೆಯಿತು. ಪರಶಿವನ ಪಕ್ಕದಲ್ಲಿ ಪಾರ್ವ ತಿಯೂ ಕುಳ್ಳಿರುವಾಗ ಭೃಂಗಿಯು ತನ್ನ ನಾಟ್ಯಜಾಲವನ್ನು ಬೀರಿ ತೋರಿಸಲು ಪರ ಮೇಶ್ವರನು ಸಂತೋಷಭರಿತನಾಗಿ ಅವನನ್ನು ಹೊಗಳಿ ಆದರಿಸಿದನು. ಕೂಡಲೇ ಶಾಂತ ಚಿತ್ತನಾದ ಭೃಂಗಿಯು ತನ್ನ ಭಕ್ತಿಭಾವವನ್ನು ಮಾತ್ರ ತೋರಿಸಿ ಪರಶಿವನಿಗೆ ಪ್ರದಕ್ಷಿಣೆ ನಮಸ್ಕಾರ ಮಾಡಿ ಪಾರ್ವತಿಗೆ ವಂದಿಸದೆ ಸುಮ್ಮನಾದನು. ಇದನ್ನು ಕಂಡು ಪಾರ್ವತಿಯು ಮಂದಹಾಸಯುಕ್ತಳಾಗಿ ಎಲೈ ದೇವದೇವನೇ! ಈ ಭೃಂಗಿಯು ಈಗ ನನ್ನನ್ನು ಬಿಟ್ಟು ನಿನಗೆ ಮಾತ್ರ ನಮಸ್ಕಾರಮಾಡಿ ಸುಮ್ಮನಾಗಲು ಕಾರಣವೇನು ಎಂದು ಕೇಳಿದಳು. ಆಗ ಪರ ಮೇಶ್ವರನು ಪಾರ್ವತಿಯನ್ನು ಕುರಿತು ಎಲೈ ದೇವಿಯೇ! ಕೇಳು, ಪರಮಾರ್ಥಕಾಂಕ್ಷಿ ಗಳಾದವರಿಗೆ ನಿನ್ನಿಂದ ಯಾವ ಪ್ರಯೋಜನವೂ ಇಲ್ಲವಾದಕಾರಣ ಭೃಂಗಿಯು ನಿನ್ನನ್ನು ಬಿಟ್ಟು ನನಗೆಮಾತ್ರ ನಮಸ್ಕಾರಮಾಡಿದನು. ಇದು ಸತ್ಯವಾದ ಮಾತು ಎಂದು ನುಡಿ ಯಲು ಪಾರ್ವತಿಯು ಅತ್ಯಂತ ಖಿನ್ನಳಾಗಿ ನಾಚಿಕೆಗೊಂಡು ಈಶ್ವರನಲ್ಲಿದ್ದ ತನ್ನ ಶಕ್ತಿ

ಮೂಗನಿಗೂ ಅಂಗಹೀನನಿಗೂ ನಪುಂಸಕನಿಗೂ ಸಹಾ ಯಾರು ಹೆಣ್ಣು ಕೊಡುವುದಿಲ್ಲ. ಹೀಗಿರುವಲ್ಲಿ ನೀನು ಹಣದಾಸೆಯಿಂದ ಸತ್ತಿರುವ ರಾಜಪುತ್ರನಿಗೆ ಮಗಳನ್ನು ಕೊಡಬೇಕೆನ್ನುವೆಯಲ್ಲಾ ಇದು ನ್ಯಾಯವಲ್ಲ ಎಂದು ಬಹಳವಾಗಿ ಹೇಳಿದರೂ ಕೇಳದೆ ಮಾಧವಶರ್ಮನು ರಾಜಪುತ್ರನಿಗೆ ತನ್ನ ಮಗಳನ್ನು ಕೊಡುವಂತೆ ನಿಶ್ಚಯಿಸಿದನು. ರಾಜನಿಗೆ ಈ ವರ್ತಮಾನ ತಿಳಿಯುತ್ತಲೆ ಅವನು ಕೋಟಿದ್ರವ್ಯವನ್ನು ಕೊಟ್ಟು ಮಾಧವಶರ್ಮನ ಮಗಳನ್ನು ಕರೆದುಕೊಂಡು ಹೋಗಿ ತನ್ನ ಮಗನಿಗೆ ಶಾಸ್ತ್ರೋಕ್ತವಾಗಿ ಮದುವೆ ಮಾಡಿಸಿ ಅನಂತರ ಶವವನ್ನು ಸಂಸ್ಕಾರಕ್ಕಾಗಿ ಸ್ಮಶಾನಕ್ಕೆ ತೆಗೆದುಕೊಂಡು ಹೋಗಿ ಚಿತಿಯನ್ನು ನಿರ್ಮಿಸಿ ಅದರಮೇಲೆ ಶವವನ್ನಿಟ್ಟು ಸೊಸೆಗೆ ಬೆಂಕಿಯನ್ನು ಹಾಕುವಂತೆ ಅಪ್ಪಣೆ ಮಾಡಿದನು. ಪತಿಭಕ್ತಿಪರಾಯಣೆಯಾದ ಆ ಹುಡುಗಿಯು ಮನಸ್ಸಿನಲ್ಲಿ ಪರಮೇಶ್ವರನನ್ನು ಧ್ಯಾನಿಸುತ್ತ ಅಗ್ನಿಯನ್ನು ಪ್ರತಿಷ್ಠಿಸಿದಳು. ತಕ್ಷಣವೇ ಅಗಾಧವಾದ ಮಳೆಬಂದು ಲೋಕವೆಲ್ಲ ಜಲಮಯವಾದಂತೆ ಎಲ್ಲೆಲ್ಲಿಯೂ ನೀರು ತುಂಬಿಕೊಂಡಿತು; ರಾಜನೂ ಅವನ ಪರಿವಾರದವರೂ ಇತರರೂ ತಂತಮ್ಮ ಮನೆಗಳಿಗೆ ಹೊರಟುಹೋದರು. ಅಮಾವಾಸ್ಯೆಯಾದ ಕಾರಣ ಗಾಢಾಂಧಕಾರವು ಹಬ್ಬಿತು. ಕಾಡುಮೃಗಗಳ ಕೂಗೂ ನರಿ ಗೂಬೆಗಳ ಶಬ್ದವೂ ಭೂತ ಭೇತಾಳಗಳ ಹಾವಳಿಯೂ ಅಧಿಕವಾಗಿರುವ ಭಯಂಕರವಾದ ಸ್ಥಳದಲ್ಲಿ ಏಕಾಂಗಿಯಾಗಿ ಕೊರಗುತ್ತಿದ್ದ ಆ ಕನ್ಯೆಯೂ ಮೃತ್ಯುಂಜಯ ಭಕ್ತವತ್ಸಲ! ಮಹಾದೇವ! ಕಾಪಾಡು ಕಾಪಾಡು ನಿನ್ನ ಹೊರತು ನನಗೆ ಅನ್ಯರಾರೂ ದಿಕ್ಕಿಲ್ಲ ಎಂದು ಮೊರೆಯಿಟ್ಟು ಬೇಡಿಕೊಳ್ಳುತ್ತ ಎಲೈ ದೇವದೇವನೇ! ಭಕ್ತವತ್ಸಲನಾದ ನಿನ್ನಿಂದ ಮಾರ್ಕಂಡೇಯನೂ ಚ್ಯವನಋಷಿಯೂ ಶ್ವೇತವಾಹನನೂ ಪೂರ್ಣಾಯುಸ್ಸನ್ನು ಪಡೆಯಲಿಲ್ಲವೆ? ರತಿದೇವಿಗೂ ಸ್ವಾಹಾಸ್ವಧೆಯರಿಗೂ ಮಾರ್ಕಂಡೇಯನ ಪತ್ನಿಗೂ ನೀನು ಸೌಭಾಗ್ಯವನ್ನು ಕೊಡಲಿಲ್ಲವೆ? ಅನಾಥಳಾದ ನಾನು ಮಾತ್ರ ನಿನಗೇನು ಮಾಡಿದೆ? ದಯಾಳುವಾದ ನೀನು ನನ್ನನ್ನು ಕಡೆಗಣಿಸಿ ನೋಡುವುದು ನ್ಯಾಯವೆ? ಎಂದು ಬಗೆಬಗೆಯಾದ ವಿಧದಿಂದ ಪರಶಿವನನ್ನು ಬೇಡಿಕೊಳ್ಳುತ್ತಿದ್ದಳು. ಆಗ ದಯಾಳುವಾದ ಪರಮೇಶ್ವರನು ಅವಳ ಭಕ್ತಿಭಾವನೆಗೆ ಮೆಚ್ಚಿ ಅವಳನ್ನು ಉದ್ಧರಿಸುವುದಕ್ಕಾಗಿ ಕೋಟಿಸೂರ್ಯಪ್ರಕಾಶವಾದ ನಂದಿವಾಹನವನ್ನೇರಿ ಲೋಕಮಾತೆಯಾದ ಪಾರ್ವತಿಯನ್ನು ಸಂಗಡ ಕರೆದುಕೊಂಡು ಕ್ಷಣಮಾತ್ರದಲ್ಲಿ ಆ ಸ್ಮಶಾನಕ್ಕೆ ಬಂದು ತನ್ನನ್ನೇ ಧ್ಯಾನಿಸುತ್ತಿದ್ದ ಭಕ್ತಳಿಗೆ ದರ್ಶನವನ್ನು ಕೊಟ್ಟು ಅಮ್ಮಾ! ನನ್ನನ್ನು ಏಕೆ ಸುಮ್ಮನೆ ಧ್ಯಾನಿಸುತ್ತಿರುವೆ. ನಿನಗೆ ನನ್ನಿಂದ ಆಗಬೇಕಾದುದೇನು ಎಂದು ಕೇಳಿದನು. ಆಗ ಆ ಕನ್ಯಾಮಣಿಯು ಪರಮಭಕ್ತಿಯಿಂದ ಪರಮೇಶ್ವರನಿಗೆ ನಮಸ್ಕರಿಸಿ ಲೋಕಶಂಕರನಾದ ನೀನು ನನ್ನಲ್ಲಿ ಅನುಗ್ರಹಮಾಡಿ, ಸ್ತ್ರೀಯರಿಗೆ ಸೌಭಾಗ್ಯ ಸೌಮಂಗಲ್ಯಾಭಿವೃದ್ಧಿಕರವಾದ ವ್ರತವನ್ನು ಉಪದೇಶಿಸಬೇಕೆಂದು ಪ್ರಾರ್ಥಿಸಿದಳು. ಆಗ ಪರಶಿವನು ಎಲೌ ಭಕ್ತಾಗ್ರಗಣ್ಯಳೆ! ಸರ್ವೋತ್ತಮವಾಗಿ ಸಕಲ ಪೂಜಾರಹಸ್ಯವೆನಿಸಿಕೊಂಡಿರುವ ಭೀಮೇಶ್ವರಾಮಾವಾಸ್ಯಾ ವ್ರತವನ್ನು ನಿನಗೋಸ್ಕರವಾಗಿ ಹೇಳುವೆನು ಕೇಳು. ಆಷಾಢಮಾಸದ ಅಮಾವಾಸ್ಯೆಯದಿನ ಮಂಗಳಸ್ನಾನಮಾಡಿ ಭಕ್ತಿಯಿಂದ ಪೂಜಾಗೃಹವನ್ನು ರಂಗವಲ್ಯಾದಿಗಳಿಂದ ಅಲಂಕರಿಸಿ ಪೀಠವನ್ನು ಹಾಕಿ ಅದರಮೇಲೆ ಅಕ್ಕಿಯನ್ನು ಹರಹಿ ಆ ಸ್ಥಳದಲ್ಲಿ ಉಮಾಸಹಿತನಾದ ನನ್ನನ್ನು ಆವಾಹಿಸಿ ಜ್ಯೋತಿರ್ಮಯಾತ್ಮನೆಂದು ಪ್ರಸಿದ್ಧವಾಗಿ ಧ್ಯಾನಿಸುತ್ತ ತುಪ್ಪದ ದೀಪವನ್ನು ಹಚ್ಚಿರುವ ದೀಪಸ್ತಂಭವನ್ನು ಆ ಸ್ಥಳದಲ್ಲಿ ಇಟ್ಟು ಆ ಸ್ತಂಭದಲ್ಲಿರುವ ನನ್ನನ್ನು ಪೂಜಿಸಿ ನನ್ನ ಪ್ರೀತಿಗೆ

ಪಾತ್ರನಾದವನನ್ನು ಜ್ಯೋತಿಯೆಂದು ತಿಳಿದು ಭಕ್ತಿಯಿಂದ ಪೂಜಿಸು ಎಂದು ಎಚ್ಚರಿಸಿ. ಎಲೈ ಸಾಧ್ವಿಯೇ! ಕೇಳು ಈ ವ್ರತವನ್ನು ಮಾಡಬೇಕಾದರೆ ಮೊದಲನೆ ವರುಷ ನೂರು. ಎರಡನೆ ವರ್ಷ ಇನ್ನೂರು, ಮೂರನೆ ವರ್ಷ ಮುನ್ನೂರು ಹೀಗೆ ವರ್ಷವರ್ಷಕ್ಕೂ ನೂರರಂತೆ ಹೆಚ್ಚು ಗುಣಿಸಿ ಕಡುಬನ್ನು ಮಾಡಿ ನನಗೆ ನೈವೇದ್ಯವನ್ನು ಮಾಡುತ್ತ ಪ್ರತಿವರ್ಷವೂ ಆಷಾಢ ಬಹುಳ ಅಮಾವಾಸ್ಯೆಯದಿನ ಈ ವ್ರತವಿಧಿಯಂತೆ ಧ್ಯಾನಾವಾಹನಾದಿ ಷೋಡಶೋಪಚಾರಗಳಿಂದ ನನ್ನನ್ನು ಪೂಜಿಸಿ ಬ್ರಾಹ್ಮಣರಿಗೆ ಈಶ್ವರಪ್ರೀತ್ಯರ್ಥವಾಗಿ ಮೊದಲನೆ ವರುಷ ಹತ್ತು ಎರಡನೇ ವರ್ಷ ಇಪ್ಪತ್ತು ಮೂರನೆ ವರ್ಷ ಮೂವತ್ತು ಹೀಗೆ ವರ್ಷಕ್ಕೆ ಹತ್ತರಂತೆ ಹೆಚ್ಚು ಗುಣಿಸಿ ಉಪಾಯನದಾನಮಾಡಿ ಒಂಭತ್ತು ವರುಷಕಾಲ ಭಕ್ತಿಯಿಂದ ವ್ರತವನ್ನು ಮಾಡಿ ಒಂಭತ್ತುಗಂಟಿನ ದಾರವನ್ನು ಮಂತ್ರಪುರಸ್ಸರವಾಗಿ ಕೈಗೆ ಕಟ್ಟಿಕೊಂಡು ಚಂದ್ರನಿಗೆ ಅರ್ಘ್ಯಪ್ರದಾನ ಮಾಡಿ ಬ್ರಾಹ್ಮಣ ಸುವಾಸಿನಿಯರನ್ನು ಭೋಜನ ದಾನದಕ್ಷಿಣೆಗಳಿಂದ ತೃಪ್ತಿಪಡಿಸಿ ತಾನು ಕಥೆಯನ್ನು ಕೇಳಿದನಂತರ ಭೋಜನಮಾಡಿ ಭಕ್ತಿಭಾವದಿಂದ ಕಥೆಯನ್ನು ಕೇಳಿ ರಾತ್ರಿ ಭಗವಂತನನ್ನು ಧ್ಯಾನಿಸುತ್ತ ಆ ದೀಪಸ್ತಂಭದ ಬಳಿಯಲ್ಲೇ ಮಲಗಿರಬೇಕು. ಹೀಗೆ ಮಾಡಿದನಂತರ ಒಂಭತ್ತು ವರ್ಷದ ಮೇಲೆ ಉದ್ಯಾಪನೆಯನ್ನು ಮಾಡಬೇಕು. ಈರೀತಿ ವ್ರತವನ್ನು ಮಾಡಿದರೆ ನಿನ್ನ ಪತಿಯು ಜೀವಿಸುವುದರಲ್ಲಿ ಯಾವ ಸಂಶಯವೂ ಇಲ್ಲ ಎಂದು ಹೇಳಿ ಪರಮೇಶ್ವರನು ಅದೃಶ್ಯನಾದನು. ಕೂಡಲೇ ಆಕೆ ಸಂತೋಷಭರಿತಳಾಗಿ ಹತ್ತಿರದಲ್ಲಿದ್ದ ಮಣ್ಣಿನಿಂದ ದೀಪಸ್ತಂಭವನ್ನು ಮಾಡಿ ಆಲದ ಹಾಲನ್ನು ಅದಕ್ಕೆ ಎಣ್ಣೆಯಾಗಿ ಹಾಕಿ ಆಲದ ನಾರಿನಿಂದ ಬತ್ತಿಯನ್ನು ಮಾಡಿ ಆಲದೆಲೆಗಳನ್ನು ವೀಳೆಯದೆಲೆಯಾಗಿ ಹಣ್ಣುಗಳನ್ನು ಅಡಿಕೆಯಾಗಿಯೂ ಚಿಗುರು ಗರುಕೆಗಳನ್ನು ಹೂವಾಗಿಯೂ ಮಾಡಿಕೊಂಡು ಮಣ್ಣಿನ ಉಂಡೆಗಳಿಂದ ಕಡಬುಗಳನ್ನು ಮಾಡಿಟ್ಟುಕೊಂಡು ಭಕ್ತಿನಮ್ರಳಾಗಿ ಮನಸ್ಸಿನಲ್ಲಿ ಧೂಪದೀಪ ನೈವೇದ್ಯ ತಾಂಬೂಲ ದಕ್ಷಿಣೆಗಳನ್ನು ಸ್ಮರಿಸುತ್ತ ಏಕಚಿತ್ತ ಮನೋಭಾವದಿಂದ ದೃಢಸಂಕಲ್ಪಳಾಗಿ ಭೀಮೇಶ್ವರ ವ್ರತವನ್ನು ಮಾಡಿ ಮುಗಿಸಿದಳು. ತಕ್ಷಣವೇ ಆ ವ್ರತ ಪ್ರಭಾವದಿಂದ ಮಲಗಿದ್ದವರು ಏಳುವಂತೆ ಚಿತೆಯಮೇಲಿದ್ದ ರಾಜಪುತ್ರನು ಎದ್ದು ಕುಳಿತನು. ಸ್ಮಶಾನವೇ ಅರಮನೆಯಾಯಿತು. ಚಿತೆಯೇ ಪರ್ಯಂಕವಾಯಿತು. ಆಗ ತನ್ನ ಗಂಡನ ಸ್ಥಿತಿಯನ್ನು ಕಂಡು ಸಂತೋಷದಿಂದ ಆಕೆ ಪತಿಯನ್ನು ಎಡೆಬಿಡದೆ ಇರುತ್ತಿರಲು ಬೆಳಗಾಗುತ್ತಲೆ ರಾಜಭಟರು ಬಂದು ನೋಡಿ ಆಶ್ಚರ್ಯಪಟ್ಟು ಈ ವಿಚಾರವನ್ನು ರಾಜನಿಗೆ ತಿಳಿಸಲು ಆಶ್ಚರ್ಯಾನಂದಗಳಿಂದ ಕೂಡಿದ ರಾಜನು ಅಲ್ಲಿಗೆ ಬಂದು ಸೊಸೆಯನ್ನು ಹೊಗಳಿ ಮಗನನ್ನು ಆಲಂಗಿಸಿಕೊಂಡು ಮರ್ಯಾದೆಯಿಂದ ಅವನನ್ನು ಅರಮನೆಗೆ ಕರೆದುಕೊಂಡು ಹೋಗಿ ಬಡಬಗ್ಗರಿಗೆ ಅನ್ನಾಹಾರ ವಸ್ತ್ರದಾನಾದಿಗಳನ್ನು ಮಾಡಿ ಮಾಧವಶರ್ಮನನ್ನು ಬಹಳವಾಗಿ ಹೊಗಳಿ ಮನ್ನಿಸಿದನು. ಆದಕಾರಣ ಈ ವ್ರತಕ್ಕೆ ಪತಿಸಂಜೀವಿನೀ ವ್ರತವೆಂದು ಹೆಸರಾಯಿತು. ಎಂದು ಸೂತರು ಶೌನಕಾದಿಗಳಿಗೆ ಹೇಳಿ ಸ್ಕಾಂದಪುರಾಣೋಕ್ತವಾದ ಈ ಭೀಮೇಶ್ವರ ಅಮಾವಾಸ್ಯೆಯ ವ್ರತ ಕಥೆಯನ್ನು ಭಕ್ತಿಯಿಂದ ಬರೆಯುವವರಿಗೂ ಓದುವವರಿಗೂ ಹೇಳುವವರಿಗೂ ಕೇಳುವವರಿಗೂ ಸುಖಸಾಮ್ರಾಜ್ಯ ಸಂತಾನ ಸೌಭಾಗ್ಯಗಳುಂಟಾಗುವವೆಂಬಲ್ಲಿಗೆ ಭೀಮೇಶ್ವರ ಅಮಾವಾಸ್ಯಾ ವ್ರತಕಥಾಸಂಗ್ರಹ ಮುಗಿದುದು. ಶ್ರೀಃ ಶ್ರೀಃ ಶ್ರೀಃ

ಶ್ರೀಃ

ಶ್ರೀದಕ್ಷಿಣಾಮೂರ್ತಯೇ ನಮಃ

೧೫. ಅಥ ಸೋಮವತೀ ಅಮಾವಾಸ್ಯಾ ವ್ರತಕಲ್ಪಃ

ಅಮಾವಾಸ್ಯಾ ಸೋಮವಾರ ವ್ರತ

ಅಥ ತತ್ರ ವ್ರತವಿವೇಕಃ— ಅಮಾವಾಸ್ಯಾ ತು ಸೋಮೇನ ಸಪ್ತಮೀ ಭಾನುನಾ ಸಹ ॥ ಚತುರ್ಥೀ ಭೂಮಿಪುತ್ರೇಣ ಸೋಮಪುತ್ರೇಣ ಚಾಷ್ಟಮೀ ॥ ಚತಸ್ರಃ ತಿಥಯಃ ಕೃಷ್ಣ ಸೂರ್ಯಗ್ರಹಣಸನ್ನಿಭಾಃ ॥ ಸ್ನಾನಂ ದಾನಂ ತಥಾ ಶ್ರಾದ್ಧಂ ಸರ್ವಂ ತತ್ರಾಕ್ಷಯಂ ಭವೇತ್ ॥ ತಿಥಿವಾಸರಯೋರ್ಯೋಗೋ ಯದಾ ಕಾಲೇ ಭವಿಷ್ಯತಿ॥ ಭಾಸ್ಯಂತೇ ವಾಥ ಮಧ್ಯಾಹ್ನೇ ಪುಣ್ಯಕಾಲಸ್ತು ನಾನ್ಯಥಾ ॥ ಅಮಾಸೋಮಸಮಾಯೋಗೇ ಶ್ರಾದ್ಧಂ ಯದ್ಯತ್ರ ಲಭ್ಯತೇ ॥ ತೀರ್ಥೇ ಕಪಿಲಧಾರೇಽಸ್ಮಿನ್ ಗಂಗಾಯಾಂ ಪುಷ್ಕರೇ ತಥಾ ॥ ದಿವ್ಯಂತರಿಕ್ಷಭೌಮಾನಿ ಯಾನಿ ತೀರ್ಥಾನಿ ಸರ್ವಶಃ । ತಾನ್ಯತ್ರ ನಿವಸಿಷ್ಯಂತಿ ದರ್ಶೇ ಸೋಮದಿನಾನ್ವಿತೇ ॥ ಅಥ ಅಮಾಸೋಮಸಮಾಯೋಗೇ ಅಶ್ವತ್ಥಪ್ರದಕ್ಷಿಣಾದಿಕಂ ಸರ್ವದೇಶಪ್ರಸಿದ್ಧಂ ॥

ಸೋಮವಾರ ಅಮಾವಾಸ್ಯೆ, ಭಾನುವಾರ ಸಪ್ತಮಿ, ಮಂಗಳವಾರ ಚೌತಿ, ಬುಧವಾರ ಅಷ್ಟಮಿ ಯೋಗವುಳ್ಳ ನಾಲ್ಕು ದಿನಗಳೂ ಸೂರ್ಯಗ್ರಹಣಕ್ಕೆ ಸಮಾನವಾದ ಪರ್ವಕಾಲಗಳು. ಆಗ ಸ್ನಾನ ದಾನ ಜಪ ಹೋಮಪೂಜಾದಿಗಳನ್ನು ಮಾಡಿದರೆ ಸಕಲ ದೇವತೆಗಳಿಗೂ ತೃಪ್ತಿಯುಂಟಾಗುವುದು. ಆಗ ಅಲ್ಲಿ ಕಾಲದಲ್ಲಿ ಸಕಲ ತೀರ್ಥಗಳೂ ಸನ್ನಿಹಿತವಾಗುವುವು. ಇಂಥ ಯೋಗವು ಪ್ರಾತಃಕಾಲದಲ್ಲಾಗಲಿ ಮಧ್ಯಾಹ್ನದಲ್ಲಾಗಲಿ ವ್ಯಾಪನೆಯಾಗಿದ್ದರೆ ಆ ದಿನ ಅಶ್ವತ್ಥ ಪ್ರದಕ್ಷಿಣಾದಿಗಳನ್ನು ಮಾಡಬೇಕು. ಸಾಯಾಹ್ನ ವ್ಯಾಪನೆಯಲ್ಲಿದ್ದರೆ ಕೂಡದೆಂದು ವ್ರತವಿವೇಕದಲ್ಲಿ ಹೇಳಿದೆ. ಇಲ್ಲಿ ಮುಖ್ಯವಾಗಿ ಅಮಾವಾಸ್ಯೆಯು ಸೋಮವಾರ

ವಾರ ಪ್ರಾತಃಕಾಲ ಕ್ಷಣಕಾಲ ವ್ಯಾಪ್ತಿಯಿದ್ದರೂ ವ್ರತಾದಿಗಳನ್ನು ಮಾಡಬೇಕೆಂದು ಧರ್ಮ ಸಿಂಧುವಿನಲ್ಲಿ ಹೇಳಿದೆ. ಉದಾಹರಣೆ "ಸೋಮೇ ಅಮಾಪ್ರಾತರ್ಯೋಗೇ ಮುಹೂರ್ತ ಮಾತ್ರೇಽಪಿ ಅಶ್ವತ್ಥಪೂಜಾದಿ ಕರ್ತವ್ಯಂ । ಸಾಯಾಹ್ನಯೋಗೇ ದಿನಾಂತ್ಯಯೋಗೇ ಚ ಅಕರ್ತವ್ಯಂ" ಇತಿ ॥

ಅಥ ಅಶ್ವತ್ಥನಾರಾಯಣ ಪೂಜಾ

ಆಚಮ್ಯ ಪ್ರಾಣಾಯಾಮಪೂರ್ವಕಂ ಸಂಕಲ್ಪಂ ಕುರ್ಯಾತ್ । ಆಗಮಾರ್ಥಂ ತು ದೇವಾನಾಂ ಗಮನಾರ್ಥಂ ತು ರಕ್ಷಸಾಂ । ಕುರ್ವೇ ಘಂಟಾರವಂ ತತ್ರ ದೇವತಾಹ್ವಾನ ಲಾಂಛನಂ ॥ ಇತಿ ಘಂಟಾನಾದಂ ಕೃತ್ವಾ ಸಂಕಲ್ಪ್ಯ (೬ನೆ ಪುಟ ನೋಡಿರಿ) ಅಸ್ಮಿನ್ ವರ್ತಮಾನೇ ಚಾಂದ್ರಮಾನೇನ ....ನಾಮ ಸಂವತ್ಸರೇ ವಸಂತಋತೌ ವೈಶಾಖ ಮಾಸೇ ಕೃಷ್ಣಪಕ್ಷೇ ಅಮಾವಾಸ್ಯಾಂ ಇಂದುವಾಸರಯುಕ್ತಾಯಾಂ ಶುಭ ತಿಥೌ ಶ್ರೀಪರಮೇಶ್ವರ ಪ್ರೀತ್ಯರ್ಥಂ ಮಮ ಮನೋವಾಕ್ಕಾಯ ಕೃತ ಸಮಸ್ತಪಾತಕ ನಿವೃತ್ತಿದ್ವಾರಾ ಸಕಲ ಸೌಭಾಗ್ಯ ಸನ್ಮಂಗಳಾವಾಪ್ತ್ಯರ್ಥಂ ಪುತ್ರಪೌತ್ರಾಭಿವೃದ್ಧ್ಯರ್ಥಂ ಜನ್ಮಜನ್ಮನಿ ಅವೈಧವ್ಯ ಸಂತತಿ ಚಿರಂಜೀವಿತ್ವ ಸಂಪತ್ಸೌಭಾಗ್ಯ ಸಿದ್ಧ್ಯರ್ಥಂ ಭವಿಷ್ಯೋತ್ತರ ಪುರಾಣೋಕ್ತ ಪ್ರಕಾರೇಣ ಅಮಾಸೋಮವಾರವ್ರತಾರ್ಥಂ ಅಶ್ವತ್ಥಮೂಲೇ ಬ್ರಹ್ಮ ವಿಷ್ಣು ಶಿವಸ್ವರೂಪ ಅಶ್ವತ್ಥನಾರಾಯಣ ಪೂಜಾಂ ಕರಿಷ್ಯೇ ॥ ತದಾದೌ ಕಲಶಪೂಜಾಂ ಕರಿಷ್ಯೇ। ಕಲಶಸ್ಯ ಮುಖೇ ವಿಷ್ಣುರಿತಿ (೮ನೆ ಪುಟ ನೋಡಿರಿ) ಕಲಶಪೂಜಾನಂತರಂ ನಿರ್ವಿಘ್ನತಾಸಿದ್ಧ್ಯರ್ಥಂ ಮಹಾಗಣಪತಿಪೂಜಾಂ ಕರಿಷ್ಯೇ (೮ನೆ ಪುಟ ನೋಡಿರಿ) ಗಣಪತಿಪೂಜಾನಂತರಂ ಪ್ರಾಣಪ್ರತಿಷ್ಠಾಂ ಕೃತ್ವಾ ಅಸ್ಯ ಶ್ರೀ ಅಶ್ವತ್ಥನಾರಾಯಣ ಪ್ರಾಣಪ್ರತಿಷ್ಠಾ ಮಹಾಮಂತ್ರಸ್ಯ ಬ್ರಹ್ಮಾ ವಿಷ್ಣು ಮಹೇಶ್ವರಾ ಋಷಯಃ ॥ ಋಗ್ಯಜುಸ್ಸಾಮಾಥರ್ವಣಾಶ್ಛಂದಾಂಸಿ ಪ್ರಾಣಃ ಶಕ್ತಿಃ ಪರಾ ದೇವತಾ ಹ್ರಾಂ ಬೀಜಂ ಹ್ರೀಂ ಶಕ್ತಿಃ ಹ್ರೂಂ ಕೀಲಕಂ ಶ್ರೀ ಅಶ್ವತ್ಥನಾರಾಯಣ ಪ್ರಾಣ ಪ್ರತಿಷ್ಠಾ ಸಿದ್ಧ್ಯರ್ಥೇ ಜಪೇ ವಿನಿಯೋಗಃ (ಮುಂದಕ್ಕೆ ೧೦ನೆ ಪುಟ ನೋಡಿರಿ) ಪ್ರಾಣಪ್ರತಿಷ್ಠಾಪನ ಮುಹೂರ್ತಸ್ತು ಸುಪ್ರತಿಷ್ಠಿತಮಸ್ತು ॥

ಅಥ ಪೀಠಪೂಜಾ—ಓಂ ಆಧಾರಶಕ್ತ್ಯೈ ನಮಃ ಓಂ ಮೂಲಪ್ರಕೃತ್ಯೈ ನಮಃ ಓಂ ಕೂರ್ಮಾಯ ನಮಃ ಓಂ ವರಾಹಾಯ ನಮಃ ಓಂ ಪೃಥಿವ್ಯೈ ನಮಃ ಓಂ ಕ್ಷೀರಸಾಗರಾಯ್ಯೈ ನಮಃ ಸಪ್ತಕುಲಪರ್ವತೇಭ್ಯೋ ನಮಃ ಅಷ್ಟದಿಗ್ಗಜೇಭ್ಯೋ ನಮಃ ರತ್ನಸಿಂಹಾಸನಾಯ ನಮಃ ಸ್ಕಂದಾಯ ನಮಃ ನೀಲಾಯ ನಮಃ ಪದ್ಮಾಯ್ಯೈ ನಮಃ ಕೇಸರೇಭ್ಯೋ ನಮಃ ಕರ್ಣಿಕಾಯ ನಮಃ ಸುಂ ಸೂರ್ಯಾಯ ನಮಃ ದುಂ ದುರ್ಗಾಯ ನಮಃ ಗಂ ಗಣಪತಯೇ ನಮಃ ಕ್ಷಂ ಕ್ಷೇತ್ರಪಾಲಕಾಯ ನಮಃ ಸಂ ಸರಸ್ವತ್ಯೈ ನಮಃ ಓಂ ಪರಮೇಶ್ವರಾಯ ನಮಃ ಇತಿ ಪೀಠಪೂಜಾಂ ಸಮರ್ಪಯಾಮಿ॥

ಅಥ ದ್ವಾರಪಾಲಪೂಜಾ—ಪೂರ್ವದ್ವಾರೇ ದ್ವಾರಶ್ರಿಯೈ ನಮಃ ಧಾತ್ರೇ
ನಮಃ ವಿಧಾತ್ರೇ ನಮಃ ದಕ್ಷಿಣದ್ವಾರೇ ದ್ವಾರಶ್ರಿಯೈ ನಮಃ ಚಂಡಾಯ ನಮಃ
ಪ್ರಚಂಡಾಯ ನಮಃ ಪಶ್ಚಿಮದ್ವಾರೇ ದ್ವಾರಶ್ರಿಯೈ ನಮಃ ಶಂಖನಿಧಯೇ ನಮಃ
ಪದ್ಮನಿಧಯೇ ನಮಃ ಉತ್ತರದ್ವಾರೇ ದ್ವಾರಶ್ರಿಯೈ ನಮಃ ಗಂಗಾಯೈ ನಮಃ
ಯಮುನಾಯೈ ನಮಃ ॥ ಇತಿ ದ್ವಾರಪಾಲಕ ಪೂಜಾಂ ಸಮರ್ಪಯಾಮಿ ॥

ಅಥ ಧ್ಯಾನಂ—ಓಂ........ಅಶ್ವತ್ಥೇವೋ........ ಆರಾತ್ತೇ........ ನಮಸ್ಕೃ
ತ್ವಾ ಬ್ರಹ್ಮಾ ದೇವಾನಾಂ ತದ್ವಿಷ್ಣೋಃ ಪರಮ ಪದಂ । ಸದಾ ಪಶ್ಯಂತಿ ಸೂರಯಃ
ದಿವೀವ ಚಕ್ಷುರಾತತಂ ತದ್ವಿಪ್ರಾಸೋ ವಿಪರ್ಯವೋ ಜಾಗ್ರವಾರ್ಃ ತತ್ಸಮಿಂಧತೇ ।
ವಿಷ್ಣೋರ್ಯತ್ಪರಮಂ ಪದಂ । ರಾಜಾಧಿರಾಜಾಯ ಪ್ರಸಹ್ಯ ಸಾಹಿನೇ............
ಕುಬೇರಾಯ ವೈಶ್ರವಣಾಯ ಮಹಾರಾಜಾಯ ನಮಃ ಅತ್ವಾವಹಂತೂ—
ಶಾಂತಾಕಾರಂ ಭುಜಗಶಯನಂ ಪದ್ಮನಾಭಂ ಸುರೇಶಂ । ವಿಶ್ವಾಕಾರಂ ಗಗನ
ಸದೃಶಂ ಮೇಘವರ್ಣಂ ಶುಭಾಂಗಂ । ಲಕ್ಷ್ಮೀಕಾಂತಂ ಕಮಲನಯನಂ ಯೋಗಿ
ಹೃದ್ಧ್ಯಾನಗಮ್ಯಂ । ವಂದೇ ವಿಷ್ಣುಂ ಭವಭಯಹರಂ ಸರ್ವಲೋಕೈಕನಾಥಂ ।
ಶಾಂತಂ ಪದ್ಮಾಸನಸ್ಥಂ ಶಶಿಧರಮಕುಟಂ ಪಂಚವಕ್ತ್ರಂ ತ್ರಿಣೇತ್ರಂ। ಶೂಲಂ ಖಡ್ಗಂ
ಚ ವಜ್ರಂ ಪರಶುಮಭಯದಂ ದಕ್ಷಭಾಗೇ ವಹಂತಂ । ನಾಗಂ ಪಾಶಂ ಚ ಘಂಟಾಂ
ಪ್ರಳಯಹುತವಹಂ ಸಾಂಕುಶಂ ವಾಮಭಾಗೇ । ನಾನಾಲಂಕಾರಯುಕ್ತಂ
ಸ್ಫಟಿಕಮಣಿನಿಭಂ ಪಾರ್ವತೀಶಂ ನಮಾಮಿ । ಮೂಲತೋ ಬ್ರಹ್ಮರೂಪಾಯ
ಮಧ್ಯತೋ ವಿಷ್ಣುರೂಪಿಣೇ । ಅಗ್ರತಶ್ಶಿವರೂಪಾಯ ವೃಕ್ಷರಾಜಾಯ ತೇ ನಮಃ ॥
ಇತಿ ಜಪ್ತ್ವಾ ಅಶ್ವತ್ಥಂ ಸ್ಪೃಷ್ಟ್ವಾನಂತರಂ ಪೂಜಯೇತ್ । ಇಂದ್ರಾದಿ ಸುರಸಂ
ಪೂಜ್ಯ ಯೋಗನಿದ್ರಾಪರಾಯಣ । ಲಕ್ಷ್ಮ್ಯಾ ಸಹ ದಯಾಸಿಂಧೋ ಸುಸ್ಥಿರೋ ಭವ
ಸರ್ವದಾ । ದೇವದೇವ ಮಹಾಪ್ರಾಜ್ಞ ಸರ್ವಲೋಕೇಶಪೂಜಿತ । ಯಾವತ್ಪೂಜಾಂ
ಸಮಾಪ್ಯೇಽಹಂ ತಾವತ್ತ್ವಂ ಸನ್ನಿಧಿಂ ಕುರು । ಓಂ ಅಶ್ವತ್ಥನಾರಾಯಣಾಯ
ನಮಃ । ಧ್ಯಾನಂ ಸಮರ್ಪಯಾಮಿ । ಸರ್ವವ್ಯಾಪಕವಿಶ್ವೇಶ ಕೃಪಯಾ ದೀನವತ್ಸಲ ।
ಮಯೋಪಪಾದಿತಾಂ ಪೂಜಾಂ ಗೃಹಾಣೇಮಾಂ ಜಗತ್ಪತೇ। ಶರಣಂ ಮೇ ಜಗನ್ನಾಥ
ಶರಣಂ ಭಕ್ತವತ್ಸಲ । ವರದೋ ಭವ ಮೇ ದೇವ ಸತತಂ ಭಕ್ತವತ್ಸಲ । ಓಂ ಶ್ರೀ
ಅಶ್ವತ್ಥನಾರಾಯಣಾಯ ನಮಃ । ಸಹಸ್ರಶೀರ್ಷ ಇತಿ ಆವಾಹನಂ ಸಮರ್ಪಯಾಮಿ ॥
ಮೂಲಾನಿ ಬ್ರಾಹ್ಮಣಾ ಯಸ್ಯ ಋಗ್ವೇದಾಂಗಾನಿ ಪಲ್ಲವಾಃ । ಫಲಾನಿ ಯಜ್ಞಾಶ್ಶಾ
ಖಾಶ್ಚ ನಾರಾಯಣ ದಯಾಂ ಕುರು । ಸೂರ್ಯಕೋಟಿಪ್ರತೀಕಾಶ ಸರ್ವವ್ಯಾಪಿನ್ ಜ
ಗತ್ಪತೇ । ರತ್ನಸಿಂಹಾಸನಂ ಚಾರು ತುಭ್ಯಂ ದಾಸ್ಯಾಮಿ ಸ್ವೀಕುರು । ಪುರುಷಏ
ವೇದಮಿತಿ । ಸಿಂಹಾಸನಂ ಸಮರ್ಪಯಾಮಿ ॥ ಮಹಾದೇವ ಜಗನ್ನಾಥ ಜಗದಾ

ನಂದಕಾರಕ। ಆಕ್ರಾಂತಾ ವಿಷ್ಣುಸಂಯುಕ್ತಂ ತವ ಪಾದ್ಯಂ ಮಯಾರ್ಪಿತಂ।
ಏತಾವಾನಸ್ಯ ಇತಿ ಪಾದ್ಯಂ ಸಮರ್ಪಯಾಮಿ॥ ಫಲಗಂಧಾಕ್ಷತೈರ್ಯುಕ್ತಂ
ಪುಷ್ಪದರ್ಭಾಗ್ರಸಂಯುತಂ। ಅರ್ಘ್ಯಂ ಗೃಹಾಣ ಭಗವನ್ ವಿಷ್ಣೋ ಸರ್ವಫಲಪ್ರದ।
ತ್ರಿಪಾದೇತಿ ಪುರುಷಸೂಕ್ತೇನ ಅರ್ಘ್ಯಂ ಸಮರ್ಪಯಾಮಿ॥ ಕರ್ಪೂರೇಲಾದಿಸು
ರಭಿ ಶೀತಳಂ ಸಲಿಲಂ ಪ್ರಭೋ। ಉಮಾರಮಣ ಶಂಭೋ ತ್ವಂ ಆಚಮ್ಯಂ ಪ್ರತಿಗೃ
ಹ್ಯತಾಂ। ತಸ್ಮಾದ್ವಿರಾಡಿತಿ ಆಚಮನಂ ಸಮರ್ಪಯಾಮಿ॥ ದಧ್ನಾ ಚ ಮಧುನಾ
ಚೈವ ಶರ್ಕರೇಣ ಸಮನ್ವಿತಂ। ಮಧುಪರ್ಕಂ ಪ್ರದಾಸ್ಯಾಮಿ ಗೃಹಾಣ ಪರಮೇಶ್ವರ।
ಮಧುಪರ್ಕಂ ಸಮರ್ಪಯಾಮಿ। ಪಂಚಾಮೃತಂ ಮಯಾ ನೀತಂ ಪಯೋದಧಿಘೃತಂ
ಮಧು। ಶರ್ಕರಾ ಗುಡಸಂಯುಕ್ತಂ ಸ್ನಾನಾರ್ಥಂ ಪ್ರತಿಗೃಹ್ಯತಾಂ। ಆಪ್ಯಾಯಸ್ವೇತಿ
ಪಂಚಾಮೃತಸ್ನಾನಂ (೧೯ನೇ ಪುಟ ನೋಡಿರಿ) ಸಮರ್ಪಯಾಮಿ। ಗಂಗಾಕೃಷ್ಣಾ
ಗೌತಮೀ ಚ ಕಾವೇರೀ ಚ ಪಿನಾಕಿನೀ।ಸಲಿಲಂ ತೇಭ್ಯಮಾನೀತಂ ಸ್ನಾನಾರ್ಥಂ ಪ್ರತಿ
ಗೃಹ್ಯತಾಂ। ಯತ್ಪುರುಷಣೇತಿ ಶುದ್ಧೋದಕಸ್ನಾನಂ ಸಮರ್ಪಯಾಮಿ॥ ದೇವ
ದೇವ ಜಗನ್ನಾಥ ನಮಶ್ಶ್ರೀವತ್ಸಧಾರಿಣೇ। ವಸ್ತ್ರಯುಗ್ಮಂ ಪ್ರದಾಸ್ಯಾಮಿ ಸ್ವೀಕು
ರುಷ್ವ ಜನಾರ್ದನ। ಪೀತವಾಸಸ್ತ್ವಯಾವಿಭೋ. ವ್ಯಾಘ್ರಚರ್ಮ ಮಯಾಹೃತಂ।
ವಾಸಃ ಪ್ರೀತ್ಯಾ ಗೃಹಾಣೇದಂ ಪುರುಷೋತ್ತಮ ಶಂಕರ। ಸಪ್ತಾಸ್ಯಾಸನ್ ಇತಿ ವಸ್ತ್ರ
ಯುಗ್ಮಂ ಸಮರ್ಪಯಾಮಿ॥ ಉಪವೀತಂ ಸೋತ್ತರೀಯಂ ಮಯಾ ದತ್ತಂ ಸುಶೋ
ಭನಂ। ವಿಶ್ವಮೂರ್ತೇ ಗೃಹಾಣೇದಂ ನಾರಾಯಣ ಶಿವಪ್ರಭೋ। ಲಕ್ಷ್ಮೀಶಾಯ
ನಮಸ್ತೇಽಸ್ತು ತ್ರಾಹಿ ಮಾಂ ಭವಸಾಗರಾತ್। ತಂ ಯಜ್ಞಮಿತಿ ಯಜ್ಞೋಪವೀತಂ
ಸಮರ್ಪಯಾಮಿ॥ ಅಶ್ವತ್ಥಂ ಹುತಭುಗ್ವಾಸ ಗೋವಿಂದಸ್ಯ ಪದಾಶ್ರಯ। ಅಶೇಷಂ
ಹರ ಮೇ ಪಾಪಂ ವೃಕ್ಷರಾಜ ನಮೋಽಸ್ತು ತೇ।ಓಂ ನಮೋ ವಾಸುದೇವಾಯ ನಿತ್ಯಾ
ನಂದ ಚಿದಾತ್ಮನೇ। ನಮೋ ನಿತ್ಯಾಯ ಶುದ್ಧಾಯ ಯೋಗಿಧ್ಯಾನಪರಾಯಣ। ಅಲಂ
ಕಾರಂ ಸಮರ್ಪಯಾಮಿ॥ ಮಲಯಾಚಲಸಂಭೂತಂ ಘನಸಾರೇಣ ಮಿಶ್ರಿತಂ। ವಿಲೇ
ಪನಂ ಸುರಶ್ರೇಷ್ಠ ಚಂದನಂ ಪ್ರತಿಗೃಹ್ಯತಾಂ। ತಸ್ಮಾದ್ಯಜ್ಞೇತಿ ಗಂಧಂ ಸಮರ್ಪ
ಯಾಮಿ॥ ಅಕ್ಷತಾಂಶ್ಚ ಸುರಶ್ರೇಷ್ಠ ಕುಂಕುಮಾಕ್ತಾನ್ ಸುಶೋಭಿತಾನ್। ಮಯಾ
ನಿವೇದಿತಾನ್ ಭಕ್ತ್ಯಾ ತ್ವದರ್ಥಂ ಪರಮೇಶ್ವರ।ತಸ್ಮಾದಿತಿ ಅಕ್ಷತಾನ್ ಸಮರ್ಪಯಾಮಿ॥
ಹರಿದ್ರಾಚೂರ್ಣಂ ಸಮರ್ಪಯಾಮಿ॥ ಮಂಗಳದ್ರವ್ಯಾಣಿ ಸಮರ್ಪಯಾಮಿ॥
ಸಿಂಧೂರಚೂರ್ಣಂ ಸಮರ್ಪಯಾಮಿ॥ ಮಂಗಳದ್ರವ್ಯಾಣಿ ಸಮರ್ಪಯಾಮಿ॥
ತುಲಸೀಜಾತೀವಕುಲ ಮಲ್ಲಿಕಾಚಂಪಕಾನಿ ಚ। ಬಿಲ್ವಾನಿ ಹರ ಗೋವಿಂದ ಗೃಹಾಣ
ಪರಮೇಶ್ವರ।ಮಾಂಗಲ್ಯಾನಿ ಸುಗಂಧೀನಿ ಮಾಲತ್ಯಾದೀನಿ ಚ ಪ್ರಭೋ।ಮಯಾಹೃತಾನಿ
ಪೂಜಾರ್ಥಂ ಗೃಹಾಣ ಸುರನಾಯಕ। ತಸ್ಮಾದಶ್ವೇತಿ ಪುಷ್ಪಾಣಿ ಸಮರ್ಪಯಾಮಿ॥

ಅಥ ಅಂಗ ಪೂಜಾ

ಓಂ ಶ್ರೀ ನಾರಾಯಣಾಯ ನಮಃ	ಪಾದೌ	ಪೂಜಯಾಮಿ
ಓಂ ಕೇಶವಾಯ ನಮಃ	ಗುಲ್ಫೌ	ಪೂಜಯಾಮಿ
ಓಂ ಹರಯೇ ನಮಃ	ಜಂಘೇ	ಪೂಜಯಾಮಿ
ಓಂ ಸಂಕರ್ಷಣಾಯ ನಮಃ	ಊರೂ	ಪೂಜಯಾಮಿ
ಓಂ ವರಾಹಾಯ ನಮಃ	ಕಟಿಂ	ಪೂಜಯಾಮಿ
ಓಂ ಪದ್ಮನಾಭಾಯ ನಮಃ	ನಾಭಿಂ	ಪೂಜಯಾಮಿ
ಓಂ ದಾಮೋದರಾಯ ನಮಃ	ಉದರಂ	ಪೂಜಯಾಮಿ
ಓಂ ಕಲಾತ್ಮಕಾಯ ನಮಃ	ಸ್ತನೌ	ಪೂಜಯಾಮಿ
ಓಂ ರಾಮಾಯ ನಮಃ	ಸ್ಕಂಧೌ	ಪೂಜಯಾಮಿ
ಓಂ ವೈಕುಂಠಾಯ ನಮಃ	ಕಂಠಂ	ಪೂಜಯಾಮಿ
ಓಂ ಅನಿರುದ್ಧಾಯ ನಮಃ	ಬಾಹೂ	ಪೂಜಯಾಮಿ
ಓಂ ದೇವಾಧಿದೇವಾಯ ನಮಃ	ಮುಖಂ	ಪೂಜಯಾಮಿ
ಓಂ ಪುಷ್ಕರೇಕ್ಷಣಾಯ ನಮಃ	ನೇತ್ರೇ	ಪೂಜಯಾಮಿ
ಓಂ ವಾಸುದೇವಾಯ ನಮಃ	ಶ್ರೋತ್ರೇ	ಪೂಜಯಾಮಿ
ಓಂ ವಿಶ್ವವ್ಯಾಪಿನೇ ನಮಃ	ಶಿರಃ	ಪೂಜಯಾಮಿ
ಓಂ ಶ್ರೀಸರ್ವೇಶ್ವರಾಯ ನಮಃ	ಸರ್ವಾಂಗಾನಿ	ಪೂಜಯಾಮಿ

ಅಥ ಪುಷ್ಪಪೂಜಾ

ಓಂ ಶ್ರೀನಾರಾಯಣಾಯ ನಮಃ	ಕಮಲಪುಷ್ಪಂ	ಸಮರ್ಪಯಾಮಿ
ಓಂ ಜಗದ್ವ್ಯಾಪಿನೇ ನಮಃ	ಜಪಾಪುಷ್ಪಂ	ಸಮರ್ಪಯಾಮಿ
ಓಂ ಕಾಲಾತ್ಮನೇ ನಮಃ	ಕರವೀರಪುಷ್ಪಂ	ಸಮರ್ಪಯಾಮಿ
ಓಂ ಕಮಲಾಪತಯೇ ನಮಃ	ಚಂಪಕಪುಷ್ಪಂ	ಸಮರ್ಪಯಾಮಿ
ಓಂ ಪದ್ಮನೇತ್ರಾಯ ನಮಃ	ಪಾಟಲೀಪುಷ್ಪಂ	ಸಮರ್ಪಯಾಮಿ
ಓಂ ದಾಮೋದರಾಯ ನಮಃ	ಮಲ್ಲಿಕಾಪುಷ್ಪಂ	ಸಮರ್ಪಯಾಮಿ
ಓಂ ವನಮಾಲಿನೇ ನಮಃ	ಗಿರಿಕರ್ಣಿಕಾಪುಷ್ಪಂ	ಸಮರ್ಪಯಾಮಿ
ಓಂ ಸರ್ವಪೂಜ್ಯಾಯ ನಮಃ	ಪುನ್ನಾಗಪುಷ್ಪಂ	ಸಮರ್ಪಯಾಮಿ
ಓಂ ಪುರಾಣಪುರುಷಾಯ ನಮಃ	ಪಾರಿಜಾತಪುಷ್ಪಂ	ಸಮರ್ಪಯಾಮಿ
ಓಂ ಶ್ರೀ ಅಶ್ವತ್ಥನಾರಾಯಣಾಯ ನಮಃ	ನಾನಾವಿಧಪುಷ್ಪಾಣಿ	ಸಮರ್ಪಯಾಮಿ

ಅಥ ಪತ್ರಪೂಜಾ

ಓಂ ಶ್ರೀನಾರಾಯಣ ನಮಃ	ಮಾಚೀಪತ್ರಂ	ಸಮರ್ಪಯಾಮಿ
ಓಂ ವೃಕ್ಷರಾಜಾಯ ನಮಃ	ಬಿಲ್ವಪತ್ರಂ	ಸಮರ್ಪಯಾಮಿ

ಓಂ ಸರ್ವಾಭೀಷ್ಟಪ್ರದಾಯ ನಮಃ	ಸೇವಂತಿಕಾಪತ್ರಂ	ಸಮರ್ಪಯಾಮಿ
ಓಂ ತ್ರಿಮೂರ್ತಿಸ್ವರೂಪಾಯ ನಮಃ	ತುಲಸೀಪತ್ರಂ	ಸಮರ್ಪಯಾಮಿ
ಓಂ ದೇವದೇವಾಯ ನಮಃ	ದೇವದಾರುಪತ್ರಂ	ಸಮರ್ಪಯಾಮಿ
ಓಂ ಅಜಾಂಡಕೋಟಿರೂಪಾಯ ನಮಃ	ಅತಸೀಪತ್ರಂ	ಸಮರ್ಪಯಾಮಿ
ಓಂ ಕಲಿದೋಷಹರಾಯ ನಮಃ	ಕರವೀರಪತ್ರಂ	ಸಮರ್ಪಯಾಮಿ
ಓಂ ಮಹಾಬಲಾಯ ನಮಃ	ಮಲ್ಲಿಕಾಪತ್ರಂ	ಸಮರ್ಪಯಾಮಿ
ಓಂ ಶ್ರೀಜನಾರ್ದನಾಯ ನಮಃ	ಜಾತೀಪತ್ರಂ	ಸಮರ್ಪಯಾಮಿ
ಓಂ ಶ್ರೀ ಅಶ್ವತ್ಥನಾರಾಯಣಾಯ ನಮಃ	ನಾನಾವಿಧಪತ್ರಂ	ಸಮರ್ಪಯಾಮಿ

ಅಥ ನಾಮ ಪೂಜಾ

ಓಂ ಪರಮಾತ್ಮನೇ ನಮಃ । ಓಂ ಪರಮೇಶ್ವರಾಯ ನಮಃ । ಓಂ ಪರಬ್ರಹ್ಮಣೇ ನಮಃ । ಓಂ ನಾರಾಯಣಾಯ ನಮಃ । ಓಂ ವಿರಿಂಚಯೇ ನಮಃ । ಓಂ ಶಿವಾಯ ನಮಃ । ಓಂ ರುದ್ರಾಯ ನಮಃ । ಓಂ ವಿಭೂತಯೇ ನಮಃ । ಓಂ ವನಸ್ಪತಯೇ ನಮಃ । ಓಂ ವೃಕ್ಷರಾಜಾಯ ನಮಃ । ಓಂ ವೇದಾತ್ಮನೇ ನಮಃ । ಓಂ ಪ್ರಕೃತಯೇ ನಮಃ । ಓಂ ದೇವಾತ್ಮನೇ ನಮಃ । ಓಂ ತ್ರಿಮೂರ್ತ್ಯಾತ್ಮನೇ ನಮಃ । ಓಂ ಊರ್ಧ್ವಮೂಲಾಯ ನಮಃ । ಓಂ ಅಧಶ್ಶಾಖಾಯ ನಮಃ । ಓಂ ಛನ್ದಃಪರ್ಣಾಯ ನಮಃ । ಓಂ ಅವ್ಯಯಾಯ ನಮಃ । ಓಂ ಪಾಪಘ್ನಾಯ ನಮಃ । ಓಂ ಜ್ಞಾನವೃಕ್ಷಾಯ ನಮಃ । ಓಂ ಭೂತಾವಾಸಾಯ ನಮಃ । ಓಂ ಪುಣ್ಯಾಯ ನಮಃ । ಓಂ ಶಿವಾಕಾರಾಯ ನಮಃ । ಓಂ ಮಹಾಬಲಾಯ ನಮಃ । ಓಂ ಋಷಿಸೇವಿತಾಯ ನಮಃ । ಓಂ ತಪಃಫಲಾಯ ನಮಃ । ಓಂ ಅಗ್ನಿಗರ್ಭಾಯ ನಮಃ । ಓಂ ಅರಣಯೇ ನಮಃ । ಓಂ ಸಮಿಧಾಕರಾಯ ನಮಃ । ಓಂ ಸೂರ್ಯಾಶ್ವಜಾಯ ನಮಃ । ಓಂ ಶಮೀಪತಯೇ ನಮಃ । ಓಂ ಅಶ್ವತ್ಥಾಯ ನಮಃ । ಓಂ ನಾರಾಯಣಾಯ ನಮಃ । ಓಂ ಕೇಶವಾಯ ನಮಃ । ಓಂ ಹರಯೇ ನಮಃ । ಓಂ ಸಂರಕ್ಷಣಾಯ ನಮಃ । ಓಂ ವರಾಹಾಯ ನಮಃ । ಓಂ ಪದ್ಮನಾಭಾಯ ನಮಃ । ಓಂ ದಾಮೋದರಾಯ ನಮಃ । ಓಂ ಕಾಲಾತ್ಮನೇ ನಮಃ । ಓಂ ರಾಮಾಯ ನಮಃ । ಓಂ ವೈಕುಂಠನಾಥಾಯ ನಮಃ । ಓಂ ಅನಿರುದ್ಧಾಯ ನಮಃ । ಓಂ ಪರಮೇಶ್ವರಾಯ ನಮಃ । ಓಂ ದೇವಾದಿದೇವಾಯ ನಮಃ । ಓಂ ಪುಷ್ಕರನೇತ್ರಾಯ ನಮಃ । ಓಂ ವಾಸುದೇವಾಯ ನಮಃ । ಓಂ ಸರ್ವವ್ಯಾಪಿನೇ ನಮಃ । ಓಂ ಸರ್ವೇಶ್ವರಾಯ ನಮಃ । ಓಂ ಅಶ್ವತ್ಥನಾರಾಯಣಸ್ವಾಮಿನೇ ನಮಃ । ನಾನಾವಿಧಪರಿಮಳ ಪತ್ರಪುಷ್ಪಾಣಿ ಸಮರ್ಪಯಾಮಿ ॥

ಓಂ ಕೇಶವಾಯ ನಮಃ । ಓಂ ನಾರಾಯಣಾಯ ನಮಃ । ಓಂ ಮಾಧವಾಯ ನಮಃ । ಓಂ ಗೋವಿಂದಾಯ ನಮಃ । ಓಂ ವಿಷ್ಣವೇ ನಮಃ । ಓಂ ಮಧುಸೂದನಾಯ

ನಮಃ ॥ ಓಂ ತ್ರಿವಿಕ್ರಮಾಯ ನಮಃ ॥ ಓಂ ವಾಮನಾಯ ನಮಃ ॥ ಓಂ ಶ್ರೀಧರಾಯ ನಮಃ ॥ ಓಂ ಹೃಷೀಕೇಶಾಯ ನಮಃ ॥ ಓಂ ಪದ್ಮನಾಭಾಯ ನಮಃ॥ ಓಂ ದಾಮೋದರಾಯ ನಮಃ ॥ ಓಂ ಸಂಕರ್ಷಣಾಯ ನಮಃ ॥ ಓಂ ವಾಸುದೇವಾಯ ನಮಃ॥ ಓಂ ಪ್ರದ್ಯುಮ್ನಾಯ ನಮಃ॥ ಓಂ ಅನಿರುದ್ಧಾಯ ನಮಃ॥ ಓಂ ಪುರುಷೋತ್ತಮಾಯ ನಮಃ ॥ ಓಂ ಅಧೋಕ್ಷಜಾಯ ಮಃ ॥ ನಓಂ ನರಸಿಂಹಾಯ ನಮಃ॥ ಓಂ ಅಚ್ಯುತಾಯ ನಮಃ ॥ ಓಂ ಜನಾರ್ದನಾಯ ನಮಃ ॥ ಓಂ ಉಪೇಂದ್ರಾಯ ನಮಃ। ಓಂ ಹರಯೇ ನಮಃ ॥ ಓಂ ಶ್ರೀಕೃಷ್ಣಾಯ ನಮಃ ॥ ಕೇಶವಾದಿಚತುರ್ವಿಂಶತಿನಾಮ ಪೂಜಾಂ ಸಮರ್ಪಯಾಮಿ ॥

ವನಸ್ಪತಿರಸೋದ್ಭೂತಂ ಗಂಧಾಢ್ಯೋಽತಿಮನೋಹರಃ । ಆಘ್ರೇಯಸ್ಸರ್ವದೇವಾನಾಂ ಧೂಪೋಯಂ ಪ್ರತಿಗೃಹ್ಯತಾಂ ॥ ಯತ್ಪುರುಷಮಿತಿ ಧೂಪಂ ಸಮರ್ಪಯಾಮಿ ॥ ಚಕ್ಷುಸ್ತ್ವಂಸರ್ವಲೋಕಾನಾಂ ತಿಮಿರಾಂಧನಿವಾರಣಂ॥ ಆರ್ತಿಕ್ಯಂ ಕಲ್ಪಿತಂ ಭಕ್ತ್ಯಾ ಗೃಹಾಣ ಜಗದೀಶ್ವರ। ಬ್ರಾಹ್ಮಣೋಽಸ್ಯಮುಖಮಾಸೀದಿತಿ ದೀಪಂ ಸಮರ್ಪಯಾಮಿ ॥ ಭಕ್ಷ್ಯಂ ಭೋಜ್ಯಂ ಚ ಲೇಹ್ಯಂ ಚ ಚೋಷ್ಯಂ ಸ್ವಾದ್ಯಂ ಮಯಾ ಹೃತಂ॥ ಪ್ರೀತಯೇ ಪರಮೇಶಸ್ಯ ದತ್ತಂ ತೇ ಸ್ವೀಕುರು ಪ್ರಭೋ॥ಚಂದ್ರಮಾ ಮನಸೋ ಜಾತಃ ಇತಿ ನೈವೇದ್ಯಂ ಸಮರ್ಪಯಾಮಿ ॥ ಮಧ್ಯೇ ಮಧ್ಯೇ ಪಾನೀಯಂ ಸಮರ್ಪಯಾಮಿ । ಉತ್ತರಾಪೋಶನಂ ಸಮರ್ಪಯಾಮಿ ॥ ಹಸ್ತಪ್ರಕ್ಷಾಳನಂ ಸಮರ್ಪಯಾಮಿ ॥ ಪಾದಪ್ರಕ್ಷಾಳನಂ ಸಮರ್ಪಯಾಮಿ ॥ ಕರೋದ್ವರ್ತನಂ ಸಮರ್ಪಯಾಮಿ ॥ ಪೂಗೀಫಲಸಮಾಯುಕ್ತಂ ನಾಗವಲ್ಲೀದಳೈರ್ಯುತಂ । ಕರ್ಪೂರಚೂರ್ಣಸಂಯುಕ್ತಂ ತಾಂಬೂಲಂಪ್ರತಿಗೃಹ್ಯತಾಂ। ಪೂಗೀಫಲದತಾಂಬೂಲಂ ಸಮರ್ಪಯಾಮಿ॥ಹಿರಣ್ಯಗರ್ಭಗರ್ಭಸ್ಥಂ ಹೇಮಬೀಜಂ ವಿಭಾವಸೋಃ।ಅನಂತಪುಣ್ಯಫಲದಂ ಅತಃಶಾಂತಿಂ ಪ್ರಯಚ್ಛ ಮೇ॥ ಸುವರ್ಣಪುಷ್ಪ ದಕ್ಷಿಣಾಂ ಸಮರ್ಪಯಾಮಿ ॥ ತ್ವದ್ಭಾಸಾ ಭಾಸತೇ ಲೋಕಃ ಕೋಟಿಸೂರ್ಯಸಮಪ್ರಭ । ನೀರಾಜಯಿಷ್ಯೇ ತ್ವಾಂ ವಿಷ್ಣೋ ಕೃಪಾಂ ಕುರು ಮಯೀಶ್ವರ॥ ವೇದಾಹಮಿತಿ ಉತ್ತರನೀರಾಜನಂ ಸಮರ್ಪಯಾಮಿ॥ ಕಾಯೇನ ಮನಸಾ ವಾಚಾ ಮಮ ಜನ್ಮ ಶತಾರ್ಜಿತಂ। ಪಾಪಂ ಪ್ರಶಮಯ ಸ್ವಾಮಿನ್ ಪ್ರದಕ್ಷಿಣನಮಸ್ಕೃತೈಃ ॥ ಯಾನಿ ಕಾನಿ ಚ ಪಾಪಾನೀತಿ ಪ್ರದಕ್ಷಿಣಂ ಸಮರ್ಪಯಾಮಿ॥ ವ್ಯಕ್ತಾವ್ಯಕ್ತಸ್ವರೂಪಾಯ ಸೃಷ್ಟಿಸ್ಥಿತ್ಯಂತ ಕಾರಿಣೇ। ಆದಿಮಧ್ಯಾಂತಶೂನ್ಯಾಯ ವಿಷ್ಟರಶ್ರವಸೇ ನಮಃ ॥ ನಮಸ್ಕಾರಾನ್ ಸಮರ್ಪಯಾಮಿ ॥ ಸ್ವರ್ಗಾದಿಸರ್ವಲೋಕೇಶ ಸರ್ವಸಂಪತ್ಪ್ರದಾಯಕ ॥ ಗೃಹಾಣಾರ್ಘ್ಯಂ ಮಯಾ ದತ್ತಂ ಕೃಪಯಾ ಮಧುಸೂದನ॥ ಪ್ರಸನ್ನಾರ್ಘ್ಯಂ ಸಮರ್ಪಯಾಮಿ॥ ಮೂಲತೋ ಬ್ರಹ್ಮರೂಪಾಯ ಮಧ್ಯತೋ ವಿಷ್ಣುರೂಪಿಣೇ। ಅಗ್ರತಶ್ಶಿವರೂಪಾಯ ವೃಕ್ಷರಾಜಾಯ ತೇ ನಮಃ॥ಯಜ್ಞೇನ ಯಜ್ಞಮಯಜಂತ ದೇವಾಃ।ಇತಿ ಮಂತ್ರಪುಷ್ಪಂ ಸಮರ್ಪಯಾಮಿ॥ ಅಮಾಯೈ ಚ ನಮಸ್ತುಭ್ಯಂ ಸೋಮಾಯೈ ಚ

ನಮೋಽಸ್ತು ತೇ॥ ಅಶ್ವತ್ಥಮುಭಯೋರ್ಯೋಗೇ ತ್ರಿಮೂರ್ತ್ಯಾತ್ಮಕಮರ್ಚಯೇತ್ ಇತಿ ಧ್ಯಾತ್ವಾ ॥ ದೇವದೇವ ಜಗನ್ನಾಥ ಸೃಷ್ಟಿಸ್ಥಿತ್ಯಂತಕಾರಕ। ಶರಣ್ಯಂ ತ್ವಾಂ ಪ್ರಪನ್ನೋಽಸ್ಮಿ ತ್ರಾಹಿ ಮಾಂ ಕರುಣಾಕರ॥ ನಿರ್ಮಗ್ನೋಽಪಿ ಮಹಾಘೋರಸಂಸಾರೇ ದುಃಖಸಾಗರೇ ॥ ಮಾಮುದ್ಧರ ಮಹಾದೇವ ಸರ್ವದುಃಖಭಯಾಪಹ ॥ ಇತಿ ಪ್ರಾರ್ಥನಾಂ ಸಮರ್ಪಯಾಮಿ ॥ ಅಥ ಪುನಸ್ಸಂಕಲ್ಪ್ಯ ಶ್ರೀಮದಶ್ವತ್ಥನಾರಾಯಣ ಪ್ರೀತ್ಯರ್ಥಂ ಮಮ ಸರ್ವಸೌಭಾಗ್ಯ ಸಿದ್ಧ್ಯರ್ಥಂ ಸಮಸ್ತ ಪಾಪಕ್ಷಯಾರ್ಥಂ ಸೋಮವತ್ಯಮಾವಾಸ್ಯಾಪ್ರಯುಕ್ತ ಶ್ರೀಮದಶ್ವತ್ಥನಾರಾಯಣಾಯ ಅಷ್ಟೋತ್ತರ ಶತಫಲ ಪುಷ್ಪ ಭಕ್ಷ್ಯ ಸುವರ್ಣ ಧನಧಾನ್ಯಾದಿ ಸಂಯುತಮಷ್ಟೋತ್ತರಶತ ಸಂಖ್ಯಾಕಾನಿ ನಮಸ್ಕಾರಾಣಿ ಕರಿಷ್ಯೇ। ಇತಿ ಸಂಕಲ್ಪ್ಯ ಮೂಲತೋ ಬ್ರಹ್ಮರೂಪಾಯ ಮಧ್ಯತೋ ವಿಷ್ಣುರೂಪಿಣೇ। ಅಗ್ರತಶ್ಶಿವರೂಪಾಯ ವೃಕ್ಷರಾಜಾಯ ತೇ ನಮಃ । ಇತಿ ಮಂತ್ರೇಣ ಪ್ರದಕ್ಷಿಣಂ ಕುರ್ಯಾತ್। ತದನಂತರಂ ಕ್ಷೀರಸಂಮಿಶ್ರ ತುಂಡಲಪಿಷ್ಟೇನ ಅಶ್ವತ್ಥಂ ಸಂಸ್ಪೃಷ್ಟ್ವಾ ವೃಕ್ಷಮವಲೋಕ್ಯ । ಬ್ರಾಹ್ಮಣಂ ಸಂಪೂಜ್ಯ ವಾಯನ ದಾನಂ ಕುರ್ಯಾತ್। ಅಮಾಸೋಮವ್ರತಸ್ಯಾಸ್ಯ ಸಂಪೂರ್ಣಫಲಹೇತವೇ॥ ವಾಯನಂ ದ್ವಿಜವರ್ಯಾಯ ಸಹಿರಣ್ಯಂ ದದಾಮ್ಯಹಂ ॥ ಯನ್ಮಯಾ ಮನಸಾ ವಾಚಾ ನಿಯಮಾತ್ಪೂಜನಂ ಕೃತಂ। ಸರ್ವಂ ಸಂಪೂರ್ಣತಾಂ ಯಾತು ತದ್ವಿಪ್ರಾಣಾಂ ಪ್ರಸಾದತಃ ॥ ಇತಿ ಪ್ರಾರ್ಥನಾನಂತರಂ ॥ ಅಶ್ವತ್ಥಃಪ್ರತಿಗೃಹ್ಣಾತು ಲಿಶ್ವತೋ ವೈ ದದಾತಿ ಚ ಅಶ್ವತ್ಥಸ್ತಾರಕೋಭಾಭ್ಯಾಂ ಅಶ್ವತ್ಥಾಯ ನಮೋ ನಮಃ ॥ ಇತಿ ಉಪಾಯದಾನಂ॥ ವ್ಯಕ್ತಾವ್ಯಕ್ತಸ್ವರೂಪಾಯ ಸೃಷ್ಟಿಸ್ಥಿತ್ಯಂತಕಾರಿಣೇ । ಆದಿಮಧ್ಯಾಂತಹೀನಾಯ ವಿಷ್ವರಶ್ರವಸೇ ನಮಃ । ಓಂ ಛತ್ರಂ ಸಮರ್ಪಯಾಮಿ॥ ಚಾಮರಂ ಸಮರ್ಪಯಾಮಿ ॥ ನೃತ್ಯಂ ಸಮರ್ಪಯಾಮಿ ॥ ವಾದ್ಯಂ ಸಮರ್ಪಯಾಮಿ ॥ ಇತ್ಯಾದಿ ಪುನಃ ಪೂಜಾನಂತರಂ ಯಸ್ಯ ಸ್ಮೃತ್ಯಾದಿ ಅನಯಾ ಮಯಾ ಕೃತ ಅಮಾಸೋಮವಾರ ವ್ರತಾಂಗ ಶ್ರೀಮದಶ್ವತ್ಥನಾರಾಯಣಃ ಸುಪ್ರೀತಃಸುಪ್ರಸನ್ನೋವರದೋಭವತು॥

ಇತಿ ಪೂಜಾವಿಧಾನಂ ಸಂಪೂರ್ಣಂ. ಶ್ರೀಃ ಶ್ರೀಃ ಶ್ರೀಃ

ಅಥ ಶ್ರೀ ಅಮಾಸೋಮವಾರ ವ್ರತಕಥಾ

ಸೂತ ಉವಾಚ ॥ ಶರತಲ್ಪಗತಂ ಭೀಷ್ಮಮುಪಗಮ್ಯ ಯುಧಿಷ್ಠಿರಃ॥ ಕೃಶಪ್ರಣಾಮೋ ಧರ್ಮಾತ್ಮಾ ಹಿತಂ ವಚನಮಬ್ರವೀತ್॥ ಯುಧಿಷ್ಠಿರಃ ॥ ಹತೇಷು ಕುರುಮುಖ್ಯೇಷು ಭೀಮಸೇನೇನ ಕೋಪಿನಾ ॥ ತಥಾಪರೇಷು ಭೂತೇಷು ಹತೇಷು ಯುಧಿವಿಷ್ಣುನಾ ॥ ದುರ್ಯೋಧನಕುಮಂತ್ರೇಣ ಜಾತೋಽಸ್ಮಾಕಂ ಕುಲಕ್ಷಯಂ ॥ ನಸಂತಿ ಭುವಿ ಭೂಪಾಲ ಬಾಲವೃದ್ಧಾತುರಾತ್ಮನೇ॥ ಅವಿಷ್ಟಾವವಯಂ ಪಂಚವಂಶೇ ಭಾರತ ಸಂಜ್ಞಿಕೇ ॥ ಏಕಾತಪತ್ರಮಪಿ ಚ ರಾಜ್ಯಂ ಮಹ್ಯಂ ನ ರೋಚತೇ॥ ಜೀವಿತೇಽಪಿ ಜುಗುಪ್ಸಾಸ್ಮೃತೇನ ಸುಗತೀ ಕ್ವಚಿತ್॥ ದೃಷ್ಟ್ವಾ ಸಂತತಿವಿಚ್ಛೇದಂ ಸಂತಾಪಂ ಹೃ

ಅಯೇಽನಿಶಂ ಅ ಶ್ವತ್ಥಮಾಸ್ತ್ರನಿರ್ದಗ್ಧಸೂತ್ತ್ರರಾಗರ್ಭಸಂಭವಃ ॥ ಅತೋ ಮೇ
ದ್ವಿಗುಣಂ ದುಃಖಂ ಪಿಂಡವಿಚ್ಛೇದದರ್ಶನಾತ್ ॥ ಕಿಂ ಕರೋಮಿ ಕ್ವ ಗಚ್ಛಾಮಿ ಪಿತಾ
ಮಹ ವದಾಧುನಾ॥ ಯೇನ ಸಂಪದ್ಯತೇ ಸದ್ಯಃ ಸಂತತಿಶ್ಚಿರಜೀವಿನೀ ॥ ಭೀಷ್ಮಃ ॥
ಶೃಣು ರಾಜನ್ ಪ್ರವಕ್ಷ್ಯಾಮಿ ವ್ರತಾನಾಮುತ್ತಮಂವ್ರತಂ ॥ ಯಸ್ಯ ಸ್ಮರಣಮಾತ್ರೇಣ
ಸಂತತಿಶ್ಚಿರಜೀವಿನೀ। ಅಮಾವಾಸ್ಯಾ ಯದಾಪಾರ್ಥ ಸೋಮವಾರಯುತಾ ಭವೇತ್ ॥
ತಸ್ಯಾಮಶ್ವತ್ಥಮಾಗತ್ಯಪೂಜಯೇಚ್ಚ ಜನಾರ್ದನಂ ॥ ಅಷ್ಟೋತ್ತರಶತಂ ಕುರ್ಯಾತ್ತ
ಸ್ಮಿನ್ ವೃಕ್ಷೇ ಪ್ರದಕ್ಷಿಣಾನ್ ॥ ತಾವತ್ಸಂಖ್ಯಾನುಪಾದಾಯ ರತ್ನಧಾತುಫಲಾನಿ ಚ ॥
ವ್ರತರಾಜಮಿದಂ ರಾಜನ್ ವಿಷ್ಣೋಃ ಪ್ರೀತಿಕರಂ ಶುಭಂ । ರುದ್ರಾದಿತ್ಯಾದಿಕರ್ತಾರಃ
ಪ್ರಸೀದಂತಿ ತದಾತ್ಮಕಾಃ । ಮೂರ್ತಿತ್ರಯಾತ್ಮಕೋಽಶ್ವತ್ಥಸ್ಸರ್ವದೇವಮಯಸ್ತಥಾ ।
ಪೂಜನಾದೇವ ವೃಕ್ಷಸ್ಯ ಸರ್ವೇಷ್ಟಾರ್ಥಾನವಾಪ್ನುಯಾತ್ । ಉತ್ತರಾಕಾರಯೇತ್ಪ್ರಾ
ಜ್ಞಪರೋ ಜೀವಿತಮಾಪ್ಸ್ಯತಿ।ಭವಿಷ್ಯತ್ರಿಗುಣ್ಯೈಃ ಪುತ್ರಃ ತ್ರಿಷು ಲೋಕೇಷು ವಿಶ್ರುತಃ।
ಶ್ರುತ್ವಾ ಪಿತಾಮಹಪ್ರೋಕ್ತಂ ಪ್ರತ್ಯುವಾಚ ಯುಧಿಷ್ಠಿರಃ॥ ಯುಧಿಷ್ಠಿರ ಉವಾಚ ॥
ತದ್ವ್ರತಂ ವ್ರತರಾಜಾಖ್ಯಂ ವಿಸ್ತರೇಣ ಪ್ರಕಾಶಯ ॥ ಕೇನ ಪ್ರಕಾಶಿತಂ ಮರ್ತ್ಯೇತೇ
ನೇದಂ ವಿಹಿತಂ ವಿಭೋ ॥ ಭೀಷ್ಮ ಉವಾಚ ॥ ಅಸ್ತಿ ಯಾ ಸರ್ವವಿಖ್ಯಾತಾ ಕಾಂಚೀ
ಸಂಜ್ಞಾ ಮಹಾಪುರೀ ॥ ರಜತಾಚಲಸಂಕಾಶಾಸಾಧುಸಂಘೈರ್ವಿರಾಜಿತಾ । ಸುವೇ
ಷೈರ್ನಾಗರಾಜಸ್ಯ ನಾರೀಭಿರುಪಶೋಭಿತಾ ॥ ಬ್ರಹ್ಮಕ್ಷತ್ರಿಯವಿಟ್ಛೂದ್ರೈಸ್ಸ್ವಸ್ವಕರ್ಮ
ರತೈರ್ವೃತಾ । ರೂಪಚಾತುರ್ಯಯುಕ್ತಾಭಿರ್ವೇಶ್ಯಾಭಿಸ್ಸಮಲಂಕೃತಾ । ಅತ್ರ ರಾಜಾ
ರತ್ನಸೇನೋ ಬಭೂವಾಮಿತವಿಕ್ರಮಃ । ತಸ್ಮಿನ್ ವಸತಿ ಭೂಪಾಲೇ ಜನಾನಂದಕರೇ
ಶುಭೇ। ತಸ್ಯ ರಾಜ್ಯೇ ವಸದ್ವಿಪ್ರೋ ದೇವಸ್ವಾಮೀತಿ ವಿಶ್ರುತಃ। ತಸ್ಯಸ್ತ್ರೀರೂಪಸಂ
ಪನ್ನಾ ನಾಮ್ನಾ ಧನವತೀ ಶುಭಾ । ಯಥಾರ್ಥನಾಮಧೇಯಾ ಸಾ ಲಕ್ಷ್ಮೀರಪರ
ವಿಗ್ರಹಾ। ತಸ್ಯಾಂ ಸಂಜನಯಾಮಾಸ ಸಪ್ತಪುತ್ರಾನ್ ಗುಣಾನ್ವಿತಾನ್। ಏಕಾಂ ದುಹಿತ
ರಂ ರಮ್ಯಾಂ ನಾಮ್ನಾ ಗುಣವತೀನೃಪ। ಕೃತದಾರಾಶ್ಚ ತೇಪುತ್ರಾವಿಹಾರಂ ಚ ಯಥಾ
ಸುಖಂ॥ ಸಾಕನ್ಯಾ ಯೌವನಂ ಪ್ರಾಪ್ಯ ಚಾರುರೂಪಪ್ರಿಯಾರ್ಥಿನೀ ॥ ಅಂತ್ರಾತರೇ
ದ್ವಿಜಃಕಶ್ಚಿದ್ಭಿಕ್ಷಾರ್ಥಂ ಸಮುಪಾಗತಃ । ದೀಪಮಾನಸ್ವತೇಜೋಭಿಃ ಮೂರ್ತಿಮಾನಿವ
ಪಾವಕಃ ॥ ದ್ವಾರದೇಶಮುಪಾಗತ್ಯ ಪ್ರಯಯೌ ಚಾಶಿಷಂ ತದಾ॥ ದೇವಸ್ವಾಮಿಸ್ನು
ಷಾಃ ಸಪ್ತ ಸಮುತ್ಥಾಯಸ ಸಂಭ್ರಮಃ। ಭಿಕ್ಷಾಂ ಪ್ರತ್ಯೇಕಮಾನಿನ್ಯುರ್ದದುಸ್ತಸ್ಮೈ
ದ್ವಿಜನ್ಮನೇ॥ ಅವೈಧವ್ಯಾಶಿಷಂ ಪ್ರಾದಾತ್ತಾಭ್ಯಾಂಸೌಭಾಗ್ಯಸಂಪದಂ॥ ತತೋ ಗುಣ
ವತೀ ಮಾತಾ ಪ್ರಹಿತಾ ಸಹಭಿಕ್ಷಯಾ॥ ವಿಪ್ರಾಯ ಭಿಕ್ಷಾಂ ಪ್ರದದೌ ಕೃತ್ವಾ ಪಾದಾ
ಭಿವಂದನಂ ॥ ಆಶಿಷಂ ಚ ದದೌ ವಿಪ್ರಃ ಶುಭೇಧರ್ಮಪತೀ ಭವ ॥ ನಾನ್ಯಲಕ್ಷ್ಯಂ
ಗುಣವತೀ ಶ್ರುತ್ವಾ ಗತ್ವಾ ಯಯೌಗೃಹಂ ॥ ಮಾತ್ರೇ ನಿವೇದಯಾಮಾಸ ಆಶಿಷಂ
ತೇನ ಯೋಜಿತಂ॥ಶ್ರುತ್ವಾ ಧನವತೀ ಪುತ್ರೀಂ ಕರೇ ಧೃತ್ವಾ ಸಮಾಯಯೌ॥ ಪ್ರಣತಿಂ

ಕಾರಯಾಮಾಸ ಪುನಸ್ತಸ್ಮೈ ದ್ವಿಜನ್ಮನೇ॥ ತಥೈವಾಶಿಷಮುಚ್ಚಾರ್ಯ ವಿಪ್ರಸ್ತಾಮಭ್ಯನಂದಯತ್ ॥ ಶ್ರುತ್ವಾಶಿಷಂ ಧನವತೀ ಸಂಚಿತ್ಯ ಪ್ರತ್ಯುವಾಚ ಹ ॥ ಧನವತೀ ॥ ಪ್ರಸೀದ ಭಗವನ್ ವಿಪ್ರ ವಚನಂ ಮೇಽವಧಾರಯ ॥ ಸ್ನುಷಾಭ್ಯಃ ಪ್ರಣತಾಭ್ಯೋ ಮೇ ತ್ವಯಾ ದತ್ತಾವರಾಶಿಷಃ॥ ಅವೈಧವ್ಯಕರಾಃ ಪುತ್ರಾಸ್ಸುಖಸೌಭಾಗ್ಯದಾಯಕಾಃ॥ ಸುತಾಯಾಂ ಪ್ರಣತಾಯಾಂ ಮೇ ವಿಪರೀತಂ ತ್ವಯೋದಿತಂ ॥ ಭದ್ರೇ ಧರ್ಮವತೀ ಭೂಯಾ ಇತ್ಯುದೀರ್ಯ ಪುನಃಪುನಃ ॥ ಆಶೀಃ ಪ್ರಯುಕ್ತಾ ವಿಪ್ರರ್ಷೇ ಕಾರಣಂ ವದ ಸತ್ವರಂ ॥ ದ್ವಿಜ ಉವಾಚ॥ ಧನ್ಯಾಸಿ ತ್ವಂ ಧನವತೀಪ್ರಖ್ಯಾತಚರಿತಾ ಭುವಿ॥ ಯಥಾಯೋಗ್ಯಾಂ ಪ್ರಯುಕ್ತೇಯಂ ಮಯಾಶೀರ್ದುಹಿತಾ ತವ॥ಇಯಂ ಸಪ್ತಪದೀ ಮಧ್ಯೇ ವೈಧವ್ಯಂ ಸಮವಾಪ್ಸ್ಯತಿ ॥ ಧರ್ಮಾಚರಣಮತ್ಯರ್ಥಂ ಕರ್ತವ್ಯಮನಯಾ ಶುಭೇ ಅತೋಽನಯಾಶೀರ್ದತ್ತೇಯಂ ಶುಭೇ ಧರ್ಮವತೀಭವ। ಶ್ರುತ್ವಾ ಧನವತೀ ವಾಕ್ಯಂ ಚಿಂತಾಕುಲಿತಚೇತಸಾ। ಉವಾಚ ವಚನಂ ದೀನಂ ಪ್ರಣಿಪತ್ಯ ಪುನಃಪುನಃ ॥ ಧನವತ್ಯುವಾಚ॥ಉಪಾಯಂ ವೇತ್ಸಿ ಚೇದ್ವಿಪ್ರ ಕಿಂಕರೋಮಿದಯಾನಿಧೇ॥ ದ್ವಿಜ ಉವಾಚ॥ ಯದಾ ಗತಾ ಭವೇತ್ಸೋಮಾ ಗೃಹೇ ವೈ ತವಸುಂದರಿ॥ತಸ್ಯಾಃ ಪೂಜನಮಾತ್ರೇಣ ಭವೇದ್ವೈಧವ್ಯನಾಶನಂ॥ಧನವತೀ॥ಕಾ ಸಾ ಸೋಮಾ ತ್ವಯಾ ಪ್ರೋಕ್ತಾ ಕಾ ಜಾತಿಃ ಕುತ್ರ ಸಂಸ್ಥಿತಾ । ಯಸ್ಯಾಗ ಮನಮಾತ್ರೇಣ ಭವೇದ್ವೈಧವ್ಯಭಂಜನಂ । ಏತದ್ವದ ಮಹಾಭಾಗ ಸಕಲಂ ಸುವಿಚಾರ ಮೇ ॥ ದ್ವಿಜ ಉವಾಚ॥ ಸೋಮಾ ಸಾ ರಜಕೀ ಜಾತಿಸ್ಥಿತಿಸ್ತಸ್ಯಾಶ್ಚ ಸಿಂಹಳೇ। ಸಾಚೇದಾಯಾತಿ ತೇ ವೇಶ್ಮ ತದಾ ವೈಧವ್ಯಭಂಜನಂ। ಇತ್ಯುಕ್ತ್ವಾ ಬ್ರಾಹ್ಮಣೋಽನ್ಯತ್ರ ಗತೋ ಭಿಕ್ಷಾ ಪ್ರತೀಕ್ಷಯಾ । ಧನವತ್ಯಪಿ ಪುತ್ರೇಭ್ಯಃ ಪ್ರೋವಾಚ ವಚನಂ ತದಾ॥ ಧನವತೀ ॥ ಇಯಂಽನದುರ್ಲಲಿತಾ ಪುತ್ರಾಃ ಸ್ವಸಾ ಗುಣವತೀ ಶುಭಾ। ಸೋಮಾಗಮನಮಾತ್ರೇಣ ಭವೇದ್ವೈಧವ್ಯಭಂಜನಂ। ಯಸ್ಯಾಸ್ತಿ ಭಕ್ತಿಃ ಪಿತರಿ ಮಾತುರ್ಯದಿ ಸಗೌರವಂ॥ ಶ್ವಃ ಪ್ರಯಾತು ಸಹಸ್ವಸ್ರಾ ಸೋಮಮಾನಯಿತು ಧ್ರುವಂ ॥ ಪುತ್ರಾ ಊಚುಃ ॥ ಜ್ಞಾತಂ ಮಾತಸ್ತವಸಾಂತಂ ಪುತ್ರೀಸ್ನೇಹವಶಂ ಗತಂ । ಯಾತಾ ದೇಶಾಂತರಂ ಪುತ್ರಾಃ ಪ್ರಖ್ಯಾಪಯಸಿ ದುರ್ಗಮಂ । ಅಂತರೇದುಸ್ತರಸ್ಸಿಂಧುಶ್ಶತಯೋಜನವಿಸ್ತರಃ। ಅಶಕ್ಯಂ ಗಮನಂ ತತ್ರನ ಕ್ಷಮಾಗಮನೇವಯಂ॥ ದೇವಸ್ವಾಮ್ಯುವಾಚ॥ ಅಪುತ್ರಸ್ಸಪ್ತಭಿಃ ಪುತ್ರೈರಹಂ ಯಾಸ್ಯಾಮಿ ಸಿಂಹಳಂ। ಆನಯಿಷ್ಯಾಮಿ ತಾಂ ಸೋಮಾಂ ಪುತ್ರೀವೈಧವ್ಯನಾಶಿನೀಂ। ಏವಂ ವಾದಿನಿ ರಕ್ರೋಧೇ ದೇವಸ್ವಾಮಿನಿ ತತ್ಕ್ಷಣೇ। ಶಿವಸ್ವಾಮಿಕನಿಷ್ಠಸ್ತು ಪುತ್ರಃ ಪ್ರೋವಾಚಸಂಮತಃ। ತಾತ ಮಾವದ ಚೈವಂ ತ್ವಂ ರೋಷಾವೇಶವಶಂಗತಃ।ಮಯಿ ತಿಷ್ಠತಿಕಶ್ಶಕ್ತೋ ಗಂತುಂ ದ್ವೀಪಂಹಿ ಸಿಂಹಳಂ। ಇತ್ಯುಕ್ತ್ವಾ ಸಹಸೋತ್ಥಾಯ ಪ್ರಣಮ್ಯ ಶಿರಸಾಮುದಾ।ಪ್ರತಸ್ಥೇಸಹಿತಃ ಸ್ವಸ್ರಾದ್ವೀಪಂಸಿಂಹ್ಮಳಸಂಜ್ಞಕಂ। ಸಕಯದ್ಭಿರ್ದಿನೈರ್ಗತ್ವಾತೀರಂ ಪ್ರಾಪಸರಿತ್ಪತೇಃ ತಸ್ಯಾಂತಮಂಬುಧಿಂತತ್ರದ್ರಪ್ರಯತ್ನಮಕರೋದ್ದ್ವಿಜಃ । ಸದದರ್ಶ ಸುವಿಸ್ತೀರ್ಣಂ ಸ್ಯ

ಗ್ರೋಧದ್ರುಮಮಂತಿಕೇ। ತತ್ಪಾದಪತಲೇ ಸ್ಥಿತ್ವಾ ತಾಭ್ಯಾಂ ನೀತಂ ತು ತದ್ದಿನಂ। ತತ್ಕೋಟರೇ ಸುಖಾಸೀನಾ ಗೃಧ್ರರಾಜಸ್ಯ ಬಾಲಕಾಃ। ಶಾಬಕಾನಾಂ ಕೃತೇ ಗೃಧ್ರೋಗೃಹೀತ್ವಾ ಶಿಶುಭೋಜನಂ। ಪ್ರಾದಾನ್ನ ಶಾಬಕಾಗೃಧ್ರಾದ್ಭೋಜನಂ ಜಗೃಹುರ್ಭೃಶಂ। ಸಪ್ರಚ್ಛ ಬಾಲಕಾನ್ ಗೃಧ್ರೋ ಚಿಂತಾಕುಲಿತಮಾನಸಾನ್॥ ಗೃಧ್ರ ಉವಾಚ॥ ಕಥಂ ನಭುಂಜತೇ ಪುತ್ರಾ ಭವಂತಃ ಕ್ಷುಧಿತಾ ಅಪಿ। ಆನೀತಂ ಕೋಮಲಂ ಮಾಂಸಂ ಭವದ್ಯೋಗ್ಯಮಿದಂ ಮಯಾ॥ ಶಾಬಕಾ ಊಚುಃ॥ ಏತದ್ವೃಕ್ಷತಲೇ ತಾತ ಮಾನವಾವತಿಷ್ಠತಃ। ಅಭುಂಜತೋಸ್ತಯೋರದ್ಯ ಕಥಂ ಭುಂಜಾಮಹೇ ವಯಂ। ಏತಚ್ಛ್ರುತ್ವಾ ಸಗೃಧ್ರಸ್ತು ಕರುಣಾಪೃಷ್ಟಚೇತನಃ। ತಯೋರಂತಿಕಮಾಗತ್ಯ ವಚನಂ ಸಮುಭಾಷತ ॥ಗೃಧ್ರ॥ ಜ್ಞಾತಸ್ತು ಯುವಯೋಃ ಕಾಮೋವಕ್ತವ್ಯೋತಮಮದ್ವಿಜ। ಕ್ರಿಯತೇ ಸರ್ವಥಾ ವಿಪ್ರಭೋಜನಂ ಕರ್ತುಮರ್ಹಸಿ॥ ದ್ವಿಜ ಉವಾಚ॥ ಸಿಂಹಳಂ ಗಂತುಕಾಮೋಽಹಂ ಜಲಧೇಃ ಪಾರಮದ್ಯ ವೈ। ಸೋಮಾಗಮನಮಿಚ್ಛಾಮಿ ಸ್ವಸೃವೈಧವ್ಯನಾಶನಂ। ಗೃಧ್ರಃ ತ್ವಾಮಹಂ ಪಾರಯಿಷ್ಯಾಮಿ ಜಲಧೇಃ ಪ್ರಾತರೇವ ಹಿ। ಸೋಮ ಗೃಹಮಪಿ ಬ್ರಹ್ಮನ್ ದರ್ಶಯಿಷ್ಯಾಮಿ ಸಿಂಹಳೇ। ತತೋ ರಾತ್ರ್ಯಾಂ ವ್ಯತೀತಾಯಾಮುದಿತೇ ತು ದಿವಾಕರೇ। ಪಾರಮುತ್ತಾರಿತೌ ತೌ ತು ಗೃಧ್ರರಾಜೇನ ವೇಗಿನಾ। ಸಿಂಹಳದ್ವೀಪಮಾಗತ್ಯ ಸ್ಥಿತೌ ಸೋಮಾ ಗೃಹಾಂತಿಕೇ। ತತಃ ಪ್ರತ್ಯೂಷಸಮಯೇ ಸಮ್ಮೃಜ್ಯಾಂಗಣಮಂಡಲಂ। ಲೇಪನಂ ಚಕ್ರತುಸ್ತಸ್ಯಾದಿವಸೇ ಶುಭಂ। ಏವಂ ವಿಧತೋಸ್ತತ್ರ ಪೂರ್ಣಸ್ಸಂವತ್ಸರೋ ಗತಃ। ಸ್ನುಷಾಃ ಪುತ್ರಾನ್ ಸಮಾಹೂಯ ಸೋಮಾ ಪಪ್ರಚ್ಛವಿಸ್ಮಿತಾ। ಮಾರ್ಜನಂ ಲೇಪನಂ ಕೋಽತ್ರ ಕರೋತಿ ಮಮ ಕಥ್ಯತಾಂ। ಏಕದೈವಾಥ ಜಗದುಸ್ಸರ್ವಕೃತ್ಯಮಿದಂ ಹಿ ನಃ। ತತಃ ಕದಾಚಿದ್ರಜಕೀ ನಿಭೃತಾಸಂಸ್ಥಿತಾನಿಶಿ। ದದರ್ಶ ಬ್ರಾಹ್ಮಣೀಂ ಕನ್ಯಾಂ ಮಾರ್ಜಯಂತೀ ಗೃಹಾಂಗಣಂ। ಲಿಂಪಂಥಮಂಗಣಂಪ್ರಾಪ್ತಂ ಭ್ರಾತರಂ ಚ ಶುಚಿವ್ರತಂ। ಸೋಮಾಪಪ್ರಚ್ಛ ತೌ ಗತ್ವಾ ಕೌ ಯುವಾ ಕಥ್ಯತಾಂ ಮಮ। ಊಚತುಸ್ತೌ ತದಾ ಸೋಮಾಂ ಸಾವಾಂ ಬ್ರಾಹ್ಮಣಪುತ್ರಕೌ ॥ ಸೋಮೋವಾಚ॥ ದಗ್ಧಾಸ್ಮಿ ಬತ ನಷ್ಟಾಸ್ಮಿ ಬ್ರಾಹ್ಮಣೌ ಗೃಹಮಾರ್ಜಕೌ। ಕಾಂ ಗತಿಂ ಬತ ಯಾಸ್ಯಾಮಿ ಪಾಪಾದಸ್ಮಾದಸಂಶಯಂ। ಹೀನಜಾತಿರಹಂ ಖ್ಯಾತಾ ರಜಕೀ ಸರ್ವಥಾ ದ್ವಿಜ। ಕಥಂ ತ್ವಂ ಬ್ರಾಹ್ಮಣೋಭೂತ್ವಾ ವಿರುದ್ಧಂ ಮೇ ಚಿಕೀರ್ಷಸಿ॥ ದೇವಸ್ವಾಮ್ಯುವಾಚ ॥ ಏಷಾ ಗುಣವತೀ ನಾಮ್ನಾ ಸ್ವಸಾ ಮಮ ಸುಮಧ್ಯಮಾ। ಅಸ್ಯಾಃ ಸಪ್ತಪದೀಮಧ್ಯೇ ವೈಧವ್ಯಂ ಸಂಪ್ರಪತ್ಸ್ಯತೇ। ತವ ಸಾನ್ನಿಧ್ಯಮಾತ್ರೇಣ ಭವೇದ್ವೈಧವ್ಯಭಂಜನಂ। ಅತೋ ಹೇತೋಸ್ಸಹಸ್ವಸ್ರಾ ವಾಸ್ತುಕರ್ಮ ಕರೋಮಿತೇ॥ ಸೋಮೋವಾಚ॥ ಇತಃ ಪರಂ ನ ಕರ್ತವ್ಯಂ ಯಾಸ್ಯಾಮಿ ತವ ಶಾಸನಾತ್। ಇತ್ಯುಕ್ತ್ವಾ ಗೃಹಮಾಗತ್ಯ ಸ್ನುಷಾಭ್ಯಃ ಪ್ರತ್ಯುವಾಚ ಹ। ಯುಃ ಕಶ್ಚಿನ್ಮಮ ಗ್ರಾಮೇಽಸ್ಮಿನ್ ಮ್ರಿಯತೇ ಮಾನವಃ ಕ್ವಚಿತ್। ತಥೈವ ರಕ್ಷಣೀಯೋಽಸೌ ಯಾವದಾಗಮ್ಯತೇ ಮಯಾ।

ಕಸ್ಯಚಿದ್ವಚನಾತ್ಕ್ವೋಽಪಿ ನೈವ ದಾಹ್ಯಃ ಕಥಂಚನ । ತಥೇತ್ಯುಕ್ತ್ವಾ ಸ್ನುಷಾಭಿಸ್ಸಾ
ಸೋಮಾ ಯಾತಾ ಮಹಾಂಬುಧಿಂ।ಪಾರಮುತ್ತಾರಯಾಮಾಸ ಕ್ಷಣೇನ ದ್ವಿಜಪುತ್ರಕೌ।
ಸ್ವಯಮಾಕಾಶಮಾರ್ಗೇಣ ಸೋತ್ತತಾರ ತದಾರ್ಣವಂ । ಪ್ರಾಪ್ತಾ ಕಾಂಚೀಪುರೀಂ
ಸರ್ವೇ ನಿಮೇಷಾತ್ತತ್ಪ್ರಭಾವತಃ । ಸೋಮಾಂ ದೃಷ್ಟ್ವಾ ಧನವತೀ ಹೃಷ್ಟಾ ಪೂಜಾ
ಮಥಾಽಕರೋತ್ ।ಅತ್ರಾಂತರೇ ಶಿವಸ್ವಾಮೀ ತದಾ ದೇಶಾಂತರಾತ್ಸ್ವಸುಃ॥ ಸದೃಶಂ
ವರಮಾನೇತುಂ ಜಗಾಮೋಜ್ಜಯಿನೀಂ ಪ್ರತಿ। ಆನಿನಾಯ ವರಂ ತತ್ರ ದೇವಶರ್ಮ
ಸುತಂ ಸುಧೀಃ । ಬ್ರಾಹ್ಮಣಂ ರುದ್ರಶರ್ಮಾಣಂ ಗುಣಿನಂ ಸದೃಶಂ ಸ್ವಸುಃ। ತತಸ್ಸಾ
ರಜಕೀ ಸೋಮಾ ವೈವಾಹಿಕಮಥಾಕರೋತ್ । ಸುಲಗ್ನೇ ಚ ಸುನಕ್ಷತ್ರೇ ದೇವಸ್ವಾ
ಮೀ ತು ಕನ್ಯಕಾಂ।ದದೌ ತಸ್ಮೈ ಗುಣವತೀಂ ಗುಣಿನೇ ರುದ್ರಶರ್ಮಣೇ।ತತೋ ವೈ
ವಾಹಿಕೈರ್ಮಂತ್ರೈ ಹೂರ್ಯಮಾಣೇ ಹುತಾಶನೇ।ತತಸ್ಸಪ್ತಪದೀಮಧ್ಯೇ ರುದ್ರಶರ್ಮಾ
ಮೃತಸ್ತದಾ। ರುರುದುರ್ಬಾಂಧವಾಸ್ಸರ್ವೇ ಸ್ಥಿತಾ ಸೋಮಾ ನಿರಾಕುಲಾ । ಆಕ್ರಂದಶ್ಚ
ಮಹಾನಾಸೀತ್ ಲೋಕಾನಾಂ ತತ್ರ ಪಶ್ಯತಾಂ।ಗುಣವತ್ಯೈ ಚ ಸಾ ತೂರ್ಣಂ ವ್ರತರಾಜ
ಪ್ರಭಾವಜಂ । ಪುಣ್ಯಂ ಸಂಕಲ್ಪ್ಯ ವಿಧಿವದ್ದದೌ ಮೃತ್ಯುನಿರಾಸದಂ। ರುದ್ರಶರ್ಮಾ ತು
ತಸ್ಮಾಚ್ಚ ವ್ರತರಾಜಪ್ರಭಾವತಃ। ಆಸಸಾದ ತದಾ ಜೀವಂ ಸುಪ್ತವತ್ಸಹಸೋತ್ಥಿತಃ ।
ಏವಂವಿವಾಹಂ ನಿರ್ವರ್ತ್ಯ ವ್ರತರಾಜಂ ನಿವೇದ್ಯ ಚ।ಆಮಂತ್ರ್ಯ ತಾಂ ಧನವತೀಂ ಸೋಮಾ
ಪ್ರಾಯಾದ್ಗೃಹಂ ಪ್ರತಿ। ಏವಂ ಸಾ ರಜಕೀ ಸೋಮಾ ಜೀವಯಿತ್ವಾಽಮೃತಂ ದ್ವಿಜಂ।
ಚಚಾಲ ಹರ್ಷಸಂಪೂರ್ಣಾ ಜಗಾಮ ಸ್ವಸ್ವಮಂದಿರಂ । ಅತ್ರಾಂತರೇ ಗೃಹೇ ತಸ್ಯಾಃ
ಪ್ರಥಮೋ ತನಯೋ ಮೃತಃ । ಪುನಸ್ಸ್ವಾಮೀ ಮೃತಸ್ತಸ್ಯಾ ಜಾಮಾತಾ ಚ ತತೋ
ಮೃತಃ। ಆಗಚ್ಛಂತ್ಯಾತ್ವಮಾವಾಸ್ಯಾಃ ಸೋಮವಾರಾನ್ವಿತಾ ತಿಥಿಃ । ಅಮಾವಾಸ್ಯಾ
ಬಭೂವಾಥ ಮೃತಸಂಜೀವಿನೀ ತಿಥಿಃ।ಸಾ ದದರ್ಶ ಜಲೋಪಾಂತೇ ವೃದ್ಧಾಂ ಕಾಂಚಿತ್
ಸ್ತ್ರಿಯಂ ತದಾ । ತೂಲಭಾರಭರಾಕ್ರಾಂತಾಂ ಕ್ರಂದಮಾನಾಂ ಸುದುಃಖಿತಾಂ ।
ವೃದ್ಧೋವಾಚ ॥ ಅವತಾರಯ ಮೇ ಪುತ್ರಿ ತೂಲಭಾರಂ ಶಿರಸ್ಥಿತಂ। ಏತದ್ಭಾರಭರಾ
ಕ್ರಾಂತಾಂ ಕ್ರಂದಮಾನಾಂ ಸುದುಃಖಿತಾಂ ॥ ಸೋಮೋವಾಚ॥ ಅಮಾವಾಸ್ಯಾದ್ಯ ಹೇ
ವೃದ್ಧೇ ಸೋಮವಾರಯುತಾ ತಿಥಿಃ। ತೂಲಕಂ ನ ಸ್ಪೃಶ್ಯಾಮ್ಯದ್ಯ ನಿಯಮೋಽಯಂ
ಮಯಾ ಕೃತಃ। ಪುನರ್ದದರ್ಶ ಯಂತೀಂ ಸಾ ತೂಲಭಾರವತೀಂ ಸ್ತ್ರಿಯಂ। ಸಾ ಚೋ
ವಾಚ ತತಃ ಪುತ್ರೀ ತೂಲಭಾರೋ ಮಹಾನಿತಿ। ಅವತೀರ್ಯ ಕ್ಷಣಂ ತಿಷ್ಠ ಸಂಗೇ ಯಾ
ಸ್ಯಾಮ್ಯಹಂ ತವ॥ಸೋಮೋವಾಚ॥ಅದ್ಯ ಮೂಲಂ ತಥಾ ತೂಲಂ ನ ಸ್ಪೃಶಾಮಿ ಕದಾ
ಚನ। ತತೋಽಶ್ವತ್ಥ ತರುಂ ಪ್ರಾಪ್ಯ ನದೀತೀರಭವಂ ಶುಭಂ। ಸ್ನಾತ್ವಾ ದೇವಂ ಸಮ
ಭ್ಯರ್ಚ್ಯ ಶರ್ಕರಾಭಿಃ ಪ್ರದಕ್ಷಿಣಾಃ । ಸಾ ಚಕಾರ ಮಹಾಭಾಗಾ ತಥೈವಾಷ್ಟೋತ್ತರಂ
ಶತಂ ॥ ಭೀಷ್ಮ ಉವಾಚ ॥ ಯದಾ ಪ್ರದಕ್ಷಿಣಂ ಕರ್ತುಂ ಕೃತಂ ಶರ್ಕರಹಸ್ತಯಾ ।

ತಥಾ ಜೀವಿತವಂತಸ್ತೇಜಾ ಮಾತೃಪತಿಪುತ್ರಕಾಃ।ನಗರಂ ಶ್ರೀಸಮಾಕೀರ್ಣಂ ತದ್ಗೃಹಂ ಚ ವಿಶೇಷತಃ। ಅಥ ಯಾತಾಮಹಾಭಾಗಾ ಸೋಮಾಸ್ಯ ಭವನಂ ಪ್ರತಿ॥ ಜೀವಿತಂ ವೀಕ್ಷ್ಯ ಭರ್ತಾರಂ ಪುತ್ರಾನ್ ಜಾಮಾತರಂ ತಥಾ॥ಅಭಿಜ್ಞಾತಾನ್ ಸಮಾಸಾದ್ಯಜಗಾಮ ಕೃತಕೃತ್ಯತಾಂ॥ ಪ್ರಣಿಪತ್ಯಸ್ನುಷಾ ಸರ್ವಾಪ್ರಪಚ್ಛುಸ್ತಾಂ ತಪಸ್ವಿನೀಂ ॥ ಮೃತಾಸ್ತೇ ತನಯಾದೇವಿ ಪತಿಜಾಮಾತೃಭಾಂಧವಾಃ॥ಜೀವಿತಾಸ್ತೇ ಕಥಂ ಸೋಮೇಮೃತಾಸ್ತೇಚ ಕಥಂ ವದ॥ ಸೋಮ ಉವಾಚ॥ಗುಣವತ್ಯೈ ಮಯಾ ದತ್ತಂ ವ್ರತರಾಜಸ್ಯ ಪುಣ್ಯಕಂ॥ ಮೃತಾಸ್ತು ತದ್ವಿಪಾಕೇನ ಪತಿಜಾಮಾತೃಪುತ್ರಕಾಃ॥ ತೂಲಕಂ ನ ಮಯಾಪ್ಸೃಷ್ಟಂ ಮೂಲಕಂ ಚ ತಥಾಸ್ನುಷಾಃ॥ ಅಶ್ವತ್ಥೇದೇವಮಭ್ಯರ್ಚ್ಯ ಕೃತಾಸ್ತತ್ರ ಪ್ರದಕ್ಷಿಣಾಃ ॥ ಶರ್ಕರಾಹಸ್ತಯಾ ತತ್ರ ಕೃತಮಷ್ಟೋತ್ತರಂ ಶತಂ॥ ಜೀವಿತಾಸ್ತತ್ಪ್ರ ಸಾ ದೇವಿ ಅದ್ಯ ಜಾಮಾತೃಪುತ್ರಕಾಃ॥ ಸರ್ವಾಭಿಃ ಕ್ರಿಯತಾಮದ್ಯ ವ್ರತರಾಜೋ ವಿಧಾನತಃ ॥ ಭವಿಷ್ಯತಿ ನ ವೈಧವ್ಯಂ ಸೌಭಾಗ್ಯಂ ಸಂಭವಿಷ್ಯತಿ ॥ ಸ್ನುಷಾ ಸಾ ಕಾರಯಾಮಾಸ ತಥಾ ಸೋಮವ್ರತೇಶ್ವರಂ ॥ ಭುಕ್ತ್ವಾ ಭೋಗಾನ್ಸ್ವಹೂಂಸ್ತತ್ರ ಪುತ್ರಪೌತ್ರಾದಿಭಿಸ್ಸಹ ॥ ತೈಶ್ಚ ಸರ್ವೈಃ ಪರಿವೃತಾ ವಿಷ್ಣುಲೋಕಮವಾಪ ಸಾ ॥ ಇತ್ಯೇತತ್ಕಥಿತಂ ಪಾರ್ಥ ವಿಸ್ತರೇಣ ಮಯಾ ತವ॥ ಯುಧಿಷ್ಠಿರಃ ॥ ಮಹಾತ್ಮ್ಯಂ ವ್ರತರಾಜಸ್ಯ ಕೋವಿಧಿರ್ವದ ವಿಸ್ತರಾತ್ ॥ ಕರ್ತವ್ಯಂ ಕೇನಭೀಷ್ಮೇದಂ ನಾರೀಭಿಃ ಪುರುಷೇಣ ವಾ॥ ಭೀಷ್ಮ ಉವಾಚ ॥ ಅಮಾವಾಸ್ಯಾ ಯದಾ ಪಾರ್ಥ ಸೋಮವಾರಾನ್ವಿತಾ ಭವೇತ್ । ತದಾ ಪುಣ್ಯತಮಃ ಕಾಲೋ ದೇವಾನಾಮಪಿ ದುರ್ಲಭಃ ॥ ಪ್ರಾತರುತ್ಥಾಯ ವ್ರತಿನಾ ಸ್ನಾನಂ ಕಾರ್ಯಂ ಜಲಾಶಯೇ॥ ಸ್ನಾತ್ವಾಮೌನೇನ ಕೌಶೇಯಂ ಪರಿಧಾಯ ವ್ರತೀತ್ವತಃ॥ಗತ್ವಾ ಚಾಶ್ವತ್ಥವೃಕ್ಷಸ್ಯ ಸಮೀಪಂ ಕುರುನಂದನ॥ಅಶ್ವತ್ಥಮೂಲೇ ಕರ್ತವ್ಯವಿಷ್ಣೋರ್ವದ್ಯಮರಪೂಜನಂ॥ ವ್ಯಕ್ತಾವ್ಯಕ್ತಸ್ವರೂಪಾಯ ಸೃಷ್ಟಿಸ್ಥಿತ್ಯಂತಕಾರಿಣೇ॥ ಆದಿಮಧ್ಯಾಂತಹೀನಾಯ ವಿಷ್ಟರಶ್ರವಸೇ ನಮಃ॥ಇತಿ।ವಿಷ್ಣುಮುಖ್ಯಾನ್ ದೇವಾನರ್ಚ್ಯಯೇದ್ವಿಧಿಪೂರ್ವಕಂ ಛಂದೋಮಯೇ ವೃಕ್ಷರಾಜೇ ಸರ್ವೇ ದೇವಾಸ್ಸಮಾಹಿತಾಃ॥ ಮೂರ್ತಿತ್ರಯಾತ್ಮಕೋಶ್ವತ್ಥ ನಾರಾಯಣಸಮಾಹ್ವಯೇ॥ ಪೂಜಿತೇ ವಿಶ್ವರೂಪೋಽಸೌ ಪೂಜ್ಯತೇ ಭಗವಾನ್ ಹರಿಃ॥ ಅಶ್ವತ್ಥೇವೋನಿಹದನಂ ತ್ವಾರಾತ್ತೇಅಗ್ನಿರಕ್ಷ್ಯತಿ॥ನಮಶ್ಚಗೃತ್ಸ್ನತೇಚೋರ್ಧ್ವಮೂಲಂ ತದ್ವಿಷ್ಣುಮಂತ್ರತಃ ॥ ಆತ್ವಾನಹಂತು ದೇವಾ ವೈ ಬ್ರಹ್ಮಜಿಜ್ಞಾಸಮಂತ್ರಗೇ॥ ಪೂಜಯೇತ್ಸರ್ವದೇವಾಂಶ್ಚ ವಿಷ್ಟ್ಯಂ ಸರ್ವಾತ್ಮಕಂ ತಥಾ। ಮೂಲತೋ ಬ್ರಹ್ಮರೂಪಾಯ ಮಧ್ಯತೋ ವಿಷ್ಣುರೂಪೇಣೇ॥ ಅಗ್ರತಃ ಶಿವರೂಪಾಯ ಅಶ್ವತ್ಥಾಯ ನಮೋ ನಮಃ॥ ಏವಂ ಸಂಪೂಜ್ಯ ದೇವೇಶಂ ಪೀತವಸ್ತ್ರಾಕ್ಷತೈಃ ಫಲೈಃ॥ ಕುಸುಮೈರ್ವಿವಿಧೈಶ್ಚೈವ ಭಕ್ಷ್ಯಭೋಜ್ಯೈಸ್ತಥಾಫಲೈಃ॥ಅಶ್ವತ್ಥೇಪೂಜನಂ ಕಾರ್ಯಂ ಪ್ರೋಕ್ತಮಂತ್ರೇಣ ಪಾಂಡವ ॥ ಅಶ್ವತ್ಥಹುತಭುಗ್ಭಾಗೇ ಗೋವಿಂದಸ್ಯ ಸದಾಪ್ರಿಯಂ॥ ಅಶೇಷಂ ಹರ

ಮೇ ಪಾಪಂ ವೃಕ್ಷರಾಜ ನಮೋಽಸ್ತು ತೇ ॥ ಪ್ರಾಣಿಸಂಜೀವಕ ಸ್ವಾಮಿನ್ ಭೂತಾವಾಸವನಸ್ಪತೇ॥ಅಶ್ವತ್ಥ ರುದ್ರರೂಪೋಽಸಿ ವೃಕ್ಷರಾಜ ನಮೋಽಸ್ತು ತೇ॥ಏವಂ ಪೂಜಾವಿಧಿಂ ಕೃತ್ವಾ ತತಃ ಕುರ್ಯಾತ್ಪ್ರದಕ್ಷಿಣಾಮ್ ॥ ಮೌಕ್ತಿಕೈಃ ಕಾಂಚನೈ ರೌಪ್ಯೈರ್ದ್ರೇಮಕೈರ್ಮಣಿಭಿಸ್ತಥಾ॥ ಕಾಂಸ್ಯ ಪಾತ್ರೈಸ್ತಾಮ್ರಪಾತ್ರೈಃ ಭಕ್ಷ್ಯಪೂರ್ಣೈಃ ಪೃಥಕ್॥ ಗೃಹೀತ್ವಾ ಭ್ರಮಣಂ ಕಾರ್ಯಂ ಯಾವದಷ್ಟೋತ್ತರಂ ಶತಂ । ಸಮರ್ಪಿತಂ ಚರುದ್ರವ್ಯಮರ್ಪಯೇದ್ಗುರವೇ ಶುಭಂ ॥ ಸುವಾಸಿನ್ಯಶ್ಚ ಸಂಪೂಜ್ಯಾಃ ಸೋಮಾಸಂತುಷ್ಟಿಹೇತವೇ ॥ ದದ್ಯಾಚ್ಚಾನ್ನಂ ತು ವಿಪ್ರೇಭ್ಯಃ ಸ್ವಯಂ ಭುಂಜೀತ ವಾಗ್ಯತಃ॥ ಏಷ ತೇ ಕಥಿತೋ ಭೂಪ ವ್ರತರಾಜವಿಧಿರ್ಮಯಾ ॥ ದ್ರೌಪದೀಂ ಚ ಕಾರಯಸ್ವತಥೋತ್ತರಾ। ಉತ್ತರಾಗರ್ಭಸಂಸ್ಥಸ್ತು ಜೀವಿತಂ ಚಲಭೇಚ್ಚಿರಾತ್ ॥ ಉದ್ಯಾಪನಂ ॥ ಶೃಣು ಪಾರ್ಥ ಪ್ರವಕ್ಷ್ಯಾಮಿ ಉದ್ಯಾಪನವಿಧಿಂ ಶುಭಂ । ಅಧುನಾ ಪೂರ್ಣತಾನಸ್ಯಾದ್ವ್ರತರಾಜಸ್ಯ ವೈ ನೃಪ ॥ ಕಾರಯೇತ್ಸರ್ವತೋಭದ್ರಂ ತನ್ಮಧ್ಯೇ ಕುಂಭಮುತ್ತಮಂ । ವೃಕ್ಷರಾಜಂ ಸುವರ್ಣಸ್ಯ ಪಂಚರತ್ನಸ್ಯ ವೇದಿಕಾಂ। ತನ್ಮೂಲೇ ಪ್ರತಿಮಾಂ ವಿಷ್ಣೋಃ ಸೌವರ್ಣೀಂ ಚ ಚತುರ್ಭುಜಾಂ ॥ ಲಕ್ಷ್ಮೀವಾಹನ ಸಂಯುಕ್ತಾಂ ಮಾಷದ್ವಯಪಲಾವಧಿ॥ ಬ್ರಹ್ಮರುದ್ರಾದಿದೇವಾನಾಂ ಯಥಾಶಕ್ತ್ಯಾ ತು ಕಾರಯೇತ್॥ ರಿಕ್ಷ್ಮಸ್ಯ ಸರ್ವದೇವಾತ್ಮಾ ವಿಷ್ಣುರೇವ ವಿಶಿಷ್ಯತೇ ॥ ಉಪಚಾರೈರನಂತೈಶ್ಚ ಯಥಾವಿಭವವಿಸ್ತರೈಃ। ನೈವೇದ್ಯೈಃ ಪುಷ್ಪಧೂಪೈಶ್ಚ ದೀಪೈಶ್ಚ ಪರಿತೋಷತಃ। ರಾತ್ರೌ ಜಾಗರಣಂ ಕುರ್ಯಾತ್ಪ್ರಭಾತೇ ಹೋಮಮಾಚರೇತ್ ॥ಯವೈಃ ಫಲಾಭಿಶ್ಚೈವಪಾಯಸೇನತಿಲೈಸ್ತದಾ॥ ಇದಂ ವಿಷ್ಣುರಿತಿ ಮಂತ್ರೇಣ ಹುತ್ವಾಥ ಪ್ರಣವೇನ ವಾ ॥ ವಿಷ್ಣ್ವಷ್ಟಾಕ್ಷರಮಂತ್ರೇಣ ಶಿವಪಂಚಾಕ್ಷರೇಣ ವಾ॥ ಸರ್ವದೈವತಮಂತ್ರೈಶ್ಚ ವಿಷ್ಣುಂ ತತ್ರ ವಿಶಿಷ್ಯತೇ । ಮೂರ್ತಿತ್ರಯಾತ್ಮಕಾಶ್ವತ್ಥಂ ಹುತ್ವಾ ಪೂರ್ಣಾಹುತಿಂ ಚರೇತ್ ॥ ಆಚಾರ್ಯಂ ಪೂಜಯೇತ್ಪಶ್ಚಾದ್ಗಾಂಚದದ್ಯಾತ್ಪಯಸ್ವಿನೀ। ಬ್ರಹ್ಮಣೇ ಕಲಶಶ್ಚೈಕೋ ವಿಷ್ಣೋರೇಕಃ ಪ್ರಧಾನತಃ। ರುದ್ರಾದಿ ಸರ್ವದೇವಾನಾಂ ದಶಾನುಗಮತಃಸ್ಮೃತಾಃ।ಏವಂ ದ್ವಾದಶದದ್ಯಾದ್ವೈ ತದಶಕ್ತೋದ್ವಯಂತಥಾ॥ಋತ್ವಿಜೋಥಕ್ರಮಾತ್ಪೂಜ್ಯಾ ಘೃತಪಾಯಸಭೋಜನೈಃ।ಉಪವೀತಾನಿ ವಸ್ತ್ರಾಣಿತೇಭ್ಯೋ ದದ್ಯಾಚ್ಚದಕ್ಷಿಣಾಂ॥ಪ್ರಣಮ್ಯದಂಡವದ್ಭೂಮೌ ಪ್ರಾರ್ಥಯಿತ್ವಾವಿಸರ್ಜಯೇತ್॥ಏವಂ ದ್ವಾದಶವರ್ಷೇಷುಮಧ್ಯೇಚಾದೌ ಸಮಾಚರೇತ್॥ಕೃತ್ವಾ ಚೋದ್ಯಾಪನಂ ಸಮ್ಯಕ್ ವ್ರತರಾಜಫಲಂ ಲಭೇತ್॥ ವ್ರತಮಿದಮಖಿಲಂನರೇಂದ್ರವಿಷ್ಣೋರ್ವಿಬುಧಗಣಸ್ಯಚಕೀರ್ತಿತಂಮಯಾದ್ಯ।ಪತಿಸುತಧನಮಿಚ್ಛತೀಪುರಂದ್ರೀಸಪದಿ ಕರೋತು ಫಲಾನಿ ಸಂತು ನೀತಂ॥ ಸರ್ವಂ ನಿವೇದಯೇತ್ಪ್ರೀತಮಾಚಾರ್ಯಾಯ ಪ್ರದಾಪಯೇತ್॥ ಯಾ ಸ್ವಲ್ಪಾ ವಿಧವಾ ನಾರೀ ಕಾಂಚನಾದ್ಯೈರ್ವಿನಾಕೃತಾ। ಸಾ ಕಥಂ ಲಭತೇ ಪೂರ್ಣಂ ವ್ರತರಾಜಫಲಂ ವದ ॥ ಭೀಷ್ಮ ಉವಾಚ॥ ಫಲೈಃ ಪುಷ್ಪೈಸ್ತಥಾ

ಭಕ್ಷ್ಯೈರ್ವಸ್ತ್ರಾದ್ಯೈರಪಿ ಪಾಂಡವ॥ಕುರ್ಯಾತ್ಪ್ರದಕ್ಷಿಣಾವರ್ತಂ ಸಾಪಿ ಪೂರ್ಣಂ ಲಭೇತ್ಫಲಂ ॥ ಅಚ್ಛಿದ್ರಂ ವಾಚ ಯೇತ್ಪಶ್ಚಾತ್ಸ್ವಯಂ ಭುಂಜೀತ ವಾಗ್ಯತಂ ॥ ಇತಿ ಭವಿಷ್ಯೋತ್ತರಪುರಾಣೇ ಸೋಮವತ್ಯಮಾವಾಸ್ಯಾವ್ರತೋದ್ಯಾಪನಂ ಸಂಪೂರ್ಣಂ.

ಅಮಾವಾಸ್ಯ ಸೋಮವಾರ ವ್ರತಕಥಾ ಸಂಗ್ರಹ.

ಬಳಿಕ ಸೂತಮಹರ್ಷಿಯು ಶೌನಕಾದಿ ಋಷಿಗಳನ್ನು ಕುರಿತು ಎಲೈ ಋಷಿಗಳಿರಾ! ಕೇಳಿ ಪೂರ್ವದಲ್ಲಿ ಶರತಲ್ಪಗತನಾಗಿ ಮಲಗಿರುವ ಪಿತಾಮಹನಾದ ಭೀಷ್ಮಾಚಾರ್ಯನ ಬಳಿಗೆ ಬಂಧು ಧರ್ಮಸ್ವರೂಪನಾದ ಧರ್ಮರಾಯನು ಎಲೈ ಗುರುವರ್ಯ ನನ್ನ ತಮ್ಮಂದಿರಾದ ಭೀಮಾರ್ಜುನರಿಂದ ಯುದ್ಧದಲ್ಲಿ ಅನೇಕಾನೇಕಶೂರರು ಹತರಾದರು. ವೃದ್ಧರೂ ಬಾಲರೂ ವಿನಾ ಉಳಿದ ವೀರರೆಲ್ಲರೂ ದುರ್ಯೋಧನಾದಿಗಳ ದುರ್ಬುದ್ಧಿಗೆ ಸಿಕ್ಕಿ ಮೃತರಾದರು. ಈಗ ರಾಜ್ಯವು ನಿಷ್ಕಂಟಕವಾಗಿದ್ದರೂ ಬಂಧುಮಿತ್ರರೂ ನೆಂಟರಿಷ್ಟರೂ ಸತ್ತಕಾರಣ ನನಗೆ ಬಹಳ ದುಃಖವುಂಟಾಗಿದೆ. ಈ ರಾಜ್ಯಭಾರವೇ ನನಗೆ ಬೇಡ, ನಾನು ಬದುಕಿರುವಾಗಲೇ ನನಗೆ ಇಷ್ಟೊಂದು ವ್ಯಥೆಯಾಗುತ್ತಿರುವಲ್ಲಿ ಸತ್ತಮೇಲೆ ಗತಿಯೇನು? ಆದಕಾರಣ ಸರ್ವಜ್ಞನಾದ ನೀನು ನನ್ನ ದುಃಖಪರಿಹಾರವಾಗುವ ಯಾವುದಾದರೂ ಒಂದು ಉಪಾಯವನ್ನು ಹೇಳಿ ನನ್ನನ್ನು ಉದ್ಧರಿಸಬೇಕೆಂದು ಪ್ರಾರ್ಥಿಸಿದನು. ಎಲೈ ಧರ್ಮರಾಯನೇ! ಕೇಳು. ಸಂತಾನವಿಲ್ಲವೆಂದು ಮರುಗುವ ನಿನಗೆ ದೀರ್ಘಾಯುಃಪ್ರದನಾದ ಪುತ್ರನು ಹುಟ್ಟುವ ಉಪಾಯವನ್ನು ಹೇಳುವೆನು ಕೇಳು. ಯಾವಕಾಲದಲ್ಲಿ ಸೋಮವಾರದ ದಿಸ ಪ್ರಾತಃಕಾಲ ವ್ಯಾಪ್ತಿಯಾಗಿ ಜಯನಾಮಯೋಗದೊಡನೆ ಅಮಾವಾಸ್ಯೆಯು ಬರುವುದೋ ಆ ಕಾಲದಲ್ಲಿ ಸರ್ವಪ್ರಯತ್ನದಿಂದಲೂ ಭಕ್ತಿಯುಕ್ತರಾದ ತ್ರಿಮೂರ್ತಿಸ್ವರೂಪವಾದ ಅಶ್ವತ್ಥವೃಕ್ಷವನ್ನು ಸೇರಿ ಅಲ್ಲಿ ಮಂತ್ರಪೂರ್ವಕವಾಗಿ ಶ್ರೀಮನ್ನಾರಾಯಣನನ್ನು ಪೂಜಿಸಿ ಮೂಲಮಂತ್ರವನ್ನು ಜಪಿಸುತ್ತ ನೂರೆಂಟು ಪ್ರದಕ್ಷಿಣೆಮಾಡಿ ಪ್ರತಿ ಪ್ರದಕ್ಷಿಣೆಗೂ ಫಲವನ್ನಾಗಲಿ ರತ್ನವನ್ನಾಗಲಿ ಅಥವಾ ಸುವರ್ಣವನ್ನಾಗಲಿ ಅರ್ಪಿಸುತ್ತಿದ್ದು ಷೋಡಶೋಪಚಾರಗಳಿಂದ ಪೂಜಿಸಿದಮೇಲೆ ನನ್ನ ಪೂಜೆಯಿಂದ ನೀನು ತೃಪ್ತನಾಗಬೇಗಂದು ಅಶ್ವತ್ಥನಾರಾಯಣನನ್ನು ಪ್ರಾರ್ಥಿಸಿಕೊಂಡು ಪುನಃ ಪೂಜೆಯನ್ನು ಮಾಡಬೇಕು. ಹೀಗೆ ಮಾಡಿದವರಿಗೆ ದೀರ್ಘಾಯುಸ್ಸುಂಟಾಗುವುದಲ್ಲದೆ ಬಹುಕಾಲ ಬದುಕುವ ಮಗನು ಹುಟ್ಟುವನು. ಈ ವ್ರತವು ಪೂರ್ವಕಾಲದಲ್ಲ ಬ್ರಹ್ಮನಿಂದ ಹೇಳಲ್ಪಟ್ಟದ್ದು ಇಂಥ ಸುವ್ರತವನ್ನು ನೀನು ಮಾಡಿದರೆ ನಿನಗೆ ದೀರ್ಘಾಯುಸ್ಸುಳ್ಳ ಸಂತಾನವಾಗುವುದರಲ್ಲಿ ಸಂಶಯವಿಲ್ಲವೆಂದು ಹೇಳಿದರು. ಅದನ್ನು ಕೇಳಿ ಧರ್ಮರಾಯನು ಎಲೈ ಭೀಷ್ಮಾಚಾರ್ಯರೇ! ನೀವು ಹೇಳಿದ ಅಮಾವಾಸ್ಯೆ ಸೋಮವಾರದ ವ್ರತವನ್ನು ಹೇಗೆ ಮಾಡಬೇಕು? ಅದರ ವಿಧಾನ ಹೇಗೆ? ಮೊದಲು ಈ ವ್ರತವನ್ನು ಯಾರು ಮಾಡಿದರು? ಅವರಿಗೆ ಅದರಿಂದ ಏನು ಲಾಭವಾಯಿತು ಇದೆಲ್ಲವನ್ನು ನನಗೆ ವಿಸ್ತಾರವಾಗಿ ಹೇಳಬೇಕೆಂದು ಪ್ರಾರ್ಥಿಸಿದನು. ಆಗ ಭೀಷ್ಮಾಚಾರ್ಯರು ಧರ್ಮರಾಯನನ್ನು ಕುರಿತು ಇಂತೆಂದರು.

ಎಲೈ ಧರ್ಮರಾಯನೇ ಕೇಳು. ಕೈಲಾಸಪರ್ವತದಂತೆ ಮಹಾಪವಿತ್ರವಾದ ಕಾಂಚೀ ನಗರದಲ್ಲಿ ಧರ್ಮಾತ್ಮನಾದ ಪ್ರಜಾವತ್ಸಲನಾಗಿ ಬಾಳುತ್ತಿದ್ದ ಒಬ್ಬ ರಾಜನಿದ್ದನು. ಆತನ ಬಳಿಯಲ್ಲಿ ರಾಜಾಶ್ರಯದಿಂದ ಜೀವಿಸುತ್ತಿದ್ದ ದೇವಸ್ವಾಮಿಯೆಂಬ ಬ್ರಾಹ್ಮಣನಿಗೆ ತನ್ನ

ಹೆಂಡತಿಯಾದ ಗುಣಗಣ ಭೂಷಣೆಯಾಗಿರುವ ಧನವತಿ ಎಂಬ ಭಾರ್ಯೆಯಿದ್ದಳು. ಇವರಿಬ್ಬರೂ ಅನ್ಯೋನ್ಯವಾಗಿ ಸಂಸಾರ ಮಾಡುತ್ತಿರುವಲ್ಲಿ ಧನವತಿಗೆ ಏಳುಜನ ಗಂಡುಮಕ್ಕಳು ಗುಣವತಿ ಎಂಬೊಬ್ಬ ಹೆಣ್ಣುಮಗಳು ಹುಟ್ಟಿದರು. ಬಳಿಕ ಪ್ರಾಪ್ತವಯಸ್ಕರಾದಮೇಲೆ ಆ ಬ್ರಾಹ್ಮಣನು ಏಳುಜನ ಗಂಡುಮಕ್ಕಳಿಗೂ ಸತ್ಕುಲಪ್ರಸೂತೆಯರಾದ ಕನ್ಯೆಯರನ್ನು ತಂದು ಮದುವೆಮಾಡಿದನು. ಅವರೆಲ್ಲರೂ ಸಂತೋಷಭರಿತರಾಗಿ ತಮ್ಮ ಗಂಡಂದಿರೊಡನೆ ಕೂಡಿ ಸಂಸಾರಮಾಡುತ್ತ ಸುಖವಾಗಿ ಕಾಲವನ್ನು ಕಳೆಯುತ್ತಿದ್ದರು. ಇಷ್ಟರಲ್ಲೇ ಗುಣವತಿಗೆ ಯೌವನ ಪ್ರಾಪ್ತಿಯುಂಟಾಗಲು ತಂದೆತಾಯಿಗಳು ಮಗಳಿಗೆ ವಿವಾಹಮಾಡಬೇಕೆಂದು ಯೋಚಿಸುತ್ತಿದ್ದರು. ಹೀಗಿರುವಲ್ಲಿ ಒಂದು ದಿನ ದಿವ್ಯತೇಜಸ್ವಿಯಾಗಿ ಮಹಾ ತಪೋನಿಷ್ಠನಾದ ಒಬ್ಬ ಯತಿಯು ಭಿಕ್ಷಾರ್ಥಿಯಾಗಿ ದೇವಸ್ವಾಮಿಯ ಮನೆಗೆ ಬಂದು "ಭವತಿ ಭಿಕ್ಷಾಂ ದೇಹಿ" ಎಂದು ಕೇಳಿದನು. ಆಗ ಏಳುಜನ ಸೊಸೆಯರೂ ಸಂತೋಷಭರಿತರಾಗಿ ಪ್ರತ್ಯೇಕ ಪ್ರತ್ಯೇಕವಾಗಿ ಅವರೆಲ್ಲರೂ ಭಿಕ್ಷವನ್ನು ತಂದುಹಾಕಿ ಯತಿವರ್ಯನಿಗೆ ನಮಸ್ಕಾರಮಾಡಿದರು. ಆ ಋಷಿಯು ಅವರೆಲ್ಲರೂ "ದೀರ್ಘ ಸುಮಂಗಲೀ ಭವ" ಎಂದು ಆಶೀರ್ವಾದಮಾಡಿದನು. ಅದನ್ನು ಕಂಡು ಗುಣವತಿಯು ಭಿಕ್ಷವನ್ನು ತಂದುಹಾಕಿ ನಮಸ್ಕಾರಮಾಡಲು ಆ ಯತಿಯು ಆಕೆಯ ಮುಖವನ್ನು ದೃಷ್ಟಿಸಿನೋಡಿ "ಎಲೈ ಶೋಭನಾಂಗಿಯೇ ನೀನು ಧರ್ಮವತಿಯಾಗು" ಎಂದು ಹರಸಿದನು. ಆಗ ಆ ಕನ್ಯೆಯು ತನ್ನ ಅತ್ತಿಗೆಯರಿಗೆ ಮಾಡಿದ ಆಶೀರ್ವಾದಕ್ಕು ತನನ್ನು ಹರಸಿದ ರೀತಿಗೂ ಇರುವ ವ್ಯತ್ಯಾಸವನ್ನು ತಿಳಿದು ಭ್ರಾಂತಳಾಗಿ ತಾಯಬಳಿಗೆ ಹೋಗಿ ಅವಳನ್ನು ಕರೆದುಕೊಂಡು ಬಂದು ಅವಳೆದುರಿಗೆ ಮರಳಿ ಭಿಕ್ಷವನ್ನು ತಂದುಹಾಕಿ ನಮಸ್ಕಾರಮಾಡಿ ನಿಂತುಕೊಂಡಳು. ಆಗ ಋಷಿವರ್ಯನು ಮೊದಲಿನಂತೆ "ಗುಣವತೀ ಭವ" ಎಂದು ಹರಿಸಿದನು. ಧನವತಿಯು ಕೂಡಲೇ ಖಿನ್ನಳಾಗಿ ಎಲೈ ಋಷೀಶ್ವರನೇ! ನಿನ್ನ ಆಶೀರ್ವಾದ ವಿಚಾರವು ನನ್ನ ಸೊಸೆಯರ ವಿಷಯದಲ್ಲಿ ಸಂತೋಷಕರವಾಗಿದೆ. ಆದರೆ ಈ ಮಗಳ ವಿಚಾರದಲ್ಲಿ ಮಾತ್ರ ಸ್ವಲ್ಪ ವ್ಯಾಕುಲವನ್ನು ಹುಟ್ಟಿಸುತ್ತದೆ. ಈ ವಿಚಾರದಲ್ಲಿ ನಿಮಗೇನಾದರೂ ತಿಳಿದಿದ್ದರೆ ದೋಷನಿವಾರಣಾರ್ಥವಾದ ಉಪಾಯವನ್ನು ಯೋಚಿಸಿ ಹೇಳಿ ನಮ್ಮನ್ನು ಉದ್ಧರಿಸಬೇಕೆಂದು ಬೇಡಿಕೊಂಡಳು. ಆಗ ಕರುಣಾಮಯನಾದ ಆ ಋಷಿಯು ಈ ಕನ್ಯೆಯು ಸಪ್ತಪದಿಯ ಮಧ್ಯದಲ್ಲಿ ವೈಧವ್ಯವನ್ನು ಪಡೆಯುತ್ತಾಳೆ. ಆದರೆ ಧರ್ಮಾಚರಣೆಯಿಂದ ಇವಳಿಗೆ ಶುಭವಾಗುವುದೆಂದು ತಿಳಿದು ನಾನು ಹೀಗೆ ಆಶೀರ್ವಾದ ಮಾಡಿದೆ ಇದರಲ್ಲಿ ದೋಷವೇನೂ ಇಲ್ಲ, ಎನಲು ಧನವತಿಯು ಹಾಗಾದರೆ ಕಷ್ಟಪರಿಹಾರಕ್ಕೆ ಏನು ಮಾಡಬೇಕೋ ಅದನ್ನು ಹೇಳಬೇಕೆಂದು ಕೇಳಲು, ಋಷಿವರ್ಯನು ಧರ್ಮನಿಷ್ಠಳಾದ ಸೋಮಾ ಎಂಬ ಸ್ತ್ರೀಯನ್ನು ನಿನ್ನ ಮನೆಗೆ ಕರೆತಂದರೆ ಅವಳ ಪುಣ್ಯದಿಂದ ನಿನ್ನ ಮಗಳಿಗೆ ಸುಖವುಂಟಾಗುವುದು ಎನಲು ಮರಳಿ ಧನವತಿಯು ಋಷಿಯನ್ನು ಕುರಿತು ಸ್ವಾಮಿಾ! ತಾವು ಹೇಳಿದ ಸೋಮಾ ಎಂಬವಳು ಯಾರು? ಎಲ್ಲಿರುವಳು? ಅವರನ್ನು ಕರೆದು ತಂದರೆ ಏನಾಗುವುದು ಇದೆಲ್ಲವನ್ನು ನನಗೆ ವಿವರಿಸಿ ಹೇಳಬೇಕೆಂದು ಕೇಳಿದಳು. ಅದಕ್ಕೆ ಆ ಋಷಿಯು ಅಮ್ಮಾ! ಧನವತಿ ಸೋಮವಾರ ವ್ರತನಿಷ್ಠಳಾದ ಸೋಮಾ ಎಂಬ ಹೆಸರಿನ ರಜಕಸ್ತ್ರೀಯು [ಅಗಸಗಿತ್ತಿಯು] ಸಿಂಹಳದ್ವೀಪದಲ್ಲಿ ವಾಸಮಾಡುತ್ತಾಳೆ. ಅವಳನ್ನು ನಿನ್ನ ಮನೆಗೆ ಕರೆದುತಂದರೆ ನಿನ್ನ ಮಗಳ ವೈಧವ್ಯವು ನಾಶವಾಗುವುದು ಎಂದು ಹೇಳಿ ಭಿಕ್ಷಾರ್ಥಿಯಾಗಿ ಮುಂದಕ್ಕೆ ಹೊರಟುಹೋದನು.

ಬಳಿಕ ಧನವತಿಯು ಮಗಳ ವಿಚಾರವನ್ನು ಕೇಳಿ ಖಿನ್ನಳಾಗಿ ತನ್ನ ಪತಿಗೆ ಈ ಸಂಗತಿಯನ್ನು ಹೇಳಿ ಮಕ್ಕಳನ್ನೆಲ್ಲಾ ಕರೆದು ಅಪ್ಪಾ ಮಕ್ಕಳಿರಾ! ಈಗ ನಮಗೆ ಮಹತ್ತಾದ ಒಂದು ವ್ಯಸನ ಪ್ರಾಪ್ತವಾಗಿದೆ ಮಾತಾಪಿತೃ ಭಕ್ತಿಯುಳ್ಳವರಾದ ನೀವು ಅದನ್ನು ಪರಿಹರಿಸಿ ನಮ್ಮನ್ನು ಕಾಪಾಡಬೇಕು. ಈ ನಿಮ್ಮ ತಂಗಿಯಾದ ಗುಣವತಿಗೆ ವಿವಾಹ ಮಧ್ಯದಲ್ಲಿ ಸಪ್ತಪದಿಯಾಗುವುದರೊಳಗಾಗಿ ವೈಧವ್ಯ ಪ್ರಾಪ್ತಿಯಾಗುತ್ತದೆಯಂತೆ. ಅದು ನಿವಾರಣೆಯಾಗಿ ತಂಗಿಗೆ ಸುಖವಾಗುವಂತೆ ಮಾಡಬೇಕಾದರೆ ನೀವೆಲ್ಲರೂ ಪ್ರಯತ್ನಮಾಡಿ ಸಿಂಹಳದ್ವೀಪದಲ್ಲಿರುವ ಸೋಮಾ ಎಂಬ ಹೆಸರುಳ್ಳ ರಜಕಸ್ತ್ರೀಯನ್ನು ನಮ್ಮ ಮನೆಗೆ ಕರೆದುಕೊಂಡು ಬಂದರೆ ಅವಳ ಪುಣ್ಯದಿಂದ ಗುಣವತಿಯು ಗಂಡನು ಬದುಕಿ ಅವಳಿಗೆ ಸುಖಸೌಭಾಗ ಉಂಟಾಗುವುದಂತೆ ಈ ಸಂಗತಿಯನ್ನು ಭಿಕ್ಷಾರ್ಥಿಯಾ ನಮ್ಮ ಮನೆಗೆ ಬಂದಿದ್ದ ಒಬ್ಬ ಋಷೀಶ್ವರನು ಹೇಳಿ ಹೋಗಿರುವನು. ನೀವುಗಳೆಲ್ಲರೂ ಈ ವಿಚಾರದಲ್ಲಿ ಶ್ರದ್ಧೆಯನ್ನು ವಹಿಸಿ ಸಿಂಹಳದ್ವೀಪಕ್ಕೆ ಹೋಗಿ ಸೋಮೆಯನ್ನು ನಮ್ಮ ಮನೆಗೆ ಕರೆದುಕೊಂಡು ಬರಬೇಕು ಎಂದು ಹೇಳಿದಳು. ಆಗ ಮಕ್ಕಳೆಲ್ಲರೂ ಒಟ್ಟಾಗಿ ಅಮ್ಮಾ ನೀನು ಹೇಳಿದುದೆಲ್ಲ ತಿಳಿಯಿತು. ಆದರೆ ನಮ್ಮ ದೇಶಕ್ಕೂ ಸಿಂಹಳದ್ವೀಪಕ್ಕೂ ಮಧ್ಯದಲ್ಲಿ ಅಗಾಧವಾದ ನೂರುಗಾವುದ ವಿಸ್ತೀರ್ಣವುಳ್ಳ ಸಮುದ್ರವಿದೆ ಅದನ್ನು ದಾಟಿಹೋಗುವ ಶಕ್ತಿ ನಮಗೆ ಸಾಲದು ಆದಕಾರಣ ಈ ಕೆಲಸ ನಮ್ಮಿಂದಾಗಲಾರದು ಎಂದು ಹೇಳಿಬಿಟ್ಟರು. ಕೂಡಲೇ ಗುಣವತಿಯ ತಂದೆಗೆ ಕೋಪಬಂದಿತು. ಆತನು ಆಹಾ! ಇಂಥ ಕಷ್ಟಕ್ಕೆ ಒದಗದಿದ್ದರೆ ಮಕ್ಕಳಿದ್ದು ಪ್ರಯೋಜನವೇನು! ನಾನು ಬದುಕಿದ್ದು ಕೂಡ ಮಗಳ ವೈಧವ್ಯನಾಶಕರವಾದ ಯತ್ನವನ್ನು ಮಾಡದಿದ್ದರೆ ಪ್ರಯೋಜನವೇನು? ಆದದ್ದಾಗಲಿ ನಾನೇ ಹೋಗಿ ಸೋಮಾದೇವಿಯನ್ನು ಕರೆದುಕೊಂಡು ಬರುತ್ತೇನೆ, ನೀವೆಲ್ಲರೂ ಸುಖವಾಗಿರಿ ಎಂದು ಹೇಳಿದನು. ಅದನ್ನು ಕೇಳಿದ ಕೂಡಲೇ ಕಿರಿಯ ಮಗನಾದ ಶಿವಸ್ವಾಮಿಯು ಎದ್ದು ನಿಂತು ತಂದೆಗೆ ಕೈಮುಗಿದು ತಾಯಿಗೆ ನಮಸ್ಕಾರಮಾಡಿ ಸ್ವಾಮಿ! ನಾನು ಬದುಕಿರುವಾಗ ನೀವು ಹೀಗೆ ಹೊರಡುವದು ಸರಿಯಲ್ಲ. ವೃದ್ಧರಾದ ನೀವು ಪರಸ್ಥಲದಲ್ಲಿ ಪ್ರಯಾಣಮಾಡಿ ಅಲೆಯಲಾರಿರಿ! ಆದಕಾರಣ ನನಗೆ ಅನುಜ್ಞೆಮಾಡಿದರೆ ನಾನು ಗುಣವತಿಯನ್ನು ಕರೆದುಕೊಂಡು ಸಿಂಹಳದ್ವೀಪಕ್ಕೆ ಹೋಗಿ ಸರ್ವಪ್ರಯತ್ನದಿಂದಲೂ ಸೋಮಾದೇವಿಯನ್ನು ತೃಪ್ತಿಪಡಿಸಿ ಅವಳನ್ನು ಕರೆದುಕೊಂಡು ಬರುತ್ತೇನೆಂದು ಹೇಳಲು ತಾಯಿತಂದೆಗಳು ಸಂತೋಷಭರಿತರಾಗಿ ಮಗನನ್ನು ಹರಿಸಿ ಅವನಿಗೆ ಬೇಕಾದ ಪಾಥೇಯ ಪರಿಕರಗಳನ್ನು ಕಟ್ಟಿಕೊಟ್ಟು ಅವನ ಜೊತೆಯಲ್ಲಿ ಗುಣವತಿಯನ್ನು ಕಳುಹಿಸಿಕೊಟ್ಟರು. ಶಿವಸ್ವಾಮಿಯು ತಂಗಿಯನ್ನು ಕರೆದುಕೊಂಡು ಹೊರಟು ಪ್ರಯಾಣಮಾಡಿ ಬರುತ್ತ ಕೆಲವುದಿನಗಳಮೇಲೆ ಸಮುದ್ರತೀರಕ್ಕೆ ಬಂದು ದುರ್ಗಮವಾದ ಸಮುದ್ರವನ್ನು ಪ್ರತ್ಯಕ್ಷವಾಗಿ ನೋಡಿ ಅದನ್ನು ದಾಟಲಾರದೆ ಹತ್ತಿರದಲ್ಲಿ ಒಂದು ದೊಡ್ಡ ಆಲದಮರದ ಬುಡದಲ್ಲಿ ತನ್ನ ತಂಗಿಯೊಡನೆ ತಂಗಿ ವಾಸಮಾಡುತ್ತಿದ್ದನು. ಆ ಮರದಮೇಲೆ ಗರುಡಪಕ್ಷಿಯು ಗೂಡು ಕಟ್ಟಿಕೊಂಡು ತನ್ನ ಮರಿಗಳೊಡನೆ ಸುಖವಾಗಿ ವಾಸಮಾಡುತ್ತಿದ್ದಿತು. ಆದರೆ ಶಿವಸ್ವಾಮಿಯೂ ಗುಣವತಿಯೂ ತಮ್ಮ ಗೂಡಿನ ಬಳಿಗೆ ಬರುವವರೆಗೂ ಪ್ರತಿದಿನವೂ ಸರಿಯಾಗಿ ಆಹಾರವನ್ನು ತಿನ್ನುತ್ತ ಸಂತೋಷವಾಗಿದ್ದ ಗರುಡಪಕ್ಷಿಯ ಮರಿಗಳು ಅವರಿಬ್ಬರ ವ್ಯಸನಕಾರಣವನ್ನು ತಿಳಿದು ತಾವು ಸಂಕಟಪಡುತ್ತ ಅನ್ನಹಾರಗಳನ್ನು ತೊರೆದು ಕೊರಗತೊಡಗಿದವು. ಆಗ

ಗರಡಪಕ್ಷಿಯು ತಮ್ಮ ಮರಿಗಳನ್ನು ಕುರಿತು ನೀವು ಎಂದಿನಂತೆ ಆಹಾರವನ್ನು ತಿನ್ನದೆ
ಖಿನ್ನರಾಗಿರುವುದಕ್ಕೆ ಕಾರಣವೇನು ? ಎಂದು ಕೇಳಲು ಆ ಮರಿಗಳು ಎಲೈ ಪಕ್ಷಿರಾಜನೇ
ಈ ನಮ್ಮ ಗೂಡಿನ ಕೆಳಗಡೆ ಇಬ್ಬರು ಮನುಷ್ಯರು ಬಂದು ಕೂತುಕೊಂಡು ಊಟವಿಲ್ಲದೆ
ನಿರಾಹಾರಿಗಳಾಗಿದ್ದಾರೆ. ಅವರು ಹಾಗೆ ಉಪವಾಸ ಸಾಯುತ್ತಿದ್ದರೆ ನಾವು ಊಟಮಾಡು
ವುದು ಯಾವ ನ್ಯಾಯ ! ಇದಕ್ಕಾಗಿ ನಮಗೆ ಆಹಾರವೇ ಬೇಕಾಗಿಲ್ಲ ಎಂದು ಹೇಳಿದವು.
ಅದನ್ನು ಕೇಳಿ ಗರುಡಪಕ್ಷಿಯು ಸಂತೋಷಗೊಂಡು ಮರದ ಬುಡಕ್ಕೆ ಬಂದು ಶಿವಸ್ವಾಮಿ
ಯನ್ನು ಗುಣವತಿಯನ್ನು ಮಾತನಾಡಿಸಿ, ನೀವು ಯಾರು ! ಏತಕ್ಕಾಗಿ ಇಲ್ಲಿಗೆ ಬಂದಿರಿ
ಎಂದು ಕೇಳಲು, ಶಿವಸ್ವಾಮಿಯು ಅಯ್ಯಾ ಈ ನನ್ನ ತಂಗಿಯ ವೈಧವ್ಯಪರಿಹಾರಕ್ಕಾಗಿ
ಸಿಂಹಳದ್ವಿಪದಲ್ಲಿರುವ ಸೋಮಾದೇವಿಯನ್ನು ಕರೆದುಕೊಂಡು ಬರಬೇಕೆಂದು ಹೊರಟು ಈ
ತಂಗಿಯೊಡನೆ ನಾನು ಇಲ್ಲಿಗೆ ಬಂದು ಸೇರಿದೆನು. ಆದರೆ ಈ ಸಮುದ್ರವನ್ನು ನೋಡುವಲ್ಲಿ
ನಮಗೆ ಅಸಾಧ್ಯವಾಗಿದೆ ಏನುಮಾಡಲಿ ! ಎಂಬ ಚಿಂತೆಯಿಂದ ಕೊರಗುತ್ತಿದ್ದೇನೆ. ಇದರಿಂದ
ನಮ್ಮಿಬ್ಬರಿಗೂ ಅನ್ನವೇ ಬೇಕಾಗದೆ ಉಪವಾಸದ್ದೇವೆ ಎಂದು ಹೇಳಲು ಗರುಡಪಕ್ಷಿಯು
ಅಯ್ಯಾ ! ನೀನು ಚಿಂತಿಸಬೇಡ ನಾಳೆ ಬೆಳಗಾದಮೇಲೆ ನಿಮ್ಮಿಬ್ಬರನ್ನು ಕರೆದುಕೊಂಡು
ಹೋಗಿ ಸಿಂಹಳದ್ವಿಪದಲ್ಲಿ ಸೋಮಾದೇವಿಯ ಮನೆಯ ಹತ್ತಿರ ಬಿಟ್ಟುಬರುತ್ತೇನೆ.
ನೀವಿಬ್ಬರೂ ಈಗ ಸಂತೋಷದಿಂದ ಊಟಮಾಡಿ ಮಲಗಿಕೊಳ್ಳಿ ಎಂದು ಹೇಳಿ ಅವರನ್ನು
ಒಡಂಬಡಿಸಿ ತನ್ನ ಮರಿಗಳಿಗೂ ತಿಳುವಳಿಕೆ ಹೇಳಿ ಅವುಗಳಿಗೂ ಆಹಾರವನ್ನು ಕೊಟ್ಟು,
ತಾನೂ ಸ್ವಲ್ಪಹೊತ್ತು ಮಲಗಿದ್ದು ಬ್ರಾಹ್ಮೀ ಮೂಹೂರ್ತದಲ್ಲೆದ್ದು ಶಿವಸ್ವಾಮಿಯನ್ನು
ಗುಣವತಿಯನ್ನು ತನ್ನ ರೆಕ್ಕೆಗಳಮೇಲೆ ಕೂರಿಸಿಕೊಂಡು ಹಾರಿಹೋಗಿ ಸಿಂಹಳದ್ವೀಪ
ವನ್ನು ಸೇರಿ ಸೋಮಾ ಎಂಬವಳ ಮನೆಯ ಹತ್ತಿರ ಅವರಿಬ್ಬರನ್ನೂ ಬಿಟ್ಟು ಹೊರಟು
ಬಂದಿತು. ಬಳಿಕ ಅವರಿಬ್ಬರೂ ಸೋಮಾ ಎಂಬವಳ ಮನೆಯ ಹತ್ತಿರ ವಾಸಮಾಡುತ್ತ
ಅವಳನ್ನು ತೃಪ್ತಿಪಡಿಸಿ ತಮ್ಮ ಸ್ವಾಧೀನಮಾಡಿಕೊಳ್ಳುವುಕ್ಕಾಗಿ ಉಪಾಯವನ್ನು
ಚಿಂತಿಸಿ ಇಬ್ಬರೂ ಬೆಳಗಿನ ಜಾವದಲ್ಲೆದ್ದು ಆ ಸೋಮಾದೇವಿಯ ಮನೆಯ ಬಾಗಿಲನ್ನು
ಗುಡಿಸಿ ಸಾರಿಸಿ ರಂಗವಲ್ಲಿಗಳಿಂದಲಂಕರಿಸಿ ಎಲ್ಲರೂ ಏಳುವುದಕ್ಕೆ ಮೊದಲು ತಮ್ಮ
ಮನೆಗೆ ಹೊರಟುಬರುತ್ತಿದ್ದರು. ಆಗ ಈ ವಿಧವಾದ ಪರಿಚರ್ಯೆಯನ್ನು ತನಗೆ
ಯಾರು ಮಾಡುತ್ತಿರುವರೋ ಕಂಡುಹಿಡಿಯಬೇಕೆಂದು ಯೋಚಿಸಿ ಸೋಮಾದೇವಿಯು
ಒಂದು ದಿನ ಎಚ್ಚರಿಕೆಯಾಗಿದ್ದುಕೊಂಡು ಅವರಿಬ್ಬರೂ ಬಂದು ಗುಡಿಸಿ ಸಾರಿಸುತ್ತಿರುವುದನ್ನು
ಕಂಡು ಸ್ತಬ್ಧಳಾಗಿ, ಹಾ ! ಇದೇನು ಅನ್ಯಾಯ. ನಾನು ಕೆಟ್ಟೆ, ಉಪಾಯಾಂತರದಿಂದ
ನನಗೆ ಇಲ್ಲದ ಪಾಪವನ್ನು ಕಟ್ಟುತ್ತಿರುವಿರಿ. ರಜಕಸ್ತ್ರೀಯಾದ ನಾನು ಊರಿಗೆಲ್ಲ ಪರಿಚಾ
ರಿಕೆ ಮಾಡಿ ಜೀವಿಸತಕ್ಕವಳು. ನಿಮ್ಮನ್ನು ನೋಡಿದರೆ ಬ್ರಾಹ್ಮಣರ ಹಾಗೆ ಕಾಣುತ್ತಿದೆ. ನೀವು
ಯಾರು ? ಇಲ್ಲಿಗೆ ಬರಲು ಕಾರಣವೇನು ? ಏತಕ್ಕೋಸ್ಕರವಾಗಿ ನಮ್ಮ ಮನೆಯ ಮುಂದೆ
ಹೀಗೆ ಚಾಕರಿಮಾಡುತ್ತಿರುವಿರಿ ? ಇದನ್ನೆಲ್ಲವನ್ನು ಹೇಳಬೇಕೆಂದು ಕೇಳಿದಳು. ಆಗ ಶಿವ
ಸ್ವಾಮಿಯು ಅಮ್ಮಾ ನಾವಿಬ್ಬರೂ ಅಣ್ಣತಂಗಿಯರು. ನನ್ನ ಹೆಸರು ಶಿವಸ್ವಾಮಿ. ಇವಳು
ನನ್ನ ತಂಗಿ. ಇವಳ ಹೆಸರು ಗುಣವತಿ. ಈಕೆಗೆ ಇನ್ನು ಸ್ವಲ್ಪ ದಿನದಲ್ಲೇ ವೈಧವ್ಯ ಪ್ರಾಪ್ತಿ
ಯಾಗುವುದೆಂದೂ, ನಿನ್ನನ್ನು ನಮ್ಮ ಮನೆಗೆ ಕರೆದುಕೊಂಡು ಹೋದರೆ ಅದು ನಿವಾರಣೆ
ಯಾಗುವುದೆಂದೂ ಒಬ್ಬ ಋಷಿಯು ಹೇಳಿದಕಾರಣ ನಾನು ಭಯಗ್ರಸ್ತನಾಗಿ ನನ್ನ ತಂಗಿ

ಯನ್ನು ಕರೆದು ನಿನ್ನ ದಯೆಯನ್ನು ಸಂಪಾದಿಸುವುದಕ್ಕಾಗಿ ಬಹು ಪ್ರಯಾಸದಿಂದ ಈ ಊರಿಗೆ ಬಂದು ಈ ವಿಧವಾದ ಸೇವೆಯನ್ನು ಮಾಡುತ್ತಿರುವೆವು. ದಯವಾಡಿ ನೀನು ನಮ್ಮ ಕೋರಿಕೆಯನ್ನು ನೆರವೇರಿಸಿ ನಮ್ಮ ಮನೆಗೆ ಬಂದು ಮಗಳಿಗೆ ಪತಿದಾನವನ್ನು ಮಾಡಿ ನಮ್ಮನ್ನು ಉದ್ಧರಿಸಬೇಕೆಂದು ಬೇಡಿಕೊಂಡನು.

ಆಗ ಸೋಮಾದೇವಿಯು ಸಂತುಷ್ಟಳಾಗಿ ಸ್ವಾಮಿಾ! ನೀವು ಇನ್ನುಮೇಲೆ ಹೀಗೆ ಮಾಡಬೇಡಿ. ನಾನೂ ನಿಮ್ಮೂರಿಗೆ ಬಂದು ನಿಮ್ಮ ಕೋರಿಕೆಯನ್ನು ನೆರವೇರಿಸಿಕೊಡು ಬರುತ್ತೇನೆ ಎಂದು ಹೇಳಿ ತನ್ನ ಮಕ್ಕಳಿಗೂ ಸೊಸೆಯರಿಗೂ ತಾನು ಹೋಗಿಬರುವ ವಿಚಾರವನ್ನು ತಿಳಿಸಿ ಎಚ್ಚರಿಕೆಯಾಗಿರುವಂತೆ ಹೇಳಿ ಗಂಡನ ಅಪ್ಪಣೆಯನ್ನು ಪಡೆದು ತನ್ನ ಜೊತೆಯಲ್ಲಿ ಅವರಿಬ್ಬರನ್ನು ಕರೆದುಕೊಂಡು ನಿರಾಯಾಸದಿಂದ ಪ್ರಯಾಣಮಾಡಿ ಬಂದು ಸುಖವಾಗಿ ಶಿವಸ್ವಾಮಿಯ ಮನೆಯನ್ನು ಸೇರಿದಳು. ಕೂಡಲೇ ದೇವಸ್ವಾಮಿಯು ಆತನ ಹೆಂಡತಿಯೂ ಆನಂದಭರಿತರಾದರು. ಗುಣವತಿಯು ಪ್ರತಿದಿನವೂ ಅವಳನ್ನು ಪೂಜಿಸುತ್ತಿದ್ದಳು. ಹೀಗಿರುವಲ್ಲಿ ಶಿವಸ್ವಾಮಿಯು ತನ್ನ ತಂಗಿಗೆ ಅನುರೂಪನಾದ ವರನನ್ನು ಹುಡುಕುತ್ತ ಉಜ್ಜಯಿನೀ ಪಟ್ಟಣಕ್ಕೆ ಬಂದು ಅಲ್ಲಿ ಪರಾನ್ವೇಷಣ ಮಾಡತೊಡಗಿ ಶ್ರೋತ್ರಿಯ ಬ್ರಹ್ಮನಿಷ್ಠರಾದ ದೇವಶರ್ಮನೆಂಬ ಬ್ರಾಹ್ಮಣನ ಮಗನಾದ ರುದ್ರಶರ್ಮನು ತನ್ನ ತಂಗಿಗೆ ಅನುರೂಪನಾದ ವರನೆಂದು ತಿಳಿದು ಅವನನ್ನೂ ಅವನ ತಂದೆ ತಾಯಿ ಮೊದಲಾದವರನ್ನು ಸಂಗಡ ಕರೆದುಕೊಂಡು ತನ್ನ ಊರಿಗೆ ಬಂದು ಗುಣವತಿಗೆ ವರನನ್ನು ತೋರಿಸಲು ಅವಳೂ ತಂದೆತಾಯಿಗಳು ಸಂತೋಷಪಟ್ಟರು. ಸೋಮಾದೇವಿಯ ಅನುಜ್ಞೆಯಂತೆ ವಿವಾಹವು ಬಹು ವಿಜೃಂಭಣೆಯಿಂದ ನಡೆಯಿತು. ಆಗ ಇದ್ದಕ್ಕಿದ್ದಹಾಗೆ ಸಪ್ತಪದಿಯ ಮಧ್ಯದಲ್ಲಿ ರುದ್ರಶರ್ಮನು ಮೃತನಾದನು. ಎಲ್ಲರೂ ಹಾಹಾಕಾರದಿಂದ ನರಳುತ್ತಿದ್ದರು. ಆಗ ಸೋಮಾದೇವಿಯು ಸ್ವಲ್ಪವೂ ಹೆದರದೆ ತಾನುಮಾಡಿದ ಸೋಮವಾರವ್ರತದ ಪುಣ್ಯವನ್ನು ಗುಣವತಿಗೆ ಧಾರೆಯೆರೆದುಕೊಡಲು ಆ ವ್ರತಮಹಿಮೆಯಿಂದ ಸತ್ತಿದ್ದ ರುದ್ರಶರ್ಮನು ಮಲಗಿದ್ದವರು ಏಳುವಂತೆ ಮೈಮುರಿದುಕೊಂಡೆದ್ದು ಸುತ್ತಲೂ ನೋಡಿ ಆಶ್ಚರ್ಯಭರಿತನಾಗಿ ಇದೇನು ವಿವಾಹಮಧ್ಯದಲ್ಲಿ ಹೀಗಾಗಲು ಕಾರಣವೇನು? ಎಂದು ಪ್ರಶ್ನೆಮಾಡಿದನು. ಕೂಡಲೇ ಮನೆಯವರೆಲ್ಲರೂ ಆನಂದಭರಿತರಾಗಿ ಲಗ್ನವನ್ನು ಪೂರೈಸಿ ಸೋಮಾದೇವಿಯನ್ನು ಹೊಗಳಿ ಪೂಜಿಸಿದರು. ಇದಾದಮೇಲೆ ಸೋಮೆಯು ಸೋಮವಾರ ವ್ರತವನ್ನು ಗುಣವತಿಗೆ ಉಪದೇಶಿಸಿ ಅವಳಿಂದಲೂ ದೇವಸ್ವಾಮಿ ಧನವತಿಯರಿಂದಲೂ ಅಪ್ಪಣೆಪಡೆದು ತನ್ನ ಊರಿಗೆ ಹೊರಟುಬರುತ್ತಿದ್ದಳು. ಅಷ್ಟರಲ್ಲೇ ಸೋಮೆಯ ಮನೆಯಲ್ಲಿ ಅವಳ ಗಂಡನೂ ಮಕ್ಕಳೂ ಅಳಿಯನೂ ಸತ್ತುಹೋದರು. ದಾರಿಯಲ್ಲಿ ಬರುತ್ತಿದ್ದಾಗ ಸೋಮವಾರ ವ್ರತವು ಪ್ರಾಪ್ತವಾಗಲು ಸೋಮಾದೇವಿಯು ನದಿಯತೀರಕ್ಕೆ ಹೋಗಿ ಅಲ್ಲಿ ಸ್ನಾನಮಾಡಿ ನಿಯಮಪೂರ್ವಕವಾಗಿ ಮಡಿಯುಟ್ಟು ಅಶ್ವತ್ಥವನ್ನು ಪೂಜಿಸಿ ಪ್ರದಕ್ಷಿಣೆ ನಮಸ್ಕಾರಗಳನ್ನು ಮಾಡಿ ಸಕ್ಕರೆಯನ್ನು ಸ್ವಾಮಿಗೆ ಸಮರ್ಪಣೆಮಾಡಿದಳು. ಆಗ ಒಬ್ಬ ಮುದುಕಿ ತಲೆಯಮೇಲೆ ಹತ್ತಿಯ ಮೂಟೆಯನ್ನು ಹೊತ್ತುಕೊಂಡು ಬಂದು ಅಮ್ಮಾ! ಬಹಳ ಭಾರವಾಗಿದೆ ಈ ಮೂಟೆಯನ್ನು ಕೆಳಕ್ಕೆ ಇಳಿಸು ಎಂದು ಕೇಳಿದಳು. ಅದಕ್ಕೆ ಸೋಮೆಯು ಅಮ್ಮಾ! ಈ ದಿನ ಸೋಮವಾರದಿಂದ ಕೂಡಿದ ಅಮಾವಾಸ್ಯೆಯಾಗಿದೆ ನಾನು ಹತ್ತಿಯನ್ನು ಮುಟ್ಟುವು

ದಿಲ್ಲ ಎಂದು ಹೇಳಿದಳು. ಅಲ್ಲಿಂದ ಹೊರಟು ತನ್ನ ಮನೆಯನ್ನು ಸೇರಬೇಕೆಂದು ಸೋಮಾದೇವಿಯು ಬರುತ್ತಿರುವಾಗಲೇ ಅವಳ ಮನೆಯಲ್ಲಿ ಮೃತರಾಗಿದ್ದವರೆಲ್ಲರೂ ಬದುಕಿಕೊಂಡರು. ಕೂಡಲೇ ಸೋಮೆಯೂ ಮನೆಗೆ ಬಂದಳು. ಆಗ ಅವಳ ಸೊಸೆಯರೂ ಮಗಳೂ ಸೋಮೆಗೆ ನಮಸ್ಕಾರಮಾಡಿ ಅಮ್ಮಾ ನೀವು ಬರುವುದಕ್ಕೆ ಮೊದಲು ನಮ್ಮ ಮನೆಯಲ್ಲಿ ಗಂಡಸರೆಲ್ಲರೂ ಸತ್ತುಹೋಗಿದ್ದರು. ಸ್ವಲ್ಪ ಹೊತ್ತಿನಲ್ಲೆ ಎಚ್ಚತ್ತು ಬದುಕಿಕೊಂಡರು. ಇದಕ್ಕೆ ಕಾರಣವೇನು ಎಂದು ಕೇಳಲು ಸೋಮವಾರದ ದಿನ ನಾನು ಹತ್ತಿಯ ಮೂಟೆಯನ್ನು ಕಂಡೆನು. ಆದರೆ ಅದನ್ನು ಮುಟ್ಟಲಿಲ್ಲ ಆ ಕಾರಣದಿಂದ ನನ್ನ ಗಂಡನೂ ಮಕ್ಕಳೂ ಸತ್ತರು. ಸೋಮವಾರ ವ್ರತವನ್ನು ಮಾಡಿ ಸಕ್ಕರೆಯನ್ನು ಹಾಕಿ ನಮಸ್ಕಾರಮಾಡಿದಕಾರಣ ಅವರೆಲ್ಲರೂ ಬದುಕಿಕೊಂಡರು. ಆದಕಾರಣ ಲೋಕದಲ್ಲಿ ಮೃತಸಂಜೀವಿನಿ ರೂಪವಾಗಿರುವ ಈ ವ್ರತವನ್ನು ನೀವೆಲ್ಲರೂ ಭಕ್ತಿಯಿಂದ ಮಾಡಿ ಧನ್ಯರಾಗಿ ಎಂದು ಸೋಮೆಯು ಉಪದೇಶಿಸಲು ಅವಳ ಸೊಸೆಯರೂ ಮಗಳೂ ಸೋಮವಾರ ವ್ರತವನ್ನು ಮಾಡಿ ಧನ್ಯರಾದರು. ಇದರಿಂದ ಅವರೆಲ್ಲರೂ ಇಹಲೋಕದಲ್ಲಿ ಭೋಗಭಾಗ್ಯಗಳನು ಅನುಭವಿಸಿ ಕಡೆಗೆ ವಿಷ್ಣುಲೋಕವನ್ನು ಸೇರಿದರು. ಸರ್ವಶ್ರೇಷ್ಠವಾದ ಈ ವ್ರತವನ್ನು ನಿನಗೋಸ್ಕರವಾಗಿ ಹೇಳಿರುವೆನು ಎಂದು ಭೀಷ್ಮಾಚಾರ್‍ಯರು ಹೇಳಲು ಧರ್ಮರಾಯರು ಎಲೈ ಗುರುಗಳಿರಾ ! ಇಂಥ ಮಹಾಮಹಿಮೆಯುಳ್ಳ ಈ ವ್ರತವನ್ನು ಮಾಡತಕ್ಕ ವಿಧಾನ ಹೇಗೆ ಅದನ್ನು ನನಗೆ ವಿವರಿಸಿ ಹೇಳಬೇಕೆಂದು ಕೇಳಲು ಭೀಷ್ಮರು ಅಯ್ಯಾ ! ಸೋಮವಾರ ಅಮಾವಾಸ್ಯೆಯಿಂದ ಕೂಡಿಬಂದರೆ ಅದು ಬಹು ಶ್ರೇಷ್ಠವಾದ ದಿನ. ಇಂಥ ದಿನವು ದೇವತೆಗಳಿಗೂ ಕೂಡ ಸಿಕ್ಕುವುದು ದುರ್ಲಭ. ಆ ದಿನ ಸಕಲ ಸಂಜೀವಿನೀ ಸ್ವರೂಪವಾಗಿ ಸರ್ವಭೂತಗಳಿಗೂ ಆವಾಸಸ್ಥಾನವಾಗಿ ಬ್ರಹ್ಮ ವಿಷ್ಣು ಶಿವಾತ್ಮಕವಾಗಿ ವೃಕ್ಷರಾಜನೆಂಬ ಹೆಸರುಳ್ಳ ಅಶ್ವತ್ಥವನ್ನು ಷೋಡಶೋಪಚಾರಗಳಿಂದ ಪೂಜಿಸಿ ಲಕ್ಷ್ಮೀನಾರಾಯಣ ಪ್ರೀತ್ಯರ್ಥವಾಗಿ ಚಿನ್ನ ಬೆಳ್ಳಿ ಮುತ್ತು ಹವಳ ಹಿತ್ತಾಳೆ ತಾಮ್ರ ಮೊದಲಾದವುಗಳ ನಾಣ್ಯವನ್ನಾಗಲಿ ವಸ್ತುವನ್ನಾಗಲಿ ಪ್ರತ್ಯೇಕ್ಷವಾಗಿ ಹಾಕುತ್ತ ಭಕ್ತಿಯಿಂದ ನೂರೆಂಟು ನಮಸ್ಕಾರಗಳನ್ನು ಮಾಡಿ ಯಾವ ಪದಾರ್ಥವನ್ನು ಪ್ರದಕ್ಷಿಣೆಗೆ ಹಾಕಿರುತ್ತಾರೋ ಅದನ್ನು ಬ್ರಾಹ್ಮಣರಿಗೆ ದಾನ ಮಾಡಿ, ಮುತ್ತೈದೆಯರನ್ನು ಪೂಜಿಸಿ ದಾನದಕ್ಷಿಣೆಗಳಿಂದ ತೃಪ್ತಿಪಡಿಸಿ ಆ ಬಳಿಕ ತಾನು ನಾರಾಯಣ ಸ್ಮರಣೆಯನ್ನು ಮಾಡುತ್ತ ಭೋಜನಮಾಡಬೇಕು. ಇಂಥ ವ್ರತವನ್ನು ನೀನು ದ್ರೌಪದಿ ಸುಭದ್ರೆ ಉತ್ತರೆಯರಿಂದ ಮಾಡಿಸು. ಇದರಿಂದ ಸರ್ವಸಂಕಟಗಳೂ ನಾಶವಾಗಿ ದೀರ್ಘಾಯುಸ್ಸುಳ್ಳ ಸಂತಾನವನ್ನು ಪಡೆಯುವೆ ಎಂದು ಹೇಳಿದರು. ಅದನ್ನು ಕೇಳಿ ಧರ್ಮರಾಯನು ಕೇವಲ ದರಿದ್ರರಾದವರು ಈ ವ್ರತವನ್ನು ಹೇಗೆ ಮಾಡಬೇಕೆಂದು ಕೇಳಲು ಭೀಷ್ಮಾಚಾರ್‍ಯರು ಅಯ್ಯಾ ! ಧರ್ಮರಾಯನೇ ಕೇಳು ಭಕ್ತಿವಂತರಾದ ಬಡವರು ಸೋಮವಾರ ಅಮಾವಾಸ್ಯೆಯ ದಿನ ಬೆಳಗ್ಗೆ ಎದ್ದು ನದಿಗಾಗಲಿ ಕೆರೆಗಾಗಲಿ ಹೋಗಿ ಸ್ನಾನ ಮಾಡಿ ಮಡಿಯುಟ್ಟು ಕಾಡುಹೂವುಗಳನ್ನು ಸಿಕ್ಕಿದ ಹಣ್ಣುಗಳನ್ನು ತೆಗೆದುಕೊಂಡು ಬಂದು ಫಲಪುಷ್ಪ ತಾಂಬೂಲ ಧೂಪ ದೀಪ ನೈವೇದ್ಯಗಳಿಂದ ಬ್ರಹ್ಮ ವಿಷ್ಣು ಶಿವಸ್ವರೂಪವಾದ ಅಶ್ವತ್ಥದ ಬಳಿಗೆ ಬಂದು ಭಕ್ತಿಯಿಂದ ಭಗವಂತನನ್ನು ಧ್ಯಾನಿಸುತ್ತ ಷೋಡಶೋಪಚಾರ ಪೂಜೆಮಾಡಿ ಹಣ್ಣುಗಳನ್ನಾಗಲಿ ಹೂವನ್ನಾಗಲಿ ಹಾಕುತ್ತ ಪ್ರದಕ್ಷಿಣೆ ನಮಸ್ಕಾಗಳನ್ನು ಮಾಡಿ ಆ ಬಳಿಕ ತಮ್ಮ ಶಕ್ತ್ಯನುಸಾರ ಬ್ರಾಹ್ಮಣ ಮತ್ತೈದೆಯರಿಗೆ ಭೋಜನಮಾಡಿಸಬೇಕು. ಈ ವ್ರತವನ್ನು ಮೊದಲು ಮಹಾವಿಷ್ಣುವು ದೇವತೆಗಳಿಗೆ ಉಪದೇಶಿಸಿದನು. ಅದನ್ನು ನಾನು ನಿನಗೋಸ್ಕರ ಹೇಳಿದೆ.

ನೆಂದು ಭೀಷ್ಮಾಚಾರ್ಯರು ಧರ್ಮರಾಯನಿಗೆ ಹೇಳಿದ ಭವಿಷ್ಯೋತ್ತರ ಪುರಾಣದ ಅಮಾವಾಸ್ಯೆ ಸೋಮವಾರ ವ್ರತಕಥಾ ಸಂಗ್ರಹವು ಮುಗಿದುದು ಶ್ರೀಃ ಶ್ರೀಃ ಶ್ರೀಃ

ಶ್ರೀರಸ್ತು

ಶ್ರೀಮಹಾಲಕ್ಷ್ಮ್ಯೈ ನಮಃ

೧೬. ಅಥ ಮಾರ್ಗಶಿರ ಮಹಾಲಕ್ಷ್ಮೀ ವ್ರತಕಲ್ಪಃ

ಅತ್ರ ವ್ರತ ವಿವೇಕಃ—ಸರ್ವೇಷಾಮೇವ ಮಾಸಾನಾಂ ಶ್ರೇಷ್ಠಂ ಮಾರ್ಗಶಿರಸ್ತಥಾ ॥ ತಸ್ಮಿನ್ ಸಂತಿ ಗುರೋರ್ಯಾನಿ ವಾರಾಣಿ ಸಕಲಾನಿ ತು । ತೇಷಾಂ ಪೂಜಾ ಪ್ರಕರ್ತವ್ಯಂ ಲಕ್ಷ್ಮ್ಯಾಃ ಸಂಪತ್ಸಮೃದ್ಧಯೇ । ಆದೌ ವಾರೇ ನ ಕರ್ತವ್ಯಾ ಪೂಜಾ ತು ವ್ರತಚಾರಿಭಿಃ । ದ್ವಿತೀಯೇ ತು ಪ್ರಕರ್ತವ್ಯಾ ಮನ್ನ ಸೂಪಸಮನ್ವಿತಂ ॥ ಚೈತ್ರಾದಿ ದ್ವಾದಶ ಮಾಸಗಳಲ್ಲಿ ಶ್ರೇಷ್ಠವಾದ ಮಾರ್ಗಶಿರ ಮಾಸದಲ್ಲಿ ಲಕ್ಷ್ಮೀಪ್ರದವಾದ ಗುರುವಾರಗಳುಂಟು. ಆ ವಾರಗಳಲ್ಲಿ ಸಂಪತ್ಕಾಮರಾದವರು ಮಹಾಲಕ್ಷ್ಮಿಯನ್ನು ಪೂಜಿಸಬೇಕು. ಮಾರ್ಗಶಿರದ ಮೊದಲನೆ ಗುರುವಾರವನ್ನು ಬಿಟ್ಟು ಉಳಿದ ಗುರುವಾರಗಳಲ್ಲಿ ವ್ರತವನ್ನು ಮಾಡುತ್ತ ಪುಷ್ಯಮಾಸದಲ್ಲಿ ಒಂದು ಗುರುವಾರವನ್ನು ಸೇರಿಸಿಕೊಂಡು ಐದು ವಾರಗಳು ಪೂಜೆಯನ್ನು ಮಾಡಬೇಕು. (ಏಳು ಗಂಟಿನ ದಾರ.) ಪುರುಷರೂ ಸ್ತ್ರೀಯರೂ ಚತುರ್ವರ್ಣದವರೂ ಭಕ್ತಿವಂತರಾದ ಇತರರೂ ಈ ವ್ರತವನ್ನು ಮಾಡಬಹುದು.

ಅಥ ಪೂಜಾ ವಿಧಾನ

ಅಥ ಸಾಧಕಃ ಪ್ರಾತಃಕಾಲೇ ಮಂಗಳಸ್ನಾನಂ ಕೃತ್ವಾ ನಿರ್ವರ್ತಿತ ನಿತ್ಯಕರ್ಮಾನುಷ್ಠಾನಸ್ಸನ್ ವ್ರತೋಪಕರಣ ಸಹಿತ ಗೋಮಯೇನೋಪಲಿಪ್ತ ಶುಚೌ ದೇಶೇ ರಂಗವಲ್ಯಾದ್ಯಲಂಕೃತ ಚಿತ್ರಮಂಟಪಂ ಕಾರಯಿತ್ವಾ ಮಂಟಪಮಧ್ಯೇ ಪೀಠಂ ನಿಧಾಯ ತಸ್ಯೋಪರಿ ತಂಡುಲರಾಶಿಂ ಪ್ರಸಾರ್ಯ ತಸ್ಯೋಪರಿ ಕಲಶಂ ನಿಕ್ಷಿಪ್ಯ ಪೂಜಯೇತ್ ॥

ಆಗಮಾರ್ಥಂ ತು ದೇವಾನಾಂ ಗಮನಾರ್ಥಂ ತು ರಕ್ಷಸಾಂ ಕುರ್ವೇ ಘಂಟಾರವಂ ತತ್ರ ದೇವತಾಹ್ವಾನ ಲಾಂಛನಂ ॥ ಇತಿ ಘಂಟಾನಾದಂ ಕೃತ್ವಾ ತ್ರಿರಾಚಮ್ಯ ಪ್ರಾಣಾಯಾಮಪುರಸ್ಸರಂ ಸಂಕಲ್ಪಂ ಕುರ್ಯಾತ್ ॥ ಶುಭೇ ಶೋಭನೇ ಮುಹೂರ್ತೇ ಆದ್ಯಬ್ರಹ್ಮಣಃ ದ್ವಿತೀಯ ಪ್ರಹರಾರ್ಧೇ ಶ್ವೇತವಾರಾಹಕಲ್ಪೇ ವೈವಸ್ವತ ಮನ್ವಂತರೇ ಕಲಿಯುಗೇ ಪ್ರಥಮಪಾದೇ ಜಂಬೂದ್ವೀಪೇ ಭರತವರ್ಷೇ ಭರತಖಂಡೇ ಅಸ್ಮಿನ್ ವರ್ತಮಾನೇ ವ್ಯಾವಹಾರಿಕೇ ಪ್ರಭವಾದಿ ಷಷ್ಠಿಸ್ಸಂವತ್ಸರಾಣಾಂ ಮಧ್ಯೇ ....ನಾಮ ಸಂವತ್ಸರೇ ದಕ್ಷಿಣಾಯನೇ ಹೇಮಂತ ಋತೌ ಮಾರ್ಗಶಿರಮಾಸೇ ಶುಕ್ಲಪಕ್ಷೇ ....ತಿಥೌ ಗುರುವಾಸರ ಯುಕ್ತಾಯಾಂ ಏವಂಗುಣ ವಿಶೇಷಣ ವಿಶಿಷ್ಟಾಯಾಂ ಶುಭತಿಥೌ ಶ್ರೀಪರಮೇಶ್ವರ ಪ್ರೀತ್ಯರ್ಥಂ (ಅಸ್ಮಾಕಂ) ಸಹಕುಟುಂಬಾನಾಂ ಕ್ಷೇಮ ಸ್ಥೈರ್ಯ ವಿಜಯಾಯುರಾರೋಗ್ಯ ಐಶ್ವರ್ಯಾಭಿವೃದ್ಧ್ಯರ್ಥಂ ಪುತ್ರಪೌತ್ರಾದಿ ವೃದ್ಧ್ಯರ್ಥಂ ಮಮ ಸಮಸ್ತ ದುರಿತ ಕ್ಷಯದ್ವಾರಾ ಶ್ರೀಮಹಾಲಕ್ಷ್ಮೀ ಪ್ರಸಾದೇನ ಸಮಸ್ತ ಮಂಗಳಾವಾಪ್ತ್ಯರ್ಥಂ ಸುತ ಕ್ಷೇತ್ರ ಗೋಮಹಿಷ್ಯಾದಿ ವಸ್ತುವಾಹನ ಧನಕನಕ ಶ್ರೇಯಃ ಪ್ರಾಪ್ತ್ಯರ್ಥಂ ಶ್ರೀಬ್ರಹ್ಮಾಂಡ ಪುರಾಣೋಕ್ತ ಪ್ರಕಾರೇಣ ಶ್ರೀ ಮಾರ್ಗಶೀರ್ಷ ಮಹಾಲಕ್ಷ್ಮೀ ದೇವತಾಮುದ್ದಿಶ್ಯ ಮಾರ್ಗಶೀರ್ಷ ಮಹಾಲಕ್ಷ್ಮೀ ಪ್ರೀತ್ಯರ್ಥಂ ಮಾರ್ಗಶೀರ್ಷ ಮಹಾಲಕ್ಷ್ಮೀ ವ್ರತಂ ಕರಿಷ್ಯೇ ॥ ಇತಿ ಸಂಕಲ್ಪ್ಯ ॥ ತದಂಗ ಕಲಶಾರಾಧನಂ ಕರಿಷ್ಯೇ ॥ ಕಲಶಸ್ಯ ಮುಖೇ ವಿಷ್ಣುರಿತಿ (೮ನೆ ಪುಟ ನೋಡಿರಿ) ಕಲಶೋದಕೇನ ಪೂಜೋಪಕರಣಾನಿ ಸಂಪ್ರೋಕ್ಷ್ಯ ದೇವತ್ವ ಮಾತ್ಮಾನಂ ಚ ಪ್ರೋಕ್ಷ್ಯ ತದಾದೌ ನಿರ್ವಿಘ್ನತಾಸಿದ್ಧ್ಯರ್ಥಂ ಮಹಾ ಗಣಪತಿ ಪೂಜಾಂ ಚ ಕರಿಷ್ಯೇ ॥ (೮ನೆ ಪುಟ ನೋಡಿರಿ) ಗಣಪತಿ ಪ್ರಸಾದಂ ಗೃಹೀತ್ವಾ ಶಿರಸಾ ಧೃತ್ವಾ ಪ್ರಾಣಪ್ರತಿಷ್ಠಾಪನಂ ಕುರ್ಯಾತ್ ॥ ಅಸ್ಯ ಶ್ರೀಮಾರ್ಗಶೀರ್ಷ ಮಹಾಲಕ್ಷ್ಮೀ ಪ್ರಾಣಪ್ರತಿಷ್ಠಾಪನ ಮಹಾಮಂತ್ರಸ್ಯ ಬ್ರಹ್ಮ ವಿಷ್ಣು ಮಹೇಶ್ವರಾ ಋಷಯಃ । ಋಗ್ಯಜುಸ್ಸಾಮಾಥರ್ವಣಾಶ್ಛಂಧಾಂಸಿ । ಪ್ರಾಣ ಶಕ್ತಿಃ ಪರಾ ದೇವತಾ । ಹ್ರಾಂ ಬೀಜಂ ಹ್ರೀಂ ಶಕ್ತಿಃ ಹ್ರೂಂ ಕೀಲಕಂ ಶ್ರೀಮಾರ್ಗಶೀರ್ಷ ಮಹಾಲಕ್ಷ್ಮೀ ಪ್ರಾಣಪ್ರತಿಷ್ಠಾ ಸಿದ್ಧ್ಯರ್ಥೇ ಜಪೇ ವಿನಿಯೋಗಃ ಇತ್ಯಾದಿ (ಮುಂದಕ್ಕೆ ೧೧ನೆ ಪುಟ ನೋಡಿರಿ) ಅತಃ ಏವಂ ಪ್ರಾಣ ಪ್ರತಿಷ್ಠಾನಂತರಂ ಪುಷ್ಪಾಕ್ಷತಾನ್ ಗೃಹೀತ್ವಾ ಮಹಲಕ್ಷ್ಮೀಂ ಧ್ಯಾಯೇತ್ ॥

ಅಥ ಧ್ಯಾನಂ ॥ ಯಾಸಾ ಪದ್ಮಾಸನಸ್ಥಾ ವಿಪುಲಕಟಿ ತಟೀ ಪದ್ಮಪತ್ರಾಯತಾಕ್ಷೀ ॥ ಗಂಭೀರಾವರ್ತನಾಭಿ ಸ್ತನಭರನಮಿತಾ ಶುಭ್ರ ವಸ್ತ್ರೋತ್ತರೀಯಾ ॥ ಲಕ್ಷ್ಮೀರ್ದಿವ್ಯೈ ಗಜೇಂದ್ರೈಃ ಮಣಿಗಣ ಖಚಿತೈಃ ಸ್ನಾಪಿತಾ ಹೇಮಕುಂಭೈಃ ॥ ನಿತ್ಯಂ ಸಾ ಪದ್ಮಹಸ್ತಾ ಮಮ ವಸತು ಗೃಹೇ ಸರ್ವಮಾಂಗಲ್ಯ ಯುಕ್ತಾ ॥ ಓಂ

ವರ್ಣಾಂ ಹರಿಣೀಂ । ಸುವರ್ಣ ರಜತಸ್ರಜಾಂ । ಚಂದ್ರಾಂ ಹಿರಣ್ಮಯೀಂ ಲಕ್ಷ್ಮೀಂ । ಜಾತವೇದೋ ಮಮಾವಹ । ಶ್ರೀ ಮಾರ್ಗಶೀರ್ಷ ಮಹಾಲಕ್ಷ್ಮ್ಯೈ ನಮಃ । ಧ್ಯಾನಂ ಸಮರ್ಪಯಾಮಿ ॥ ಆವಾಹಯಾಮಿ ಕಮಲೇ ಆಹೃತಾಂ ದೇವದಾನವೈಃ ವಿಷ್ಣುಪ್ರಿಯೇ ನಮಸ್ತುಭ್ಯಂ ನಿತ್ಯಂ ಸನ್ನಿಹಿತಾ ಭವ । ತಾಂ ಮ ಆವಹ ಜಾತವೇದೋ ಲಕ್ಷ್ಮೀಮನಪಗಾಮಿನೀಂ । ಯಸ್ಯಾಂ ಹಿರಣ್ಯಂ ವಿಂದೇಯಂ ಗಾಮಶ್ವಂ ಪುರುಷಾನಹಂ । ಆವಾಹನಂ ಸಮರ್ಪಯಾಮಿ ॥ ಇಂದ್ರನೀಲಾದಿ ಖಚಿತೇ ದಿವ್ಯಮೌಕ್ತಿಕ ಸಂಯುತೇ । ರತ್ನಸಿಂಹಾಸನೇ ರಮ್ಯೇ ಸಂವಿಶಸ್ವ ಸುರೇಶ್ವರೀ ॥ ಅಶ್ವಪೂರ್ವಾಂ ರಥಮಧ್ಯಾಂ ಹಸ್ತಿನಾದ ಪ್ರಮೋದಿನೀಂ । ಶ್ರಿಯಂ ದೇವೀಮುಪಹ್ವಯೇ ಶ್ರೀರ್ಮಾ ದೇವೀ ಜುಷತಾಂ ॥ ಶ್ರೀಮಾರ್ಗಶೀರ್ಷ ಮಹಾಲಕ್ಷ್ಮ್ಯೈ ನಮಃ ॥ ರತ್ನಸಿಂಹಾಸನಂ ಸಮರ್ಪಯಾಮಿ ॥ ತಪ್ತಕಾಂಚನಸಂಕಾಶೇ ಮಹಾಲಕ್ಷ್ಮೀ ವರಪ್ರದೇ । ಪಾದ್ಯಂ ಗೃಹಾಣ ದೇವಿ ತ್ವಂ ಸರ್ವಲೋಕೈಕ ಪೂಜಿತೇ ॥ ಕಾಂಸ್ಯೋಸ್ಮಿತಾಂ ಹಿರಣ್ಯ ಪ್ರಾಕಾರಾಮಾರ್ದ್ರಾಂ ಜ್ವಲಂತೀಂ ॥ ತೃಪ್ತಾಂ ತರ್ಪಯಂತೀಂ ಪದ್ಮೇ ಸ್ಥಿತಾಂ ಪದ್ಮವರ್ಣಾಂ ತಾಮಿಹೋಪಹ್ವಯೇ ಶ್ರಿಯಂ ॥ ಶ್ರೀ ಮಾರ್ಗಶೀರ್ಷ ಮಹಾಲಕ್ಷ್ಮ್ಯೈ ನಮಃ ॥ ಪಾದ್ಯಂ ಸಮರ್ಪಯಾಮಿ ॥ ಕ್ಷೀರೋದಾರ್ಣವ ಸಂಭೂತೇ ಮಹಾಲಕ್ಷ್ಮೀ ವರಪ್ರದೇ ॥ ಸುವರ್ಣಕಲಶಾನೀತಂ ಸ್ವೀಕುರುಷ್ವಾರ್ಘ್ಯಮುತ್ತಮಂ ॥ ಚಂದ್ರಾಂ ಪ್ರಭಾಸಾಂ ಯಶಸಾ ಜ್ವಲಂತೀಂ । ಶ್ರಿಯಂ ಲೋಕೇ ದೇವಜುಷ್ಟಾಮುದಾರಾಂ । ತಾಂ ಪದ್ಮನೇಮೀಂ ಶರಣಮಹಂ ಪ್ರಪದ್ಯೇ ॥ ಅಲಕ್ಷ್ಮೀರ್ಮೇ ನಶ್ಯತಾಂ ತ್ವಾಂ ವೃಣೇ ॥ ಶ್ರೀ ಮಾರ್ಗಶೀರ್ಷ ಮಹಾಲಕ್ಷ್ಮ್ಯೈ ನಮಃ ॥ ಅರ್ಘ್ಯಂ ಸಮರ್ಪಯಾಮಿ ॥ ಸರ್ವಮಂಗಳ ಮಾಂಗಲ್ಯೇ ಪದ್ಮಪತ್ರಾಯತೇ ಕ್ಷಣೇ ॥ ಗೃಹಾಣಾಚಮನಂ ದೇವೀ ಸರ್ವದೇವ ನಮಸ್ಕೃತೇ ॥ ಆದಿತ್ಯವರ್ಣೇ ತಪಸೋಽಧಿಜಾತೋ ವನಸ್ಪತಿ ಸ್ತವ ವೃಕ್ಷೋಥ ಬಿಲ್ವಃ ॥ ತಸ್ಯ ಫಲಾನಿ ತಪಸಾ ನುದಂತು ಮಾಯಾಂತರಾಯಾಶ್ಚ ಬಾಹ್ಯಾ ಅಲಕ್ಷ್ಮೀಃ ॥ ಶ್ರೀ ಮಾರ್ಗಶೀರ್ಷ ಮಹಾಲಕ್ಷ್ಮ್ಯೈ ನಮಃ ॥ ಆಚಮನಂ ಸಮರ್ಪಯಾಮಿ ॥ ನಾರಾಯಣ ಪ್ರಿಯೇ ದೇವೀ ಮಧುನಾ ಸಹಿತಂ ದಧಿ । ಮಧುಪರ್ಕಂ ಮಯಾ ದತ್ತಂ ಗೃಹಾಣ ಪರಮೇಶ್ವರೀ ॥ ಮಧುಪರ್ಕ ನೈವೇದ್ಯಂ ಸಮರ್ಪಯಾಮಿ ॥ ಪಯೋದಧಿ ಘೃತೋಪೇತಂಶರ್ಕರಾ ಮಧು ಸಂಯುತಂ ॥ ಸ್ನಾನಂ ಪಂಚಾಮೃತಂ ದಿವ್ಯಂ ಸ್ವೀಕುರುಷ್ವ ಸುರಾರ್ಚಿತೇ ॥ ಕ್ಷುತ್ಪಿಪಾಸಾಂ ಮಲಾಂ ಜ್ಯೇಷ್ಠಾಂ ಅಲಕ್ಷ್ಮೀಂ ನಾಶಯಾಮ್ಯಹಂ॥ ಅಭೂತಿಮಸಮೃದ್ಧಿಂ ಚ ಸರ್ವಾನ್ನಿರ್ಣುದ ಮೇ ಗೃಹಾತ್ ॥ ಅಪ್ಯಾಯಸ್ವ ಸ್ಸಮೇತುತೇ ಇತಿ ಪಂಚಾಮೃತಸ್ನಾನಂ (೧ನೇ ಪುಟ ನೋಡಿರಿ) ಗಂಗಾಜಲ ಸಮಾನೀತಂ ಸುವರ್ಣ ಕಲಶಸ್ಥಿತಂ॥ ಶುದ್ಧೋದಕಮಿದಂ

ದೇವೀ ಸ್ನಾನಾರ್ಥಂ ಪ್ರತಿಗೃಹ್ಯತಾಂ॥ ಆಪಸ್ಸೃಜಂತು ಸ್ನಿಗ್ಧಾನಿ। ಚಿಕ್ಲೀತ ವಸ ಮೇ
ಗೃಹೇ। ನಿಜದೇವೀಂ ಮಾತರಂ ಶ್ರಿಯಂ ವಾಸಯ ಮೇ ಕುಲೇ। ಶ್ರೀಮಾರ್ಗಶೀರ್ಷ
ಮಹಾಲಕ್ಷ್ಮ್ಯೈ ನಮಃ ॥ ಶುದ್ಧೋದಕಸ್ನಾನಂ ಸಮರ್ಪಯಾಮಿ ॥ ದೇವಾನಾಮ
ದ್ಭುತಂ ದಿವ್ಯಂ ಸ್ವರ್ಣತಂತುವಿನಿರ್ಮಿತಂ॥ ವಸ್ತ್ರಯುಗ್ಮಂ ಮಯಾ ದತ್ತಂ ಗೃಹಾಣ
ಹರಿವಲ್ಲಭೇ ॥ ಯಃ ಶುಚಿಃ ಪ್ರಯತೋ ಭೂತ್ವಾ ಜುಹುಯಾದಾಜ್ಯಮನ್ವಹಂ।
ಶ್ರಿಯಃ ಪಂಚ ದಶರ್ಚಂ ಚ ಶ್ರೀಕಾಮಸ್ಸತತಂ ಜಪೇತ್ ॥ ಶ್ರೀಮಾರ್ಗಶೀರ್ಷ
ಮಹಾಲಕ್ಷ್ಮ್ಯೈ ನಮಃ॥ ಅಭಿವಸ್ತ್ರೇತಿ ವಸ್ತ್ರಯುಗ್ಮಂ ಸಮರ್ಪಯಾಮಿ॥ ರಾಜಿತಂ
ಬ್ರಹ್ಮಸೂತ್ರಂ ಚ ಕಾಂಚನಂ ಸುಮನೋಹರಂ ॥ ಯಜ್ಞೋಪವೀತಂ ದೇವಿ ತ್ವಂ
ಗೃಹಾಣ ಪರಮೇಶ್ವರೀ॥ ಶ್ರೀ ಮಾರ್ಗಶೀರ್ಷ ಮಹಾಲಕ್ಷ್ಮ್ಯೈ ನಮಃ॥ ಉಪವೀತಂ
ಸಮರ್ಪಯಾಮಿ॥ ನಿತ್ಯತಾಟಕಂ ಕೇಯೂರ ಮುಖ್ಯಭೂಷಣ ಭೂಷಿತೇ। ಭೂಷ
ಣಾನಿ ದದಾಮದ್ಯ ಗೃಹಾಣ ಹರಿವಲ್ಲಭೇ ॥ ಹಿರಣ್ಯರೂಪಸ್ಸಹಿರಣ್ಯಸಂದೃಗಪಾನ್ನ
ಪಾತ್ಸೇದು ಹಿರಣ್ಯವರ್ಣಃ॥ ಹಿರಣ್ಯಯಾತ್ಪರ್ಯೋನೇರ್ನಿಷದ್ಯಾ ಹಿರಣ್ಯದಾತು ದದ್ಯ
ನ್ನಮಸ್ಮೈ ॥ ಶ್ರೀ ಮಾರ್ಗಶೀರ್ಷ ಮಹಾಲಕ್ಷ್ಮ್ಯೈ ನಮಃ ॥ ಆಭರಣಂ ಸಮರ್ಪ
ಯಾಮಿ ॥ ಚಂದನಾಗರುಕರ್ಪೂರ ಕಸ್ತೂರ್ಯಾದಿ ಸಮನ್ವಿತಂ। ಗಂಧಂ ಗೃಹಾಣ
ದೇವಿ ತ್ವಂ ವರದೇ ಭಕ್ತವತ್ಸಲೇ॥ ಗಂಧದ್ವಾರಾಂ ದುರಾದರ್ಷಾಂ ನಿತ್ಯಪುಷ್ಟಾಂ ಕರೀ
ಷಿಣೀಂ। ಈಶ್ವರೀಂ ಸರ್ವಭೂತಾನಾಂ ತಾಮಿಹೋ ಪಹ್ವಯೇ ಶ್ರಿಯಂ॥ ಶ್ರೀ ಮಾರ್ಗ
ಶೀರ್ಷ ಮಹಾಲಕ್ಷ್ಮ್ಯೈ ನಮಃ॥ ದಿವ್ಯಪರಿಮಳ ಗಂಧಂ ಸಮರ್ಪಯಾಮಿ॥ ಅಕ್ಷತಾ
ಶ್ವೇತವರ್ಣಾಶ್ಚ ಶುದ್ಧಮೌಕ್ತಿಕಸನ್ನಿಭಾ। ಅಹಂ ದಾಸ್ಯಾಮಿ ಕಮಲೇ ಅಕ್ಷಯ್ಯ
ಫಲದಾಯಿನೀ॥ ಮನಸಃ ಕಾಮಮಾಕೂತಿಂ ವಾಚಸ್ಸತ್ಯಮಶೀಮಹಿ। ಪಶೂನಾಂ
ರೂಪಮನ್ನಸ್ಯ ಮಯಿ ಶ್ರೀಶ್ರಯತಾಂ ಯಶಃ॥ ಶ್ರೀ ಮಾರ್ಗಶೀರ್ಷ ಮಹಾಲಕ್ಷ್ಮ್ಯೈ
ನಮಃ॥ ಅಕ್ಷತಾ ಸಮರ್ಪಯಾಮಿ ॥ ಮಂದಾರೈಃ ಪಾರಿಜಾತಾದ್ಯೈಃ ಪಾಟಲಾ
ಶೋಕಚಂಪಕೈಃ॥ ಕರವೀರೈಶ್ಚ ಪುನ್ನಾಗೈರರ್ಚಯಾಮಿ ಸುರೇಶ್ವರೀ ॥ ಕರ್ದಮೇನ
ಪ್ರಜಾಭೂತಾ ಮಯಿ ಸಂಭವ ಕರ್ದಮ॥ ಶ್ರಿಯಂ ವಾಸಯ ಮೇ ಕುಲೇ ಮಾತರಂ
ಪದ್ಮಮಾಲಿನೀಂ ॥ ಶ್ರೀಮಾರ್ಗಶೀರ್ಷ ಮಹಾಲಕ್ಷ್ಮ್ಯೈ ನಮಃ॥ ಪುಷ್ಪಾಣಿ ಸಮರ್ಪ
ಯಾಮಿ ॥ ಕಂಚುಕಂ ನೂರಮಾತರ್ಮೇ ನವರತ್ನವಿನಿರ್ಮಿತಂ। ಸರ್ವಸೌಖ್ಯಪ್ರದೇ
ದೇವಿ ಗೃಹಾಣ ನತವತ್ಸಲೇ ॥ ಶ್ರೀ ಮಾರ್ಗಶೀರ್ಷ ಮಹಾಲಕ್ಷ್ಮ್ಯೈ ನಮಃ ॥
ಕಂಚುಕಧಾರಣಂ ಸಮರ್ಪಯಾಮಿ॥ ಹಾರಿದ್ರಂ ಚ ಮಯಾ ನೀತಂ ದೇವಿ ಕಲ್ಯಾಣ
ದಾಯಿನೀ। ಸೌಭಾಗ್ಯ ವರ್ಧನಂ ದಿವ್ಯಂ ಗೃಹಾಣ ಹರಿವಲ್ಲಭೇ॥ ಪದ್ಮಾಸನೇ ಪದ್ಮ
ಊರೂ ಪದ್ಮಾಕ್ಷೀ ಪದ್ಮ ಸಂಭವೇ। ತ್ವಾಂ ಮಾಂ ಭಜಸ್ವ ಪದ್ಮಾಕ್ಷೀ ಯೇನ ಸೌಖ್ಯಂ
ಲಭಾಮ್ಯಹಂ ॥ ಹರಿದ್ರಾಚೂರ್ಣಂ ಸಮರ್ಪಯಾಮಿ ॥ ಕುಂಕುಮಂ ಶೋಭನಂ

ದಿವ್ಯಂ ಸರ್ವದಾ ಮಂಗಳಪ್ರದಂ । ಮಯಾ ಸಮರ್ಪಿತಂ ದೇವೀ ಪ್ರೀತ್ಯರ್ಥಂ ಪ್ರತಿಗೃಹ್ಯತಾಂ । ಅಶ್ವದಾಯಿ ಗೋದಾಯಿ ಧನದಾಯಿ ಮಹಾಧನೇ । ಧನಂ ಮೇ ಜುಷತಾಂ ದೇವಿ ಸರ್ವಕಾಮಾಂಶ್ಚ ದೇಹಿ ಮೇ॥ ಕುಂಕುಮಚೂರ್ಣಂ ಸಮರ್ಪಯಾಮಿ॥ ಸಚಿತ್ರಚಿತ್ರಂ ಚಿತಯಂತಮಸ್ಮೈ ಇತಿ ಸಿಂಧೂರಚೂರ್ಣಂ ಸಮರ್ಪಯಾಮಿ ॥

ಅಥ ಅಂಗ ಪೂಜಾ

ಓಂ ಶ್ರೀರಮಾಯೈ ನಮಃ	ಪಾದೌ	ಪೂಜಯಾಮಿ
ಓಂ ಕ್ಷೀರಾಬ್ಧಿತನಯಾಯೈ ನಮಃ	ಗುಲ್ಫೌ	ಪೂಜಯಾಮಿ
ಓಂ ಪದ್ಮಾಯೈ ನಮಃ	ಜಾನುನೀಂ	ಪೂಜಯಾಮಿ
ಓಂ ಕಮಲಾಯೈ ನಮಃ	ಜಂಘೇ	ಪೂಜಯಾಮಿ
ಓಂ ಸರ್ವಸಂಪತ್ಪ್ರದಾಯೈ ನಮಃ	ಊರೂ	ಪೂಜಯಾಮಿ
ಓಂ ಇಂದಿರಾಯೈ ನಮಃ	ಕಟಿಂ	ಪೂಜಯಾಮಿ
ಓಂ ವಿಷ್ಣುವಲ್ಲಭಾಯೈ ನಮಃ	ನಾಭಿಂ	ಪೂಜಯಾಮಿ
ಓಂ ಕಮಲವಾಸಿನ್ಯೈ ನಮಃ	ಕುಕ್ಷಿಂ	ಪೂಜಯಾಮಿ
ಓಂ ಸರ್ವದಾಯಿನ್ಯೈ ನಮಃ	ಉದರಂ	ಪೂಜಯಾಮಿ
ಓಂ ಹರಿಪ್ರಿಯಾಯೈ ನಮಃ	ಹೃದಯಂ	ಪೂಜಯಾಮಿ
ಓಂ ಮಂಗಳ ದೇವತಾಯೈ ನಮಃ	ವಕ್ಷಸ್ಥಳಂ	ಪೂಜಯಾಮಿ
ಓಂ ಶ್ರಿಯೈ ನಮಃ	ಸ್ತನೌ	ಪೂಜಯಾಮಿ
ಓಂ ಲೋಕಮಾತ್ರೇ ನಮಃ	ಬಾಹೂ	ಪೂಜಯಾಮಿ
ಓಂ ಕಮಲಹಸ್ತಾಯೈ ನಮಃ	ಹಸ್ತೌ	ಪೂಜಯಾಮಿ
ಓಂ ವರಪ್ರದಾಯೈ ನಮಃ	ಭುಜೌ	ಪೂಜಯಾಮಿ
ಓಂ ಕಂಬುಕಂಠ್ಯೈ ನಮಃ	ಕಂಠಂ	ಪೂಜಯಾಮಿ
ಓಂ ಶ್ರುತಿಸ್ತುತಾಯೈ ನಮಃ	ಶ್ರೋತ್ರೇ	ಪೂಜಯಾಮಿ
ಓಂ ತ್ರಿಲೋಕಜನನ್ಯೈ ನಮಃ	ನೇತ್ರೇ	ಪೂಜಯಾಮಿ
ಓಂ ಪ್ರಸನ್ನವದನಾಯೈ ನಮಃ	ಮುಖಂ	ಪೂಜಯಾಮಿ
ಓಂ ಸುಂದರಾಂಗ್ಯೈ ನಮಃ	ಲಲಾಟಂ	ಪೂಜಯಾಮಿ
ಓಂ ಕ್ಷೀರಾಬ್ಧಿತನಯಾಯೈ ನಮಃ	ಶಿರಃ	ಪೂಜಯಾಮಿ
ಓಂ ಶ್ರೀಮಾರ್ಗಶೀರ್ಷಮಹಾಲಕ್ಷ್ಮ್ಯೈ ನಮಃ	ಸರ್ವಾಂಗಾನಿ	ಪೂಜಯಾಮಿ

ಅಥ ದೋರಗ್ರಂಥಿಪೂಜಾ

ಓಂ ಸಿದ್ಧಲಕ್ಷ್ಮ್ಯೈ ನಮಃ	ಪ್ರಥಮಗ್ರಂಥಿಂ	ಪೂಜಯಾಮಿ
ಓಂ ಮೋಕ್ಷಲಕ್ಷ್ಮ್ಯೈ ನಮಃ	ದ್ವಿತೀಯಗ್ರಂಥಿಂ	ಪೂಜಯಾಮಿ

ಓಂ ಜಯಲಕ್ಷ್ಮ್ಯೈ ನಮಃ	ತೃತೀಯಗ್ರಂಥಿಂ	ಪೂಜಯಾಮಿ
ಓಂ ಸರಸ್ವತ್ಯೈ ನಮಃ	ಚತುರ್ಥಗ್ರಂಥಿಂ	ಪೂಜಯಾಮಿ
ಓಂ ಶ್ರೀಲಕ್ಷ್ಮ್ಯೈ ನಮಃ	ಪಂಚಮಗ್ರಂಥಿಂ	ಪೂಜಯಾಮಿ
ಓಂ ವರಲಕ್ಷ್ಮ್ಯೈ ನಮಃ	ಷಷ್ಠಗ್ರಂಥಿಂ	ಪೂಜಯಾಮಿ
ಓಂ ಶ್ರೀ ಮಾರ್ಗಶೀರ್ಷ ಮಹಾಲಕ್ಷ್ಮ್ಯೈ ನಮಃ	ಸಪ್ತಮಗ್ರಂಥಿಂ	ಪೂಜಯಾಮಿ

ಅಥ ಪುಷ್ಪಪೂಜಾ

ಓಂ ಶ್ರೀಮಹಾಲಕ್ಷ್ಮ್ಯೈ ನಮಃ	ಜಾಜೀಪುಷ್ಪಂ	ಸಮರ್ಪಯಾಮಿ
ಓಂ ಪದ್ಮಾಯೈ ನಮಃ	ಮಲ್ಲಿಕಾಪುಷ್ಪಂ	ಸಮರ್ಪಯಾಮಿ
ಓಂ ಕಮಲಾಯೈ ನಮಃ	ಕಮಲಪುಷ್ಪಂ	ಸಮರ್ಪಯಾಮಿ
ಓಂ ಶ್ರಿಯೈ ನಮಃ	ಚಂಪಕಪುಷ್ಪಂ	ಸಮರ್ಪಯಾಮಿ
ಓಂ ಮಾಯಾಯೈ ನಮಃ	ಕಲ್ಹಾರಪುಷ್ಪಂ	ಸಮರ್ಪಯಾಮಿ
ಓಂ ಪದ್ಮಸದ್ಮಾಯೈ ನಮಃ	ಉತ್ಪಲಪುಷ್ಪಂ	ಸಮರ್ಪಯಾಮಿ
ಓಂ ಹರಿಪ್ರಿಯಾಯೈ ನಮಃ	ಕೇತಕೀಪುಷ್ಪಂ	ಸಮರ್ಪಯಾಮಿ
ಓಂ ಲೋಕಮಾತ್ರೇ ನಮಃ	ಕುಂದಪುಷ್ಪಂ	ಸಮರ್ಪಯಾಮಿ
ಓಂ ಇಂದಿರಾಯೈ ನಮಃ	ವಕುಳಪುಷ್ಪಂ	ಸಮರ್ಪಯಾಮಿ
ಓಂ ರಮಾಯೈ ನಮಃ	ಛಾಯಾಪುಷ್ಪಂ	ಸಮರ್ಪಯಾಮಿ
ಓಂ ಭಾರ್ಗವ್ಯೈ ನಮಃ	ತಿಲಕಪುಷ್ಪಂ	ಸಮರ್ಪಯಾಮಿ
ಓಂ ಕಮಲವಾಸಿನ್ಯೈ ನಮಃ	ಸೌಗಂಧಿಕಾಪುಷ್ಪಂ	ಸಮರ್ಪಯಾಮಿ
ಓಂ ಶ್ಯಾಮಲಾಯೈ ನಮಃ	ಸೇವಂತಿಕಾಪುಷ್ಪಂ	ಸಮರ್ಪಯಾಮಿ
ಓಂ ದೀರ್ಘಕೇಶಿನ್ಯೈ ನಮಃ	ದತ್ತೂರಿಕಾಪುಷ್ಪಂ	ಸಮರ್ಪಯಾಮಿ
ಓಂ ಪುಣ್ಯದಾಯೈ ನಮಃ	ಪುನ್ನಾಗಪುಷ್ಪಂ	ಸಮರ್ಪಯಾಮಿ
ಓಂ ವೈಕುಂಠವಾಸಿನ್ಯೈ ನಮಃ	ದ್ರೋಣಪುಷ್ಪಂ	ಸಮರ್ಪಯಾಮಿ
ಓಂ ದಾರಿದ್ರ್ಯನಾಶಿನ್ಯೈ ನಮಃ	ಮಲ್ಲಿಕಾಪುಷ್ಪಂ	ಸಮರ್ಪಯಾಮಿ
ಓಂ ದೇವಾಸುರಪೂಜಿತಾಯೈ ನಮಃ	ಪಾರಿಜಾತಪುಷ್ಪಂ	ಸಮರ್ಪಯಾಮಿ
ಓಂ ಕಲ್ಯಾಣಗುಣಾಯೈ ನಮಃ	ಕರವೀರಪುಷ್ಪಂ	ಸಮರ್ಪಯಾಮಿ
ಓಂ ತೋಯಜಾಕ್ಷ್ಯೈ ನಮಃ	ತುಲಸೀಪತ್ರಂ	ಸಮರ್ಪಯಾಮಿ
ಓಂ ಬಿಂಬೋಷ್ಠ್ಯೈ ನಮಃ	ಬಿಲ್ವಪತ್ರಂ	ಸಮರ್ಪಯಾಮಿ
ಓಂ ಪಾಪಹಾರಿಣ್ಯೈ ನಮಃ	ಪಾಟಲೀಪುಷ್ಪಂ	ಸಮರ್ಪಯಾಮಿ
ಓಂ ಮಾಧವಪ್ರಿಯಾಯೈ ನಮಃ	ಮಾಚೀಪತ್ರಂ	ಸಮರ್ಪಯಾಮಿ

ಓಂ ಮಾರ್ಗಶೀರ್ಷಮಹಾಲಕ್ಷ್ಮ್ಯೈ ನಮಃ ನಾನಾವಿಧ ಪರಿಮಳ
ಪತ್ರಪುಷ್ಪಾಣಿ ಸಮರ್ಪಯಾಮಿ

ಅಥ ನಾಮ ಪೂಜಾ

ದುರ್ಮತ್ಯೈ ಸ್ತ್ಯಕ್ತಸನ್ಮಾರ್ಗವೈದಿಕಜ್ಞಾನವರ್ಜಿತಾಃ । ಶಿವೇ ಜಗದ್ಗುರೌ ಭಕ್ತಿಂ ತ್ಯಕ್ತ್ವಾ ವಿಪ್ರಾ ತಥಾನ್ಯಥಾ ॥ ಜಾನಂತಸ್ತ್ವಾರತನ್ಯೇನ ಬ್ರಹ್ಮವಿದ್ಯಾವಿಲೋಪಿನಃ । ನಾನಾಚಿಹ್ನಸಮಾಯುಕ್ತಾಸ್ಸ್ವರ್ಣಚಿಹ್ನವಿವರ್ಜಿತಾಃ ॥ ಚಂಡಾಲಹೂಣಮ್ಲೇಚ್ಛಾದ್ಯೈರ್ನಾರ್ಯಸ್ತ್ರೀಕೈಶ್ಚಾಪಿ ಸಂಕರಾಃ। ಬ್ರಹ್ಮ ಸತ್ಯಂ ಜಗನ್ಮಿಥ್ಯಂ ತ್ಯಕ್ತ್ವಾವೇದಾಂತವಾಕ್ತಿತೀಃ॥ ಸತ್ಯಂ ತು ಬ್ರಹ್ಮನನ್ಯೇದಂ ಮಿಥ್ಯಾ ತು ಪ್ರತಿಭಾಸವತ್।ಇದಾನೀಂ ವ್ಯವಹಾರೇಣ ನಾದ್ವೈತಂ ಸಿಧ್ಯತಿ ಕ್ವಚಿತ್ ॥ ಬ್ರಹ್ಮಜ್ಞಾನಾತ್ಪರಂ ಸಿದ್ಧ್ಯೇತ್ ಇತಿ ಜ್ಞಾತ್ವಾ ವಿವೇಕಿನಃ। ಇದಾನೀಮೇವ ಮಿಥ್ಯೇತಿ ಮನ್ವಾನಾಃ ಕಲಿದೋಷತಃ॥ ಸಿದ್ಧಾಂತಾಭಾಸದೋಷೇಣ ಜೀವನ್ಮುಕ್ತಾ ಇವ ಸ್ಥಿತಃ। ಲುಪ್ತಸರ್ವಕ್ರಿಯಾಶ್ಚೈವ ವರ್ಣಾಶ್ರಮ ವಿವರ್ಜಿತಾಃ ॥ ಅಜಾತಿಭಿಕ್ಷಾಂ ಕುರ್ವಂತಿ ಶಿಶ್ನೋದರಪರಾಯಣಾಃ । ಪರಸ್ಯ ಬ್ರಹ್ಮಣಃ ಕ್ವಚಿದಂಗಾದಿ ಪರಿಕಲ್ಪಕಾಃ॥ ದ್ವೈವಾಜ್ಞಾನಮಪಿ ದ್ವೈವಂ ಚ ವದಂತಿ ಸ್ವೇಚ್ಛಯಾ ಜನಾಃ॥ ಅನಾಚಾರರತಾಶ್ಚೈವ ಲುಪ್ತಧರ್ಮಾಃ ಕಲೌ ಜನಾಃ॥ ಸಮುದ್ರಯಾನನಿರತಾಃ ನೀಚಭಾಷಾವಿಶಾರದಾಃ । ನೀಚಾನಾಂ ಲೌಕಿಕೇ ತಂತ್ರೇ ಶಿಲ್ಪಿವೈಚಿತ್ರ್ಯಯೋಗತಃ ॥ ತಾನುತ್ತಮಾಂಶ್ಚ ಮನ್ವಾನಾಸ್ಸರ್ವೇ ವಂಚನತತ್ಪರಾಃ। ಶ್ರುತಾನಿ ಯಾನಿ ಪಾಪಾನಿ ದೃಶ್ಯಂತೇ ಸರ್ವಭೂಮಿಷು ॥ ಬ್ರಾಹ್ಮಣ್ಯಂ ಸರ್ವದಾ ಕಷ್ಟಂ ಕಲಿಕಾಲವಿಶೇಷತಃ । ಚಂಡಾಲಸೇವಕಾಸ್ಯುಸ್ತೇ ವೈದಿಕಾ ಹಂತ ದುಷ್ಕಲೌ॥ ಅಶಾಸ್ತ್ರಮನ್ಯಥಾವಾದಮಧರ್ಮಶ್ಚಾಪಿ ವರ್ಧತೇ। ತಸ್ಮಾದದ್ಯೈವ ಕರ್ತವ್ಯಂ ಆವಶ್ಯಂ ಧರ್ಮಸಂಗ್ರಹಃ॥ ಇತ್ಯಾಸ್ತಿಕಾವಿನಿಶ್ಚಿತ್ಯ ಕುರ್ವಂತು ವ್ರತಮುತ್ತಮಂ। ಯೋ ವೈಕುಂಠೇ ಚತುರ್ದಶ್ಯಾಂ ಅರ್ಚಯೇಚ್ಛಿವಕೇಶವೌ॥ ಸರ್ವಪಾಪವಿನಿರ್ಮುಕ್ತಃ ಪ್ರಯಾತಿ ಪರಮಾಂ ಗತಿಂ॥

ಇತಿ ಸನತ್ಕುಮಾರ ಸಂಹಿತಾಯಾಂ ವೈಕುಂಠಚತುರ್ದಶೀ ಕಥಾಸಮಾಪ್ತಾ.

ವೈಕುಂಠಚತುರ್ದಶೀ ವ್ರತಕಥಾಸಂಗ್ರಹ

॥ ವಿಷ್ಣುಪರಂ ॥

ಎಲೈ ಋಷಿಗಳಿರಾ ! ಕೇಳಿ ಕೃತಯುಗದಲ್ಲಿ ಕಾರ್ತಿಕ ಶುದ್ಧ ಚತುರ್ದಶಿಯದಿನ ಮಹಾವಿಷ್ಣುವು ವೈಕುಂಠದಿಂದ ಕಾಶೀಕ್ಷೇತ್ರಕ್ಕೆ ಬಂದು ವಿಶ್ವೇಶ್ವರನನ್ನು ಪೂಜಿಸಬೇಕೆಂಬ ಆಸೆಯಿಂದ ಮಣಿಕರ್ಣಿಕೆಯಲ್ಲಿ ಸ್ನಾನಮಾಡಿ ಅಲ್ಲಿ ಬೆಳೆದಿದ್ದ ಸಹಸ್ರಕಮಲಗಳನ್ನು ಲೆಕ್ಕಮಾಡಿ ಕೊಯ್ದುಕೊಂಡು ವಿಶ್ವೇಶ್ವರನ ಸನ್ನಿಧಿಗೆ ಬಂದು ಬಹು ಭಕ್ತಿಯಿಂದ ವಿಧಿವತ್ತಾಗಿ ವಿಶ್ವೇಶ್ವರನನ್ನು ಪೂಜಿಸುತ್ತಿದ್ದನು. ಇವನ ಭಕ್ತಿಯನ್ನು ಪರೀಕ್ಷಿಸಬೇಕೆಂಬ ಪರಶಿವನು ತನ್ನ ಮಾಯೆಯಿಂದ ಹರಿಯು ತಂದಿದ್ದ ಸಹಸ್ರಕಮಲಗಳಲ್ಲಿ ಒಂದನ್ನು ಮಾಯವಮಾಡಿದನು. ಬಳಿಕ ನಾರಾಯಣನು ಸಹಸ್ರನಾಮಾರ್ಚನೆಗೆ ಕಮಲಗಳನ್ನು ಸಮರ್ಪಿಸುತ್ತ ಶಿವಪೂಜೆಮಾಡುತ್ತಿದ್ದಾಗ ಒಂದು ಕಮಲವು ಸಾಲದೆ ಬಂದದ್ದರಿಂದ ಚಿಂತಾಕ್ರಾಂತನಾಗಿ ಇದೇನು ನಾನು ಪೂಜೆಮಾಡುವಾಗ ನಾಮೋಚ್ಚಾರಣೆಯಲ್ಲಿ ಭ್ರಮೆಗೊಂಡು ಹೆಚ್ಚಾಗಿ ಹೇಳಿಬಿಟ್ಟೆನೋ, ಅಥವಾ ಕಮಲಪುಷ್ಪಾರ್ಚನೆಯಲ್ಲಿ ಭ್ರಮೆಯುಂಟಾಯಿತೋ ತಿಳಿಯದಲ್ಲ ; ಈಗ ಒಂದು ಕಮಲಪುಷ್ಪವು ಸಾಲದೆ ಬಂದ ಕಾರಣ ಹೊಸದಾಗಿ ಮತ್ತೊಂದನ್ನು ತಂದರೆ

ಆಸನಭಂಗವುಂಟಾಗುವುದು ಹಾಗೆ ಮಾಡದೆ ಇದ್ದರೆ ವ್ರತಭಂಗವಾಗುವುದು. ಈಗ ಏನು ಮಾಡಬೇಕು ನನ್ನನ್ನು ಹೇಗಾದರೂ ಕಮಲಾಕ್ಷನೆಂದು ಕರೆಯುತ್ತಾರೆ. ಆದಕಾರಣ ನನ್ನ ಕಣ್ಣನ್ನೇ ಕಿತ್ತು ಈಶ್ವರನಿಗೆ ಸಮರ್ಪಿಸುವೆನೆಂದು ತರ್ಜನೀ ಬೆರಳಿನಿಂದ ಕಣ್ಣನ್ನು ಕಿತ್ತು ಈಶ್ವರನಿಗೆ ಸಮರ್ಪಣೆಮಾಡಿದನು, ಕೂಡಲೇ ವಿಶ್ವೇಶ್ವರನು ಸಂತುಷ್ಟನಾಗಿ ಪ್ರತ್ಯಕ್ಷವಾಗಿ ಬಂದು ಎಲೈ ನಾರಾಯಣನೇ! ನಿನ್ನಂಥ ಭಕ್ತಿವಂತರನ್ನು ನಾನೆಲ್ಲಿಯೂ ಕಾಣಲಿಲ್ಲ ನಿನಗೆ ಬೇಕಾದ ವರವನ್ನು ಕೇಳು ಕೊಡುತ್ತೇನೆ ನಿನ್ನ ಭಕ್ತಿಗಾಗಿ ನಾನು ನಿನಗೆ ತ್ರಿಲೋಕಾಧಿಪತ್ಯವನ್ನು ವಹಿಸಿರುವೆನು. ಇಂದಿನಿಂದ ನೀನು ಲೋಕಪಾಲಕನಾಗು, ಯಾರು ನನ್ನ ಭಕ್ತರಾಗಿದ್ದುಕೊಂಡು ನಿನ್ನಲ್ಲಿ ದ್ವೇಷಮಾಡುವರೋ! ಅಂಥವರು ನರಕಯಾತನೆಯನ್ನು ಅನುಭವಿಸುವರು ಎಂದು ಹೇಳಲು ಮಹಾವಿಷ್ಣುವು ಎಲೈ ದೇವದೇವನೇ! ನಿನ್ನ ಆಜ್ಞೆಯನ್ನು ಶಿರಸಾ ವಹಿಸಿದ್ದೇನು, ಆದರೆ ಈಗ ನೀನು ನನಗೆ ದಯಪಾಲಿಸುವ ತ್ರಿಲೋಕಾಧಿಪತ್ಯವನ್ನು ನಡೆಯಿಸಬೇಕಾದರೆ ಲೋಕಕಂಟಕರಾದದೈತ್ಯರಿಂದ ತುಂಬ ತೊಂದರೆಯಾಗುತ್ತಿರುವ ಕಾರಣ ಅದಕ್ಕೆ ತಕ್ಕ ಪರಿಹಾರವೇನು? ಹೇಳಬೇಕೆಂದು ಬೇಡಿಕೊಂಡನು. ಕೂಡಲೇ ಪರಶಿವನು, ಎಲೈ ವಿಷ್ಣುವೇ ಕೇಳು ನಿನ್ನ ಶತ್ರುಗಳನ್ನು ಕ್ಷಣಮಾತ್ರದಲ್ಲಿ ಸಂಹರಿಸತಕ್ಕ ಈ ಚಕ್ರವನ್ನು ನಿನಗ ಕೊಟ್ಟಿದೇನೆ ಇದನ್ನು ತೆಗೆದುಕೊಂಡು ನಿನ್ನ ಕಾರ್ಯವನ್ನು ಮಾಡು ನಿನಗೆ ಮಂಗಳವಾಗಲಿ ಎಂದು ಹೇಳಿ ಚಕ್ರಾಯುಧವನ್ನು ಕೊಟ್ಟು ಕೇಳೈ ಮಧುಸೂದನನೇ! ಹೇವಿಳಂಬ ಸಂವತ್ಸರದ ಕಾರ್ತಿಕ ಶುದ್ಧ ಚತುರ್ದಶಿಯದಿನ ಮಣಿಕರ್ಣಿಕೆಯಲ್ಲಿ ಸ್ನಾನಮಾಡಿ ಬ್ರಾಹ್ಮೀ ಮುಹೂರ್ತದಲ್ಲಿ ನನ್ನ ಪೂಜೆಯನ್ನು ಮಾಡಿದವನು ನನಗೆ ಪ್ರೀತಿಪಾತ್ರನಾದ ಭಕ್ತನಾಗುವನು. ಆ ದಿನ ರಾತ್ರಿ ಸಕಲ ವರ್ಣದವರೂ ನಿನ್ನ ಪೂಜೆಯನ್ನು ಮಾಡಿ ಬಳಿಕ ನನ್ನನ್ನು ಪೂಜಿಸಬೇಕು. ವಿಷ್ಣುಪೂಜೆಗೆ ರಾತ್ರಿವ್ಯಾಪನೆಯುಳ್ಳ ಚತುರ್ದಶಿಯೇ ಶ್ರೇಷ್ಠ ಹಗಲು ಉಪವಾಸಮಾಡಿ ರಾತ್ರಿಯಲ್ಲಿ ಮೊದಲು ವಿಷ್ಣುಪೂಜೆಯನ್ನು ಬಳಿಕ ಶಿವಪೂಜೆಯನ್ನು ಮಾಡುತ್ತ ಸಹಸ್ರಕಮಲಗಳಿಂದ ಇಬ್ಬರನ್ನು ಅರ್ಚಿಸಿದವರು ಜೀವನ್ಮುಕ್ತರಾಗುವರು. ಪಂಚನದದಲ್ಲಿ ಸ್ನಾನಮಾಡಿ ಬಂದು ಬಿಂದುಮಾಧವ ಪೂಜೆಯನ್ನೂ, ಮಣಿಕರ್ಣಿಕೆಯಲ್ಲಿ ಸ್ನಾನಮಾಡಿ ಸಹಸ್ರಕಮಲಗಳಿಂದ ಶಿವಪೂಜೆಯನ್ನೂ ಮಾಡುವವರು ಜೀವನ್ಮುಕ್ತರಾಗುವರು ಅಲ್ಲದೆ ಕಾರ್ತಿಕ ಶುದ್ಧ ಚತುರ್ದಶಿಯದಿನ ವಿಷ್ಣುಕಂಚಿನಲ್ಲಿ ಸ್ನಾನಮಾಡಿ ವಿಷ್ಣುವನ್ನೂ ಶಿವಕಂಚಿಯಲ್ಲಿ ಮಿಂದು ಪರಶಿವನನ್ನೂ ಪೂಜಿಸುವವರು ಸಕಲಧರ್ಮಗಳನ್ನು ಹೊಂದಿ ಪರಮಪದವಿಯನ್ನು ಪಡೆಯುವರು. ಇದೂ ಅಲ್ಲದೆ ಮೊದಲು ವಹ್ನಿತೀರ್ಥದಲ್ಲಿ ಸ್ನಾನಮಾಡಿ ಶ್ರೀಹರಿಯನ್ನೂ, ಬಳಿಕ ಬಿಂದುತೀರ್ಥದಲ್ಲಿ ಮಿಂದು ಕೇದಾರೇಶ್ವರನನ್ನೂ ಪೂಜಿಸುವವರು ಇಹಲೋಕದ ಸಂಪತ್ತುಗಳಿಗೂ ಕಾರಣರಾಗುವರು. ಜಲಪದ್ಮಗಳು ಸಿಕ್ಕದಿದ್ದರೆ ಸ್ಥಳಪದ್ಮಗಳಿಂದಲೂ ಪೂಜಿಸಬಹುದು. ಯಾರು ಯಮುನೆಯಲ್ಲಿ ಮಿಂದು ವೇಣೀಮಾಧವನೆಂಬ ನಿನ್ನನ್ನು ರಕ್ತಪುಷ್ಪಗಳಿಂದಲೂ, ಗಂಗೆಯಲ್ಲಿ ಸ್ನಾನಮಾಡಿ ಸಂಗಮೇಶ್ವರನೆಂಬದಾಗಿ ಶ್ವೇತಪುಷ್ಪಗಳಿಂದ ನನ್ನನ್ನೂ ಅರ್ಚಿಸುವರೋ ಅವರು ಸಕಲೈಶ್ವರ್ಯ ಸಂತೋಷಗಳಿಗೆ ಭಾಗಿಗಳಾಗುವರು. ಮೃತ್ಯುಲೋಕಹಿತಾರ್ಥವಾಗಿ ಕಾಶಿಯಲ್ಲಿ ನೆಲೆಗೊಂಡಿರುವ ಬಿಂದುಮಾಧವ ವಿಶ್ವೇಶ್ವರರ ಪೂಜೆಯನ್ನು ಮಾಡಿದವರು ಸ್ಥಿರವಾದ ಮೋಕ್ಷವನ್ನು ಪಡೆಯುವರು. ಮೊದಲು ವಿಷ್ಣುವನ್ನು ಅರ್ಚಿಸದೆ ನನ್ನನ್ನು ಪೂಜಿಸಿದವರಿಗೆ ಮೋಕ್ಷವೆಂದಿಗೂ ದೊರೆಯಲಾರದು ಎಂದು ಹೇಳಿ ಪರಶಿವನು ಅಂತರ್ಧಾನನಾದನು.

ಆದಕಾರಣ ಮನುಷ್ಯನಾದವನು ಸರ್ವಪ್ರಯತ್ನದಿಂದಲೂ ಹರಿಹರರನ್ನು ಪೂಜಿಸ ಬೇಕು. ವಿಷ್ಣುಶಿವರಲ್ಲಿ ಭೇದವಾದವನ್ನೆಂದಿಗೂ ಮಾಡಬಾರದು. ಆಚಾರವರ್ಜಿತವಾದ ಕಲಿಯುಗದಲ್ಲಿ ಸಹಸ್ರವರ್ಷವಾದಮೇಲೆ ಮಹಾದೇವನು ಕಾಶಿಯನ್ನು ತ್ಯಜಿಸಿ ಕೈಲಾಸಕ್ಕೆ ಹೋಗುವನು. ಬಳಿಕ ಅಲ್ಲಿನ ಲಿಂಗಗಳೆಲ್ಲವೂ ಪಾತಾಳವನ್ನು ಸೇರುವುವು. ಇನ್ನೂರು ವರ್ಷದಮೇಲೆ ಗಂಗೆಯೂ ಕಾಣಿಸದೆ ಹೋಗುವುದು. ಆ ಬಳಿಕ ಲಿಂಗಗಳು ಸತ್ವಹೀನವಾಗಿ ನಾಶಹೊಂದುವುವು. ಜನರು ಕಾಂತಿಹೀನರಾಗಿ ಹದಿನಾಲ್ಕುವರ್ಷ ದುರ್ಭಿಕ್ಷಕ್ಕೆ ಸಿಕ್ಕಿ ಮಹಾಮಾರ್ಯಾದಿ ಉಪದ್ರವಗಳಿಂದ ಸವೆದುಹೋಗುವರು. ಭಾಗೀರಥಿಯು ಕ್ರಿಮಿಮಯ ವಾಗಿ ಕಪ್ಪಾಗುವುದು. ನಾಲ್ಕು ಸಹಸ್ರ ವರ್ಷದಮೇಲೆ ಶೈಲದೇವತೆಗಳು ಮಾನಸಸರೋ ವರವನ್ನು ಸೇರುವರು. ಆಗ ಶ್ರೌತಸ್ಮಾರ್ತಕರ್ಮಗಳಿಗೆ ಲೋಪವುಂಟಾಗಲು ಜನರು ಸತ್ವಹೀನರಾಗಿ ರೋಗಾದಿಗಳಿಂದ ನರಳಿ ದುರಾಚಾರಕ್ಕೆ ಸಿಕ್ಕಿಹೋಗಿ ಅಲ್ಪಾಯುಷ್ಯದಿಂದ ಸಾಯುತ್ತಿರುವರು. ದಕ್ಷಿಣದೇಶದಲ್ಲಿ ಶೂದ್ರಾದಿಗಳು ವೇದಜ್ಞರಾಗಿ ಮುಮುಕ್ಷುಗಳು ವೇದ ವನ್ನು ತ್ಯಜಿಸಿ ಸ್ವೇಚ್ಛೆಯಾಗಿ ಸಂಚರಿಸುತ್ತ ಕಾಮಕ್ರೋಧಾದಿಗಳಿಗೆ ವಶರಾಗಿ ಕೆಟ್ಟುಹೋಗಿ ವರು. ಇದೂ ಅಲ್ಲದೆ ಭಕ್ತಿಹೀನರಾಗಿ ಹರಿಹರರಲ್ಲಿ ಭೇದವನ್ನು ಕಲ್ಪಿಸಿ ಮತಚಿಹ್ನೆಗಳನ್ನು ತೊರೆದು ಅನ್ಯಚಿಹ್ನೆಗಳನ್ನು ಸ್ವೀಕರಿಸಿ ಒಬ್ಬರನ್ನೊಬ್ಬರು ದ್ವೇಷಿಸುತ್ತ ನಾಸ್ತಿಕವಾದಿಗಳಾದ ಹೂಣ ಮ್ಲೇಂಛಾದಿಗಳಲ್ಲಿ ಬೆರೆತು ಚಂಡಾಲರನ್ನು ಒಡಗೂಡಿ ವ್ರತಧರ್ಮಗಳನ್ನು ಅಲ್ಲ ಗಳೆದು ಸಿದ್ಧಾಂತವನ್ನು ದೂಷಿಸುತ್ತ ಸ್ವಜಾತೀಯವಾದ ಧರ್ಮವನ್ನು ಬಿಟ್ಟು ಅಜಾತೀಯ ರಲ್ಲಿ ಸೇರಿಹೋಗಿ ಸಮುದ್ರಯಾನ ಸುರಾಪಾನ ದುರಾಚಾರಗಳಲ್ಲಿ ಆಸಕ್ತರಾಗಿ ದೇವಭಾಷೆ ಯನ್ನು ಬಿಟ್ಟು ಅನ್ಯಭಾಷೆಯಲ್ಲಿ ನಿಪುಣರಾಗಿ ಪ್ರಪಂಚವನ್ನು ವಂಚಿಸುತ್ತಿರುವರು, ಆ ಕಾಲ ದಲ್ಲಿ ಬ್ರಾಹ್ಮಣ್ಯಕ್ಕೆ ಬಹು ಕಷ್ಟವುಂಟಾಗುವುದು. ವೈದಿಕರು ಚಂಡಾಲಸೇವಕರಾಗುವರು. ಧರ್ಮಗಳು ಮಾಯವಾಗುವುವು. ಅಧರ್ಮವೇ ಹೆಚ್ಚುವುದು. ಅಲ್ಲಸಲ್ಲದ ಶಾಸ್ತ್ರಗಳು ಅನೇಕವಾಗಿ ಹರಡಿಕೊಳ್ಳುವುವು. ಆದಕಾರಣ ಈಗಲೇ ಧರ್ಮಸಂಗ್ರಹ ಮಾಡಬೇಕೆಂದು ಯೋಚಿಸಿ ಉತ್ತಮರು ಪುಣ್ಯಕರವಾದ ಈ ವೈಕುಂಠಚತುರ್ದಶೀ ವ್ರತಗಳನ್ನು ಮಾಡುವ ನೆವದಿಂದ ಶಿವಕೇಶವ ಪೂಜೆಯನ್ನು ಮಾಡತಕ್ಕವರು ಉತ್ತಮವಾದ ಸದ್ಗತಿಯನ್ನು ಶಾಶ್ವತ ಸುಖವನ್ನು ಪಡೆಯುವುದರಲ್ಲಿ ಸಂಶಯವಿಲ್ಲವೆಂದು ವಾಲಖಿಲ್ಯರು ಋಷಿಗಳಿಗೆ ನಿರೂಪಿಸಿದ ಸನತ್ಕುಮಾರ ಸಂಹಿತಾಂತರ್ಗತ ವೈಕುಂಠಚತುರ್ದಶೀ ವ್ರತಕಥಾಸಂಗ್ರಹವು ಮುಗಿದುದು.

ಶ್ರೀಃ ಶ್ರೀಃ ಶ್ರೀಃ

ಶ್ರೀಃ

ಓಂ ಶ್ರೀಮಹಾದೇವಾಯ ನಮಃ

೩೦. ವೈಕುಂಠಚತುರ್ದಶೀ ಶಿವಪೂಜಾ ವ್ರತಕಲ್ಪಃ

ಅಥ ಆದೌ ಸಂಕಲ್ಪಂ ಕುರ್ಯಾತ್ ತತ್ತು ಪೂರ್ವೋಕ್ತ ವಿಷ್ಣುಪೂಜಾ ಸಂಕಲ್ಪವತ್ । ಏವಂ ಗುಣ ವಿಶೇಷಣ ವಿಶಿಷ್ಟಾಯಾಂ ಶುಭತಿಥೌ ಮಮ ಸಮಸ್ತ

ದುರಿತಕ್ಷಯದ್ವಾರಾ ಶ್ರೀಪರಮೇಶ್ವರ ಪ್ರೀತ್ಯರ್ಥಂ ವೈಕುಂಠಚತುರ್ದಶೀವ್ರತಾಂಗ ದ್ವಿತೀಯಾದಿ ಯಾಮಾದಿಷು ಕರ್ತವ್ಯ ಉಮಾಮಹೇಶ್ವರ ಪೂಜಾಂ ಕರಿಷ್ಯೇ ! ಇತಿ ಸಂಕಲ್ಪ್ಯ ಗೋಮಯೇನೋಪಲಿಪ್ತ ಶುದ್ಧಪ್ರದೇಶೇ ರಂಗವಲ್ಲ್ಯಾದ್ಯಲಂಕೃತ ಮಂಟಪೇ ದೇವಾಗಾರೇ ಗೋಷ್ಠೇ ವಾ ರಂಗವಲ್ಲ್ಯಾದಿ ಧಾತುಭಿಃ ಷಷ್ಠ್ಯುತ್ತರ ಶತತ್ರಯ ಸಂಖ್ಯಾಕ ಸ್ವಸ್ತಿಕ ಶಂಖಪದ್ಮಾದೀನಿ ಕಲ್ಪಯಿತ್ವಾ ತೇಷು ದ್ರೋಣಪರಿಮಿತಂ ವಾ ಪ್ರಸ್ಥಪರಿಮಿತಂ ವಾ ಯಥಾಶಕ್ತಿ ಶಾಲಿತಂಡುಲರಾಶಿಂ ಕೃತ್ವಾ ತಸ್ಯೋಪರಿ ನೂತನವಸ್ತ್ರಂ ಪ್ರಸಾರ್ಯ ತದುಪರಿ ಉಮಾಶಂಕರವಿಗ್ರಹಂ ಸಂಸ್ಥಾಪ್ಯ ಸಮ್ಯಗಾವಾಹ್ಯ ಪ್ರಾಣಪ್ರತಿಷ್ಠಾಪನಪೂರ್ವಕಂ ಮಹೇಶ್ವರಂ ಪೂಜಯೇತ್ ॥

ಅಥ ಪೂಜಾವಿಧಾನಂ

ತಸ್ಮಿನ್ ತಂಡುಲಕೈಲಾಸೇ ಸಂಸ್ಥಾಪ್ಯ ಶಿವಮವ್ಯಯಂ। ಧ್ಯಾತ್ವಾ ವಿಶ್ವೇಶ್ವರಂ ತತ್ರ ಅವ್ಯಯಂ ಶಂಕರಂ ಹರಂ॥ ಪೂಜಯೇತ್ತತ್ರ ಗೌರೀಶಂ ನಿರ್ಮಲಂ ಸ್ಫಟಿಕೋಪಮಂ ॥ ಅಥ ಧ್ಯಾನಂ ॥ ಸರ್ವಸ್ಯಾಖಿಲಮಾದಿಭೂತಮನಿಶಂ ಮಂದಾರಮಾಲಾರ್ಚಿತಂ । ಕುಂದೇಂದುದ್ಯುತಿಮಾತ್ಮದೇಹವಿಲಸನ್ನೇತ್ರತ್ರಯೈಶ್ಶೋಭಿತಂ । ಶೂಲಾದ್ಯಾಯುಧಮುಖ್ಯಹಸ್ತನಿಚಯೈರ್ಧ್ಯಾತ್ವಾಸ್ಮಿತಾಸ್ಯಂ ಹರಂ ॥ ಗೌರೀಶಂ ಗಣನಾಥ ಷಣ್ಮುಖಯುತಂ ಧ್ಯಾಯಾಮ್ಯಭೀಷ್ಟಾಪ್ತಯೇ ॥ ಇತಿ ಧ್ಯಾನಂ ಸಮರ್ಪಯಾಮಿ ॥ ಅಥ ಕಲಶಪೂಜಾ (೮ನೇ ಪುಟ ನೋಡಿರಿ) ಕಲಶಸ್ಯ ಮುಖೇ ವಿಷ್ಣು........ಸನ್ನಿಧಿಂ ಕುರು ॥ ಏವಂ ಕಲಶಪೂಜಾನಂತರಂ ಪ್ರಾಣಪ್ರತಿಷ್ಠಾಪನಂ ಕುರ್ಯಾತ್॥ (೧೦ನೇ ಪುಟ ನೋಡಿರಿ) ಶ್ರೀ ಗೌರೀಶಂಕರ ಪ್ರಾಣಪ್ರತಿಷ್ಠಾಪನ ಮುಹೂರ್ತಮಸ್ತು ಸುಪ್ರತಿಷ್ಠಿತಮಸ್ತು । ಸಮಸ್ತಸನ್ಮಂಗಳಾನಿ ಭವಂತು ಇತಿ ಧ್ಯಾತ್ವಾ ತದುಪರಿ ಅವರಣ ಪೂಜಾಂ ಕುರ್ಯಾತ್ ॥

ಅಥ ಆವರಣ ಪೂಜಾ

ಪೂರ್ವದಿಗ್ಭಾಗೇ ಮಾಧವಾಯ ನಮಃ। ದಕ್ಷಿಣದಿಶಿ ರುದ್ರಾಯ ನಮಃ। ಪಶ್ಚಿಮದಿಗ್ಭಾಗೇ ಪರಮಾತ್ಮನೇ ನಮಃ। ಉದೀಚ್ಯಾಂ ಭಾಸ್ಕರಾಯ ನಮಃ। ಇತಿ ಪ್ರಥಮಾವರಣಪೂಜಾಂ ಸಮರ್ಪಯಾಮಿ॥ ಓಂ ಗಣನಾಥಾಯ ನಮಃ । ಓಂ ಮಧುಸೂದನಾಯ ನಮಃ। ಓಂ ಆನಂದಾಯ ನಮಃ। ಓಂ ಜ್ಯೋತ್ಸ್ನಾಯ ನಮಃ। ಓಂ ಚಂಡಾಯ ನಮಃ। ಓಂ ಪ್ರಚಂಡಾಯ ನಮಃ। ಓಂ ದುರ್ಗಾಯೈ ನಮಃ। ಓಂ ಶ್ರಿಯೈ ನಮಃ । ಮೋಹಿನ್ಯೈ ನಮಃ । ಓಂ ಮಾಯಾಯೈ ನಮಃ । ಓಂ ಧರಾಯೈ ನಮಃ । ಇತಿ ದ್ವಿತೀಯಾವರಣಪೂಜಾಂ ಸಮರ್ಪಯಾಮಿ ॥ ಓಂ ಭೈರವಾಯ ನಮಃ । ಓಂ ಭೀಮಾಯ ನಮಃ। ಓಂ ಸುಧೀರಾಯ ನಮಃ । ಓಂ ಬಿಂದುಮಾಧವಾಯ ನಮಃ । ಓಂ ಶೂಲಿನೇ ನಮಃ। ಓಂ ದಿಗಂಬರಾಯ ನಮಃ। ಓಂ ಸಿದ್ಧಾಯ ನಮಃ । ಓಂ

ವಿಶ್ವಪಾಲಾಯ ನಮಃ। ಓಂ ವೇಧಸೇ ನಮಃ । ಓಂ ಕ್ಷೇತ್ರಜ್ಞಾಯ ನಮಃ । ಓಂ ಕಾಮಿತಾರ್ಥಪ್ರದಾಯ ನಮಃ । ಇತಿ ತೃತೀಯಾವರಣಪೂಜಾಂ ಸಮರ್ಪಯಾಮಿ ॥

ಅಥ ಧ್ಯಾನಂ॥ ಅರ್ಧನಾರೀಶ್ವರಂ ದೇವಂ ಗಣೇಶಸ್ಕಂಧಸೇವಿತಂ । ಸುಸ್ಮಿತಂ ಶೂಲಹಸ್ತಂ ಚ ಧ್ಯಾಯೇದಿಷ್ಟಾರ್ಥಸಿದ್ಧಯೇ ॥ ಓಂ ಶ್ರೀಗೌರೀಶಂಕರಾಯ ನಮಃ। ಧ್ಯಾನಂ ಸಮರ್ಪಯಾಮಿ ॥ ನಮಸ್ತೇ ಸರ್ವಲೋಕೇಶ ನಮಸ್ತೇ ಕರುಣಾನಿಧೇ ॥ ನಮಸ್ತೇ ಪಾರ್ವತೀಕಾಂತ ಆಗಚ್ಛಾರ್ಚಾಂ ಗೃಹೀಷ್ವ ಮೇ ॥ ಓಂ ಶ್ರೀ ಗೌರೀ ಶಂಕರಾಯ ನಮಃ । ಆವಾಹನಂ ಸಮರ್ಪಯಾಮಿ ॥ ಅನೇಕರತ್ನ ಸಂಯುಕ್ತಂ ಸೌವರ್ಣಂ ಸುಮನೋಹರಂ । ಸಿಂಹಾಸನಂ ಪ್ರದಾಸ್ಯಾಮಿ ಗೃಹೀಷ್ವ ಪರಮೇಶ್ವರ॥ ಓಂ ಶ್ರೀ ಗೌರೀಶಂಕರಾಯ ನಮಃ । ಸಿಂಹಾಸನಂ ಸಮರ್ಪಯಾಮಿ॥ ಸರ್ವಾಧಾರ ಜಗದ್ವಂದ್ಯ ಸರ್ವವಿಶ್ವಾಮರೇಶ್ವರ ॥ ಪಾದ್ಯಂ ಗೃಹಾಣ ವಿಶ್ವಾತ್ಮನ್ ಭಕ್ತ್ಯಾ ದತ್ತಂ ಮಯಾ ಪ್ರಭೋ॥ ಪಾದ್ಯಂ ಸಮರ್ಪಯಾಮಿ ॥ ನಮಸ್ತೇ ಜಗದಾಧಾರ ಶರಣಾಗತ ವತ್ಸಲ॥ ಅರ್ಘ್ಯಂ ಚಾನರ್ಘವರದ ದಾಸ್ಯಾಮಿ ಪ್ರತಿಗೃಹ್ಯತಾಂ॥ ಅರ್ಘ್ಯಂ ಸಮರ್ಪಯಾಮಿ॥ತ್ರಿಯಂಬಕ ನಮಸ್ತೇಽಸ್ತು ನಮಸ್ತ್ರೈಲೋಕ್ಯನಾಯಕ। ಗೃಹಾಣಾಚಮನಂ ದೇವ ಸ್ತ್ರೀಕುರುಷ್ವ ದಯಾನಿಧೇ॥ ಆಚಮನಂ ಸಮರ್ಪಯಾಮಿ॥ ನಿರ್ಮಲಂ ಶೀತಳಂ ತೋಯಮತಿಶುಭ್ರಮನೋಹರಂ । ಸ್ನಾನಾರ್ಥಂ ತೇ ಪ್ರಯಚ್ಛಾಮಿ ಸ್ವೀಕುರುಷ್ವ ಸದಾಶಿವಾ ॥ ಸ್ನಾನಂ ಸಮರ್ಪಯಾಮಿ॥ ಪಂಚಾಮೃತಂ ಗೃಹಾಣೇದಂ ಪಯೋ ದಧಿ ಘೃತಂ ಮಧು। ಶರ್ಕರಾಫಲಸಂಯುಕ್ತಂ ಗೃಹಾಣ ಪರಮೇಶ್ವರ । ಪಂಚಾಮೃತ ಸ್ನಾನಂ ಸಮರ್ಪಯಾಮಿ॥ (೧೯ನೇ ಪುಟ ನೋಡಿರಿ) ಆಪೋಹಿಷ್ಠೇತಿ ಶುದ್ಧೋದಕ ಸ್ನಾನಂ ಸಮರ್ಪಯಾಮಿ ॥ ವ್ಯಾಘ್ರಚರ್ಮಧರಂ ದೇವಂ ನೀಲಕಂಠಂ ನಿರಂಜನಂ ॥ ನತ್ವಾ ದಾಸ್ಯಾಮ್ಯಹಂ ವಸ್ತ್ರಂ ಶುಭ್ರಂ ಸೂಕ್ಷ್ಮತರಂ ನವಂ ॥ ವಸ್ತ್ರಯುಗ್ಮಂ ಸಮರ್ಪಯಾಮಿ ॥ ನಾಗಯಜ್ಞೋಪವಿತಾಯ ನಾಗೇಶಾದ್ಯೈಃ ಪುರಸ್ಕೃತ ॥ ಉಪವೀತಮಿದಂ ದಿವ್ಯಂ ಧಾರಯ ತ್ವಂ ಮಹಾಪ್ರಭೋ॥ ಉಪವೀತಂ ಸಮರ್ಪಯಾಮಿ॥ ಸುಗಂಧಂಚ ಸುಸೌರಭ್ಯಂ ಕಸ್ತೂರೀಕುಂಕುಮಾನ್ವಿತಂ। ಗಂಧಂ ದಾಸ್ಯಾಮಿ ದೇವೇಶ ಗೃಹಾಣಾಮರವಲ್ಲಭ ॥ ಗಂಧದ್ವಾರೇತಿ ದಿವ್ಯಪರಿಮಳಗಂಧಂ ಸಮರ್ಪಯಾಮಿ ॥ ಅಕ್ಷತಾನತಿರಮ್ಯಾಂಶ್ಚ ಶಾಲೀಯಾಂಶ್ಚ ತಿಲಾನ್ವಿತಾನ್॥ ದಾಸ್ಯಾಮಿ ಕರುಣಾಮೂರ್ತೇ ಸಂಗೃಹಾಣ ಸದಾಶಿವ॥ ಆಯನೇ ತೇ ಪರಾಯಣೇತಿ ಅಕ್ಷತಾನ್ ಸಮರ್ಪಯಾಮಿ ॥ ಬಿಲ್ವಾರ್ಕದ್ರೋಣದತ್ತೂರೈಃ ಕರವೀರೈಸ್ಸಿತಾಸಿತೈಃ ॥ ಅರ್ಪಯಾಮಿ ಜಗದ್ವಂದ್ಯ ಪುರಾಣಪುರುಷೋತ್ತಮ॥ ಪುಷ್ಪಾಣಿ ಸಮರ್ಪಯಾಮಿ ॥

ಅಥಾಂಗಪೂಜಾ

ಓಂ ಹರಾಯ ನಮಃ। ಪಾದೌ ಪೂಜಯಾಮಿ॥ ಓಂ ಶಂಭವೇ ನಮಃ। ಗುಲ್ಫೌ ಪೂಜಯಾಮಿ ॥ ಓಂ ಕಪರ್ದಿನೇ ನಮಃ । ಜಾನುನೀಂ ಪೂಜಯಾಮಿ ॥ ಓಂ ಶಂಕ

ರ್ಘಾಯ ನಮಃ ಜಂಘೇ ಪೂಜಯಾಮಿ|| ಓಂ ವಾಮದೇವಾಯ ನಮಃ ನಾಭಿಂ ಪೂಜಯಾಮಿ || ಓಂ ವಿಶ್ವೇಶ್ವರಾಯ ನಮಃ ಉದರಂ ಪೂಜಯಾಮಿ || ಓಂ ಸರ್ವಾಸ್ತ್ರ ಧಾರಿಣೇ ನಮಃ ಬಾಹೂ ಪೂಜಯಾಮಿ || ಓಂ ಸುಖದಾಯ ನಮಃ ಮುಖಂ ಪೂಜಯಾಮಿ || ಓಂ ಈಶ್ವರಾಯ ನಮಃ ನಾಸಿಕಾಂ ಪೂಜಯಾಮಿ || ಓಂ ಸೋಮ ಸೂರ್ಯಾಗ್ನಿಲೋಚನಾಯ ನಮಃ ನೇತ್ರೇ ಪೂಜಯಾಮಿ || ಓಂ ಕಪಾಲಿನೇ ನಮಃ ಲಲಾಟಂ ಪೂಜಯಾಮಿ || ಓಂ ಚಂದ್ರಶೇಖರಾಯ ನಮಃ ಶಿರಃ ಪೂಜಯಾಮಿ || ಓಂ ಶಾಶ್ವತಾಯ ನಮಃ ಸರ್ವಾಂಗಾನಿ ಪೂಜಯಾಮಿ ||

ಅಥ ಪುಷ್ಪ ಪೂಜಾ.

ಓಂ ಚಂದ್ರಶೇಖರಾಯ ನಮಃ ಜಾಜೀಪುಷ್ಪಂ ಸಮರ್ಪಯಾಮಿ || ಓಂ ಪಶುಪತಯೇ ನಮಃ ಚಂಪಕಪುಷ್ಪಂ ಸಮರ್ಪಯಾಮಿ || ಓಂ ರುದ್ರಾಯ ನಮಃ ಕಮಲಪುಷ್ಪಂ ಸಮರ್ಪಯಾಮಿ || ಓಂ ಅಜಾಯ ನಮಃ ವಕುಳಪುಷ್ಪಂ ಸಮರ್ಪಯಾಮಿ || ಓಂ ನೀಲಕಂಠಾಯ ನಮಃ ತಿಲಕಪುಷ್ಪಂ ಸಮರ್ಪಯಾಮಿ || ಓಂ ಕಪಾಲಿನೇ ನಮಃ ಪುನ್ನಾಗ ಪುಷ್ಪಂ ಸಮರ್ಪಯಾಮಿ || ಓಂ ಭೂತಿಭೂಷಣಾಯ ನಮಃ ನಾಗಚಂಪಕಪುಷ್ಪಂ ಸಮರ್ಪಯಾಮಿ || ಓಂ ಕಾಲಕಾಲಾಯ ನಮಃ ದ್ರೋಣ ಪುಷ್ಪಂ ಸಮರ್ಪಯಾಮಿ || ಓಂ ತಿಗ್ಮಾಂಶವೇ ನಮಃ ದತ್ತೂರಪುಷ್ಪಂ ಸಮರ್ಪಯಾಮಿ || ಓಂ ಶಿವಾಯ ನಮಃ ಅರ್ಕಪುಷ್ಪಂ ಸಮರ್ಪಯಾಮಿ || ಓಂ ರುದ್ರಾಯ ನಮಃ ಉತ್ಪಲಪುಷ್ಪಂ ಸಮರ್ಪಯಾಮಿ|| ಓಂ ಭವಾಯ ನಮಃ ಕೋವಿದಾರಪುಷ್ಪಂ ಸಮರ್ಪಯಾಮಿ || ಓಂ ನೀಲಗ್ರೀವಾಯ ನಮಃ ಕರವೀರಪುಷ್ಪಂ ಸಮರ್ಪಯಾಮಿ|| ಓಂ ಶಂಕರಾಯ ನಮಃ ಗಿರಿಕರ್ಣಿಕಾಪುಷ್ಪಂ ಸಮರ್ಪಯಾಮಿ || ಓಂ ಸರ್ವೇಶ್ವರಾಯ ನಮಃ ಮಲ್ಲಿಕಾಪುಷ್ಪಂ ಸಮರ್ಪಯಾಮಿ || ಓಂ ಮಹಾದೇವಾಯ ನಮಃ ನಾನಾವಿಧ ಪರಿಮಳ ಪತ್ರಪುಷ್ಪಾಣಿ ಸಮರ್ಪಯಾಮಿ ||

ಅಥ ಅಷ್ಟೋತ್ತರ ಶತನಾಮಪೂಜಾ || ಮಹಾಶಿವರಾತ್ರ ವ್ರತದಲ್ಲಿ ಹೇಳಿರುವ ಅಷ್ಟೋತ್ತರ ಪೂಜೆಯನ್ನೂ, ಬೇಕಾದವರು ಶಿವಸಹಸ್ರನಾಮ ಪೂಜೆಯನ್ನೂ ಮಾಡಬಹುದು. (ಗ್ರಂಥವಿಸ್ತಾರ ಭಯದಿಂದ ಇಲ್ಲಿ ಪುನಃ ಅಷ್ಟೋತ್ತರವನ್ನು ಹಾಕಲಿಲ್ಲ.)

ಮಲಯಾಚಲಸಂಭೂತಂ ಗುಗ್ಗುಳಂ ಪಾವಕಾನ್ವಿತಂ | ಗೃಹಾಣ ಧೂಪಂ ದೇವೇಶ ನಮಸ್ತೇ ಭಕ್ತವತ್ಸಲ || ಧೂಪಂ ಸಮರ್ಪಯಾಮಿ || ಸಾಜ್ಯಂ ತ್ರಿವರ್ತಿ ಸಂಯುಕ್ತಂ ವಹ್ನಿನಾ ಯೋಜಿತಂ ಮಯಾ || ಗೃಹಾಣ ದೀಪಂ ಸರ್ವೇಶ ಪೂರ್ಣೇಂದ್ವಗ್ನಿಸ್ವರೂಪಿಣೇ || ದೀಪಂ ಸಮರ್ಪಯಾಮಿ || ನಾನಾಭಕ್ಷ್ಯೈ ಸಮಾಯುಕ್ತಂ ಶಾಲ್ಯನ್ನಂ ಚ ಘೃತಾನ್ವಿತಂ || ಸಫಲಂ ತವ ದಾಸ್ಯಾಮಿ ಸ್ವೀಕುರುಷ್ವ

ಜಗತ್ಪತೇ ॥ ನಾನಾವಿಧನ್ನೈವೇದ್ಯಂ ಸಮರ್ಪಯಾಮಿ । ಕರ್ಪೂರಾಗರು ಸುಯುಕ್ತಂ ನಾಗವಲ್ಲಿದಳೈರ್ಯುತಂ। ತಾಂಬೂಲಂತವ ದಾಸ್ಯಾಮಿ ಗೃಹಾಣ ತ್ವಂ ಉಮಾಪತೇ ॥ತಾಂಬೂಲಂ ಸಮರ್ಪಯಾಮಿ ॥ ಭಕ್ತಪ್ರಿಯಾಯ ಭಗರ್ವ ನಮಸ್ತೇ ವೃಷವಾಹನ ॥ ನೀರಾಜನಂ ಪ್ರದಾಸ್ಯಾಮಿ ಗೃಹಾಣ ಪರಮೇಶ್ವರ ॥ ಉತ್ತನೀರಾಜನಂ ಸಮರ್ಪಯಾಮಿ ॥ ಮಲ್ಲಿಕಾಮಾಲತೀಜಾಜೀ ಸೇವಂತಿಕರವೀರಕೈಃ ॥ ಶತಪತ್ರೈಶ್ಚ ಕಲ್ಹಾರೈಃ ಗೃಹೀಷ್ವ ಕುಸುಮಾಂಜಲಿಂ॥ ಮಂತ್ರಪುಷ್ಪಂ ಸಮರ್ಪಯಾಮಿ ॥ ಪ್ರದಕ್ಷಿಣಂ ಕರೋಮಿ ತ್ವಾಂ ಸರ್ವಪಾಪೌಘನಾಶನ॥ ತ್ರಾಹಿ ಮಾಂ ಪಾರ್ವತೀಕಾಂತ ಸಂಸಾರಾರ್ಣವತಾರಕ ॥ ಪ್ರದಕ್ಷಿಣಂ ಸಮರ್ಪಯಾಮಿ ॥ ನಮಸ್ತೇ ಜಗದಾಧಾರ ನಮಸ್ತೇ ಕರುಣಾಕರ । ನಮಸ್ತೇ ಪಾರ್ವತೀಕಾಂತ ವಿಶ್ವೇಶ್ವರ ನಮೋಸ್ತು ತೇ ॥ ನಮಸ್ಕಾರಾರ್ ಸಮರ್ಪಯಾಮಿ ॥ ಅಥ ಪ್ರಸನ್ನಾರ್ಘ್ಯಪ್ರದಾನಂ ॥ ನಮಸ್ತೇ ವಿಶ್ವಭವನ ನಮಸ್ತೇ ವಿಶ್ವಮೂರ್ತಯೇ। ಇದಮರ್ಘ್ಯಂ ಪ್ರದಾಸ್ಯಾಮಿ ವಿಶ್ವನಾಥ ನಮೋಸ್ತು ತೇ ॥ ಇದಮರ್ಘ್ಯಂ ಸಮರ್ಪಯಾಮಿ ॥ ಕಾರ್ತಿಕ್ಯಾಂ ಶುಕ್ಲಪಕ್ಷೇ ತು ಚತುರ್ದಶ್ಯಾಂ ಸದಾಶಿವ । ಇದಮರ್ಘ್ಯಂ ಗೃಹಾಣೇಶ ಉಮಯಾ ಸಹ ಶಂಕರ ॥ ಇದಮರ್ಘ್ಯಂ ಸಮರ್ಪಯಾಮಿ ॥ ವರ್ಷೇ ವೈ ಹೇಮಲಂಬ್ಯೇ ಮಾಸಿ ಶ್ರೀಮತಿ ಕಾರ್ತಿಕೇ ॥ ಶುಕ್ಲಪಕ್ಷೇ ನಿಶಾಯಾಂ ತು ಗೃಹಾಣಾರ್ಘ್ಯಂ ನಮೋಸ್ತುತೇ ॥ ಇದಮರ್ಘ್ಯಂ ಸಮರ್ಪಯಾಮಿ ॥ ದಂಡಪಾಣೇ ನಮಸ್ತೇಽಸ್ತು ಮುಹೂರ್ತೇ ಮಣಿಕರ್ಣಿಕೇ ॥ ಉಪೋಷ್ಯ ವಿಧಿವತ್ ಪ್ರಾತಃ ಪಾರಣಂ ಚ ಕರೋಮ್ಯಹಂ ॥ ಇತಿ ಉಪವಾಸಂ ಸಮರ್ಪಣಂ ॥ ಯನ್ಮಯಾಚರಿತಂ ದೇವ ವ್ರತಂ ನ್ಯೂನಾಧಿಕಂ ತ್ವಿದಂ ॥ ಜ್ಞಾನತೋಽಜ್ಞಾನತೋವಾಪಿ ತತ್ಸರ್ವಂ ಸಫಲಂಕುರು॥ ಇತಿಪ್ರಾರ್ಥನಾಂ ಸಮರ್ಪಯಾಮಿ ॥ ಕಾರ್ತಿಕ್ಯಾಂ ಮಾಸಿ ಯಾ ನಾರೀ ಕರೋತಿ ಶಿವಪೂಜನಂ । ಚತುರ್ದಶ್ಯಾಂ ನಿಶಾಯಾಂ ತು ಸಾ ನಾರೀ ಸುಖಮಾಪ್ನುಯಾತ್॥ ಇತಿ ಪೂಜಾವಿಧಾನಂ ಸಂಪೂರ್ಣಂ॥

ಅಥ ಕಥಾಪ್ರಾರಂಭಃ (ಶಿವಪರಂ.)

ಸೂತೋವಾಚ॥ ಶೃಣ್ವತಾಂ ಸರ್ವಪಾಪಘ್ನಂ ಭವಪಾಪವಿಮೋಚನಂ। ಭೂಯೋಪಿ ಶಿವಮಾಹಾತ್ಮ್ಯಂ ವಕ್ಷ್ಯಾಮಿ ಪರಮಾದ್ಭುತಂ ॥ ಉತ್ಪನ್ನದುರಿತಾಂಭೋಧೌ ಮಹತಾಂ ವಿಷಯಾತ್ಮನಾಂ । ಶಿವಪೂಜಾಂ ವಿನಾ ಕಶ್ಚಿದತೋನಾಸ್ತ್ಯತ್ರ ಸಂಶಯಃ ॥ ಶಿವಪೂಜಾಂ ಸದಾ ಕುರ್ಯಾತ್ ಬುದ್ಧಿಮಾಹ ಮಾನವಃ । ಅಶಕ್ತಶ್ಚೇತ್ ಕೃತಾಂ ಪೂಜಾಂ ವೀಕ್ಷಯೇದ್ಭಕ್ತಿನಮ್ರಧೀಃ ॥ ಆಸೀತ್ಕಿರಾತದೇಶೇಷು ನಾಮ್ನಾ ರಾಜಾ ಸುದುರ್ಜನಃ । ಶೂರಃ ಪರಮದುರ್ಧರ್ಷೋ ಜಿತಶತ್ರುಃ ಪ್ರತಾಪವಾನ್ ॥ ಸರ್ವದಾ ಮೃಗಯಾಸಕ್ತಃ ಪಾಪಲೋಕನಿರ್ಘೃಣೋ ಬಲೀ। ಸಂತಿಮಾಂಮಾಂಸನಃ ಕ್ರೂರಃ ಸತ್ವವರ್ಣಾಂ[illegible]ರತಃ॥ ತಥಾಪಿ ಕುರುತೇ ಶಂಭೋಃ ಪೂಜಾಂ ನಿತ್ಯಮತಂದ್ರಿತಃ । ಚತುರ್ದಶ್ಯಾಂ ವಿಶೇಷೇಣ ಕಾರ್ತಿಕೇ ಶುಕ್ಲಪಕ್ಷಕೇ ॥

ಮಹಾವಿಭವಸಂಪನ್ನಾ ಪೂಜಯಿತ್ವಾ ಸ ಮೋದತೇ। ಹರ್ಷೇಣ ಮಹತಾ ಯುಕ್ತೋ ನೃತ್ಯತಿ ಸ್ತೌತಿ ಗಾಯತಿ॥ ತಸ್ಯೈವಂ ವರ್ತಮಾನಸ್ಯ ನೃಪತೇಸ್ಸರ್ವಭಕ್ಷಿಣಃ। ದುರಾಚಾರಸ್ಯ ನೃಪತೇಸ್ಸರ್ವಭಕ್ಷಿಣಃ। ದುರಾಚಾರಸ್ಯ ಮಹೀಪತೇಃ ಚಿತ್ತೇನಾನ್ವತಪ್ಯತ॥ ಸಾ ವೈ ಕುಮುದ್ವತೀ ನಾಮ ರಾಜಶೀಲಗುಣಾನ್ವಿತಾ। ಏಕದಾ ಪತಿಮಾಸಾದ್ಯ ರಹಸ್ಯೇದಮಪೃಚ್ಛತ॥ ಯೇತತ್ತೇ ಚರಿತಂ ರಾಜನ್ ಮಹದಾಶ್ಚರ್ಯಕಾರಣಂ ಕೃತೋ ಮಹಾನ್ ದುರಾಚಾರಃ ಕ್ವ ಭಕ್ತಿಃ ಪರಮೇಶ್ವರೇ॥ ಇತಿ ಪೃಷ್ಟಸ್ಸಭೂಪಾಲೋ ವಿಮೃಶ್ಯ ಸುಚಿರಂ ತತಃ। ಕೃತ್ವಾ ಪೂಜಾಂ ಪ್ರಹಸ್ಯೇನಾಂ ಪ್ರೋವಾಚ ಸಕುತೂಹಲಃ॥ಅಹಂ ಪುರಾ ಭವಂ ಕಶ್ಚಿತ್ ಸಾರಮೇಯೋ ವರಾನನೇ। ಪಕ್ವಾನ್ನಂ ಗೃಹಮಾಶ್ರಿತ್ಯ ಪರ್ಯಟಾಮಿ ಸಮಂತತಃ॥ ಯೇವಂ ಕಾಲೇಷು ಗಚ್ಛತ್ಸು ತತ್ರೈವ ನಗರೋತ್ತಮೇ। ಕದಾಚಿದಾಗತಃ ಸೋಽಹಂ ಮನೋಜ್ಞಂ ಶಿವಮಂದಿರಂ॥ ಪೂಜಾಯಾಂ ವರ್ತಮಾನಾಯಾಂ ಚತುರ್ದಶ್ಯಾಂ ಮಹಾತಿಥೌ। ಅಪಶ್ಯಮುತ್ಸವಂ ದೂರಾತ್ ಬಹಿರ್ದ್ವಾರಂ ಸಮಾಶ್ರಿತಃ॥ ಅಥಾಹಂ ಪರಮಕ್ರುದ್ಧೈಃ ದಂಡಹಸ್ತೈಃ ಪ್ರಧಾವಿತಃ। ತಸ್ಮಾದ್ದೇಶಾದಪಾಕ್ರಾಂತಃ ಪ್ರಾಣರಕ್ಷಾಪರಾಯಣಃ॥ ತತಃ ಪ್ರದಕ್ಷಿಣೀಕೃತ್ಯ ಉತ್ತಮಂ ಶಿವಮಂದಿರಂ। ದ್ವಾರದೇಶಂ ಪುನಃ ಪ್ರಾಪ್ಯ ಪುನಶ್ಚೈವ ನಿವಾರಿತಃ॥ ಪುನಃ ಪ್ರದಕ್ಷಿಣೀಕೃತ್ಯ ಶಿವಮಂದಿರಮುತ್ತಮಂ। ಬಲಿಪಿಂಡಾಂಶಲೋಭೇನ ಪುನಃ ದ್ವಾರಮುಪಾಗತಃ॥ ಏವಂ ಪುನಃ ಪುನಸ್ತತ್ರ ಕೃತ್ವಾ ಕೃತ್ವಾ ಪ್ರದಕ್ಷಿಣಂ। ದ್ವಾರದೇಶೇ ಸಮಾಸೀನಂ ನಿಜಘ್ನುರ್ನಿಶಿತೈಶ್ಶರೈಃ॥ ಸವಿದ್ಧಮಂತ್ರೈಸ್ಸಹಸಾ ಶಿವದ್ವಾರಗತಾಸು ವೈ। ಜಾತೋಸ್ಮ್ಯಹಂ ಕುಲೇ ರಾಜ್ಞಾಂ ಪ್ರಭಾವಾಚ್ಛಿವಸನ್ನಿಧೇಃ॥ ದೃಷ್ಟ್ವಾ ಚತುರ್ದಶೀಪೂಜಾಂ ದೀಪಮಾಲಾಂ ವಿಲೋಕ್ಯ ತಾಂ। ತೇನ ಪುಣ್ಯೇನ ಮಹತಾ ತ್ರಿಕಾಲಜ್ಞೋಽಥ ಭಾಮಿನಿ॥ ಪ್ರಾಕ್ಕರ್ಮವಾಸನಾ ಯೋಗಾತ್ ಸರ್ವಭಕ್ಷ್ಯೋವಿನಿಘೃಣಃ। ವಿದುಷಾಮಪಿ ದುರ್ಲಂಘ್ಯಾ ಪ್ರಕೃತಿರ್ವ್ಯಸನಾಮಯಿ॥ ಅತೋಹಮರ್ಚಯಾಮೀಶಂ ಚತುರ್ದಶ್ಯಾಂ ಜಗದ್ಗುರುಂ। ತ್ವಮಪಿ ಶ್ರದ್ಧಯಾ ಭದ್ರೇ ಭಜ ದೇವಂ ಪಿನಾಕಿನಂ ॥ರಾಜ್ಞೀ॥ ತ್ರಿಕಾಲಜ್ಞೋ ಹಿ ರಾಜೇಂದ್ರ ಪ್ರಸಾದಾದ್ಗಿರಿಜಾಪತೇ। ಮತ್ಪೂರ್ವಚರಿತಂ ತ್ವಂ ಹಿ ವಕ್ತುಮರ್ಹಸಿ ತತ್ವತಃ ॥ರಾಜಾ॥ ತ್ವಂ ಚ ಪೂರ್ವಂ ಭವೇತ್ಕಾಚಿತ್ ಕಪೋತೀ ವ್ಯೋಮಚಾರಿಣೀ। ಕ್ವಾಪಿ ಲಬ್ಧವತೀ ಕಂಚಿತ್ ಮಾಂಸಪಿಂಡಂ ಯದೃಚ್ಛಯಾ॥ ತ್ವದ್ಗೃಹೀತಮಥಾಲೋಕ್ಯ ಗೃಧ್ರಃ ಕೋಪ್ಯಾಮಿಷಂಬಲೀ। ನಿರಾಮಿಷಃ ಸ್ವಯಂವೇಗಾದಭಿದುದ್ರಾವ ಭೀಷಣಃ॥ ತತಸ್ತ್ವಂ ವೀಕ್ಷ್ಯ ವಿತ್ರಸ್ತಾ ವಿಧೃತಾಸಿ ವರಾನನೇ। ತೇನಾನುಯಾತಾಘೋರೇಣ ಮಾಂಸಪಿಂಡಜಿಘೃಕ್ಷಯಾ॥ ದಿಷ್ಟ್ಯಾ ಶ್ರೀಗಿರಿಮಾಸಾದ್ಯ ಶ್ರಾಂತಾ ತತ್ರ ಶಿವಾಲಯಂ। ಪ್ರದಕ್ಷಿಣಂ ಪರಿಕ್ರಮ್ಯ ಧ್ವಜಾಗ್ರೇಸಮುಪಸ್ಥಿತಾ॥ಅಥಾನುಧೃತ್ಯ ತರಸಾ ತೀಕ್ಷ್ಣತುಂಡೋ ವಿಹಂಗಮಃ। ತ್ವಾಂ ನಿಹತ್ಯ ನಿಪಾತ್ಯಾಧಃ ಮಾಂಸಮಾದಾಯ ಜಗ್ಮಿವಾನ್॥ ಪ್ರದಕ್ಷಿಣಪ್ರಕ್ರಮಣೇ ದೇವದೇವಸ್ಯ ಶೂಲಿನಃ। ತಸ್ಯಾಗ್ರೇಮರಣಾಚ್ಚೈವ ಜಾತಾ ಸಾ ಹಿ

ನೃಪಾಂಗನಾ॥ ರಾಜ್ಞೀ॥ ಶ್ರುತಂ ಸರ್ವಂ ವಿಶೇಷೇಣ ಪ್ರಾಗ್ಜನ್ಮಚರಿತಂ ಮಯಾ। ಜ್ಞಾತಂ ಚ ಮಹದಾಶ್ಚರ್ಯಂ ಭಕ್ತಿಶ್ಚ ಮಮ ಚೇತಸಿ ॥ ಅಥಾನ್ಯಚ್ಛ್ರೋತುಮಿಚ್ಛಾಮಿ ತ್ರಿಕಾಲಜ್ಞ ಮಹೀಪತೇ । ಇದಂ ಶರೀರಮುತ್ಸೃಜ್ಯ ಯಾಸ್ಯಾಮಃ ಕಾಂ ಗತಿಂ ಪುನಃ ॥ ರಾಜಾ॥ ಇತೋ ಭವ ಜನಿಷ್ಯೇಹಂ ದ್ವಿತೀಯೇ ಸೈಂಧವೋ ನೃಪಃ । ಸೃಜಯೇಶಸುತಾ ತ್ವಂ ತು ಮಾಮೇವ ಪ್ರತಿಪತ್ಸ್ಯಸೇ॥ ತೃತೀಯೇಸ್ಯ ಭವೇ ರಾಜಾ ಸೌರಾಷ್ಟ್ರೇ ಭವಿತಾಸ್ಮ್ಯಹಂ । ಕಳಿಂಕರಾಜತನಯಾ ತ್ವಂ ಮೇ ಪತ್ನೀ ಭವಿಷ್ಯಸಿ ॥ ಚತುರ್ಥೇ ತು ಭವಿಷ್ಯಾಮಿ ಭವೇ ಗಾಂಧಾರಭೂಮಿಪಃ । ಮಾಗಧೀರಾಜತನಯಾ ತತ್ರ ತ್ವಂ ಮಮ ಗೇಹಿನೀ ॥ ಪಂಚಮೇಽವಂತಿನಾಥೋಽಹಂ ಭವಿಷ್ಯಾಮಿ ಯುಗಾಂತರೇ । ದಶಾರ್ಣರಾಜತನಯಾ ತ್ವಮೇವ ಮಮ ವಲ್ಲಭಾ ॥ ಅಸ್ಯ ಜನ್ಮನಿ ಷಷ್ಠೇಹಂ ಆನರ್ತೇ ಭವಿತಾ ನೃಪಃ । ಯಯಾತಿವಂಶಜಾ ಕನ್ಯಾ ಭೂತ್ವಾ ಮಾಮೇವ ಯಾಸ್ಯಸಿ ॥ ಪಾಂಡ್ಯರಾಜಕುಮಾರೋಽಹಂ ಸಪ್ತಮೇ ಭವಿತಾ ಭವೇ। ತತ್ರ ಮತ್ಸದೃಶೋ ನಾನ್ಯೋ ರೂಪೌದಾರ್ಯಗುಣಾದಿಭಿಃ ॥ ಸರ್ವಶಾಸ್ತ್ರಾರ್ಥತತ್ವಜ್ಞೋ ಗುಣವಾನ್ ದೃಢವಿಕ್ರಮಃ । ಪದ್ಮವರ್ಣ ಇತಿ ಖ್ಯಾತಃ ಪದ್ಮಮಿತ್ರಸಮದ್ಯುತಿಃ ॥ ಭವಿತಾ ತ್ವಂ ಚ ವೈದರ್ಭೀ ರೂಪೇಣಾಪ್ರತಿಮಾ ಭುವಿ । ನಾಮ್ನಾ ವಸುಮತೀ ಖ್ಯಾತಾ ಸರ್ವಾವಯವಶೋಭನಾ ॥ ಸರ್ವರಾಜಕುಮಾರಾಣಾಂ ಮನೋನಯನನಂದಿನೀ ॥ ಸಾ ತ್ವಂ ಸ್ವಯಂ ವಶೇ ಸರ್ವಾನ್ ವಿಹಾಯ ನೃಪನಂದನಾನ್॥ ವರಂ ಪ್ರಾಪ್ಸ್ಯಸಿ ಮಾಮೇವ ದಮಯಂತೀವ ನೈಷಧಂ। ಸೋಹಂ ಜಿತ್ವಾ ನೃಪಾನ್ ಸರ್ವಾನ್ ತ್ವಾಂ ಪ್ರಾಪ್ಯ ವರವರ್ಣಿನೀಂ ॥ ಸ್ವರಾಷ್ಟ್ರಸ್ಥೋಖಿಲಾನ್ ಭೋಗಾನ್ ಭೋಕ್ಷ್ಯೇ ವರ್ಷಗಣಾನ್ ಬಹೂನ್। ಇಷ್ಟ್ವಾ ಚ ವಿವಿಧೈರ್ಯಜ್ಞೈಃ ವಾಜಿಮೇಧಾದಿಭಿಃ ಶುಭೈಃ ॥ ಸಂತರ್ಪ್ಯ ಪಿತೃದೇವರ್ಷೀದಾಸ್ಯೈಶ್ಚ ದ್ವಿಜಸತ್ತಮಾನ್ । ಸಂಪೂಜ್ಯ ದೇವದೇವೇಶಂ ಶಂಕರಂ ಲೋಕಶಂಕರಂ॥ ಪುತ್ರೇ ರಾಜ್ಯಧುರಂ ನ್ಯಸ್ಯ ಗಂತಾಸ್ಮಿ ತಪಸೇ ವನಂ। ತತ್ರಾಗಸ್ತ್ಯಸ್ಯ ಮುನಿವರಾತ್ ಬ್ರಹ್ಮಜ್ಞಾನಂ ಸಮವಾಪ್ಯ ಚ॥ ತ್ವಯಾ ಸಹ ಗಮಿಷ್ಯಾಮಿ ಶಿವಸ್ಯ ಪರಮಂ ಪದಂ। ಷೋಡಶೈರುಪಚಾರೈಶ್ಚ ಪೂಜಯೇತ್ತು ಮಹೇಶ್ವರಂ। ತ್ರಿಶತೈಃ ಷಷ್ಟಿಪದ್ಮಾನಿ ಪಂಚವರ್ಣೈಶ್ಚ ನಿರ್ಮಿತಂ। ಸಂಕಲ್ಪಪೂರ್ವಕಂ ಕುರ್ಯಾತ್ ಕಲ್ಪೋಕ್ತೇನ ಯಥಾವಿಧಿ॥ ತತ್ಸಂಖ್ಯಾವರ್ತಿಸಂಯುಕ್ತಂ ದೀಪಂ ದದ್ಯಾಚ್ಚ ಭಕ್ತಿತಃ। ಪ್ರದಕ್ಷಿಣನಮಸ್ಕಾರೈಃ ಮೌನೇನ ನಿಯಮೇನ ಚ॥ ಅರ್ಘ್ಯಂ ದದ್ಯಾತ್ತತೋ ಭಕ್ತ್ಯಾ ಪಂಚಧಾನ್ಯಾದಿಸಂಯುತಂ ॥ ತಾವತ್ಸಂಖ್ಯಾಸಮಾಯುಕ್ತಂ ಗಂಧಪುಷ್ಪಫಲೈರ್ಯುತಂ ॥ ಉದ್ಯಾಪನವಿಧಿಂ ಕೃತ್ವಾ ಕುಂಭಸ್ಥಾಪನಪೂರ್ವಕಂ। ಪ್ರತಿಮಾವಸ್ತ್ರಸಂಯುಕ್ತಂ ಸ್ವರ್ಣಬಿಲ್ವಸಮನ್ವಿತಂ॥ ಪಂಚರತ್ನಂ ಪಂಚಧಾನ್ಯಂ ಪಂಚತ್ವಕ್ಪಲ್ಲವಸಂಯುತಂ। ಸಂಪೂಜ್ಯ ನಿಶಿ ಯತ್ನೇನ ಚರೇಜ್ಜಾಗರಣಂ ವ್ರತೀ॥ ಊರ್ಜೇ ಶುಕ್ಲಚತುರ್ದಶ್ಯಾಮರ್ಚಿತಂ ಬಹುಪುಣ್ಯದಂ। ಮತ್ಪೂಜಾಫಲಭುಕ್ತಿಶ್ಚ ಪೂರ್ವಪಾತಕನಾಶನಂ॥ ಶುಕ್ಲೇ ಕಾರ್ತಿಕಮಾಸೇ ತು ಸೋಮವಾರೇ ಚತುರ್ದಶೀಂ॥ ಉಪೋಷ್ಯ ಅಭ್ಯರ್ಚಯೇನ್ನೀತ್ವಾ ನಿಶಿ ಯಾಮಚತುಷ್ಟಯೇ॥ ಯೋ ವಾ ಕುರ್ಯಾದ್ವ್ರತಮಿದಂ ತಸ್ಯ ತುಷ್ಟಸ್ತು ಶಂಕರಃ। ಪ್ರಭಾತಕಾಲೇ

ಚೈತ್ಯೋಶ್ಚಾತು ಸ್ನಾತ್ವಾಧೌತಾಂಬರಾನ್ವಿತಂ॥ಪೂರ್ವಮುಕ್ತಾನಿ ಪದ್ಮಾನಿ ಯಥಾ ವಿಧ್ಯ ಪಚಾರಕಂ॥ಶಿವನಾಮಾನಿ ಜಪ್ತ್ವಾ ತ. ಧ್ಯಾತ್ವಾನುರ ಸಿ ಸೌವ್ರತೀ॥ಪುಣ್ಯಾಹವಾಚನಂ ಕೃತ್ವಾ ಹೋಮಂ ಕುರ್ಯಾದ್ವಿಧಾನತಃ । ಸ್ವಗೃಹ್ಯೋಕ್ತವಿಧಾನೇನ ಪರಮಾನ್ನೇನ ಸರ್ಪಿಷಾ॥ ತಾನತ್ಸಂಖ್ಯಾಹುತಿರ್ಹುತ್ವಾ ಹೋಮಶೇಷಂ ಸಮಾಪಯೇತ್। ಆಚಾರ್ಯಂ ವರಯೇತ್ಪ್ರಾಜ್ಞಂ ವೇದವೇದಾಂಗಪಾರಗಂ॥ಸವಸ್ತ್ರಾಭರಣಂ ಚೈವ ಕಲಶಂ ಚ ಪ್ರದಾಯೇತ್ । ಮಹಾಧನಂ ಚ ಸುವರ್ಣೇಸಲಿಂಗಂ ದದ್ಯಾಚ್ಚ ಭಕ್ತಿತಃ ॥ ಸಾಲಂಕಾರಾಂ ಸವತ್ಸಾಂ ಚಗಾಂಚ ಭಪಸ್ತ್ಯ್ಯಪ್ರದಾಪಯೇತ್। ಕೃತ್ವಾತುದಶದಾನಾನಿಭೂರಿದಾನಮತಃ ಪರಂ ॥ ಬ್ರಾಹ್ಮಣಾನ್ ಭೋಜಯೇತ್ಪಶ್ಚಾತ್ ಸ್ವಯಂಭುಂಜೀತ ನೇಮತಃ । ಏವಂ ಕೃತ್ವಾ ವ್ರತಂ ಭಕ್ತ್ಯಾ ಶಿವಸಾಯುಜ್ಯಮಾಪ್ನುಯಾತ್ ॥ತತ್ರಾಗಸ್ತ್ಯಾನ್ಮುನಿವರಾನ್ ಬ್ರಹ್ಮಜ್ಞಾನಮವಾಪ್ಯಚ । ತ್ವಯಾ ಸಹಗಮಿಷ್ಯಾಮಿ ಶಿವಸ್ಯ ಪರಮಂ ಪದಂ ॥ ಚತುರ್ದಶ್ಯಾಂ ತುಯದ್ಭಕ್ತ್ಯಾಏವಂಸಂಪೂಜ್ಯಶಂಕರಂ॥ಸಪ್ತಜನ್ಮನಿರಾಜತ್ವಂಭುಂಜಿಷ್ಯಾಮಿ ವರಾನನೇ॥ ಇತ್ಯೇತತ್ಸಕಲಂ ಲಬ್ಧಂ ಪೂಜಾದರ್ಶನಮಾತ್ರತಃ । ಕ್ವ ಸಾರಮೇಯೋ ಪಾಪಾತ್ಮಾಕೀದೃಶೀ ಬತ ಸದ್ಗತಿಃ॥ಸೂತಃ॥ಇತ್ಯುಕ್ತ್ವಾ ನಿಜನಾಥೇನ ಸಾರಾಜ್ಞೀ ಶುಭಲಕ್ಷಣಾ।ಪರಂವಿಸ್ಮಯಮಾಪನ್ನಾ ಪೂಜಯಾಮಾಸ ತಂಮುದಾ॥ ಸೋಪಿ ರಾಜಾ ತಯಾ ಸಾರ್ಧಂಭುಕ್ತ್ವಾಭೋಗಾನ್ಯಥೇಪ್ಸಿತಾನ್। ಜಗಾಮಸಪ್ತಜನ್ಮಾಂತೇಶಂಭೋಸ್ತತ್ಪರಮಂ ಪದಂ॥ ಯ ಏತಚ್ಛಿವಪೂಜಾಯಾಃ ಮಹಾತ್ಮ್ಯಂಪರಮಾದ್ಭುತಂ। ಶೃಣುಯಾತ್ಕೀರ್ತಯೇದ್ವಾಪಿ ಸಗಚ್ಛೇತ್ಪರಮಂ ಪದಂ ॥

ಇತಿ ಶ್ರೀಸ್ಕಾಂದೇ ಬ್ರಹ್ಮೋತ್ತರಖಂಡೇ ವೈಕುಂಠಚತುರ್ದಶೀಮಹಿಮಾನು ವರ್ಣನಂ ನಾಮ ಚತುರ್ಥೋಽಧ್ಯಾಯಃ ಸಮಾಪ್ತಃ

ಅಥ ಶಿವಪರ ವೈಕುಂಠಚತುರ್ದಶೀ ವ್ರತಕಥಾಸಂಗ್ರಹಃ

ಬಳಿಕ ಸೂತಪುರಾಣಿಕರು ಶೌನಕಾದಿಗಳನ್ನು ಕುರಿತು ಎಲೈ ಮಹರ್ಷಿಗಳಿರಾ! ಕೇಳಿದವರ ಪಾಪಗಳನ್ನು ಪರಿಹರಿಸಿ ಸಂಸಾರದುಃಖವನ್ನು ದೂರಮಾಡಿ ನಿತ್ಯಸುಖವನ್ನು ಕೊಡುವ ಅದ್ಭುತವಾದ ಶಿವಮಹಾತ್ಮ್ಯೆಯನ್ನು ಹೇಳುವೆನು ಕೇಳಿ. ದುಸ್ಸಹವಾದ ಪಾಪಸಮುದ್ರದಲ್ಲಿ ಮುಳುಗಿ ಕೇವಲ ವಿಷಯಲಂಪಟರಾಗಿ ನರಳುವವರಿಗೆ ಶಿವಪೂಜೆಯಿಂದಲ್ಲದೆ ಅನ್ಯಥಾ ಮೋಕ್ಷವುಂಟಾಗಲಾರದು. ಬುದ್ಧಿವಂತನಾದವನು ಸರ್ವಥಾ ಶಿವನನ್ನು ಪೂಜಿಸುತ್ತಿರಬೇಕು. ಹಾಗೆ ಪೂಜಿಸುವುದಕ್ಕೆ ಅಸಾಧ್ಯನಾದರೆ ಅನ್ಯರು ಮಾಡುವ ಪೂಜೆಯನ್ನಾದರೂ ನೋಡಬೇಕು ಈ ವಿಚಾರದಲ್ಲಿ ಮನೋಹರವಾದ ಒಂದು ಇತಿಹಾಸವುಂಟು. ಅದನ್ನು ಕೇಳಿ! ಪೂರ್ವಕಾಲದಲ್ಲಿ ಕಿರಾತರಾಜ್ಯಕ್ಕೆ ದೊರೆಯಾದ ಸುದರ್ಶನನೆಂಬುವನು ಬಲಿಷ್ಠನಾಗಿ ಪರಾಕ್ರಮದಿಂದ ಶತ್ರುಗಳನ್ನು ಗೆದ್ದು ಬೇಟೆಯಲ್ಲಿ ಬಹಳ ಆಸಕ್ತಿಯುಳ್ಳವನಾಗಿ ಚಪಲನಾಗಿ ವಿಷಯಲಂಪಟನಾಗಿ ಎಲ್ಲಾ ಜಾತಿಯ ಸ್ತ್ರೀಯರಲ್ಲಿಯೂ ರಮಿಸುವವನಾಗಿ ಮಾಂಸಾಹಾರಿಯಾಗಿ ಮಹಾ ದುರಾಚಾರಸಂಪನ್ನನಾಗಿದ್ದನು. ಹೀಗೆ ಸರ್ವಭಕ್ಷಕನಾಗಿ

ದುರಾಚಾರಿಯಾಗಿದ್ದ ಸುದರ್ಶನನು ಪ್ರತಿದಿನವೂ ತಪ್ಪದೆ ಶಿವಪೂಜೆಯನ್ನು ಮಾಡುತ್ತ ಕಾರ್ತಿಕ ಶುದ್ಧ ಚತುರ್ದಶಿಯದಿನ ರಾತ್ರಿ ಪರಮೇಶ್ವರನನ್ನು ಬಹಳ ಭಕ್ತಿಯಿಂದ ಪೂಜಿಸಿ, ವೈಭವದಿಂದ ಹಾಡಿ ಕುಣಿದು ಸ್ತೋತ್ರಮಾಡುತ್ತಿದ್ದನು. ಈತನ ಈ ವಿಧವಾದ ಚರ್ಯೆಯನ್ನು ಕಂಡು ಬೇಸರಗೊಂಡವಳಾಗಿ ಅವನ ಹೆಂಡತಿಯಾದ ಕುಮುದ್ವತಿಯು ಒಂದಾನೊಂದು ದಿನ ರಹಸ್ಯವಾಗಿ ತನ್ನ ಗಂಡನೊಂದಿಗೆ ಕುಳಿತಿರುವಾಗ ಪತಿಯನ್ನು ಕುರಿತು, ಎಲೈ ಪ್ರಾಣ ಕಾಂತ! ಆಚಾರಹೀನನಾಗಿ, ಅಭಕ್ಷ್ಯಭಕ್ಷಕನಾಗಿ ಅಗಮ್ಯಾಗಮನವುಳ್ಳವನಾದ ನಿನಗೆ ನಿಶ್ಚಲವಾದ ಈ ಶಿವಭಕ್ತಿಯು ಹೇಗೆ ಉಂಟಾಯಿತು ಎಂದು ಕೇಳಿದಳು.

ಆಗ ಸುದರ್ಶನರಾಜನು ತನ್ನ ಹೆಂಡತಿಯನ್ನು ಕುರಿತು ಎಲೌ ಅರ್ಧಾಂಗಿಯೇ ಕೇಳು, ಪೂರ್ವಜನ್ಮದಲ್ಲಿ ನಾನು ನಾಯಿಯಾಗಿ ಹುಟ್ಟಿ ಬೀದಿಯಲ್ಲಿ ಎರಚಿದ ಎಂಜಲೆಲೆಗಳಿಂದ ಆಹಾರವನ್ನು ಹುಡುಕಿಕೊಂಡು ಜೀವಿಸುತ್ತಿದ್ದೆನು. ಒಂದುದಿನ ಎಲ್ಲಿಯೂ ಆಹಾರ ಸಿಕ್ಕದ ಕಾರಣ ಒಂದು ಶಿವದೇವಸ್ಥಾನದ ಬಳಿಗೆ ಬಂದು ಒಳಹೊಕ್ಕೆನು. ಆ ದಿನ ಕಾರ್ತಿಕ ಶುದ್ಧ ಚತುರ್ದಶಿಯಾದ ಕಾರಣ ದೇವಾಲಯದಲ್ಲಿ ಅಮೋಘವಾದ ಶಿವಪೂಜೆಯು ನಡೆಯುತ್ತಿತ್ತು. ನಾನು ಅದನ್ನು ಚೆನ್ನಾಗಿ ನೋಡುತ್ತಿದ್ದೆನು. ಅಷ್ಟರಲ್ಲೇ ಜನಗಳು ಬಂದು ನನ್ನನ್ನು ಓಡಿಸಲು ನಾನು ಪ್ರದಕ್ಷಿಣೆಮಾಡಿ ಹೊರಬಾಗಿಲಿಗೆ ಬಂದೆನು. ಆದರೂ ಕಾವಲುಗಾರರು ನನ್ನನ್ನು ಅಟ್ಟಿಸಿಕೊಂಡು ಬಂದ ಕಾರಣ ನಾನು ಹೆದರಿ ದೇವಸ್ಥಾನವನ್ನು ಪ್ರದಕ್ಷಿಣೆ ಮಾಡಿಕೊಂಡು ಬಲಿಯನ್ನವೇನಾದರೂ ಸಿಕ್ಕುವುದೋ ಏನೋಎಂದು ಮರಳಿ ದೇವಸ್ಥಾನಕ್ಕೆ ಹೋಗುತ್ತಿದ್ದೆನು. ಅದನ್ನು ಕಂಡು ಚಾರಕರು ನನ್ನನ್ನು ದೊಣ್ಣೆಗಳಿಂದ ಹೊಡೆದರು. ಕೂಡಲೇ ನಾನು ಮೃತನಾಗಿ ಶಿವಪೂಜಾ ಸಂದರ್ಶನದ ಮಹಿಮೆಯಿಂದ ರಾಜನಾಗಿ ಈ ಕಿರಾತರಾಜ್ಯದಲ್ಲಿ ಹುಟ್ಟಿದೆನು. ಆದರೂ ವೈಕುಂಠಚತುರ್ದಶೀ ದೀಪಮಾಲೆಯನ್ನು ಪ್ರತ್ಯಕ್ಷವಾಗಿ ನೋಡಿದಕಾರಣ ನನಗೆ ಭೂತಭವಿಷ್ಯದ್ವರ್ತಮಾನಗಳೆಲ್ಲ ತಿಳಿಯ ಬರುವುವು. ಶಿವಪೂಜಾಮಹಿಮೆಯಿಂದ ನಾನು ಪಂಡಿತರಿಗೂ ಕೂಡ ಅಗಮ್ಯವಾದ ಬುದ್ಧಿಬಲವನ್ನು ಪಡೆದಿರುವವನು. ಆದಕಾರಣ ನಾನು ಶಿವನಲ್ಲಿ ಭಕ್ತಿಯುಳ್ಳವನಾಗಿ ನಿತ್ಯವೂ ಶಿವಪೂಜೆಯನ್ನು ಮಾಡುತ್ತಿದ್ದರೂ ವೈಕುಂಠಚತುರ್ದಶಿಯದಿನ ವಿಶೇಷ ವಿಜೃಂಭಣೆಯಿಂದ ಪರಶಿವನನ್ನು ಪೂಜಿಸುತ್ತಿರುವೆನು. ಆದಕಾರಣ ನೀನೂ ಸಹ ವೈಕುಂಠಚತುರ್ದಶೀ ವ್ರತವನ್ನು ಮಾಡಿ ಧನ್ಯಳಾಗು ಎಂದು ಹೇಳಿದನು.

ಹೀಗೆ ಆಶ್ಚರ್ಯಕರವಾದ ತನ್ನ ಗಂಡನ ಚರಿತ್ರೆಯನ್ನು ಕೇಳಿದ ಕುಮುದ್ವತಿಯು ಎಲೈ ಪ್ರಾಣನಾಥನೇ! ನೀನು ತ್ರಿಕಾಲಜ್ಞಾನಿಯಾಗಿರುವೆನೆಂದು ಹೇಳಿದೆಯಲ್ಲಾ, ಅದು ನಿಜವಾದರೆ ನನ್ನ ಪೂರ್ವಜನ್ಮದ ವೃತ್ತಾಂತವೇನು ಹೇಳುವೆಯಾ? ಎಂದು ಕೇಳಲು ಸುದರ್ಶನ ರಾಜನು ಎಲೌ ನಾರೀಮಣಿಯೇ! ನೀನು ಹಿಂದಿನ ಜನ್ಮದಲ್ಲಿ ಪಾರಿವಾಳವಾಗಿ ಹುಟ್ಟಿ ಆಹಾರಕ್ಕಾಗಿ ತಿರುಗುತ್ತಿದ್ದಾಗ ಒಂದು ಗಿಡಗವು ನಿನ್ನನ್ನು ಕಂಡು ಬೆನ್ನಟ್ಟಿ ಬಂದಕಾರಣ ನೀನು ಭಯದಿಂದ ನಡುಗುತ್ತ ಓಡಿಬಂದು ಶ್ರೀಶೈಲದ ದೇವಸ್ಥಾನಕ್ಕೆ ಪ್ರದಕ್ಷಿಣೆಯನ್ನು ಮಾಡಿ ಧ್ವಜಸ್ತಂಭದ ಮೇಲೆ ಕುಳಿತುಕೊಂಡಿದ್ದಾಗ ಗಿಡಗವು ಅಲ್ಲಿಗೆ ಬಂದು ನಿನ್ನನ್ನು ಮಾಂಸವನ್ನು ತಿಂದು ಹೊರಟುಹೋಯಿತು. ಆಗ ಶಿವಾಲಯ ಪ್ರದಕ್ಷಿಣೆ ಮಾಡಿದ ಮಹಾಪುಣ್ಯದಿಂದ ಈ ಜನ್ಮದಲ್ಲಿ ನನಗೆ ಹೆಂಡತಿಯಾಗಿ ರಾಣಿ ಎನಿಸಿಕೊಂಡೆ ಎಂದನು. ಆಗ ಕುಮುದ್ವತಿಯು

ಎಲೈ ರಾಜೇಂದ್ರನೇ ! ನನ್ನ ಪೂರ್ವಚರಿತ್ರೆಯಂತೂ ತಿಳಿದ ಹಾಗಾಯಿತು. ಇನ್ನು ನಾವಿಬ್ಬರೂ ಮುಂದಿನ ಜನ್ಮಗಳಲ್ಲಿ ಹೇಗೆ ಆಗುವೆವೋ ಅದನ್ನು ಹೇಳಬಲ್ಲೆಯಾ ? ಎನಲು ಸುದರ್ಶನನು ತನ್ನ ಹೆಂಡತಿಯನ್ನು ಕುರಿತು ಇಂತೆಂದನು.

ಎಲೈ ಕುಮುದ್ವತಿಯೇ ಕೇಳು ಮುಂದಿನ ಜನ್ಮದಲ್ಲಿ ನಾನು ಸಿಂಧುರಾಜ್ಯಕ್ಕೆ ದೊರೆಯಾಗುವೆನು. ನೀನು ಸೃಂಜಯನಿಗೆ ಮಗಳಾಗಿ ಹುಟ್ಟಿ ನನಗೆ ಹೆಂಡತಿಯಾಗುವೆ. ಆಮೇಲೆ ನಾನು ಸೌರಾಷ್ಟ್ರ ದೇಶಕ್ಕೆ ದೊರೆಯಾಗಿ ಹುಟ್ಟುವೆನು. ಆಗ ನೀನು ಕಳಿಂಗ ರಾಜನ ಪುತ್ರಿಯಾಗಿ ಜನಿಸಿ ನನ್ನನ್ನೇ ವರಿಸುವೆ, ನಾಲ್ಕನೆ ಜನ್ಮದಲ್ಲಿ ಮಗಧರಾಜನ ಮಗಳಾಗಿ ಹುಟ್ಟಿ ಗಾಂಧಾರ ದೇಶಾಧಿಪತಿಯಾದ ನನ್ನನ್ನು ಮದುವೆಯಾಗುವೆ, ಐದನೆಯ ಜನ್ಮದಲ್ಲಿ ನೀನು ದಶಾರ್ಣವ ರಾಜಪುತ್ರಿಯಾಗಿ ಜನಿಸಿ ಅವಂತೀಶ್ವರನಾದ ನನ್ನನ್ನು ವರಿಸುವೆ ? ಆರನೆಯ ಜನ್ಮದಲ್ಲಿ ಯಯಾತಿರಾಜನ ಮಗಳಾಗಿ ನೀನು, ಅನರ್ಥ ದೇಶದ ದೊರೆಯಾದ ನನ್ನನ್ನು ಮದುವೆಯಾಗುವೆ, ಏಳನೆಯ ಜನ್ಮದಲ್ಲಿ ನಾನು ಪಾಂಡ್ಯದೇಶದ ರಾಜಪುತ್ರನಾಗಿ ಸಕಲವಿದ್ಯಾ ಸಂಪನ್ನನೂ ಸ್ಪರದ್ರೂಪಿಯೂ ಆಗಿರಲು ನೀನು ರತಿಯನ್ನು ಸೋಲಿಸುವ ಸೌಂದರ್ಯದಿಂದ ವಿದರ್ಭರಾಜನಿಗೆ ಮಗಳಾಗಿ ಹುಟ್ಟಿ ಸ್ವಯಂವರ ವಾಜ್ಯದಿಂದ ನನ್ನನ್ನು ಮದುವೆಯಾಗುವೆ. ಬಳಿಕ ನಾವಿಬ್ಬರೂ ಸಕಲ ಭೋಗಭಾಗ್ಯಗಳನ್ನು ಅನುಭವಿಸಿ ದೇವಪಿತೃಗಳನ್ನು ದಾನ ಧರ್ಮ ಸದಾಚಾರದಿಂದ ತೃಪ್ತಿಪಡಿಸಿ ಮಗನಿಗೆ ರಾಜ್ಯಭಾರವನ್ನು ವಹಿಸಿ ತಪೋವನಕ್ಕೆ ಹೋಗಿ ಅಲ್ಲಿ ಅಗಸ್ತ್ಯಮಹಾಮುನಿಗೆ ಶಿಷ್ಯರಾಗಿದ್ದುಕೊಂಡು ಆತನಿಂದ ಬ್ರಹ್ಮಜ್ಞಾನವನ್ನು ಪಡೆದು ಭಕ್ತಿಭಾವದಿಂದ ಶಿವಲೋಕವನ್ನು ಸೇರುವೆವು. ಆದಕಾರಣ ನೀನೂ ಈ ವ್ರತವನ್ನು ಮಾಡು ಎಂದು ಹೇಳಿ ಸುದರ್ಶನರಾಜನು ತನ್ನ ಹೆಂಡತಿಯಾದ ಕುಮುದ್ವತಿಗೆ ವ್ರತವಿಧಾನವನ್ನು ಹೀಗೆ ಹೇಳತೊಡಗಿದನು. ಈ ವ್ರತವನ್ನು ಮಾಡತಕ್ಕವರು ವಿಧ್ಯುಕ್ತವಾಗಿ ಸಂಕಲ್ಪಮಾರ್ಗದಿಂದ ಸ್ನಾನಾದಿಗಳನ್ನು ಮಾಡಿಕೊಂಡು ನಿತ್ಯಕರ್ಮವನ್ನು ನೆರವೇರಿಸಿ ರಂಗವಲ್ಯಾದಿಗಳಿಂದ ಅಲಂಕರಿಸಿ ಗೋಮಯೋಪಲಿಪ್ತವಾದ ಶುದ್ಧಪ್ರದೇಶದಲ್ಲಿ ಅಥವಾ ಮಂಟಪಮಧ್ಯದಲ್ಲಿ ದೇವಾಲಯದಲ್ಲಿ ಅಲ್ಲದೆ ಗೋಷ್ಠಪ್ರದೇಶದಲ್ಲಾದರೂ ಸಾಧ್ಯವಾದ ಸ್ಥಳದಲ್ಲಿ ರಂಗವಲ್ಲಿಯಿಂದ ಮುನ್ನೂರರವತ್ತು ಪದ್ಮಗಳನ್ನು ಬರೆದು ಅದರಲ್ಲಿ ಅಕ್ಕಿರಾಶಿಯನ್ನು ಹಾಕಿ ಆ ರಾಶಿಯಮೇಲೆ ಕಲಶವನ್ನು ಸ್ಥಾಪಿಸಿ ಅದರಮೇಲೆ ವಸ್ತ್ರವನ್ನು ಹೊದಿಸಿ ಬಳಿಕ ಗೌರಿಶಂಕರರ ಅಥವಾ ಉಮಾಮಹೇಶ್ವರ ವಿಗ್ರಹವನ್ನಿಟ್ಟು ಆವಾಹನಾದಿ ಷೋಡಶೋಪಚಾರಗಳಿಂದ ಪೂಜಿಸಿ ಮುನ್ನೂರರವತ್ತು ಬತ್ತಿಗಳಿಂದ ದೀಪಗಳನ್ನು ಹೊತ್ತಿಸಿ ಮುನ್ನೂರರವತ್ತು ಸಂಖ್ಯೆಯುಳ್ಳ ಫಲಪುಷ್ಪ ಎಲೆ ಅಡಿಕೆ ತಾಂಬೂಲ ಗುಡತಂಡುಲ ದಕ್ಷಿಣೆ ಸಹಿತವಾದ ಉಪಾಯನದಾನವನ್ನು ಬ್ರಾಹ್ಮಣನಿಗೆ ಕೊಟ್ಟು ಬಳಿಕ ಪ್ರಸನಾರ್ಘ್ಯಗಳನ್ನು ಸಮರ್ಪಿಸಿ ಉದ್ಯಾಪನೆಯನ್ನು ಮಾಡಬೇಕು. ಉದ್ಯಾಪನೆಗೆ ಪೂರ್ಣಕುಂಭವನ್ನು ಸ್ಥಾಪಿಸಿ ಪಂಚಪಲ್ಲವ, ಪಂಚತ್ವಕ್ಕು, ಪಂಚಧಾನ್ಯ, ಪಂಚರತ್ನ, ಸುವರ್ಣ, ಬಿಲ್ವವಸ್ತ್ರ, ಪ್ರತಿಮೆ ತತ್ಪರವಾಗಿ ಪರಶಿವನನ್ನು ಆವಾಹಿಸಿ ರಾತ್ರಿ ನಾಲ್ಕು ಯಾಮಗಳಲ್ಲಿಯೂ ವಿಧಿವತ್ತಾಗಿ ಪೂಜಿಸಿ ಜಾಗರಣೆಯಿಂದ ಕಾಲವನ್ನು ಕಳೆದು ಬೆಳಗಾಗುತ್ತಲೇ ಸ್ನಾನಮಾಡಿ ಶಿವನಾಮ ಶಿವಮಂತ್ರಗಳನ್ನು ಜಪಿಸುತ್ತ ನಿತ್ಯಕರ್ಮವನ್ನು ತೀರಿಸಿಕೊಂಡು ಆಚಾರ್ಯಸಮೇತರಾಗಿ ತನ್ನ ಕುಲ

ಪದ್ಧತಿಯಂತೆ ಪುಣ್ಯಾಹವಾಚನಪೂರ್ವಕವಾಗಿ ಸ್ಥಂಡಿಲವನ್ನು ನಿರ್ಮಿಸಿ ಅಗ್ನಿಯನ್ನು ಪ್ರತಿಷ್ಠೆಮಾಡಿ ಮುನ್ನೂರರವತ್ತು ಹೋಮಗಳನ್ನು ಮಾಡಬೇಕು. ಬಳಿಕ ಆಚಾರ್ಯನಾಗಿದ್ದ ಬ್ರಾಹ್ಮಣನಿಗೆ ವಸ್ತ್ರಪ್ರತಿಮಾದಿಕಗಳನ್ನು ದಾನಮಾಡಿ ಭೋಜನ ತಾಂಬೂಲ ದಕ್ಷಿಣೆಗಳಿಂದ ಅವನನ್ನು ತೃಪ್ತಿಪಡಿಸಿ ಬ್ರಾಹ್ಮಣ ಸುವಾಸಿನೀ ಸಮೇತನಾಗಿ ತಾನ್ನು ಭೋಜನಮಾಡಬೇಕು. ಹೀಗೆ ಮಾಡಿದರೆ ಪರಶಿವನು ಸಂಪ್ರೀತನಾಗಿ ಶಿವಸಾಯುಜ್ಯವನ್ನು ಕರುಣಿಸುವನು! ಶಿವಪೂಜೆಯನ್ನು ನೋಡಿದಮಾತ್ರದಿಂದಲೇ ನಾಯಿಯಾಗಿದ್ದ ನಾನು ರಾಜನಾದೆನು. ಎಂದಮೇಲೆ ಶಿವಪೂಜಾಮಹಿಮೆಯನ್ನು ಏನೆಂದು ಹೇಳಲಿ! ಆದಕಾರಣ ನನ್ನ ಅರ್ಧಾಂಗಿಯಾದ ನೀನೂ ಶಿವಪೂಜೆಯನ್ನು ಮಾಡು ಎಂದು ಸುದರ್ಶನನು ಹೇಳಲು ಕುಮುದ್ವತಿಯು ಭಕ್ತಿಯಿಂದ ವೈಕುಂಠಚತುರ್ದಶೀ ಶಿವಪೂಜೆಯನ್ನು ಮಾಡಿದಳು. ಬಳಿಕ ಸುದರ್ಶನನು ಏಳನೆಯ ಜನ್ಮದ ಕೊನೆಯಲ್ಲಿ ತನ್ನ ಹೆಂಡತಿಯೊಡನೆ ಶಿವಲೋಕನ್ನು ಸೇರಿದನೆಂದು ಸೂತಮಹಾಮುನಿಯು ಹೇಳಿದ ಸ್ಕಾಂದಪುರಾಣದ ಬ್ರಹ್ಮೋತ್ತರಖಂಡದ ವೈಕುಂಠಚತುರ್ದಶೀ ಮಹಿಮೆಯನ್ನು ವರ್ಣಿಸುವ ಕಥಾಸಂಗ್ರಹವನ್ನು ಕೇಳಿದವರಿಗೂ ಹೇಳಿದವರಿಗೂ ಪರಶಿವನು ಸಕಲಸಂಪತ್ತುಗಳನ್ನು ಕೊಡುವನೆಂಬಲ್ಲಿಗೆ ಶಿವಪೂಜಾಮಹಿಮೆಯು ಮುಗಿದುದು.

॥ ಶ್ರೀಃ ಶ್ರೀಃ ಶ್ರೀಃ ॥

ಶ್ರೀಃ.

ಓಂ ಶ್ರೀ ಗೌರೀಶಂಕರಾಭ್ಯಾಂ ನಮಃ

೩೧. ಅಥ ಅಮುಕ್ತಾಭರಣ ಸಪ್ತಮಿ ವ್ರತಕಲ್ಪಃ

ವ್ರತವಿವೇಕ:—ಭದ್ರೇ ಭಾದ್ರಪದೇ ಶುಕ್ಲೇ ಸಪ್ತಮ್ಯಾಂ ಕಾರಯೇದಿದಂ । ದ್ವಾದಶವರ್ಷಾಣಿ ಕರ್ತವ್ಯಂ ವ್ರಥ ಮೇತದ್ಧಿ ಭಕ್ತಿತಃ ॥ ಆದೌ ಮಧ್ಯೇ ತಥಾ ಚಾಂತೇ ಕುರ್ಯಾದುದ್ಯಾಪನಂ ಮಹತ್ ॥ ಎಂಬಂತೆ ಭಾದ್ರಪದ ಶುದ್ಧ ಸಪ್ತಮಿಯದಿನ ಈ ವ್ರತವನ್ನು ಮಾಡಬೇಕು. ಇವಕ್ಕೆ ಹನ್ನೆರಡುಗಂಟಿನ ದಾರ ಹನ್ನೆರಡುವರ್ಷ ವ್ರತಮಾಡಿ ಆದಿಯಲ್ಲಾಗಲಿ ಮಧ್ಯದಲ್ಲಾಗಲಿ ಅಂತ್ಯದಲ್ಲಾಗಲಿ ಉದ್ಯಾಪನೆಯನ್ನು ಮಾಡಬೇಕೆಂದು ವ್ರತವಿವೇಕದಲ್ಲಿ ಹೇಳಿದೆ.

ಅಥ ಪೂಜಾವಿಧಾನಃ

ಅಥ ವ್ರತೀ ಅಮುಕ್ತಾಭರಣಸಪ್ತಮ್ಯಾಂ ಪ್ರಾತರೇವ ನದ್ಯಾದೌ ಜಲಾಶಯೇ ಸ್ನಾತ್ವಾ ಧೌತವಾಸಸೀ ಪರಿಧಾಯ ಗೃಹಮೇತ್ಯ ಮಧ್ಯಾಹ್ನಾತ್ಪೂರ್ವಮೇವ ಆಚರಿತ ಸಕಲ ನಿತ್ಯಕರ್ಮಾನುಷ್ಠಾನಸ್ಸನ್ ಪ್ರಾರೇಪ್ಸ್ಯಮಾಣ ವ್ರತಾಚರಣಾರ್ಥಂ ದೇಶಕಾಲೌ ಸಂಕೀರ್ತ್ಯ ಸಂಕಲ್ಪಂ ಕುರ್ಯಾತ್ ॥ ಶೋಭನೇ ಮುಹೂರ್ತೇ............... ಸಂವತ್ಸರೇ ದಕ್ಷಿಣಾಯನೇ ವರ್ಷರುತೌ ಭಾದ್ರಪದಮಾಸೇ ಶುಕ್ಲಪಕ್ಷೇ ಸಪ್ತಮ್ಯಾಂ ಶುಭ

ವಾಸರಯುಕ್ತಾಯಾಂ ಏವಂ ಗುಣ ವಿಶೇಷಣ ವಿಶಿಷ್ಟಾಯಾಂ ಶುಭತಿಥೌ ಶ್ರೀಮದು ಮಾಮಹೇಶ್ವರ ಪ್ರಸಾದ ಸಿದ್ಧಿದ್ವಾರಾ ಮಮ ಸಮಸ್ತ ಪಾಪಕ್ಷಯಾರ್ಥಂ ದೀರ್ಘಾಯು ರಾರೋಗ್ಯ ಐಶ್ವರ್ಯಾಭಿವೃದ್ಧ್ಯರ್ಥಂ ಪುತ್ರಪೌತ್ರಾದ್ಯತುಲಸೌಭಾಗ್ಯ ಸುಖಾ ವಾಪ್ತ್ಯರ್ಥಂ ಶಿವಲೋಕ ಪ್ರಾಪ್ತಿಕಾಮಾದಿ ಸಕಲಾಭೀಷ್ಟಸಿದ್ಧ್ಯರ್ಥಂ ಅಮುಕ್ತಾಭರಣ ಸಪ್ತಮೀ ವ್ರತಮಹಂ ಕರಿಷ್ಯೇ॥ಇತಿ ಸಂಕಲ್ಪ್ಯ॥ ಪೀಠಾದೌ ನಿರ್ಮಿತ ಪೂಜಾಮಂಡಲೇ ತಂಡುಲಾದಿಧಾನ್ಯರಾಶಿಂ ಕೃತ್ವಾ ತದುಪರಿ ಉಮಾಸಹಿತ ಮಹೇಶ್ವರಂ ವಿಲಿಖ್ಯ ತದಗ್ರೇ ಸೌವರ್ಣಂ ರಾಜತಂ ವಾ ದ್ವಾದಶಗ್ರಂಥಿ ಸಂಯುಕ್ತಂ ದೋರಂ ವಾ ಸೂತ್ರಂ ವಾ ಸಂಸ್ಥಾಪ್ಯ ಸಮ್ಯಕ್ ಪೂಜಯೇತ್ ॥ ಅಥ ಕಲಶಪೂಜಾಂ ಕುರ್ಯಾತ್ (೮ನೇ ಪುಟ ನೋಡಿರಿ) ಕಲಶಸ್ಯ ಮುಖೇ....................ಸನ್ನಿಧಿಂ ಕುರು ॥ ಆದೌ ನಿರ್ವಿ ಘ್ನತಾಸಿದ್ಧ್ಯರ್ಥಂ ಮಹಾಗಣಪತಿಪೂಜಾಂ ಕರಿಷ್ಯೇ (೮ನೆ ಪುಟ ನೋಡಿರಿ) ಏವಂ ಗಣಪತಿ ಪೂಜಾನಂತರಂ ಪ್ರಾಣಪ್ರತಿಷ್ಠಾಪನಂ ಕುರ್ಯಾತ್ ಅಸ್ಯ ಶ್ರೀ ಉಮಾಮಹೇ ಶ್ವರ ಪ್ರಾಣಪ್ರತಿಷ್ಠಾಪನ ಮಹಾಮಂತ್ರಸ್ಯ ಇತಿ (೧೦ನೆ ಪುಟ ನೋಡಿರಿ) ಏವಂ ಪ್ರಾಣಪ್ರತಿಷ್ಠಾಪನಾನಂತರಂ ಶ್ರೀಮದುಮಾಮಹೇಶ್ವರಂ ಧ್ಯಾಯೇತ್.

ಅಥ ಧ್ಯಾನಂ;—ಉಮಾಶೋಭಿತವಾಮಾಂಗಂ ಶುದ್ಧಸ್ಫಟಿಕಸನ್ನಿಭಂ ॥ ಬಾಹುಭಿಃ ಶೂಲ ಡಮರು ಕಪಾಲಾಭಯ ಸೇವಿತಂ ॥ ಚತುರ್ಭಿಃ ಸಹಿತೈಃ ಹಸ್ತೈಃ ಶಂಕರಂ ಲೋಕಶಂಕರಂ। ಧ್ಯಾನಂ ಸಮರ್ಪಯಾಮಿ(೧) ತ್ರಯಂಬಕಂ ಯಜಾಮಹೇ ಸುಗಂಧಿಂ ಪುಷ್ಟಿವರ್ಧನಂ । ಉರ್ವಾರುಕಮಿವ ಬಂಧನಾನ್ಮೃತ್ಯೋರ್ಮುಕ್ಷೀಯಮಾಮೃ ತಾತ್॥ (೧)ಎಂಬ ಸಂಖ್ಯೆಹಾಕಿರುವ ಕಡೆಗಳಲ್ಲಿ ಈ ಮಂತ್ರವನ್ನು ಹೇಳಿಕೊಳ್ಳಬೇಕು. ಓಂ ಸಹಸ್ರಶೀರ್ಷಾ ಪುರುಷಃ ಸಹಸ್ರಾಕ್ಷಸ್ಸಹಸ್ರಪಾತ್ । ಸ ಭೂಮಿಂ ವಿಶ್ವತೋ ವೃತ್ವಾತ್ಯತಿಷ್ಠದ್ದಶಾಂಗುಲಂ॥ ಓಂ ಹಿರಣ್ಯವರ್ಣಾಂ ಹರಿಣೀಂ ಸುವರ್ಣರಜತಸ್ರಜಾಂ॥ ಚಂದ್ರಾಂ ಹಿರಣ್ಮಯೀಂ ಲಕ್ಷ್ಮೀಂ ಜಾತವೇದೋ ಮಮಾವಹ ॥ ಉಮಾಸಹಿತ ದೇವೇಶ ಭವ ತ್ವಂ ಭಕ್ತವತ್ಸಲ ॥ ಗೃಹಾಣ ಮತ್ಕೃತಾಂ ಪೂಜಾಂ ಪಾರ್ವತೀಸಹಿತ ಪ್ರಭೋ॥ ಓಂ ಶ್ರೀ ಉಮಾಮಹೇಶ್ವರಾಭ್ಯಾಂ ನಮಃ ಆವಾಹನಂ ಸಮರ್ಪಯಾಮಿ ॥ ಮೌಕ್ತಿಕೈಃ ಪುಷ್ಯರಾಗೈಶ್ಚ ನಾನಾರತ್ನೋಪಶೋಭಿತಂ ॥ ದಿವ್ಯಸಿಂಹಾಸನಂ ದೇವ ಪ್ರೀತ್ಯರ್ಥಂ ಪ್ರತಿಗೃಹ್ಯತಾಂ ॥ ಪುರುಷ ಏವೇದಂ ಸರ್ವಂ........ರೋಹತಿ॥ ತಾಂ ಮ ಆವಹ ಜಾತವೇದೋ ಲಕ್ಷ್ಮೀಮನಪಗಾಮಿನೀಂ। ಯಸ್ಯಾಂ ಹಿರಣ್ಯಂ ವಿಂದೇ ಯಂ ಗಾಮಶ್ವಂ ಪುರುಷಾನಹಂ ॥ ತ್ರಿಯಂಬಕಂ (೧ನೆ ಮಂತ್ರ ನೋಡಿರಿ ಮಾಮೃ ತಾತ್ ॥ ಸಿಂಹಾಸನಂ ಸಮರ್ಪಯಾಮಿ॥ ಸ್ವರ್ಣಪಾತ್ರಸ್ಥಿತಂ ದಿವ್ಯಂ ಜಾಹ್ನವೀ ಜಲ ಸಂಯುತಂ । ಗಂಧಪುಷ್ಪಾಕ್ಷತೈರ್ಯುಕ್ತಂ ಪಾದ್ಯಂ ಸ್ವೀಕುರು ಶಂಕರ ॥ ಏತಾವಾನಸ್ಯ ಮಹಿಮಾ...........ದಿವಿ ॥ ಅಶ್ವಪೂರ್ವಾಂ ರಥಮಧ್ಯಾಂ ಹಸ್ತಿನಾದ ಪ್ರಮೋದಿನೀಂ

ಶ್ರಿಯಂ ದೇವೀಮುಪಹ್ವಯೇ ಶ್ರೀರ್ಮಾದೇವೀರ್ಜುಷತಾಂ॥೧॥ತ್ರ್ಯಂಬಕಂ........ ಮಾಮೃತಾತ್ ॥ ಪಾದ್ಯಂ ಸಮರ್ಪಯಾಮಿ ॥ ಪವಿತ್ರೋದಕಸಂಯುಕ್ತಂ ಸುವರ್ಣ ಕಲಶಸ್ಥಿತಂ ॥ ಅರ್ಘ್ಯಂ ಗೃಹಾಣ ದೇವೇಶ ಶೂಲಪಾಣೆ ನಮೋಽಸ್ತು ತೇ ॥ ತ್ರಿಪಾ ದೂರ್ಧ್ವ........ಅಭಿ ಕಾಂ ಸ್ಮಿತಾಂ ಹಿರಣ್ಯಪ್ರಾಕಾರಾಮಾರ್ದ್ರಾಂ ಜ್ವಲಂತೀಂ ತೃಪ್ತಾಂ ತರ್ಪಯಂತೀಂ। ಪದ್ಮೇ ಸ್ಥಿತಾಂ ಪದ್ಮವರ್ಣಾಂ ತಾಮಿಹೋಪಹ್ವಯೇ ಶ್ರಿಯಂ॥ ೧ ತ್ರಿಯಂಬಕಂ—....ಮಾಮೃತಾತ್ ಅರ್ಘ್ಯಂ ಸಮರ್ಪಯಾಮಿ ॥ ಸರ್ವೇ ತೀರ್ಥಾ ಹೃತೈಃ ಸ್ವಚ್ಛೈಃ ಸ್ವರ್ಣಪಾತ್ರಸ್ಥಿತೈಃ ಜಲೈಃ ॥ ಆಚಮ್ಯತಾಂ ಸುರಶ್ರೇಷ್ಠ ಮಯಾ ಭಕ್ತ್ಯಾ ಪ್ರಕಲ್ಪಿತೈಃ ॥ ತಸ್ಮಾದ್ವಿರಾಡಜಾಯತ........ಮಥೋಪುರಃ। ಚಂದ್ರಾಂ ಪ್ರಭಾಸಾಂ ಯಶಸಾ ಜ್ವಲಂತೀಂ । ಶ್ರಿಯಂ ಲೋಕೇ ದೇವಜುಷ್ಟಾಮುದಾರಾಂ । ಅಲಕ್ಷ್ಮೀರ್ಮೇನಶ್ಯ ತಾಂ ತ್ವಾ ವೃಣೇ ॥ ೧ ತ್ರಯಂಬಕಂ...........ಮಾಮೃತಾತ್ ॥ ಆಚಮನಂ ಸಮರ್ಪಯಾಮಿ॥ ಗಂಧೈಃ ಪಂಚಾಮೃತೈಃ ಸ್ನಿಗ್ಧೈಃ ಪಂಚಕುಂಭೋದ ಕೈಶ್ಶುಭೈಃ ॥ ಸ್ನಪಯಾಮಿ ಮಹಾದೇವ ಭವಂತಂನಿತ್ಯನಿರ್ಮಲಂ॥ಪಂಚಾಮೃತಸ್ನಾನಂ ಸಮರ್ಪಯಾಮಿ ॥ (೧೯ನೆ ಪುಟ ನೋಡಿರಿ) ತ್ರಿಯಂಬಕಾಯ ಶರ್ವಾಯ ಸರ್ವ ಭೂತಪ್ರಿಯಾಯ ಚ। ಸ್ನಾನೇನಾನೇನ ದೇವೇಶ ಸುಪ್ರೀತೋ ಭವ ಶಂಕರ॥ಯತ್ಪುರು ಷೇಣ ಹವಿಷಾ........ಶರದ್ಧವಿಃ ॥ ಆದಿತ್ಯವರ್ಣೇ ತಪಸೋಽಧಿಜಾತೋ ವನಸ್ಪತಿಸ್ತವ ವೃಕ್ಷೋಥ ಬಿಲ್ವಃ॥ತಸ್ಯ ಫಲಾನಿ ತಪಸಾ ನುದಂತು ಮಾಯಾಂತರಾ ಯಾಶ್ಚ ಬಾಹ್ಯಾ ಅಲಕ್ಷ್ಮೀಃ॥ ಆಪೋಹಿಷ್ಠೇತಿ ॥ ಶುದ್ಧೋದಕಸ್ನಾನಂ ಸಮರ್ಪಯಾಮಿ ॥ ಗಜಾನನ ಪರೀವೀತವ್ಯಾಘ್ರಚರ್ಮಾಂಬರಪ್ರಿಯ॥ ದುಕೂಲವಸ್ತ್ರಯುಗಳಂ ಗೃಹ್ಯತಾಂ ಪಾರ್ವತೀ ಪತೇ ॥ ಸಪ್ತಾಸ್ಯಾಸನ್........ಪಶುಂ॥ಉಪೈತು ಮಾಂ ದೇವಸಖಃ ಕೀರ್ತಿಶ್ಚ ಮಣಿನಾ ಸಹ॥ ಪ್ರಾದುರ್ಭೂತೋಽಸ್ಮಿ ರಾಷ್ಟ್ರೇಽಸ್ಮಿನ್ ಕೀರ್ತಿಂವೃದ್ಧಿಂ ದದಾತು ಮೇ (೧) ತ್ರಯಂ ಬಕಂ....ಮಾಮೃತಾತ್॥ವಸ್ತ್ರಯುಗ್ಮಂ ಸಮರ್ಪಯಾಮಿ॥ ಉಪವೀತಂ ಗೃಹಾಣೇದಂ ನಾಗಾಭರಣಭೂಷಿತ ॥ ಬ್ರಹ್ಮಸೂತ್ರಂ ಚೋತ್ತರೀಯಂ ಸುವರ್ಣಪರಿಕಲ್ಪಿತಂ ॥ ತಂ ಯಜ್ಞಂ ಬರ್ಹಿಷಿ....ಶ್ಚಯೇ॥ಕ್ಷುತ್ಪಿಪಾಸಾಮಲಾಂ ಜ್ಯೇಷ್ಠಾ ಮಲಕ್ಷ್ಮೀಂ ನಾಶಯಾ ಮ್ಯಹಂ ॥ ಅಭೂತಿಮಸಮೃದ್ಧಿಂ ಚ ಸರ್ವಾನ್ನಿರ್ಣುದ ಮೇ ಗೃಹಾತ್ (೧) ತ್ರಯಂ ಬಕಂ—ಮಾಮೃತಾತ್ ॥ ಯಜ್ಞೋಪವೀತಮಿತಿ ಉಪವೀತಂ ಸಮರ್ಪಯಾಮಿ ॥ ನಾಗಾಭರಣ ನಾಗೇಂದ್ರ ಕಂಕಣಾನಂತವೈಭವ ॥ ನಾನಾವಿಧಾನಲಂಕಾರಾನ್ ಗೃಹಾಣ ಗಿರಿಜಾಪತೇ ॥ ಆಭರಣಂ ಸಮರ್ಪಯಾಮಿ ॥ ವಿಭೂತಿ ಭೂಷಿತ ಶ್ರೀಮನ್ ವಿಭೂತ್ಯೈರಭಿವಾಹಿತಂ । ಸುಗಂಧಂ ಚಂದನಂ ಚಾರು ಗೃಹ್ಯತಾ ಮನುಲೇಪನಂ ॥ ತಸ್ಮಾದ್ಯಜ್ಞಾ....ಯೇ ॥ ಗಂಧದ್ವಾರಾಂ ದುರಧರ್ಷಾಂ ನಿತ್ಯ ಪುಷ್ಟಾಂ ಕರೀಷಿಣೀಂ। ಈಶ್ವರೀಂ ಸರ್ವಭೂತಾನಾಂ ತಾಮಿ ಹೋಪಹ್ವಯೇ ಶ್ರಿಯಂ॥

(೧) ತ್ರಿಯಂಬಕಂ....ಮಾಮೃತಾತ್ ॥ ಗಂಧಂ ಸಮರ್ಪಯಾಮಿ ॥ ಸುಗಂಧೀನಿ ಚ ಪುಷ್ಪಾಣಿ ನಾನಾ ಗಂಧಾಕ್ಷತಾನಿ ಚ ॥ ಸಂಪಾದಿತಾನಿ ರಮ್ಯಾಣಿ ಗೃಹಾಣಾಭೀಷ್ಟ ದಾಯಕ ॥ ತಸ್ಮಾದ್ಯಜ್ಞಾತ್ಸರ್ವ....ಜಾಯತ । ಓಂ ಶ್ರೀಮಹೇಶ್ವರಾಯ ನಮಃ । ತಿಲಾಕ್ಷತ ಸಹಿತ ಪುಷ್ಪಾಣಿ ಸಮರ್ಪಯಾಮಿ ॥ ಓಂ ಶ್ರೀ ಉಮಾದೇವ್ಯೈ ನಮಃ ಹರಿದ್ರಾ ಚೂರ್ಣಂ ಕುಂಕುಮ ಚೂರ್ಣಂ ಮಂಗಳದ್ರವ್ಯ ಮಧುರಪುಷ್ಪಾಣಿ ಸಮರ್ಪಯಾಮಿ ॥ ಜಾತೀಪುನ್ನಾಗವಕುಳ ದೇವದಾರುಶ್ಚ ಚಂಪಕೈಃ । ನಾನಾ ಪುಷ್ಪೈಸ್ತು ಸಂಪೂಜ್ಯ ಪ್ರಸಾದಂ ಕುರು ಮೇ ಶಿವ ॥ ತಸ್ಮಾದಶ್ವಾ....ವಯಃ ॥ ಮನಸಃ ಕಾಮ ಮಾಕೂತಿಂ ವಾಚಸ್ಸತ್ಯ ಮಶೀಮಯಿ । ಪಶೂನಾಂ ರೂಪಮನ್ನಸ್ಯ ಭಕ್ತಿರ್ಮೇ ಕ್ರಿಯತಾಂ ಯಶಃ ॥ ಓಂ ಶ್ರೀ ಉಮಾಮಹೇಶ್ವರಾಭ್ಯಾಂ ನಮಃ ಪುಷ್ಪಾಣಿ ಸಮರ್ಪಯಾಮಿ ॥

ಅಥಾಂಗಪೂಜಾ

ಓಂ ಶ್ರೀಗೌರ್ಯೈ ನಮಃ-ಆನಂದಾಯ ನಮಃ	ಪಾದೌ	ಪೂಜಯಾಮಿ
ಓಂ ಶೋಕವಿನಾಶಿನ್ಯೈ ನಮಃ-ಶರ್ವಾಯ ನಮಃ	ಜಂಘೇ	ಪೂಜಯಾಮಿ
ಓಂ ಶರ್ವಾಣ್ಯೈ ನಮಃ-ಶಂಭವೇ ನಮಃ	ಜಾನುನೀ	ಪೂಜಯಾಮಿ
ಓಂ ಶಿವಾಯೈ ನಮಃ ಶುಭಾಯ ನಮಃ	ಊರೂ	ಪೂಜಯಾಮಿ
ಓಂ ಆನಂದಿನ್ಯೈ ನಮಃ-ಆನಂದಾಯ ನಮಃ	ಕಟಿಂ	ಪೂಜಯಾಮಿ
ಓಂ ಮಾಧವ್ಯೈ ನಮಃ-ಭವಾಯ ನಮಃ	ನಾಭಿಂ	ಪೂಜಯಾಮಿ
ಓಂ ಆನಂದಕಾರಿಣ್ಯೈ ನಮಃ-ಶಂಕರಾಯ ನಮಃ	ಹಸ್ತೌ	ಪೂಜಯಾಮಿ
ಓಂ ಉತ್ಕಂಠ್ಯೈ ನಮಃ-ನೀಲಕಂಠಾಯ ನಮಃ	ಕಂಠಂ	ಪೂಜಯಾಮಿ
ಓಂ ರುದ್ರಾಣ್ಯೈ ನಮಃ-ರುದ್ರಾಯ ನಮಃ	ಕರೌ	ಪೂಜಯಾಮಿ
ಓಂ ಲಲಿತಾಯೈ ನಮಃ-ನೃತ್ತಶೀಲಾಯ ನಮಃ	ಬಾಹೂ	ಪೂಜಯಾಮಿ
ಓಂ ವಿಲಾಸಿನ್ಯೈ ನಮಃ-ವೃಷಭೇಶಾಯ ನಮಃ	ಮುಖಂ	ಪೂಜಯಾಮಿ
ಓಂ ವಿಶ್ವಚಕ್ರ್ಯೈ ನಮಃ-ವಿಶ್ವಚಕ್ರಾಯ ನಮಃ	ದಂತಾನ್	ಪೂಜಯಾಮಿ
ಓಂ ಪದ್ಮಾಕ್ಷ್ಯೈ ನಮಃ-ತ್ರಿಲೋಚನಾಯ ನಮಃ	ನೇತ್ರೇ	ಪೂಜಯಾಮಿ
ಓಂ ಕಾಮೇಶ್ವರ್ಯೈ ನಮಃ-ಕಾಮೇಶಾಯ ನಮಃ	ಭ್ರುವೌ	ಪೂಜಯಾಮಿ
ಓಂ ಇಂದ್ರಾಣ್ಯೈ ನಮಃ ಹವ್ಯವಾಹನಾಯ ನಮಃ	ಲಲಾಟಂ	ಪೂಜಯಾಮಿ
ಓಂ ಸ್ವಾಹಾಯೈ ನಮಃ-ಗಂಗಾಧರಾಯ ನಮಃ	ಮಕುಟಂ	ಪೂಜಯಾಮಿ
ಓಂ ಸರ್ವೇಶ್ವರ್ಯೈ ನಮಃ-ಸರ್ವೇಶ್ವರಾಯ ನಮಃ	ಶಿರಃ	ಪೂಜಯಾಮಿ
ಓಂ ವಿಶ್ವರೂಪಿಣ್ಯೈ ನಮಃ-ವಿಶ್ವರೂಪಾಯ ನಮಃ	ಸರ್ವಾಂಗಾನಿ	ಪೂಜಯಾಮಿ

ಅಥ ದೋರಗ್ರಂಥಿಪೂಜಾ—ಓಂ ಕಾಮರೂಪಾಯ ನಮಃ ಪ್ರಥಮಗ್ರಂಥಿಂ ಪೂಜಯಾಮಿ ॥ ಓಂ ಅದ್ವೈತರಹಿತಾಯ ನಮಃ ದ್ವಿತೀಯಗ್ರಂಥಿಂ ಪೂಜಯಾಮಿ ॥

ಓಂ ಹರಾಯ ನಮಃ ತೃತೀಯಗ್ರಂಥಿಂ ಪೂಜಯಾಮಿ ॥ ಓಂ ಶ್ರೀ ಚಂದ್ರಶೇಖರಾಯ ನಮಃ । ಚತುರ್ಥಗ್ರಂಥಿಂ ಪೂಜಯಾಮಿ ॥ ಓಂ ಸ್ಮರಹರಾಯ ನಮಃ ಪಂಚಮಗ್ರಂಥಿಂ ಪೂಜಯಾಮಿ ॥ ಓಂ ಪಾರ್ವತೀಪ್ರಿಯಾಯ ನಮಃ ಷಷ್ಠಗ್ರಂಥಿಂ ಪೂಜಯಾಮಿ ॥ ಓಂ ಮದನಾರಯೇ ನಮಃ ಸಪ್ತಮಗ್ರಂಥಿಂ ಪೂಜಯಾಮಿ ॥ ಓಂ ಸೋಮಸೂರ್ಯಾಗ್ನಿಲೋಚನಾಯ ನಮಃ ಅಷ್ಟಮಗ್ರಂಥಿಂ ಪೂಜಯಾಮಿ ॥ ಓಂ ಪ್ರಮಥಾಧಿಪಾಯ ನಮಃ ನವಮಗ್ರಂಥಿಂ ಪೂಜಯಾಮಿ ॥ ಓಂ ಹರಿಬ್ರಹ್ಮೇಂದ್ರಾರ್ಚಿತಾಯ ನಮಃ ದಶಮಗ್ರಂಥಿಂ ಪೂಜಯಾಮಿ ॥ ಓಂ ಅರ್ಧನಾರೀಶ್ವರಾಯ ನಮಃ ಏಕಾದಶಗ್ರಂಥಿಂ ಪೂಜಯಾಮಿ ॥ ಓಂ ಉಮಾಮಹೇಶ್ವರಾಯ ನಮಃ ದ್ವಾದಶ ಗ್ರಂಥಿಂ ಪೂಜಯಾಮಿ ॥

ಅಥ ದಿಕ್ಪಾಲಕಪೂಜಾ:—ಓಂ ಇಂದ್ರಾಯ ನಮಃ । ಓಂ ಅಗ್ನಯೇ ನಮಃ॥ ಓಂ ಯಮಾಯ ನಮಃ । ಓಂ ನಿಋತಯೇ ನಮಃ । ಓಂ ವರುಣಾಯ ನಮಃ । ಓಂ ವಾಯವೇ ನಮಃ । ಓಂ ಕುಬೇರಾಯ ನಮಃ । ಓಂ ಈಶಾನಾಯ ನಮಃ ಇತಿ ದಿಕ್ಪಾಲಪೂಜಾಂ ಸಮರ್ಪಯಾಮಿ ॥ ಇಲ್ಲಿ ಶಿವಾಷ್ಟೋತ್ತರ, ಲಲಿತಾಷ್ಟೋತ್ತರ ಸಹಸ್ರನಾಮಗಳಿಂದ ಆವರವರ ಇಷ್ಟಾನುಸಾರ ಪೂಜಿಸಬಹುದು. ಶಿವಾಷ್ಟೋತ್ತರವನ್ನು ಕೇದಾರೇಶ್ವರವ್ರತ ೧೩೪ನೆ ಪುಟದಲ್ಲಿ ನೋಡಿರಿ.

ನಮಸ್ತೇ ದಕ್ಷಯಜ್ಞಘ್ನ ಸರ್ವಲೋಕಪಿತಾಮಹ॥ ಗೌರ್ಯಾ ಸಹ ಮಹಾದೇವ ಧೂಪೋಽಯಂ ಪ್ರತಿಗೃಹ್ಯತಾಂ ॥ ಯತ್ಪುರುಷಂ ವ್ಯದಧುಃ........ಉಚ್ಯೇತೇ । ಕರ್ದಮೇನ ಪ್ರಜಾ ಭೂತಾ ಮಯಿ ಸಂಭವ ಕರ್ದಮ॥ ಶ್ರಿಯಂ ವಾಸಯ ಮೇ ಕುಲೇ ಮಾತರಂ ಪದ್ಮಮಾಲಿನೀಂ ॥೧॥ ತ್ರಿಯಂಬಕಂ ಯಜಾಮಹೇ................ಮಾಮೃತಾತ್ ಧೂಪಮಾಘ್ರಾಪಯಾಮಿ॥ ನಮಸ್ತೇ ಜಗದೀಶಾಯ ನಮಸ್ತೇ ತ್ರಿಪುರಾಂತಕ॥ ದೀಪಂ ಗೃಹಾಣ ದೇವೇಶ ತ್ರೈಲೋಕ್ಯ ತಿಮಿರಾಪಹಂ॥ ಬ್ರಾಹ್ಮಣೋಽಸ್ಯ ಮುಖಮಾಸೀತ್........ಶೂದ್ರೋ ಅಜಾಯತ । ಅಪಸ್ಸೃಜಂತು ಸ್ನಿಗ್ಧಾನಿ ಚಿಕ್ಲೀತ ವಸ ಮೇ ಗೃಹೇ । ನಿಜದೇವೀಮಾತರಂ ಶ್ರಿಯಂ ವಾಸಯ ಮೇ ಕುಲೇ ॥ ೧ ತ್ರಿಯಂಬಕ........ಮಾಮೃತಾತ್॥ ದೀಪಂ ದರ್ಶಯಾಮಿ ॥ ಪಕ್ವಾನ್ನಂ ಷಡ್ರಸೋಪೇತಂ ನಾನಾಭಕ್ಷ್ಯೈಶ್ಚ ಸಮನ್ವಿತಂ॥ ನೈವೇದ್ಯ ಗೃಹ್ಯತಾಂ ದೇವ ಭುಕ್ತಿಮುಕ್ತಿಪ್ರದೋ ಭವ॥ ಚಂದ್ರಮಾ ಮನಸೋ ಜಾತಃ ಚಕ್ಷೋಸ್ಸೂರ್ಯೋ ಅಜಾಯತ ॥ ಮುಖಾದಿಂದ್ರಶ್ಚಾಗ್ನಿಶ್ಚ ಪ್ರಾಣಾದ್ವಾಯುರಜಾಯತ॥ ಆರ್ದ್ರಾಂ ಯಃ ಕರಿಣೀಂ ಯಷ್ಟಿಂ ಸುವರ್ಣಾಂ ಹೇಮಮಾಲಿನೀಂ। ಸೂರ್ಯಾಂ ಹಿರಣ್ಮಯೀಂ ಲಕ್ಷ್ಮೀಂ ಜಾತವೇದೋ ಮಮಾವಹ॥ ॥೧॥ ತ್ರಿಯಂಬಕಂ ಯಜಾಮಹೇ...........ಮಾಮೃತಾತ್ ॥ ವಿಶ್ವಮಿತ್ರ ಋಷಿರಿತಿ ನಾನಾವಿಧನ್ನೈವೇದ್ಯಂ ಸಮರ್ಪಯಾಮಿ ॥ ತಾಂಬೂಲಮುತ್ತಮಂ

ದೇವ ಕರ್ಪೂರೇಲಾದಿ ಸಂಯುತಂ ॥ ಸುಗಂಧಚೂರ್ಣ ಸಂಯುಕ್ತಂ ತಾಂಬೂಲಂ ಪ್ರತಿಗೃಹ್ಯತಾಂ ॥ ನಾಭ್ಯಾ ಆಸೀದಂತರಿಕ್ಷಂ...........ಅಕಲ್ಪಯನ್ ॥ ಆರ್ದ್ರಾಂ ಪುಷ್ಕರಿಣೀಂ ಪುಷ್ಟಿಂ ಪಿಂಗಳಾಂ ಪದ್ಮಮಾಲಿನೀಂ । ಚಂದ್ರಾಂ ಹಿರಣ್ಮಯೀಂ ಲಕ್ಷ್ಮೀಂ ಜಾತವೇದೋ ಮಮಾವಹ ॥ (೧) ತ್ರಿಯಂಬಕಂ ಯಜಾಮಹೇ........ ಮಾಮೃತಾತ್ ॥ ಪೂಗೀಫಲ ತಾಂಬೂಲಂ ಸಮರ್ಪಯಾಮಿ ॥ ಹಿರಣ್ಯಗರ್ಭಸ್ಸಮವರ್ತತಾಗ್ರೇ ಭೂತಸ್ಯ। ಜಾತಃ ಪತಿರೇಕ ಆಸೀತ್। ಸದಾಧಾರ ಪೃಥಿವೀಮ್ಯುತೇಮಾಂ ತಸ್ಮೈ ದೇವಾಯ ಹವಿಷಾ ವಿಧೇಮ॥ ಸುವರ್ಣಪುಷ್ಪ ದಕ್ಷಿಣಾಂ ಸಮರ್ಪಯಾಮಿ ॥ ವೇದಾಹಮೇತಂ ಪುರುಷಂ ಮಹಾಂತಂ........ಅಭಿವದನ್ಯದಾಸ್ತೇ॥ ತಾಂ ಮ ಆವಹ ಜಾತವೇದೋ । ಲಕ್ಷ್ಮೀಮ ನಪಗಾಮಿನೀಂ । ಯಸ್ಯಾಂ ಹಿರಣ್ಯಂ ವಿಂದೇಯಂ ಗಾವೋದಾಸೋಶ್ವಾನ್ ಪುರುಷಾನಹಂ ॥ (೧) ತ್ರಿಯಂಬಕಂ ಯಜಾಮಹೇ........ ಮಾಮೃತಾತ್ ನೀರಾಜನಂ ಸಮರ್ಪಯಾಮಿ ॥ ರಾಜಾಧಿರಾಜಾಯ ಪ್ರಸಹ್ಯಸಾಹಿನೇ ನಮೋ ವಯಂ ವೈಶ್ರವಣಾಯ ಕುರ್ಮಹೇ ॥ ಸಮೇ ಕಾಮಾನ್ ಕಾಮಕಾಮಾಯ ಮಹ್ಯಂ ಕಾಮೇಶ್ವರೋ ವೈಶ್ರವಣೋ ದದಾತು ॥ ಮಂತ್ರಪುಷ್ಪಂ ಸಮರ್ಪಯಾಮಿ ॥ ಉಮಾಪತೇ ಪಶುಪತೇ ತ್ರೈಲೋಕ್ಯಾಧಿಪತೇ ಶಿವ । ಪ್ರದಕ್ಷಿಣಂ ಕರೋಮಿ ತ್ವಾಂ ಉಮಾಪುತ್ರ ಫಲಪ್ರದ॥ ಯಾನಿಕಾನಿ ಚ ಪಾಪಾನಿ ಜನ್ಮಾಂತರ ಕೃತಾನಿಚ। ತಾನಿತಾನಿ ಪ್ರಣಶ್ಯಂತು ಪ್ರದಕ್ಷಿಣ ಪದೇಪದೇ॥ ಪ್ರದಕ್ಷಿಣಂ ಸಮರ್ಪಯಾಮಿ ॥ ಉಮಾಪತೇ ಪಶುಪತೇ ತ್ರೈಲೋಕ್ಯಾಧಿಪತೇ ಪ್ರಭೋ। ಗೃಹಾಣಾರ್ಘ್ಯಂ ಮಯಾ ದತ್ತಂ ಭವತಾಂ ಮಮ ಸರ್ವದಾ ॥ ಪ್ರಸನ್ನಾರ್ಘ್ಯಂ ಸಮರ್ಪಯಾಮಿ ॥ ವಿಶ್ವಕಾಯೌ ವಿಶ್ವಮುಖೌ ವಿಶ್ವಪಾದಕರೌ ಶಿರೌ। ಪ್ರಸನ್ನವದನೌ ವಂದೇ ಪಾರ್ವತೀಪರಮೇಶ್ವರೌ॥ ನಮಸ್ಕಾರಂ ಸಮರ್ಪಯಾಮಿ॥ ಉಮಾಮಹೇಶ್ವರಾವೇತೌ ಸರ್ವಲೋಕಪಿತಾಮಹೌ ॥ ವ್ರತೇನಾನೇನ ಸುಪ್ರೀತೌ ಭವತಾಂ ಮಮ ಸರ್ವದಾ॥ ಇತಿ ಪ್ರಾರ್ಥನಾಂ ಸಮರ್ಪಯಾಮಿ ॥ ವಂಧ್ಯಾತ್ವನಾಶನಾರ್ಥಾಯ ಪುತ್ರಪೌತ್ರಾಭಿವೃದ್ಧಯೇ ॥ ಮಾಹೇಶ್ವರಮಿದಂ ಸೂತ್ರಂ ಧಾರಯಾಮಿ ಮಹೇಶ್ವರ ॥ ಇತಿ ಮಂತ್ರೇಣ ದೋರಗ್ರಹಣಂ ॥ ನಮಃ ಪ್ರಮಥನಾಥಾಯ ನಮಃ ಕೈಲಾಸವಾಸಿನೇ । ದೋರಗ್ರಂಧಿಷು ಸಂಸ್ಥಾಯ ನವ ಸೂತ್ರ ಸ್ವರೂಪಿಣಿ ॥ ಇತಿ ದೋರಪ್ರಾರ್ಥನಾ ॥ ಸಂತಾನ ಸೌಖ್ಯಮುಪಲಬ್ಧುಮತಿ ಪ್ರಹೃಷ್ಟಾಃ ವಾಂಛಂತಿ ನಿರ್ಮಲಗುಣಾ ವಸುದೇವ ಮುಖ್ಯಾಃ। ಸಂಪೂಜ್ಯ ಶೈಲ ತನಯಾಪತಿಮಾದಿದೇವಂ ಬಧ್ನಂತಿ ದಕ್ಷಿಣಕರೇ ವರದೋರಕಂ ತೇ ॥ ಇತಿ ದೋರ ಬಂಧನಂ ॥ ಗೋತ್ರಜಾ ಪತಯೇ ತುಭ್ಯಂ ನೇತ್ರತ್ರಯವಿಶೋಭಿತ ॥ ವಿಸೃಜಾಮಿ ಮಹಾದೇವ ಜೀರ್ಣದೋರ ನಮೋಸ್ತು ತೇ ॥ ಇತಿ ಜೀರ್ಣದೋರ ವಿಸರ್ಜನಂ ॥ ಆದಿತ್ಯತೇಜಸೋತ್ಪನ್ನಾಃ ಧಾತ್ರೀಕರವಿನಿರ್ಮಿತಾಃ । ವಟಕಾಃ

ಕಾಮವಾನಿತ್ಯಂ ಶಾಂತಿಂ ಯಚ್ಛಂತಿ ದಾನತಃ ॥ ವಾಯನದಾನಂ ॥ ತತ್ರ ಮಂತ್ರಃ ॥ ಉಮೇಶ ಪ್ರತಿಗೃಹ್ಣಾತು ಉಮೇಶೋ ವೈ ದದಾತಿ ಚ ॥ ಉಮೇಶಸ್ತಾರಕೋಭಾಭ್ಯಾಂ ಉಮೇಶಾಯ ನಮೋನಮಃ ॥ ಅತಃ ಛತ್ರಚಾಮರಾದಿ ಪುನಃ ಪೂಜಾನಂತರಂ ಯಸ್ಯ ಸ್ಮೃತ್ಯಾಚೇತಿ........ಅನಯಾ ಮಯಾಕೃತ ಷೋಡಶೋಪಚಾರ ಪೂಜಯಾ ಶ್ರೀ ಉಮಾಮಹೇಶ್ವರಃ ಸುಪ್ರೀತಃ ವರದೋಭವತು, ಇತಿ ಪೂಜಾವಿಧಾನಂ ಸಂಪೂರ್ಣಂ ॥

ಅಥ ಅಮುಕ್ತಾಭರಣಸಪ್ತಮೀ ವ್ರತಕಥಾ

ಪುರಾಸೂತಂ ಮಹಾತ್ಮಾನಂ ದೃಷ್ಟ್ವಾ ಸತ್ಕಾರಪೂರ್ವಕಂ । ತತಸ್ತು ಮುನಯಃ ಸರ್ವೇಮುನಿಂ ಪ್ರಾಂಜಲಯೋ ಬ್ರುವನ್ ॥ ಪದ್ಮನಃ ಶ್ರೋತುಮಿಚ್ಛಾಮಃ ವ್ರತಂ ಸಂಪತ್ಕರಂ ಶುಭಂ॥ ಸೂತ ಉವಾಚ॥ ವಂಧ್ಯಾತ್ವನಾಶನಂ ಬ್ರೂಹಿ ವ್ರತಂ ಕೃಷ್ಣ ಮಹಾಮತೇ ।|ಶ್ರೀಕೃಷ್ಣ ಉವಾಚ॥ ಮುನೀಂದ್ರರೋಮ ಶೋ ನಾಮ ಮಥುರಾಖ್ಯಾಂ ಪುರಂಗತಃ। ಅರ್ಚಿತೋ ವಸುದೇವೇನ ದೇವಕ್ಯಾ ಚ ಯುಧಿಷ್ಠಿರ ॥ ಉಪವಿಷ್ಟಃ ಕಥಾಃ ಪುಣ್ಯಾಃ ಕಥಯಿತ್ವಾ ಮನೋರಮಾಃ । ಕಥಂಕಥಯಿತುಂಬ್ರೂಯಃ ಕಥಾಮೇತಾಂ ಪ್ರಚಕ್ರಮೇ।ಕಂಸೇನತೇಹತಾಃ ಪುತ್ರಾಃ ಜಾತಾಃ ಸರ್ವೇ ಪುನಃಪುನಃ॥ ಮೃತವತ್ಸಾ ದೇವಕಿತ್ವಂ ಪುತ್ರದುಃಖೇನ ದುಃಖಿತಾ। ಯಥಾ ಚಂದ್ರಮುಖೀ ದೀನಾ ಬಭೂವ ನಹುಷಪ್ರಿಯಾ॥ ಪಶ್ಚಾಚ್ಚೀರ್ಣವ್ರತಾ ಚೈವ ಬಭೂವಾಮೃತವತ್ಸಕಾ। ತ್ವಂ ಕುರ್ಯಾದ್ದೇವಕೀದೇವಿ ಭವಿಷ್ಯಸಿ ನ ಸಂಶಯಃ ॥ ದೇವಕ್ಯುವಾಚ॥ ಕಾಸಾ ಚಂದ್ರಮುಖೀ ಬ್ರಹ್ಮನ್ ಬಭೂವ ನಹುಷಪ್ರಿಯಾ। ಕಥಂಚೀರ್ಣಂ ವ್ರತಂ ಪುಣ್ಯಂ ತ್ವಯಾ ಸಂತತಿಕಾರಣಂ ॥ ಸಪತ್ನೀದರ್ಪದಳನಂ ಸೌಭಾಗ್ಯಾರೋಗ್ಯದಂ ಪ್ರಭೋ ಏತತ್ಸಮಸ್ತಂ ವಿಸ್ತಾರ್ಯ ಬ್ರೂಹಿ ಮೇ ಮುನಿಪುಂಗವ ॥ ರೋಮಶ ಉವಾಚ ॥ ಅಯೋಧ್ಯಾಯಾಂ ಪುರಾ ರಾಜಾ ನಹುಷೋ ನಾಮ ವಿಶ್ರುತಃ । ತಸ್ಯಾಸೀದ್ರೂಪಸಂಪನ್ನಾ ದೇವೀ ಚಂದ್ರಮುಖೀ ಪ್ರಿಯಾ । ತದಾ ತತ್ರೈವ ನಗರೇ ವಿಷ್ಣುಗುಪ್ತೋ ಭವದ್ವಿಜಃ। ಆಸೀದ್ಗುಣವತೀ ತಸ್ಯ ಪತ್ನೀ ಭದ್ರಮುಖೀಪ್ರಿಯಾ ॥ ತಯೋರಾಸೀದ್ದೃಢಾಪ್ರೀತಿ ಪ್ರೃಹಣೀಯ ಪರಸ್ಪರಂ॥ ಅಥಕೇ ದ್ವೇ ಚ ಸಖ್ಯೌ ವೈ ಸ್ನಾನಾರ್ಥಂಸರಯೂಜಲೇ ಪ್ರಾಪ್ತೇ ಸ್ನಾತ್ವಾಚತತ್ರೈವ ಬ್ರಾಹ್ಮಣ್ಯೋ ನಾಗರಾಂಗನಾಃ। ಸ್ನಾತ್ವಾತತ್ರ ಮಂಡಲಂ ಚಕ್ರಂ ಸ್ತನ್ಮಧ್ಯೇ ವ್ಯಕ್ತರೂಪಿಣಂ। ಲೇಖಯಿತ್ವಾ ಶಿವಂಶಾಂತಮುಮಯಾ ಸಹ ಶಂಕರಂ ॥ ಗಂಧಪುಷ್ಪಾಕ್ಷತೈರ್ಭಕ್ತ್ಯಾ ಪೂಜಯಿತ್ವಾ ಯಥಾವಿಧಿ । ಪ್ರಣಮ್ಯ ಗ್ರನೂಕಾಮಾಸ್ತೇ ವ್ರತಮೂಚುಸ್ತತಾಃಸ್ತ್ರಿಯಃ।ತಾಊಚುಃ ಶಂಕರೋಸ್ಮಾಭಿಃ ಪಾರ್ವತ್ಯಾ ಸಹ ಪೂಜಿತಃ। ಬಧ್ವಾಸೂತ್ರಮಯಂತಂತುಂ ಶಿವಸ್ಯಾತ್ಮಾ ನಿವೇದಿತಃ॥ ಧಾರಣೀಯಮಿದಂ ತಾವದ್ಯಾವತ್ಪ್ರಾಣಾವಧಾರಣಂ॥ ತಾಸಾಂತದ್ವಚನಂಶ್ರುತ್ವಾ ಸಖ್ಯೌ ತದ್ವ್ರತ

ಮುತ್ತಮಂ । ಕೃತ್ವಾ ತತ್ಸಮಯೇ ತತ್ರ ಬದ್ಧ್ವಾ ದೋರ್ಭ್ಯಾಂ ಸುದೋರಕೇ ॥ ತತಸ್ತಾಸ್ಸ್ವಗೃಹಂ ಜಗ್ಮುಸ್ಸ್ವಸಖೀಭಿಃ ಸಮಾಗತಾಃ ॥ ಕಾಲೇನ ಮಹತಾಭ್ಯಾಂ ತದ್ವ್ರತಂ ವಿಸ್ಮೃತಂ ಶುಭಂ॥ ಚಂದ್ರಮುಖ್ಯಾಃ ಪ್ರಮತ್ತಾಯಾಃ ವಿಸ್ಮೃತಂ ಚ ಸುದೋರಕಂ। ಭದ್ರಮುಖ್ಯಂ ಸ್ತಥಾ ಭದ್ರಂ ವಿಸ್ಮೃತಂ ಸರ್ವಮೇವ ತತ್ ॥ ಮೃತಾ ಕೈಶ್ಚಿದಹೋರಾತ್ರೈಃ ಸಾ ಬಭೂವ ಪ್ಲವಂಗಜಾ ॥ ಭದ್ರಾಖ್ಯಾ ಕುಕ್ಕುಟಾ ಜಾತಾ ವ್ರತಭಂಗಾಚ್ಛುಭಾನನಾ ॥ ತಥೈವ ಪಂಚತಾಂಪ್ರಾಪ್ತೇ ಸಖೀಭಾವಾತ್ಸ್ನೈವ ತೇ । ತದ್ದೇವ ಮಾತೃಕೋದ್ದೇಶೇ ಜಾತೇ ಗೋಕುಲಸಂಕುಲೇ ॥ ಬ್ರಾಹ್ಮಣೇ ಬ್ರಾಹ್ಮಣೇ ಜಾತಾ ಕ್ಷತ್ರಿಯಾ ಕ್ಷತ್ರಿಯಾ ತಥಾ। ರಾಜ್ಞೀ ಜಾಯಾ ಬಭೂವಾಥ ಲಕ್ಷ್ಮೀನಾಥಸ್ಯ ವಲ್ಲಭಾ ॥ ಈಶ್ವರೀನಾಮ ವಿಖ್ಯಾತಾ ಯಾ ಸಾ ಚಂದ್ರಮುಖೀ ಪುರಾ । ನಾಮ್ನಾ ಭದ್ರಮುಖೀ ಯಾಸೀದ್ಭೂಷಣಾ ನಾಮ ಸಾ ಭವತ್ । ಅಗ್ನಿಮೀಳಸ್ಯ ಸಾ ದತ್ತಾ ಪ್ರೀತ್ಯಾ ತಸ್ಯಾಃ ಪುರೋಧಸಃ॥ ಅತೀವ ವಲ್ಲಭಾ ಚಾಸೀದ್ಭೂಷಣಾ ಭೂಷಣಪ್ರಿಯಾ ಭೂಷಿತಾಭೂಷಣವರ್ಯೈಃ ರೂಪೇಣಾಲಂಕೃತಾ ಸ್ವಯಂ ॥ ಪುತ್ರಾ ಬಭೂವುರ್ಬಹವೋ ಭೂಷಣಾಯಾಸ್ತಥೈವ ಚ ॥ ಮಾತೃವದ್ರೂಪಸಂಪನ್ನಾಃ ಪಿತೃವದ್ಧರ್ಮಶಾಲಿನಃ ॥ ಸಖ್ಯಾ ಬಭೂವತುಸ್ತದ್ವಜ್ಜಾತೇಜಾತಿಸ್ಮರೇ ಖಿಲ । ಪುನರ್ನಿರಂತರಾ ಪ್ರೀತಿಸ್ತಯೋರಾಸೀದ್ಯಥಾ ಪುರಾ। ಕಾಲೇ ಬಹುತಿಥೇ ಯಾತೇ ತ್ಯಕ್ತ್ವಾ ಶಾತ್ಯೈಕ್ತ್ಯಯೌವನಾ । ಮಧ್ಯೇ ವಯಸಿ ಸಾ ರಾಜ್ಞೀ ವರಂ ಪುತ್ರಮಜೀಜನತ್ ॥ ಈಶ್ವರೀ ರೋಗಿಣಂ ಮೂಕಂ ಪ್ರಜ್ಞಾಹೀನಂ ಚ ನಿಸ್ಸ್ವನಂ। ತಾದೃಶೋಽಪಿ ಮಹಾಭಾಗೇ ಮೃತೋಽಸೌ ನ ನವಾರ್ಷಿಕಂ ॥ ತತಸ್ತಾಂ ಭೂಷಣಾದ್ರಷ್ಟುಂ ಮೀಶ್ವರೀಂ ಪುತ್ರದುಃಖಿತಾಂ॥ ಸಖೀಭಾವಾದಭಿಸ್ನೇಹಾತ್ಪುತ್ರೈಃ ಪರಿವಾರಿತೈಃ ॥ ಅಮುಕ್ತಾಭರಣೇ ಭದ್ರಸ್ವರೂಪೇಣೈವ ಶೋಭಿತಾ । ತಾ ದೃಷ್ಟ್ವಾ ತಾದೃಶೀಂ ಭವ್ಯಾಂ ಪ್ರಜಜ್ವಾಲೇಶ್ವರೀ ರುಷಾ । ತತೋ ಗೃಹಂ ಪ್ರೇಷಯಿತ್ವಾ ಬ್ರಾಹ್ಮಣೀ ತೀವ್ರಮತ್ಸರಾ ॥ ಚಿಂತಯಾಮಾಸ ಸಾ ರಾಜ್ಞೀ ತಸ್ಯಾಃ ಪುತ್ರವಧಂಪ್ರತಿ ॥ ನಿಶ್ಚಿತ್ಯ ಚೇತಸಾ ಕ್ರೂರಾ ಘಾತಯಾಮಾಸ ತತ್ಸುತಾನ್ ॥ ಹತಾ ಹತಾಶ್ಚ ತೇ ಪುತ್ರಾಃ ಪುನರ್ಜೀವಂತ್ಸನಾಮಯಾಃ । ತದದ್ಭುತತರಂ ದೃಷ್ಟ್ವಾ ಸಖೀಮಾಹೂಯ ಭೂಷಣಾಂ । ಉಪವಿಶ್ಯಾಸನೇ ಶ್ಲಕ್ಷ್ಣೇ ಬಹುಮಾನಪುರಸ್ಸರಂ । ಅಪೃಚ್ಛದ್ವಿನಯಾವಿಷ್ಟಾ ರಾಜ್ಞೀ ಸಾ ಭೃಶವಿಸ್ಮಿತಾ । ಬ್ರೂಹಿ ತಥ್ಯಂ ಮಹಾಭಾಗೇ ಕಿಂ ತ್ವಯಾ ಸುಕೃತಂ ಕೃತಂ । ದಾನಂ ವ್ರತಂ ತಪೋವಾಪಿ ಶಶ್ರೂಕ್ಷಣಮುಪೋಹಿತಂ । ಯೇನ ತೇನ ಹತಾಃ ಪುತ್ರಾಃ ಪುನರ್ಜೀವಂತ್ಸನಾಮಯಾಃ॥ ಸ್ವತಂತ್ರಾ ಬಹುಪುತ್ರಾ ಸಾ ಜೀವವತ್ಸಾಸು ಶೋಭನಾ । ಅಮುಕ್ತಾಭರಣಾ ನಿತ್ಯಂ ಭರ್ತುಶ್ಚೇತಸ್ಯ ಭೂಷಣೇ । ಅತೀವ ಶೋಭನೇ ಭದ್ರೇ ಯಥಾರ್ಥಂ ವಕ್ತುಮರ್ಹಸಿ॥ ಭೂಷಣ ಉವಾಚ॥ ಶೃಣು ದೇವಿ ಪ್ರವಕ್ಷ್ಯಾಮಿ ಜನ್ಮಾಂತರವಿಚೇಷ್ಟಿತಂ ಕಿಂ ತದ್ವಿವಿಸ್ಮೃತಂ ಸರ್ವಮಯೋಧ್ಯಾಯಾಂ ಕೃತಂ ಚ ಯತ್ । ಆಭ್ಯಾವ್ಯಾಂ

ವ್ರತಕೈವಲ್ಯಂ ಪ್ರಮುಕ್ತಾಭ್ಯಾಂ ವರಾನನೇ । ಯೇನ ತ್ವಂ ಪ್ಲವಗೀ ಜಾತಾ ಜಾತಾಹಂ ಕುಕ್ಕುಟಾ ತಥಾ ॥ ತಥಾತಿವ್ರತಕೈವಲ್ಯಂ ತ್ವಯಾಚಾವತ್ಯತೇಃ ಕೃತಂ । ಮಯಾ ತು ಸರ್ವಭಾವೇನ ಚೇತಸ್ಸ್ಯಾದಾಯ ಶಂಕರಂ॥ ತಿರ್ಯಗ್ಯೋನ್ಯನುಸಾರೇಣ ಮನೋವೃತ್ತ್ಯಾ ಸ್ವನುಷ್ಠಿತಂ । ಏತದ್ಧಿಕಾರಣಂ ಭದ್ರೇ ನಾನ್ಯತ್ಕಿಂಚಿತ್ಕರೋಮ್ಯಹಂ ॥ ರೋಮಶ ಉವಾಚ ॥ ಇತ್ಯಾಕರ್ಣ್ಯ ಚ ಸಂಸ್ಮೃತ್ಯ ಪೂರ್ವಜನ್ಮ ವಿಚೇಷ್ಟಿತಂ । ಈಶ್ವರೀ ಚ ತಯಾ ಸಾರ್ಥಂ ಪುನಶ್ಚಕ್ರೇ ವ್ರತಂ ಶುಭಂ ॥ ವ್ರತಸ್ಯಾಸ್ಯ ಪ್ರಭಾವೇನ ಪುತ್ರಪೌತ್ರಾದಿ ಸಂಪದಂ॥ ಭುಕ್ತ್ವಾ ಸೌಭಾಗ್ಯಮತುಲಂ ಮೃತ್ವಾ ಶಿವಪುರಂ ಗತಾ॥ ತಸ್ಮಾತ್ತ್ವಮಪಿ ಕಲ್ಯಾಣೀ ವ್ರತಮೇತತ್ಸಮಾಚರ ॥ ಕೃತೇಚಾಸ್ಮಿನ್ ವ್ರತೇ ದಿವ್ಯೇ ಜೀವತ್ಪುತ್ರಾ ಭವಿಷ್ಯಸಿ ॥ ದೇವಕ್ಯುವಾಚ ॥ ಬ್ರಹ್ಮನ್ನಾಖ್ಯಾಹಿ ಮೇ ಸರ್ವಂ ವ್ರತಮೇತತ್ಸುಖಪ್ರದಂ । ಸಂತಾನವೃದ್ಧಿಕರಣಂ ಶಿವಲೋಕಪ್ರದವ್ರತಂ ॥ ರೋಮಶ ಉವಾಚ ॥ ಭದ್ರೇ ಭಾದ್ರಪದೇ ಶುಕ್ಲೇ ಸಪ್ತಮ್ಯಾಂ ಸಲಿಲಾಶಯೇ । ಸ್ನಾತ್ವಾ ತು ಮಂಡಲಂ ಕೃತ್ವಾ ವಿಲಿಖೇತ್ಪಾರ್ವತೀಂ ಶಿವಂ ॥ ಭಕ್ತ್ಯಾ ಸಂಪೂಜ್ಯ ವಿಧಿವತ್ಕರೇ ಬದ್ಧ್ವಾ ಸುದೋರಕಂ । ಯಾವಜ್ಜೀವಂ ಮಯಾತ್ಮಾ ತು ಶಿವಸ್ಯವಿನಿವೇದಿತಃ ॥ ಇತ್ಯೇವಂ ಸಮಯಂ ಕೃತ್ವಾ ತತಃ ಪ್ರಭೃತಿದೋರಕಂ । ಸೌವರ್ಣಂ ರಜತಂ ವಾಪಿ ಸೌತ್ರಂ ವಾ ಧಾರಯೇತ್ಕರೇ॥ ವಟಿಕಾನ್ ಪಿಷ್ಟಕಾನ್ ದದ್ಯಾಚ್ಛ್ರೋತ್ರಿಯಾಯ ಕುಟುಂಬಿನೇ । ಭುಂಜೀತ ಸ್ವಯಮಪ್ಯೇವಂ ಮಹಾದೇವಮನುಸ್ಮರನ್ ॥ ಏವಂ ದ್ವಾದಶವರ್ಷಾಣಿ ವ್ರತಂ ಕುರ್ಯಾದ್ಯಥಾವಿಧಿ । ಅದೌ ಮಧ್ಯೇ ತಥಾಚಾಂತ್ಯೇ ಕುರ್ಯಾದುದ್ಯಾಪನಂ ಮಹತ್ ॥ ಆಚಾರ್ಯಂ ವರಯಿತ್ವಾ ತು ಶಿವಭಕ್ತಂ ಸುಧಾರ್ಮಿಕಂ । ವಿಪ್ರಾನ್ ದ್ವಾದಶಸಂಖ್ಯಾಕಾನ್ ವೇದಶಾಸ್ತ್ರವಿಶಾರದಾನ್ । ತೇಷಾಂ ಚ ವರಣಂ ಕೃತ್ವಾ ಬ್ರಾಹ್ಮಣಾನ್ ವೃಣುಯಾತ್ತತಃ ಏವಂ ಪ್ರತಿಮುವಸ್ತ್ರಾಣಿ ಕಲಶಾನ್ ದ್ವಾದಶಾನ್ ಶುಭಾನ್ । ಪ್ರತಿಮಾವಸ್ತ್ರಸಂಯುಕ್ತಾನ್ ಪೂಜಯಿತ್ವಾ ಯಥಾವಿಧಿ ॥ ತ್ರ್ಯಂಬಕೇತಿ ಮಂತ್ರೇಣ ಉಪಚಾರಾನ್ ಯಥಾಕ್ರಮಂ ॥ ರಾತ್ರೌ ಜಾಗರಣಂ ಕೃತ್ವಾ ಉಮಾಪತಿಮನುಸ್ಮರನ್ । ಗೃಹಮಾಗತ್ಯ ಮೇಧಾವೀ ಪೂಜಯಿತ್ವಾ ಸದಾಶಿವಂ। ಸ್ವಗೃಹ್ಯೋಕ್ತವಿಧಾನೇನ ಹೋಮಂ ಕುರ್ಯಾದ್ಯಥಾವಿಧಿ। ತಿಲಾಕ್ಷತಾಜ್ಯಸಹಿತಂ ಮೂಲಮಂತ್ರೇಣ ಹಾವಯೇತ್ ॥ಪ್ರತಿಮಾವಸ್ತ್ರಸಂಯುಕ್ತಾ ಬ್ರಾಹ್ಮಣೇಭ್ಯೋ ನಿವೇದಯೇತ್ । ಬ್ರಾಹ್ಮಣಾನ್ ಭೋಜಯೇತ್ಪಶ್ಚಾದ್ದಕ್ಷಿಣಾಭಿಶ್ಚ ತೋಷಯೇತ್ ॥ ಬಂಧುಭಿಃ ಸಹ ಭುಂಜೀತ ಸದಾ ಪ್ರೀತಿಕರೋ ಭವೇತ್ । ಏತತ್ತೇ ಕಥಿತಂ ದೇವಿ ತ್ವಾ ಕು[illegible]ವ್ರತಮುತ್ತಮಂ ॥ ವ್ರತಸ್ಯಾಸ್ಯ ಪ್ರಭಾವೇನ ಜೀವತ್ಪುತ್ರಾ ಭವಿಷ್ಯಸಿ। ತಚ್ಛ್ರು[illegible] ತಾ ದೇವಕೀದೇವೀ । ಚಕಾರವ್ರತಮುತ್ತಮಂ। ಶಿವಪ್ರಸಾದಾದ್ದೇವಕ್ಯಾಂ ಜಾತೋಽಹಂ ಪಾಂಡವಾಗ್ರಜಃ ॥ ಇದಂ ವ್ರತಂ ತು ಸರ್ವೇಷಾಂ ವಂಧ್ಯಾತ್ವವಿನಿವೃತ್ತಯೇ । ಇದಂ ತು ಧರ್ಮರಾಜಸ್ಯ ವಾಸುದೇವೇನ ಚೋದಿತಂ । ಏತದ್ವಃ ಕಥಿತಂ ಸರ್ವಂ

ಶೃಣುಧ್ವಂ ಮುನಿಪುಂಗವಾಃ ॥ ಇದಂ ಸತ್ಯಮಿದಂ ಸತ್ಯಂ ರೋಮಶೇನ ಸುಭಾಷಿತಂ । ಏತದ್ವ್ರೋ ವ್ರತಮಾಖ್ಯಾತಂ ಶೃಣುಧ್ವಂ ಶ್ರದ್ಧಯಾನ್ವಿತಾಃ । ತೇ ಸರ್ವೇ ಪಾಪ ನಿರ್ಮುಕ್ತಾಃ ತೇ ಯಾಂತಿ ಶಿವಮವ್ಯಯಂ ॥

ಇತಿ ಶ್ರೀಸ್ಕಾಂಧಪುರಾಣೇ ಕೃಷ್ಣಯುಧಿಷ್ಠಿರಸಂವಾದೇ ಅಮುಕ್ತಾಭರಣ ಸಪ್ತಮೀವ್ರತಕಥಾ ಸಮಾಪ್ತಾ

ಅಮುಕ್ತಾಭರಣಸಪ್ತಮೀ ವ್ರತಕಥಾಸಂಗ್ರಹ

ಬಳಿಕ ಶೌನಕಾದಿಗಳು ಸೂತರನ್ನು ಕುರಿತು ಎಲೈ ಋಷೀಶ್ವರನೇ! ಲೋಕದಲ್ಲಿ ಬಹು ಕಷ್ಟಕರವಾದ ಬಂಜೆತನವನ್ನು ಹೋಗಲಾಡಿಸುವ ಒಂದು ವ್ರತವನ್ನು ಹೇಳಬೇಕೆಂದು ಹೇಳಲು, ಸೂತನು ಎಲೈ ಋಷಿಗಳಿರಾ! ಪೂರ್ವದಲ್ಲಿ ಶ್ರೀಕೃಷ್ಣನು ಧರ್ಮರಾಯನಿಗೆ ಹೇಳಿದ ಅಮುಕ್ತಾಭರಣಸಪ್ತಮಿಯ ವ್ರತವನ್ನು ನಿಮಗೆ ಹೇಳುವೆನು ಕೇಳಿ. ಒಂದುದಿನ ಲೋಮಶ ಮಹಾಮುನಿಯು ಮಥುರೆಗೆ ಬಂದು ದೇವಕಿದೇವಿಯನ್ನು ಕಂಡು ಆಕೆಯಿಂದ ಸತ್ಕೃತನಾಗಿ ಸುಖಾಸನದಲ್ಲಿ ಕುಳಿತು ಅಮ್ಮಾ ಲೋಕಕಂಟಕನಾದ ಕಂಸನು ನೀನು ಹೆತ್ತ ಮಕ್ಕಳನ್ನೆಲ್ಲ ಕೊಂದುಹಾಕುತ್ತಿರುವನು. ಇದರಿಂದ ನಿನಗೆ ಪುತ್ರಶೋಕವುಂಟಾಗಿ ನರಳುತ್ತಿರುವೆ. ಪೂರ್ವ ಕಾಲದಲ್ಲಿ ಮೃತಪ್ರಜೆಯಾಗಿದ್ದ ನಹುಷನ ಪತ್ನಿಯಾದ ಚಂದ್ರಮುಖಿಯು ಅಮುಕ್ತಾಭರಣ ಸಪ್ತಮಿ ವ್ರತವನ್ನು ಮಾಡಿ ಪುತ್ರಪೌತ್ರರನ್ನು ಪಡೆದು ಸುಖದಿಂದ ಬಾಳಿದಳು ಎಂದು ಹೇಳಲು ದೇವಕಿದೇವಿಯು ಎಲೈ ಋಷಿಶ್ರೇಷ್ಠನೇ! ಆ ವ್ರತವಿಧಾನವು ಹೇಗೆ? ಅದನ್ನು ಮಾಡಿದ ಚಂದ್ರಮುಖಿ ಎಂಬವಳಾರು? ಇದೆಲ್ಲವನ್ನು ನನಗೆ ವಿಸ್ತಾರವಾಗಿ ಹೇಳಬೇಕೆಂದು ಕೇಳಿ ದಳು. ಆಗ ಲೋಮಶನು ಅಮ್ಮಾ! ಹಾಗಾದರೆ ಹೇಳುವೆನು ಕೇಳು. ಅಯೋಧ್ಯೆಯಲ್ಲಿ ನಹುಷನೆಂಬ ರಾಜನು ಆಳುತ್ತಿದ್ದನು. ಆತನಿಗೆ ಚಂದ್ರಮುಖಿ ಎಂಬ ಹೆಂಡತಿ ಇದ್ದಳು. ಆ ರಾಜನ ಪ್ರೀತಿಪಾತ್ರನಾದ ವಿಷ್ಣುಶರ್ಮನೆಂಬ ಬ್ರಾಹ್ಮಣನಿದ್ದನು. ಆತನ ಹೆಂಡತಿಗೆ ಭದ್ರಮುಖಿ ಎಂದು ಹೆಸರು. ಅವಳು ರಾಜಪತ್ನಿಯಾದ ಚಂದ್ರಮುಖಿಗೆ ಪರಮ ಸ್ನೇಹಿತ ಳಾಗಿದ್ದಳು. ಒಂದು ದಿನ ಇವರಿಬ್ಬರೂ ಸ್ನಾನಾರ್ಥವಾಗಿ ನದಿಗೆ ಹೋಗಿ ಸ್ನಾನಮಾಡುತ್ತಿ ದ್ದಾಗ ಅಲ್ಲಿ ಬಹುಮಂದಿ ಸ್ತ್ರೀಯರು ಅಮುಕ್ತಾಭರಣಸಪ್ತಮಿ ವ್ರತವನ್ನು ಮಾಡಿ ದಾರ ವನ್ನು ಕಟ್ಟಿಕೊಂಡು ಮನೆಗೆ ಬರುತ್ತಿದ್ದರು. ಅವರೊಡನೆ ಮಾತನಾಡಿ ಇವರಿಬ್ಬರೂ ವ್ರತ ವಿಧಾನವನ್ನು ಕೇಳಿ ತಿಳಿದುಕೊಂಡು ಭಕ್ತಿಯಿಂದ ಆದಿನ ತಾವೂ ವ್ರತವನ್ನು ಮಾಡಿ ದಾರ ವನ್ನು ಕಟ್ಟಿಕೊಂಡು ಮನೆಗೆ ಬಂದರು. ಆದರೆ ಸಂಪೂರ್ಣವಾಗಿ ಆ ವ್ರತವನ್ನು ಆಚರಿಸದೆ ಬಿಟ್ಟಕಾರಣ ಕೆಲವುಕಾಲದಲ್ಲೇ ಅವರು ಸತ್ತುಹೋದರು. ಬಳಿಕ ರಾಜಪತ್ನಿಯು ಕಪಿಯಾಗಿ ಹುಟ್ಟಿದಳು. ಬ್ರಾಹ್ಮಣನ ಹೆಂಡತಿ ಕೋಳಿಯ ಜನ್ಮವನ್ನು ಪಡೆದಳು. ಇವರಿಬ್ಬರೂ ಸ್ನೇಹ ವಾಗಿ ಒಂದೇಕಡೆ ಇರುತ್ತ ತಮ್ಮ ತಪ್ಪಿನಿಂದ ತಮಗುಂಟಾದ ಹೀನಸ್ಥಿತಿಯನ್ನು ಕುರಿತು ಬಹಳವಾಗಿ ಪಶ್ಚಾತ್ತಾಪಪಟ್ಟರು. ಬಳಿಕ ಅವರಿಗೆ ಮನುಷ್ಯ ಜನ್ಮವು ಪ್ರಾಪ್ತವಾಯಿತು. ಕಪಿಯಾಗಿದ್ದ ಚಂದ್ರಮುಖಿಯು ರಾಜಪುತ್ರಿಯಾಗಿ ಹುಟ್ಟಿ ಈಶ್ವರಿ ಎಂಬ ಹೆಸರಿನಿಂದ ಪ್ರಸಿದ್ಧಳಾದಳು. ಕೋಳಿಯಾಗಿದ್ದ ಚಂದ್ರಮುಖಿಯು ಬ್ರಾಹ್ಮಣಜಾತಿಯಲ್ಲಿ ಜನಿಸಿ ಭೂಷಣೆ ಎಂಬ ಹೆಸರುಳ್ಳವಳಾದಳು. ಬಳಿಕ ಲಕ್ಷ್ಮೀನಾಥನೆಂಬ ರಾಜನು ಈಶ್ವರಿಯನ್ನು

ಮದುವೆಯಾದನು. ಭೂಷಣೆಯು ಅಗ್ನಿಮೀಳನೆಂಬ ಬ್ರಾಹ್ಮಣನಿಗೆ ಹೆಂಡತಿಯಾದಳು. ಆಗ ಭೂಷಣೆಯು ಭಕ್ತಿವಂತಳಾಗಿ ಅಮುಕ್ತಾಭರಣಸಪ್ತಮೀ ವ್ರತವನ್ನು ಆಚರಿಸಿದ ಕಾರಣ ವಿಧೇಯರಾಗಿ ವಿದ್ಯಾಸಂಪನ್ನರಾಗಿಯೂ ಅತಿ ಸುಂದರರಾಗಿಯೂ ಇರುವ ಮಕ್ಕಳನ್ನು ಹಡೆದಳು. ಈಶ್ವರಿಯು ವ್ರತವನ್ನು ಮಾಡದಿದ್ದ ಕಾರಣ ಅವಳಿಗೆ ಮೂಢನೂ, ಮೂರ್ಖನೂ, ರೋಗಿಯೂ ಆದ ಮಗನು ಹುಟ್ಟಿದನು. ಹಾಗೆ ಹುಟ್ಟಿದರೂ ಒಂಭತ್ತು ವರ್ಷದಲ್ಲೇ ಮೃತನಾದನು. ಆಗ ಭೂಷಣೆಯು ಈಶ್ವರಿಯು ದುಃಖವನ್ನು ವಿಚಾರಿಸುವುದಕ್ಕಾಗಿ ತನ್ನ ಮಕ್ಕಳೊಡನೆ ಅವಳ ಮನೆಗೆ ಹೋಗಲು ಆಕೆ ಮಾತ್ಸರ್ಯದಿಂದ ಬ್ರಾಹ್ಮಣ ಪುತ್ರರನ್ನು ಕೊಲ್ಲಿಸಬೇಕೆಂದು ಪ್ರಯತ್ನಮಾಡಿದರೂ ಏನೂ ಸಾಗದಿದ್ದಕಾರಣ ಖಿನ್ನಳಾಗಿ ಈಶ್ವರಿಯು ತನ್ನ ಸ್ನೇಹಿತಳಾದ ಭೂಷಣೆಯನ್ನು ಕುರಿತು ತನ್ನ ಮಗನ ಸಾವಿಗೆ ಕಾರಣವನ್ನು ಕೇಳಲು, ಅವಳು ಅಮುಕ್ತಾಭರಣಸಪ್ತಮೀ ವ್ರತವನ್ನು ಜ್ಞಾಪಿಸಿದಳು. ಆಗ ಈಶ್ವರಿಯು ಎಚ್ಚೆತ್ತು ತಾನೂ ಆ ವ್ರತವನ್ನು ಮಾಡಿ ಪುತ್ರಸಂತಾನವನ್ನು ಪಡೆದು ಸುಖವಾಗಿದ್ದಳು. ಆದಕಾರಣ ನೀನೂ ಆ ವ್ರತವನ್ನು ಮಾಡಿ ಸುಖವಾಗಿರು ಎಂದು ಹೇಳಲು ಲೋಮಶರನ್ನು ಕುರಿತು ದೇವಕಿಯು ಸ್ವಾಮಿ, ಆ ವ್ರತವಿಧಾನವನ್ನು ನನಗೆ ಹೇಳಬೇಕೆಂದು ಬೇಡಿಕೊಂಡಳು. ಆ ಕೂಡಲೇ ಲೋಮಶ ಮಹಾಮುನಿಯು ಭಾದ್ರಪದ ಶುದ್ಧಸಪ್ತಮಿಯದಿನ ಅಮುಕ್ತಾಭರಣ ಸಪ್ತಮಿಯ ವ್ರತವನ್ನು ಮಾಡಬೇಕು. ಹನ್ನೆರಡು ವರ್ಷ ಹೀಗೆ ಭಕ್ತಿಯಿಂದ ವ್ರತಮಾಡಿ ಆದಿಯಲ್ಲಾಗಲೀ, ಅಂತ್ಯದಲ್ಲಾಗಲಿ ಮಧ್ಯದಲ್ಲಾಗಲಿ ಉದ್ಯಾಪನೆಯನ್ನು ಮಾಡಬಹುದು. ಉದ್ಯಾಪನೆ ಕಾಲದಲ್ಲಿ ಆಚಾರ್ಯ ಕಲಶವೊಂದು ಬ್ರಹ್ಮಕಲಶವೊಂದು ಇವುಗಳ ಜೊತೆಗೆ ಪೂಜಾಕಲಶಗಳು ಹನ್ನೆರಡು ಹೀಗೆ ಹದಿನಾಲ್ಕು ಕಲಶಗಳನ್ನು ಸ್ಥಾಪಿಸಿ ಪ್ರತಿಯೊಂದಕ್ಕೂ ವಸ್ತ್ರ, ಪ್ರತಿಮೆ, ಫಲ, ದಕ್ಷಿಣೆ, ತಾಂಬೂಲಗಳನ್ನು ಬೇರೆಬೇರೆ ಇಟ್ಟು ವ್ರತವಿಧಿಯಂತೆ ಪೂಜಿಸಿ ಅದನ್ನು ಬ್ರಾಹ್ಮಣರಿಗೂ ಆಚಾರ್ಯರಿಗೂ ಕೊಟ್ಟು ತಾನು ಸ್ವಸ್ಥಮಾನಸದಿಂದಿರಬೇಕು ಎಂದು ಹೇಳಿದನು. ದೇವಕಿಯು ಅದರಂತೆ ತಾನೂ ಆ ವ್ರತವನ್ನು ಮಾಡಿದಮೇಲೆ ನಾನು ಅವಳಿಗೆ ಮಗನಾಗಿ ಹುಟ್ಟಿದೆನೆಂದು ಶ್ರೀಕೃಷ್ಣನು ಧರ್ಮರಾಯನಿಗೆ ಹೇಳಿದ ಕಥೆಯನ್ನು ಸೂತರು ಶೌನಕಾದಿಗಳಿಗೆ ನಿರೂಪಿಸಿದರು. ಈ ಕಥೆಯನ್ನು ಭಕ್ತಿಯಿಂದ ಕೇಳಿದವರಿಗೂ ಹೇಳಿದವರಿಗೂ ಇಷ್ಟಾರ್ಥಸಿದ್ಧಿ ಪುತ್ರಪೌತ್ರಫಲಪ್ರಾಪ್ತಿಯಾಗುವುದೆಂದು ಸ್ಕಾಂದ ಪುರಾಣದ ಕೃಷ್ಣ ಯುಧಿಷ್ಠಿರ ಸಂವಾದ ರೂಪವಾದ ಅಮುಕ್ತಾಭರಣಸಪ್ತಮೀ ವ್ರತಕಥಾ ಸಂಗ್ರಹವು ಮುಗಿದುದು. ಶ್ರೀಃ ಶ್ರೀಃ ಶ್ರೀಃ

ಶ್ರೀಃ

ಓಂ ಶ್ರೀ ರಾಮಚಂದ್ರಾಯ ನಮಃ

೩೨, ಅಥ ಶ್ರೀರಾಮನವಮೀವ್ರತಕಲ್ಪಃ

ತತ್ರ ವ್ರತವಿವೇಕಃ— ತತ್ರ ಚೈತ್ರಶುಕ್ಲ ನವಮ್ಯಾಂ ರಾಮನವಮೀವ್ರತಂ॥ ಇದಂ ಚ ಪರವಿದ್ಧಾಯಾಂ ಮಧ್ಯಾಹ್ನವ್ಯಾಪಿನ್ಯಾಂ ಕಾರ್ಯಂ॥ ನವಮೀಚಾಷ್ಟಮೀ ವಿದ್ಧಾ ತ್ಯಾಜ್ಯಾ ವಿಷ್ಣುಪರಾಯಣೈಃ॥ ಉಪೋಷಣಂ ನವಮ್ಯಾಂ ಚ ದಶಮ್ಯಾಂ ಪಾರಣಂ

ಭವೇತ್ ॥ ಚೈತ್ರಶುದ್ಧ ನವಮಿಯು ಪುನರ್ವಸು ನಕ್ಷತ್ರ ಸಹಿತವಾಗಿ ಮಧ್ಯಾಹ್ನ ವ್ಯಾಪಿನಿಯಾಗಿದ್ದರೆ ಆ ದಿನ ಶ್ರೀರಾಮನವಮೀ ವ್ರತವನ್ನು ಮಾಡಬೇಕು. ಅಷ್ಟಮಿಯೊಡನೆ ಕೂಡಿದ ನವಮಿಯನ್ನು ಬಿಟ್ಟು ಮಾರನೆಯ ದಿನ ದಶಮಿ ಉಪರಿಯಾಗಿರುವ ನವಮಿಯಲ್ಲಿಯೇ ವ್ರತವನ್ನು ಮಾಡಬೇಕು. ಎಂದು ವ್ರತವಿವೇಕದಲ್ಲಿ ಹೇಳಿದೆ.

ಸೂಚನೆ :—ರಾಮ ನವರಾತ್ರಿ [ವಸಂತ ನವರಾತ್ರಿ] ಎಂದು ಪ್ರಸಿದ್ಧವಾದ ಉತ್ಸವವನ್ನು ಶ್ರೀರಾಮನವಮಿ ಮೊದಲು ೯ ದಿನಗಳೂ ಉತ್ಸವ ಮಾಡುವುದು ಒಂದು ಕ್ರಮ. ಶರನ್ನವರಾತ್ರಿ ಎಂದು ಆಶ್ವಯುಜ ಶುದ್ಧ ಪಾಡ್ಯಮಿಯಿಂದ ವಿಜಯದಶಮಿಯವರೆಗೆ ರಾಮೋತ್ಸವ ಮಾಡುವುದು ಮತ್ತೊಂದು ಕ್ರಮ. ರಾಮಸಪ್ತಾಹ ಕ್ರಮವಾದರೆ ತದಿಗೆದಿನೆ ಉತ್ಸವವನ್ನು ಪ್ರಾರಂಭಿಸಿ ನವಮಿ ದಿನಕ್ಕೆ ಪೂರೈಸುವುದು ಒಂದು ಕ್ರಮ. ಹೀಗೆ ಮಾಡಲು ಶಕ್ತಿ ಸಾಲದವರು ಸಪ್ತಮಿಯ ದಿನ ಪ್ರಾರಂಭಮಾಡಿ ನವಮಿಯದಿನ ಪಟ್ಟಾಭಿಷೇಕ ಮಾಡುವುದು ತ್ರಿರಾತ್ರಿಕ್ರಮ. ಅಷ್ಟಕ್ಕೂ ಶಕ್ತಿಸಾಲದವರು ರಾಮನವಮಿಯ ದಿನ ಪ್ರಾತಃಕಾಲಕ್ಕೆ ಪ್ರಾರಂಭಿಸಿ ಸಂಕ್ಷೇಪ ಪಾರಾಯಣ ಕ್ರಮದಿಂದ ರಾತ್ರಿಗೆ ಸೀತಾಕಲ್ಯಾಣ ಮತ್ತು ಪಟ್ಟಾಭಿಷೇಕಗಳನ್ನು ಪೂರೈಸುವುದು ಏಕ ರಾತ್ರಿ ಕ್ರಮ ಸಾಧಕರು ತಮ್ಮ ಅನುಕೂಲಕ್ಕೆ ತಕ್ಕಂತೆ ಇದರಲ್ಲಿ ಯಾವುದಾದರೂ ಒಂದು ಕ್ರಮದಿಂದ ಪೂಜಿಸಿಯೇ ತೀರಬೇಕೆಂದು ಅಗಸ್ತ್ಯ ಸಂಹಿತೆಯ ನವಮೀವ್ರತವಿಚಾರದಲ್ಲಿ ವಿಸ್ತಾರವಾಗಿ ಹೇಳಿದೆ. ಅದನ್ನು ಗ್ರಾಹಕರ ಅನುಭವಕ್ಕಾಗಿ ಇಲ್ಲಿ ಸಂಕ್ಷೇಪವಾಗಿ ಬರೆದಿದೆ. ಈ ಪೂಜೆಗೆ ಶ್ರೀರಾಮ ನವಾಯತನ ಪೂಜೆಯೆಂದು ಹೆಸರು. ಆದಕಾರಣ ಪೂಜೆಮಾಡುವಾಗ ಧ್ಯಾನ ಆವಾಹನ ಅರ್ಘ್ಯಪಾದ್ಯಾದಿ ಪ್ರತಿಯೊಂದು ಉಪಚಾರಕ್ಕೂ ಈ ಕೆಳಗೆ ಬರೆದಿರುವ ಮಂತ್ರವನ್ನು ಹೇಳಿಕೊಳ್ಳಬೇಕು.

೧ ಶ್ರೀ ಸೀತಾ ಲಕ್ಷ್ಮಣ ಭರತ ಶತ್ರುಘ್ನ ಹನುಮತ್ಸುಗ್ರೀವ ವಿಭೀಷಣಾಂಗದ ಜಾಂಬವತ್ಸಮೇತ ಶ್ರೀರಾಮಚಂದ್ರ ಪರಬ್ರಹ್ಮಣೇ ನಮಃ ॥

ಶ್ರೀರಸ್ತು

ಶ್ರೀರಾಮಚಂದ್ರ ಪರಬ್ರಹ್ಮಣೇ ನಮಃ.

ಅಥ ಪೂಜಾವಿಧಾನಂ.

ಅಥ ವ್ರತೀ ಆಚರಿತ ಸ್ನಾನಾದಿ ನಿತ್ಯಕರ್ಮಾನುಷ್ಠಾನಸ್ಸನ್ ಸಮ್ಯಗಾಸನೇ ಉಪವಿಷ್ಯ ತ್ರಿರಾಚಮ್ಯ ದೇಶಕಾಲೌ ಸಂಕೀರ್ತ್ಯ ಸಂಕಲ್ಪಂ ಕುರ್ಯಾತ್ (೬-೭ ನೇ ಪುಟ ನೋಡಿರಿ)............ನಾಮ ಸಂವತ್ಸರೇ ಉತ್ತರಾಯಣೇ ವಸಂತಋತೌ ಚೈತ್ರಮಾಸೇ ಶುಕ್ಲಪಕ್ಷೇ ನವಮ್ಯಾಂ ಭೌಮವಾಸರ (ಶುಭವಾಸರ ಯುಕ್ತಾಯಾಂ ಏವಂ ಗುಣ ವಿಶೇಷಣವಿಶಿಷ್ಟಾಯಾಂ ಶುಭತಿಥೌ ಶ್ರೀಪರಮೇಶ್ವರ ಪ್ರೀತಿದ್ವಾರಾ ಶ್ರೀ ಸೀತಾ ಲಕ್ಷ್ಮಣ ಭರತಶತ್ರುಘ್ನ ಹನೂಮತ್ಸುಗ್ರೀವ ವಿಭೀಷಣಾಂಗದ ಜಾಂಬವತ್ಸಮೇತ ಶ್ರೀರಾಮಚಂದ್ರ ದೇವತಾ ಪ್ರೀತ್ಯರ್ಥಂ ಯಥಾಶಕ್ತಿಯಾವದುದ್ದಿಷ್ಟಶ್ರೀರಾಮನವಮೀ ವ್ರತಾಂಗ [ವಸಂತ ನವರಾತ್ರಿ, ಶರನ್ನವರಾತ್ರಿ. ರಾಮಸಪ್ತಾಹ, ಶ್ರೀಮಾತ್ರ್ಯೃತ್ಸವ

ಏಕರಾತ್ರ್ಯುತ್ಸವಾದಿ] ಸ್ವಶಕ್ತ್ಯನುಸಾರ ಸಂಪೂರ್ಣ ಭಕ್ತಿತಃ ಪಟ್ಟಾಭಿಷೇಕೋತ್ಸವ ಸಿತಾಕಲ್ಯಾಣೋತ್ಸವಾಂಗ ಆಚರಿತ ವ್ರತಸ್ಯ ಸಂಪೂರ್ಣ ಸತ್ಫಲಾವಾಪ್ತ್ಯರ್ಥಂ ಶ್ರೀರಾಮ ನವಾಯತನ ಪೂಜಾಂ ಚ ಕರಿಷ್ಯೇ । ಇತಿ ಸಂಕಲ್ಪ್ಯ ಕಲಶಾರ್ಚನಂ ಕುರ್ಯಾತ್ (೮ನೆ ಪುಟ ನೋಡಿರಿ] ಆದೌ ನಿರ್ವಿಘ್ನತಾ ಸಿದ್ಧ್ಯರ್ಥಂ ಶ್ರೀಮಹಾ ಗಣಪತಿ ಪೂಜಾಂ ಕರಿಷ್ಯೇ [೮ನೆ ಪುಟ ನೋಡಿರಿ] ಏವಂ ಗಣಪತಿ ಪೂಜಾನಂತರಂ ಪ್ರಸಾದಂ ಗೃಹೀತ್ವಾ ಶಿರಸಾ ಧೃತ್ವಾ ಶ್ರೀರಾಮಚಂದ್ರಂ ಧ್ಯಾಯೇತ್.

ಧ್ಯಾನಂ—ಹರಿಃ ಓಂ ॥ ವಾಮೇ ಭೂಮಿಸುತಾ ಪುರಸ್ತು ಹನುಮಾನ್ ಪಶ್ಚಾತ್ ಸುಮಿತ್ರಾಸುತಃ । ಶತ್ರುಘ್ನೋ ಭರತಶ್ಚ ಪಾರ್ಶ್ವದಳಯೋಃ ವಾಯ್ವಾದಿ ಕೋಣೇಷು ಚ॥ಸುಗ್ರೀವಶ್ಚ ವಿಭೀಷಣಶ್ಚ ಯುವರಾಟ್ ತಾರಾಸುತೋ ಜಾಂಬವಾನ್ ಮಧ್ಯೇ ನೀಲಸರೋಜಕೋಮಲರುಚಿಂ ರಾಮಂ ಭಜೇ ಶ್ಯಾಮ[illegible]॥ ಇತಿ ಧ್ಯಾತ್ವಾ॥ ಮಧ್ಯೇ ಸಿಂ ಸೀತಾಯೈ ಸ್ವಾಹಾ । ಓಂ ರಾಂ ರಾಮಾಯ ನಮಃ ಓಂ ಶ್ರೀಂ ಸೀತಾ ರಾಮಮಾವಾಹಯಾಮಿ॥ ಪೃಷ್ಠತಃ ಓಂ ಲಂ ಲಕ್ಷ್ಮಣಾಯ ನಮಃ ಲಕ್ಷ್ಮಣಮಾವಾ ಹಯಾಮಿ ॥ ದಕ್ಷಿಣೇ ಓಂ ಭಂ ಭರತಾಯ ನಮಃ ಭರತಮಾವಾಹಯಾಮಿ॥ ವಾಮ ಭಾಗೇ ಓಂ ಶಂ ಶತ್ರುಘ್ನಾಯ ನಮಃ ಶತ್ರುಘ್ನಮಾವಾಹಯಾಮಿ ॥ ಪುರತಃ ಓಂ ಹಂ ಹನೂಮತೇ ನಮಃ ಹನುಮಂತಮಾವಾಹಯಾಮಿ ॥ ವಾಯವ್ಯೇ ಸುಂ ಸುಗ್ರೀ ವಾಯ ನಮಃ ಸುಗ್ರೀವಮಾವಾಹಯಾಮಿ ॥ ಈಶಾನ್ಯೇ ವಿಂ ವಿಭೀಷಣಾಯ ನಮಃ ವಿಭೀಷಣಮಾವಾಹಯಾಮಿ॥ ಆಗ್ನೇಯೇ ಅಂ ಅಂಗದಾಯ ನಮಃ ಅಂಗದಮಾವಾಹ ಯಾಮಿ ॥ ನೈಋತ್ಯೇ ಜಂ ಜಾಂಬವತೇ ನಮಃ ಜಾಂಬುವಂತಮಾವಾಹಯಾಮಿ ॥ ಇತಿ ನವಾಯತನ ದೇವತಾನಾವಾಹ್ಯ ಪ್ರಾಣಪ್ರತಿಷ್ಠಾಪನಂ ಕುರ್ಯಾತ್ [೧೦ನೆ ಪುಟ ನೋಡಿರಿ] ೧ ಓಂ ಶ್ರೀ ಸೀತಾ ಲಕ್ಷ್ಮಣ ಭರತ ಶತ್ರುಘ್ನ ಹನೂಮತ್ಸುಗ್ರೀವ ವಿಭೀಷಣಾಂಗದ ಜಾಂಬವತ್ಸಮೇತ ಶ್ರೀರಾಮಚಂದ್ರ ಪ್ರಾಣಪ್ರತಿಷ್ಠಾಪನ ಮಹಾ ಮಂತ್ರಸ್ಯ...........ಮುಹೂರ್ತಸ್ಸು ಮುಹೂರ್ತಮಸ್ತು ಸುಪ್ರತಿಷ್ಠಿತಮಸ್ತು ಇತ್ಯಾ ವಾಹನಮಂತ್ರಾನ್ ಪಠಿತ್ವಾ [೧೦ನೆ ಪುಟ ನೋಡಿರಿ] ಪ್ರಥಮತಃ ಶ್ರೀಸೀತಾರಾ ಮಯೋಃ ಪೂಜಾಂ ಕೃತ್ವಾ ತದನಂತರಂ ಲಕ್ಷ್ಮಣಾದೀನ್ ಪ್ರಪೂಜಯೇತ್.

ಹರಿಃ ಓಂ ೧ ಶ್ರೀ ಸೀತಾ ಲಕ್ಷ್ಮಣ ಭರತ ಶತ್ರುಘ್ನ ಹನೂಮತ್ಸುಗ್ರೀವ ವಿಭೀಷಣಾಂಗದ ಜಾಂಬವತ್ಸಮೇತ ಶ್ರೀರಾಮಚಂದ್ರ ಪರಬ್ರಹ್ಮಣೇ ನಮಃ ॥ ಈ ಮಂತ್ರವನ್ನು ಆವಾಹನೆ ಅರ್ಘ್ಯ ಪಾದ್ಯ ವಸನಾದಿ ಸಕಲ ಉಪಚಾರಗಳಿಗೂ ಹೇಳಿ ಕೊಳ್ಳಬೇಕು. ಇದಕ್ಕಾಗಿ ಆಯಾ ಸ್ಥಳದಲ್ಲಿ ೧ ಗುರುತು ಹಾಕಿದೆ.

ಕೌಸಲ್ಯಾ ತನಯಂ ವಿಷ್ಣುಂ ಶ್ರೀರಾಮಂ ಪ್ರಕೃತೇಃ ಪರಂ ॥ ಆವಾಹ ಯಾಮಿ ದೇವೇಶಂ ಜಾನಕೀವಲ್ಲಭಂ ಹರಿಂ ॥ ಓಂ ಸಹಸ್ರಶೀರ್ಷಾ ಪುರುಷ

